

ಶ್ರೀನಿವಾಸ ಹಾವನೂರ

ಒಂದಿಷ್ಟು ಲಘು; ಒಂದಷ್ಟು ಗಂಭೀರ

ಒಂದಿಷ್ಟು ಲಘು; ಒಂದಷ್ಟು ಗಂಭೀರ

ಒಂದಿಷ್ಟು ಲಘು ; ಒಂದಷ್ಟು ಗಂಭೀರ

ಪ್ರಬಂಧಗಳ ಸಂಕಲನ

ಶ್ರೀನಿವಾಸ ಹಾವನೂರ

ಕರ್ನಾಟಕ ಸಂಘ
ಪುತ್ತೂರು - ೫೭೪ ೨೦೧
೧೯೯೯

ONDISHTU LAGHU ; ONDASHTU GAMBHEERA :
A Collection of articles- By Dr. Srinivasa Havanoora, Ashraya Apartments, 36, 1st Main, Vinayaka Layout, Vijaya Nagar, Bangalore - 560 040. *Published by* Karnataka Sangha, Puttur - 574 202, Dakshina Kannada, Karnataka.

First impression	:	1999
Pages	:	186
Price	:	Rs. 84/-

ಹಕ್ಕುಗಳು	:	ಲೇಖಕರವೆ
ರಕ್ಷಾಪುಟ ವಿನ್ಯಾಸ	:	ಮೋಹನ ಸೋನಾ
ಅಕ್ಷರ ಜೋಡಣೆ	:	ಪ್ರಸಾಧನ್ ಕಂಪ್ಯೂಟರ್ಸ್, ಭಾರತೀನಗರ, ಮಂಗಳೂರು - ೫೭೫ ೦೦೪.
ಮುದ್ರಣ	:	ಶೋಭಾ ಹೈಟೆಕ್ ಪ್ರಿಂಟರ್ಸ್, ದರ್ಬೆ - ೫೭೪ ೨೦೨, ಪುತ್ತೂರು, ದ.ಕ.

ಅರ್ಪಣೆ :

'ಹೆಂಡತಿಗೆ ಸುಳ್ಳು ಹೇಳಲಾಗದೆ ?' ಎಂಬ ಹರಟೆಗಳ ಸಂಕಲನದ ಲೇಖಕ;

ಕರ್ನಾಟಕ -ಸರಕಾರದ ನಗರ ಯೋಜನಾ ಖಾತೆಯ (ನಿವೃತ್ತ) ನಿರ್ದೇಶಕ;

ಹಾಗೂ ನನ್ನ ಖಾಸಾ ತಮ್ಮ
ಶ್ರೀ ತಿಮ್ಮಣ್ಣ ಗಲಗಲಿ - ಗೆ

- ಶ್ರೀ. ಹಾ.

ಪರಿವಿಡಿ

ಲೇಖಕ ಮಹಾಶಯರ ಪರಿಚಯ

ಶ್ರೀನಿವಾಸ ಹಾವನೂರರು ಜಾತ್ಯತಃ ವಿನೋದೀ ಸ್ವಭಾವದವರು. ಅಪ್ಪಟ ಆಶಾವಾದಿಗಳು. ಬದುಕಿನ ಸಣ್ಣ ಅಂಶಗಳಲ್ಲಿಯೂ ಜೀವಂತಿಕೆಯನ್ನು ಕಾಣಬಲ್ಲರು. ಸ್ವಲ್ಪ ಪರಿಚಯವಾದರೆ ಸಾಕು ಸಲಿಗೆಯಿಂದ ನಡೆದುಕೊಂಡು ಆತ್ಮೀಯರಾಗಿಬಿಡುವರು. ಇದೆಲ್ಲರ ಫಲವಾಗಿ, ಈ ಬಗೆಯ ಲೇಖನಗಳನ್ನು ಬರೆಯುತ್ತಾರೆ. 'ಕುಚೋದ್ಯದ ಕತೆಗಳು' ಎಂಬ ಪುಸ್ತಕದ ಹೆಸರನ್ನು ಕೇಳಿದ್ದೀರಾ? ಅದರ ಲೇಖಕರು ಇವರೇ. ಹೀಗಿದ್ದರೂ ಅವರಿಗೆ 'ಸಂಶೋಧಕ' ಎಂಬ ಉಪಾಧಿ ಇದೆ. ಸಂಶೋಧನದತ್ತ ಆಗೀಗ ಮನಸ್ಸು ಹಾಕುವುದು ನಿಜ. "ತುಂಗಭದ್ರಾ ನದಿ ಅಡ್ಡಲಾಗಿ ಏಕೆ ಹರೀತದೆ? ರಾಘವೇಂದ್ರ ಸ್ವಾಮಿಗಳು ನಿಜವಾಗಿಯೂ ಮನ್ರೋನೊಂದಿಗೆ ಮಾತಾಡಿದರೆ? ನೃಪತುಂಗನು 'ಕನ್ನಡಿಗರು ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತರು' ಎಂದನಷ್ಟೆ. 'ಪ್ರಯೋಗ' ಎಂದೇಕೆ ಹೇಳಿದ? ಕಿಟೆಲ್ ನಿಘಂಟಿನಲ್ಲಿ ಒಂದಾದರೂ ಕ್ರೈಸ್ತ ಪದಕ್ಕೆ ಅರ್ಥ ಕೊಟ್ಟಿಲ್ಲವಲ್ಲ? - ಇಂಥಾ ಅಡ್ಡಾದಿಡ್ಡಿ ಸಂಶಯಗಳತ್ತ ಅವರ so called ಸಂಶೋಧನೆ ಹರೀತಿರತದೆ. ಅದಕ್ಕಿಂತ ಇಂಥ ಪ್ರಬಂಧಗಳಲ್ಲೇ ನಿಜವಾದ ಹಾವನೂರರನ್ನು ಕಾಣಬಹುದು.

ಅವರು ವಿವಿಧ ನೌಕರಿಗಳಲ್ಲಿದ್ದು ಜೀವನಾನುಭವವನ್ನು ಪಡೆದಿದ್ದಾರೆ. ಅದೇ ಅವರ ಬಂಡವಲು. ಕಾರಕೂನಿಕೆ, ಆಡಿಟರ್, ಟ್ಯಾಕ್ಸ್ ಇನ್ಸ್‌ಪೆಕ್ಟರ್, ಶಾಲಾ ಮಾಸ್ತರ, ಪತ್ರಕಾರ- ಏನೆಲ್ಲ. ಆ ಕಾರಣದಿಂದ ತನ್ನಷ್ಟು ಊರು ಹಾಗೂ ಮನೆಗಳನ್ನು ಬದಲಿಸಿದವರು ಬೇರಾರೂ ಇಲ್ಲ ಎಂದು ಹೇಳಿಕೊಳ್ಳುತ್ತಾರೆ. ಅದರಿಂದ ಅವರ ಕುಟುಂಬದವರಿಗೆ ಅನನುಕೂಲ ಆಗಿರಬಹುದು. ಆದರೆ ತನ್ನಷ್ಟು ಹೆಸರು ಬದಲು ಮಾಡಿದವರು ಬೇರಾರು ಇಲ್ಲ- ಎನ್ನುತ್ತಾರಲ್ಲ ಅದು ಮಾತ್ರ ತಾಪದಾಯಕ. 'ಐರಣಿ'ಎನ್ನುವ ವ್ಯಕ್ತಿಯ ವ್ಯಕ್ತಿತ್ವ ನಮ್ಮ ಗಮನದಲ್ಲಿದ್ದಾಗ 'ಹಾವನೂರ' ಆಗಿಬಿಟ್ಟರೆ? ಇನ್ನು ಗುಪ್ತನಾಮ-ಎಲ್ಲ ಸಾಹಿತಿಗಳೂ ಇಟ್ಟುಕೊಳ್ಳುತ್ತಾರೆ. ಆದರೆ ಹೊಸಹೊಸವನ್ನು ಹೊಸೆಯುತ್ತಾ ಹೋದರೆ? ತಾನು ಇನ್ನು ಮೇಲೆ 'ಕಾರ್ಯಾನಂದ' ಎಂಬ ಗುಪ್ತನಾಮದಿಂದ ಬರೆಯಬೇಕೆಂದು ಮೊನ್ನೆ ತಾನೇ ಹೇಳಿದರು!

ಅವರು ಅನೇಕ ವರ್ಷಗಳ ಕಾಲ ಮುಂಬಯಿಯ 'ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್' ಎಂಬ ಮಹಾನ್ ವಿಜ್ಞಾನ ಸಂಸ್ಥೆಯಲ್ಲಿ 'ಪುಸ್ತಕದ ಹಮಾಲಿ'

ಕೆಲಸ ಮಾಡುತ್ತಿದ್ದರು. (ಇದು ಅವರದೇ ಶಬ್ದ). ಆ ಸಂಸ್ಥೆಯವರು ಮಾತ್ರ ಇವರಿಗೆ ಮರ್ಯಾದೆ ಕೊಟ್ಟು 'ಲೈಬ್ರರಿಯನ್' ಅಂತ ಕರೆದರು, ಅಷ್ಟೇ. ಆ ಮುಂದಿನ ನೌಕರಿಗೂ ಇದಕ್ಕೂ ಏನು ಸಂಬಂಧವಿಲ್ಲದಂತೆ ,ಮಂಗಳೂರು ಮುಂಬಯಿ ವಿಶ್ವವಿದ್ಯಾ(ನಿ)ಲಯಗಳಲ್ಲಿ 'ಕನ್ನಡ ಮಾಸ್ತರ' ಎಂದು ಕೆಲಸ ಮಾಡಿದರು. (ಕನ್ನಡ ಮತ್ತು ಮಾಸ್ತರ-ಎರಡೂ ಪದಗಳು ಎಷ್ಟೊಂದು ಚೆನ್ನಾಗಿ ಹೊಂದಿಕೊಳ್ಳುತ್ತವೆ!) ಸಾಲದ್ದಕ್ಕೆ ತಮ್ಮ ಹೆಸರಿನ ಹಿಂದೆ 'ಡಾ.' ಎಂದು ಸೇರಿಸಿಕೊಂಡಿದ್ದಾರೆ. ಆದರೆ ಅದು 'ಕನ್ನಡ' ವಿಷಯಕ್ಕೆ ಸಂಬಂಧಿಸಿದ್ದು. ಅದಕ್ಕೆ ಈಗಿನ ದಿನಗಳಲ್ಲಿ ಬೆಲೆಯಿಲ್ಲ ಎನ್ನುವುದಕ್ಕೆ ಇಲ್ಲಿಯ ಪ್ರಬಂಧವೊಂದರಲ್ಲಿ ಬಂದಿರುವ ಡಾ. ಕುಕ್ಕೆ ಅವರೇ ಸಾಕ್ಷಿ.

ಅವರ ಪಿಎಚ್.ಡಿ. ಪ್ರಬಂಧದ ವಿಷಯ ಹೇಳಿದರೆ ನಿಮಗೆ ಮೇಲಿನ ಮಾತಿನ ಖಾತ್ರಿಯಾದೀತು. 'ಹೊಸಗನ್ನಡದ ಅರುಣೋದಯ' ಎಂದದರ ಹೆಸರು. ಏನಿದರ ಒಳ ಅರ್ಥ? ತನಗೆ ಹಳಗನ್ನಡದಲ್ಲಿ ಪರಿಣತಿ ಇಲ್ಲದಾಗ; ಹೊಸಗನ್ನಡದ ನವ್ಯ ಸಾಹಿತ್ಯ ತನ್ನ ಮಂಡೆಗೆ ತಾಗದಿದ್ದಾಗ ಇನ್ನೇನು ಮಾಡುವುದು? ಹಿರಣ್ಯಕಶಿಪುವಿನ ಹೊಸ್ತಿಲ ಮೇಲಿನ ಸಂಹಾರದಂತೆ, ಇವುಗಳ ಮಧ್ಯದ-೧೯ನೇ ಶತಮಾನದ ಸಾಹಿತ್ಯ ಚರಿತ್ರೆಯನ್ನು ಎತ್ತಿಕೊಂಡರು. ಬೇರೆ ಯಾರೂ ಅದರ ಉಸಾಬರಿಗೆ ಹೋಗಿದ್ದಿಲ್ಲವಾದ್ದರಿಂದ ವಿನಾಕಾರಣ ಅದಕ್ಕೆ ವಿಶೇಷ ಮನ್ನಣೆ ದೊರೆಯಿತು. ಸಾಲದ್ದಕ್ಕೆ ಇನ್ನು ಕೆಲವರ ಪಿಎಚ್. ಡಿ. ಅಧ್ಯಯನಕ್ಕೆ Guide ಆಗುವಂತಾಯಿತು. ಆದರೆ ಅವರು ಗೈಡ್ ಮಾಡಿದ್ದಾರೆಯೊ? misguide ಮಾಡಿದ್ದಾರೆಯೊ? ಎನ್ನುವುದಕ್ಕೆ ಆ ವಿದ್ಯಾರ್ಥಿಗಳನ್ನೇ ಕೇಳಿ ನೋಡುವುದು ಉತ್ತಮ.

ಅವರ ಗ್ರಹಗತಿಯಲ್ಲಿ ಹಲವಾರು ಬಾರಿ ವಿದೇಶಯಾತ್ರೆ ಇದೆ ಎಂದು ಉಕ್ತವಾದದ್ದು ೧೦೦% ನಿಜವಾಗಿದೆ. ಜ್ಯೋತಿಷ್ಯದಲ್ಲಿ ನಿಮಗೆ ಅಪನಂಬಿಕೆ ಇದ್ದರೆ ಹಾವನೂರರ ಈ ಭವಿಷ್ಯ ವಿಷಯಕ-ಸತ್ಯತೆಯನ್ನು ಉದಾಹರಣೆಯಾಗಿ ಕೊಡುವೆ. ಆದರೆ ಅವರು ಅಲ್ಲಿ ಮಾಡಿದ್ದೇನು? ಕನ್ನಡ ಮಾಸ್ತರನನ್ನು ಯಾರು ಕೇಳಬೇಕು! ಅದಕ್ಕೆ ಬೇರೊಂದು ಯುಕ್ತಿಯನ್ನು ಹುಡುಕಿದರು. ವಿದೇಶಗಳಲ್ಲಿರುವ ಹಳೆಯ ಲೈಬ್ರರಿಗಳಿಗೆ ಒಳ ಹೊಕ್ಕು ಅಲ್ಲಿರುವ ಕನ್ನಡ-ಕರ್ನಾಟಕಕ್ಕೆ ಸಂಬಂಧಿಸಿದ ಕಾಗದ ಪತ್ರ, ಅಪೂರ್ವ ಪತ್ರಿಕೆ ಅಂತ ಒಂದಿಷ್ಟು ತರತೊಡಗಿದರು. ಅದೇನೊ ಕ್ರೈಸ್ತ ಸಾಹಿತ್ಯದ ಕಡೆಗೆ ಒಲವು ಹೆಚ್ಚು. ಅದರಲ್ಲಿಯೂ ಆ ಬಾಸೆಲ್ ಮಿಶನ್! ಪ್ರಾಯಶಃ ಅವರು ತಮ್ಮ ಹಿಂದಿನ ಯಾವುದೋ ಜನ್ಮದಲ್ಲಿ ಇಲ್ಲಿ ಬಂದ ಬಾಸೆಲ್ ಮಿಶನರಿಗಳಿಗೆ ಕನ್ನಡ ಪಾಠ ಹೇಳಿಕೊಟ್ಟವರಾಗಿರಬೇಕು.

ಹಾವನೂರರ ಲೇಖನ ಕಾರ್ಯದ ಒಂದು ವಿಶೇಷತೆ ಎಂದರೆ, ಅವರು ಬದುಕಿ ಇದ್ದವರನ್ನು ಮುಟ್ಟಹೋಗುವುದಿಲ್ಲ. ಸತ್ತವರನ್ನು ಹಾಯಾಗಿ ಇರಗೊಡುವುದಿಲ್ಲ!

ಅಂತೆಯೇ ಮುದ್ದಣ, ಗೋವಿಂದ ಪೈ, ಮೆವ್‌ಗ್ಲಿಂಗ್, ಎಲಿಯಟ್, ಮ. ಪ್ರ. ಪೂಜಾರ, ಹಟ್ಟಿಯಂಗಡಿ ನಾರಾಯಣರಾವ್, ಪೇಜಾವರ ಸದಾಶಿವರಾವ್-ಹೀಗೆ ಎಷ್ಟೋ ಜನ ದಿವಂಗತರಾದವರ ಬದುಕು ಹಾಗೂ ಬರಹವನ್ನು ಜಾಲಾಡಿದ್ದಾರೆ. ಈಚಿನ ಉದಾಹರಣೆ: ಪಾ. ವೆಂ. ಆಚಾರ್ಯ ಅರ್ಥಾತ್ ಲಾಂಗೂಲಾಚಾರ್ಯರ ಸಮಸ್ತ ಕೃತಿಗಳ ಸಂಪಾದನ ಕಾರ್ಯ.

ಹುಟ್ಟಿದವ ಸಾಯಬೇಕು; ನೌಕರಿಯಲ್ಲಿದ್ದವ ನಿವೃತ್ತನಾಗಬೇಕು. ಹಾವನೂರರು ಮುಂಬಯಿ ವಿಶ್ವವಿದ್ಯಾನಿಲಯದಿಂದ ನಿವೃತ್ತರಾದರು. ಆದರೆ ಉಪದ್ವ್ಯಾಪೀ ಮನೋವೃತ್ತಿ. ಎಲ್ಲಾ ಬಿಟ್ಟು ಪುಣೆಗೆ ಹೋದರು. ಬಾಲಭಾರತಿ, ಪತ್ರಿಕೆಗಳ ಸಂಪಾದನೆ, ಕನ್ನಡ-ಮರಾಠೀ ಬಾಂಧವ್ಯ ಹೀಗೆ ಏನೋನೊ ಕೆಲಸ ಹಮ್ಮಿಕೊಂಡರು. ಆದರೆ ಒಳಗಿನ ಸಂಗತಿ ಎಂದರೆ ಅಲ್ಲಿ 'ಭೋಲೋ ಸಂಗೀತ ಕಾರ್ಯಕ್ರಮ ಕೇಳಲಿಕ್ಕೆ ಸಿಗತsದ' ಅನ್ನೋದು. ಹಿಂದುಸ್ತಾನೀ ಸಂಗೀತದ ಹುಚ್ಚು - ಕೇಳೋದು ಮಾತ್ರ - ಬಹಳ.

ಪುಣೆಯಲ್ಲಿಯ ಏಳೆಂಟು ವರ್ಷಗಳ ವಾಸ್ತವ್ಯದ ಫಲಶ್ರುತಿಯೆಂದರೆ ಈ ಸಂಕಲನದಲ್ಲಿ ಬಂದಿರುವ ಎರಡು ಸುದೀರ್ಘ ಲೇಖಗಳು. ಒಂದರಲ್ಲಿ 'ಪುಣೇರಿ' ಜೀವನದ ಒಳಪದರನ್ನೇ ಬಿಡಿಸಿದ್ದಾರೆ-ಎನಿಸುತ್ತದೆ. ಅದನ್ನು ಈ ಮುಂಚೆ ಓದಿದ್ದು ಕು.ಶಿ. ಹರಿದಾಸ ಭಟ್ಟರು. ಹೋ! ಇದೊಂದು ವಾಸ ಸಾಹಿತ್ಯದ ಮಾದರಿ' ಎಂದು ನುಡಿದರಂತೆ. ಅನ್ವರ್ಥಕ ಮಾತದು.

ಒಂದು ಅರೆಗುಟ್ಟಿನ ವಿಷಯ ಹೇಳ್ತೇನೆ. ಮರಾಠೀ ಪ್ರಮೀಳೆಯರ ಬಗ್ಗೆ ಹಾವನೂರರ ಮನದಲ್ಲಿ ಒಂದು ಮಿದು ಮೂಲೆ(Soft Corner) ಇದೆ. ಆ ಪ್ರಮದೆಯರ ಸ್ಪಷ್ಟ ವಿಚಾರ, ಮತ್ತು ಕಾರ್ಯಪ್ರವೃತ್ತಿ ಹಾವನೂರರಿಗೆ ಹಿಡಿಸಿದೆ. ಅಲ್ಲದೆ ಅವರೊಂದಿಗೆ ಸವಿಸವಿ ಮಾತನಾಡಿ ಅವರ ಆಂತರಿಕ ಮನೋಭಾವವನ್ನು ತಿಳಿದುಕೊಳ್ಳುವ ಜಾಣ್ಮೆ ಅವರಲ್ಲಿದೆ. ಅದಕ್ಕೇ ಅವರ ಮರಾಠೀ ಮಿತ್ರನೊಬ್ಬ "ನಿಮ್ಮ ಹೆಸರನ್ನು ಗೋಡ-ಬೋಲೆ" ಎಂದು ಬದಲಿಸಿಕೊಳ್ಳಿರಿ" ಎಂದದ್ದು.

ಸರಿ; ಪುಣೆ ಬಿಟ್ಟು ಬೆಂಗಳೂರಿಗೆ ಬಂದರು. ಬರುವಾಗ, ಹೆಂಗಸರಿಗೆಂದೇ ಉತ್ಪಾದಿಸಲ್ಪಟ್ಟ ಆ Sunny ದ್ವಿಚಕ್ರವಾಹನ ತಂದರು; ಜೊತೆಗೆ ಕಂಪ್ಯೂಟರ್. ಇವೆರಡು ಹಾವನೂರರ ಖಾಸ ವಸ್ತುಗಳು. ಆ ಗಾಡಿಯ ಮೇಲೆ, ಈ ಎಪ್ಪತ್ತರ ಮುದಿ ಪ್ರಾಯದಲ್ಲಿಯೂ ಬೆಂಗಳೂರಲ್ಲಿ ಸುತ್ತುತಾನೇ ಇರತಾರೆ. ಯಾರು ಏನು ಎಚ್ಚರ ಹೇಳಿದರೂ ಕೇಳೋಲ್ಲ.

ಇನ್ನು ಆ ಕಂಪ್ಯೂಟರ್. ಕಳೆದ ಇಪ್ಪತ್ತು ವರ್ಷಗಳಿಂದ ಏನೇನೂ ಕಸರತ್ತು

ಮಾಡಿಸುತ್ತಿದ್ದಾರೆ, ಅದರಿಂದ. ಕರ್ನಾಟಕದ ಶಿಲಾಶಾಸನ, ಸ್ಥಳನಾಮ, ಅದರಂತೆ ಕನ್ನಡ ಕಾವ್ಯಗಳ ಪದಪ್ರಯೋಗ ಕೋಶ(concordance), ವಿಜ್ಞಾನ ಪದಕೋಶ ಇವೇ ಮೊದಲಾದ ವಿಷಯಗಳನ್ನೆತ್ತಿಕೊಂಡು, ವಿದೇಶಗಳಿಗೆ ಹೋಗತಿದ್ರು ಎಂದೆನಲ್ಲ - ಅವುಗಳ ಕುರಿತು ಪ್ರಬಂಧ ಮಂಡಿಸಿ ಬಂದರು. ಅಂತೂ ಇಂತೂ ಕನ್ನಡಕ್ಕಾಗಿ ಕಂಪ್ಯೂಟರ್ ಬಳಸಿದ ಮೊದಲಿಗರು-ಎಂಬ ಹೆಗ್ಗಳಿಕೆಯಿಂದ ಸುಮ್ಮನೆ ಬೀಗುತ್ತಿದ್ದಾರೆ. ನಿಜ ಸಂಗತಿಯೆಂದರೆ ಈಗ ಮಾಡಿದ್ದು ಸ್ವಲ್ಪ ಮಾತ್ರ. ಇನ್ನು ಮುಂದಕ್ಕೆ ಮಾಡಬೇಕೆಂದು ಬಹಳಷ್ಟು ಇಟ್ಟುಕೊಂಡಿದ್ದಾರೆ:-ಕರ್ನಾಟಕದ ಕಾಲಕ್ರಮದ ಇತಿಹಾಸ, ಹರಿದಾಸ ಮಾಹಿತಿ, ಕನ್ನಡ ವಾಙ್ಮಯ ಕೋಶ-ಅವನ್ನು ಮುಗಿಸಿದಾಗ ಮಾತ್ರ ಹಾಗೆ ಹೇಳಬಹುದು.

ಆದರೆ ಒಂದು ವಿಷಯ ಹಾವನೂರರು ಮರೆತೇ ಬಿಟ್ಟಿದ್ದಾರೆ-ಇದನ್ನೆಲ್ಲ ಮಾಡೋದಕ್ಕೆ ತಮಗಿರುವ ಆಯುಷ್ಯಾವಧಿ-ಇನ್ನೆಷ್ಟು ಉಳಿದಿದೆ ಎಂಬುದನ್ನು. ವೃದ್ಧಾಪ್ಯ ಕಾಲದ ಯಾವ ಯಾವ ರೋಗವೂ ತನಗಿಲ್ಲ-ಎಂಬ ಜಂಭ ಬೇರೆ. ಇದ್ದಿರಲಿಕ್ಕಿಲ್ಲ. ಆದರೆ ವರುಷ, ತಿಂಗಳು, ದಿನ, ಮಿನಿಟು-ಇವು ಸರಿದು ಹೋಗುತ್ತಲೇ ಇರುತ್ತವೆ. ಅದಕ್ಕೆ ಈ ಮಹಾಶಯರ ಉತ್ತರ: 'ನನಗೆ ಪುನರ್ಜನ್ಮದಲ್ಲಿ ನಂಬಿಕೆ ಇದೆ ಅಂತ ಒಂದು. ಅಜರಾಮರವತ್ ಪ್ರಾಜ್ಞ: ವಿದ್ಯಾಂ... ಸಾಧಯೇತ್ ಅಂತ ಇನ್ನೊಂದು'. ಅಂತೂ ಬದುಕಿ ಇದ್ದಷ್ಟು ದಿನ ಒಂದಿಷ್ಟು ಒಳ್ಳೆಯ ಕೆಲಸ ಮಾಡ್ತಾರೆ, ಅಂತ ಅಂತುಕೊಂಡಿದ್ದೇನೆ.

ಬೆಂಗಳೂರು, ೧೯೯೯ - ದುಷ್ಯಂತ

೧. ಈತ ಶ್ರೀಸತ್ಯನಾರಾಯಣ !

ಹುಲು ಮಾನವನ ಹೃದಯವನ್ನು ಗೆದ್ದುಕೊಳ್ಳಲು ದೇವ-ದೇವತೆಗಳಲ್ಲಿ ಸ್ಪರ್ಧೆ ಇರುವಂತೆ ತೋರುತ್ತದೆ. ಈ ಪೈಪೋಟಿಯಲ್ಲಿ ಕೆಲವು ದೇವರುಗಳು ಹಿಂದೆ ಉಳಿದುಬಿಡುತ್ತಾರೆ. ಉದಾ. ಗೆ ತ್ರಿಮೂರ್ತಿಗಳ ಪೈಪೋಟಿಯಲ್ಲಿ ಪಾಪ, ಬ್ರಹ್ಮ ಕೈ ಸಾಗದೆ ಉಸ್ಸೆಂದು ಕುಳಿತು ಬಿಟ್ಟ. ಇನ್ನು ಕೆಲವರು ಸ್ಪರ್ಧೆಯಲ್ಲಿ ಒಮ್ಮೆ ಹಿಂದೆ, ಒಮ್ಮೆ ಮುಂದೆ ಸಾಗಿ ಬರುವುದುಂಟು. ಮತ್ತೆ ಒಬ್ಬಿಬ್ಬರು - ಈಚೆಗೆ ಜನ್ಮ ತಾಳಿದವರು, -ಸುರುವಾತಿಗೆ ವೈಭವದಿಂದ ಮೆರೆಯಹೋದರೂ ಹಳಬರ ಜನಪ್ರಿಯತೆಯನ್ನು ಎದುರಿಸಲಾಗದೇ ಕಣ್ಮರೆಯಾಗುತ್ತಾರೆ. ಉದಾ.ಗೆ ಜಯ್‌ಸಂತೋಷೀಮಾ! ಅವಳ ಹೆಸರಿನಲ್ಲಿ ಸಿದ್ಧವಾದ ಸಿನೆಮಾ ಕೂಡ ಹೇಳ ಹೆಸರಿಲ್ಲದಾಯಿತು. ಅವಳ ಸ್ತುತಿಪರವಾದ ಒಂದು ಹಾಡು ಮಾತ್ರ ಆಕಾಶವಾಣಿಗಳ ಚಿತ್ರಸಂಗೀತ ಕಾರ್ಯಕ್ರಮದಲ್ಲಿ ಅಪ್ಪಿ ತಪ್ಪಿ ಕೇಳಬರುವುದುಂಟು.

'ದೇವದೇವತೆಗಳು' ಎಂಬ ಕೂಡು ನುಡಿಯಿದೆ. ಇದರರ್ಥ ದೇವರು ಬೇರೆ, ದೇವತೆಗಳು ಬೇರೆ ಎಂದು ತಿಳಿಯಬೇಕೆ? ದೇವರು ಸರ್ವಶಕ್ತ, ಸರ್ವಾಂತರ್ಯಾಮಿ. ಏಕಮೇವಾದ್ವಿತೀಯ. ಅವನು ಬೇರೆ ದೇಶಗಳಲ್ಲಿಯೂ ಇದ್ದಾನೆ. ಭಾರತದಲ್ಲಿಯೂ ಇದ್ದಾನೆ. 'ಈಶ್ವರ, ಅಲ್ಲಾ ತೇರೇ ನಾಮ್' ನನಪಿಗೆ ತಂದುಕೊಳ್ಳಿರಿ. ಅಂತೂ ದೇವನೊಬ್ಬ; ನಾಮ ಹಲವು. ಅವನನ್ನು ಬಿಡೋಣ.

ಆದರೆ ಗಣೇಶ, ಹನುಮಂತ, ಅಯ್ಯಪ್ಪ- ಈ ದೇವತೆಗಳ ಅಸ್ತಿತ್ವ ಹೇಗೆ? ಭಾರತ ಬಿಟ್ಟು ಬೇರೆಡೆ ಅವರ' ನಾಮೆ' ಇದೆಯೆ? ಸರ್ವಥಾ ಇಲ್ಲ. ಅದರಂತೆ ವೆನೆಜುವೇಲಾದ ದೇಶದ ಇಂಥದೇ (ದ್ವಿತೀಯ ಸ್ಥಾನದ) ದೇವತೆ ನಮಗೆ ಗೊತ್ತೇ ಇಲ್ಲ. ವಿ.ಸೀ ಹೇಳುತ್ತಿದ್ದರು: "ಪ್ರಧಾನ ದೇವರಿಗಿಂತ, ಅವರ ಬಂಟರು, ಎರಡನೇ ಸ್ಥಾನದಲ್ಲಿರುವವರೇ ನಮಗೆ ಹೆಚ್ಚು ಪೂಜಾರ್ಹರು."ಶ್ರೀರಾಮ-ಹನುಮಂತ; ಈಶ್ವರ-ಬಸವಣ್ಣ; ರಂಗನಾಥ-ಗರುಡ ಜೋಡಿಗಳನ್ನು ಗಮನಿಸುವುದು.

ಇಂಥದೇ ಸ್ಥಾನದಲ್ಲಿರಬಹುದಾದ 'ಸತ್ಯನಾರಾಯಣ' ಮಾತ್ರ ದೇವತೆಗಳನ್ನಲ್ಲದೇ, ಏಕಮೇವಾದ್ವಿತೀಯ 'ದೇವರು' ಎಂಬವನನ್ನೂ, ಜನಪ್ರಿಯತೆಯಲ್ಲಿ ಹಿಂದೆ ಹಾಕಿ ಬಿಟ್ಟಿದ್ದಾನೆ.

ಹಾಗೆ ನೋಡಿದರೆ, ಹರಿ, ಹರಾದಿಗಳು ಪುರಾಣ ಕಾಲದಿಂದಲೂ ಬದುಕಿದ್ದವರು. ಅಗಣಿತವಾದ ತಮ್ಮ ಸಾಮರ್ಥ್ಯವನ್ನು ತೋರ್ಪಡಿಸಿದವರು. ಆದರೆ ಈ ಸತ್ಯನಾರಾಯಣ ಪುರಾಣ ಕಾಲದವನೇನಲ್ಲ. ನಮ್ಮ ಇತಿಹಾಸ ಕಾಲದಲ್ಲಿ, ಸದ್ದಿಲ್ಲದೆ ಆವಿರ್ಭವಿಸಿದವ.

"ಇದೇನು ಹೀಗೆ ಹೇಳುತ್ತೀರಿ. ಸತ್ಯನಾರಾಯಣನ ಕಥೆ "ಸ್ಕಂದ ಪುರಾಣದ ರೇವಾಖಂಡದಲ್ಲಿ'ನೋಡ ಸಿಗುತ್ತದಲ್ಲ?" ಎಂದು ಯಾರಾದರೂ ಕೇಳಬಹುದು. ಅವನಿಗಾಗಿ ನಾನು ರೇವಾಖಂಡ ಒಂದನ್ನೇ ಏಕೆ, ಆ ಪುರಾಣದ ಎಲ್ಲ ಖಂಡಗಳನ್ನು ತಿರುವಿಹಾಕಿದೆ- ನನ್ನ ಕೈಗೆ ಸಿಕ್ಕಲಿಲ್ಲ. 'ಸತ್ಯ' ವನ್ನು ಪುರಸ್ಕರಿಸುವ ಈ ' ನಾರಾಯಣ'ನಿಗೆ 'ಅಸತ್ಯ' ದ ಆರೋಪ ಮಾಡುವುದು ಸಲ್ಲ! ಆದಾಗ್ಯೂ, ರೇವಾಖಂಡದಲ್ಲಿ ಅವನು ಕಾಣಿಸಿಕೊಂಡದ್ದೆಂದರೆ ಅದು 'ಅರ್ಧಸತ್ಯ' ದ ಮಾತಾಗುತ್ತದೆ.

ಯಾಕೆಂದರೆ , ಸತ್ಯನಾರಾಯಣನ ಆ ಪ್ರಚಲಿತ ವ್ರತಕಥೆಯಲ್ಲಿ ಹೇಳಿದ್ದಂತೆ , ಅವನ ಚರಿತ್ರೆಯಾಗಲೀ, ಪೂಜಾ ವಿಧಾನವಾಗಲೀ ಇಲ್ಲ. ರೇವಾಖಂಡದಲ್ಲಿ ಇದ್ದದ್ದು 'ಶ್ರೀ ಸತ್ಯನಾರಾಯಣ- ವಿಪ್ರ ಸಂವಾದ ವರ್ಣನ' ಎಂಬ ೩೭ ಶ್ಲೋಕಗಳ ಪ್ರಸಂಗ ಮಾತ್ರ. ಅದರಲ್ಲಿ ಓರ್ವ ಬಡ ಬ್ರಾಹ್ಮಣನು, ಶ್ರೀ ಸತ್ಯನಾರಾಯಣನ ಆದೇಶದ ಮೇರೆಗೆ ಅವನನ್ನೂ ಪೂಜಿಸಿ ಶ್ರೀಮಂತನಾದ-ಎಂಬಷ್ಟೇ ವಿಷಯ ಬಂದಿದೆ. ಮಿಕ್ಕುಳಿದ ಕಥೆಗಳು, ಮತ್ತು ವ್ರತ-ನಿಯಮಗಳು, ನಾನು ಬಲ್ಲಷ್ಟರ ಮಟ್ಟಿಗೆ , ಗೋರಖಪುರದ ಸುಪ್ರಸಿದ್ಧ ಮಾಸಪತ್ರಿಕೆಯಾದ 'ಕಲ್ಯಾಣ ಕಲ್ಪತರು'ವಿನ ೨೫ನೆಯ ಸಂಪುಟದಲ್ಲಿ ವರ್ಣಿತವಾಗಿದೆ. ಈ ಪತ್ರಿಕೆಯವರು ಆ ಕಾಲಕ್ಕೆ ಜನ ಬಳಕೆಯಲ್ಲಿದ್ದದ್ದನ್ನೇ 'ಗ್ರಂಥಸ್ಥ'ವಾಗಿ ಮಾಡಿರಬೇಕು.

ತಿಳಿಯಬೇಕಾದ ಮಾತೆಂದರೆ ನಮ್ಮ ಅಷ್ಟಾದಶ ಪುರಾಣಗಳು, ಹಾಗೂ ಇನ್ನೂ ಹತ್ತಾರು ಪುರಾಣಗಳು -ಕ್ರಿಸ್ತಶಕದ ಆರಂಭ ಕಾಲದಿಂದ ೧೪-೧೫ನೆಯ ಶತಮಾನಗಳ ಅವಧಿಯಲ್ಲಿಯೆ ರಚಿತವಾದವುಗಳು. ಅಲ್ಲದೆ ಕಾಲಕಾಲಕ್ಕೆ ಪ್ರಕ್ಷಿಪ್ತಗಳು (interpolations) ಸೇರಿಕೊಂಡೇ ಇರುತ್ತವೆ. ಹೀಗಿರುವಾಗ ನಮ್ಮ ಪರಮ ಪ್ರಿಯ ಸತ್ಯನಾರಾಯಣನು - ಇತಿಹಾಸ ಕಾಲದಲ್ಲೇ ಆಗಲಿ - ಎಂದು ಅವತರಿಸಿದ?

"ಹಾಂ. ಅವನು ಪುರಾಣಕಾಲದಲ್ಲೇ ಇದ್ದವ" ಎಂದು ಯಾರೂ ನನ್ನೊಡನೆ ವಾದಕ್ಕೆ ನಿಲ್ಲಬಹುದು. ಅವರಿಗೆ ನನ್ನ ಮರುಪ್ರಶ್ನೆ ಇಷ್ಟೇ. ವೇದಕಾಲದಿಂದ ಮಹಾಭಾರತದ ಕಾಲದ ವರೆಗೆ ಅವನ ಹೆಸರು ಎಲ್ಲಾದರೂ ಬಂದಿದೆಯೆ? ಹೇಳಿರಿ. 'ಸತ್ಯ' ಎಂಬ ಪೂರ್ವಪದವಿರುವ ಅನೇಕ ಹೆಸರುಗಳು ಕಂಡುಬರುತ್ತವೆ. ಉದಾ.ಗೆ ಸತ್ಯವ್ರತ, ಸತ್ಯಕಾಮ, ಸತ್ಯಜಿತ, ಸತ್ಯದೇವ, ಸತ್ಯಾರ್ಥಿ - ಏನೆಲ್ಲ.(ಸ್ತ್ರೀಯರಲ್ಲಿಯೂ 'ಸತ್ಯ'ರಿದ್ದಾರೆ - ಸತ್ಯಭಾಮೆ, ಸತ್ಯವತಿ.)ಆದರೆ ಎಲ್ಲಿಯೂ 'ಸತ್ಯನಾರಾಯಣ' ಇಲ್ಲವಲ್ಲ?

'ವಿಷ್ಣು-ಸಹಸ್ರ-ನಾಮ' ಇದರ ಒಂದು ಸಹಸ್ರ ಹೆಸರುಗಳಲ್ಲಿಯೂ ಈ ವಿಶಿಷ್ಟ ನಾರಾಯಣ ಸಿಗಲಿಲ್ಲ.

ಇದರಿಂದ ಅವನು ನಮ್ಮ ಇತಿಹಾಸ ಕಾಲದಲ್ಲಿ ಅವತರಿಸಿ 'ಸಂಭವಾಮಿ ಯುಗೇ ಯುಗೇ' ಎಂಬುದನ್ನು ಸಾರ್ಥಕಗೊಳಿಸಿದನೆಂದಾಯಿತು. ಆದರೆ ಎಂದಿನಿಂದ?

ನಮ್ಮ ಪ್ರಾಚೀನ ಹಾಗೂ ಮಧ್ಯಕಾಲೀನ ಶಾಸನಗಳಲ್ಲಿ ಸಾವಿರಾರು ಗುಡಿಗಳ ಕಟ್ಟೋಣದ , ಅವುಗಳಿಗೆ ದತ್ತಿ ಬಿಟ್ಟಿದ್ದರ ಪ್ರಸ್ತಾಪ ಬರುತ್ತದೆ. ಅಂಥ ಅನೇಕಾನೇಕ ಗುಡಿಗಳು ಇಂದಿಗೂ ದೇಶದ ಉದ್ದಗಲಕ್ಕೂ ನೋಡಸಿಗುತ್ತವೆ. ಆದರೆ ಎಲ್ಲಿಯೂ ಸತ್ಯನಾರಾಯಣನ, ಶತಮಾನಗಳ ಹಿಂದಿನ, ಗುಡಿಯ ನಿರ್ಮಾಣವಾಗಿಲ್ಲ. ಪೇಶ್ವೆಯರು (೧೮ನೆಯ ಶತಮಾನ) ನಾನಾ ಬಗೆಯ ವ್ರತಗಳನ್ನು ಆಚರಿಸುತ್ತಿದ್ದವರು. ಕಾಮಿತಾರ್ಥಗಳನ್ನು ಪೂರೈಸುವ ಈ ವ್ರತವನ್ನು ಖಂಡಿತವಾಗಿ ಆಚರಿಸುತ್ತಿದ್ದಿದ್ದರೆ; ಅದರ ಉಲ್ಲೇಖವು ಒಂದಾದರೂ ಕಡತದಲ್ಲಿ ತಪ್ಪದೇ ಇರುತ್ತಿತ್ತು. ಆದರೆ ಈ ಪ್ರಸ್ತಾಪವಿಲ್ಲ, ಹೋಗಲಿ; ಯಾವುದಾದರೂ ಪ್ರಾಚೀನ ಇಲ್ಲವೆ ಮಧ್ಯಕಾಲೀನ ಸಾಹಿತ್ಯ ಕೃತಿಗಳಲ್ಲಿ ಕಾಣಿಸಿಕೊಳ್ಳಬಾರದಿತ್ತೆ? ನನಗಂತೂ ಕಣ್ಣಿಗೆ ಬಿದ್ದಿಲ್ಲ.

ಹಾಂ-ಸುಪ್ರಸಿದ್ಧ ಕಥಾಸರಿತ್ಸಾಗರದಲ್ಲಿ, ಒಬ್ಬ ನಾರಾಯಣ ಬರುತ್ತಾನೆ. ಆದರೆ ಅವನು 'ಮಿಥ್ಯ ನಾರಾಯಣ'! ಹೌದು. ಆ ಕಥೆ ಇಂತಿದೆ:

ಹೀಗೆಯೇ ಒಬ್ಬ ಭಂಡ ತಾನು ವೈಕುಂಠದ ಸಾಕ್ಷಾತ್ ನಾರಾಯಣನೆಂದೂ ಇಷ್ಟಾರ್ಥಗಳನ್ನು ಪೂರೈಸುವವನೆಂದೂ ಹೇಳಿಕೊಳ್ಳುತ್ತಾನೆ. ಜನ ಅವನನ್ನು ದೇವರೆಂದೇ ತಿಳಿದು ಪೂಜಿಸುತ್ತಾರೆ; ನೈವೇದ್ಯಾದಿಗಳನ್ನು ಅರ್ಪಿಸುತ್ತಾರೆ! ತ್ರಿಲೋಕ ಸಂಚಾರಿಯಾದ ನಾರದನಿಗೆ ಅದು ಗೊತ್ತಾಗಿ ವೈಕುಂಠವಾಸಿ ನಾರಾಯಣನಿಗೆ ವಸ್ತುಸ್ಥಿತಿಯನ್ನು ತಿಳಿಸುತ್ತಾನೆ. ಮತ್ತು "ನೀನು ಸ್ವತಃ ಭೂಲೋಕಕ್ಕೆ ಹೋಗಿ ನಿಜವಾದ ನಾರಾಯಣ ನೀನೇ ಎಂದು ತೋರ್ಪಡಿಸು" ಎಂದು ಸೂಚಿಸುತ್ತಾನೆ, ಇತ್ಯಾದಿ.

ಒಂದು ಮಾತ್ರ ನಿಶ್ಚಿತ. ಸತ್ಯನಾರಾಯಣನು ಅವತರಿಸಿದ್ದು ದಕ್ಷಿಣ ಭಾರತದಲ್ಲಂತೂ ಅಲ್ಲ. ಹಾಗಿದ್ದರೆ ಉತ್ತರ ಭಾರತವೆ? ಸಾಧ್ಯತೆ ಇದೆ. ಯಾಕೆಂದರೆ ವ್ರತಾ ಕಥಾ ಭಾಗದಲ್ಲಿ ಸಿಂಧೂನದಿ ಹಾಗೂ ಕಾಶೀ ಪಟ್ಟಣಗಳ ಉಲ್ಲೇಖ ಬರುತ್ತದೆ.

ಹಾಗಿದ್ದರೆ, ಎಂದು?

ಕಲಕತ್ತಾ ವಿಶ್ವವಿದ್ಯಾಲಯವು ೧೯೩೦ರಲ್ಲಿ 'ಸತ್ಯಾವೇರೇರ್ ಕಥಾ' ಎಂಬ ಬಂಗಾಲೀ ಕೃತಿಯನ್ನು ಪ್ರಕಟಿಸಿದೆ. ಬರೆದವ ರಾಮೇಶ್ವರ ಭಟ್ಟಾಚಾರ್ಯ ಎಂಬವನು, ವೇರರು!(ಪೀರ್)

ಮುಸ್ಲಿಮ್ ಜನಾಂಗದ ಬಿಡಿ ಸನ್ಯಾಸಿಗಳಿವರು. ಹಿಂದೂಗಳಲ್ಲಿ ಕಾವಿ ಬಟ್ಟೆ ಧರಿಸಿದ ಇಂಥ ಸಾಧುಗಳಿರುವ ಹಾಗೆ ಪೀರರು ನೂರಾರು ಜನ ಇದ್ದಾಗ, ಅವರುಗಳಲ್ಲಿ ನಿಜವಾದ, 'ಸಚ್ಚಾ' ಪೀರರು ಯಾರು? ಅಂಥವನನ್ನೊಬ್ಬನನ್ನು ಗುರುತಿಸಿ ಸಚ್ಚಾ ಅಥವಾ ಸತ್ಯಾ-ಪೇ(ಪೀ)ರ್ ಎಂದು ಕರೆದರು. ಅವನಲ್ಲಿ 'ಉರುಸು' ಮೂಲಕ ಭಕ್ತಿಯಿಂದ ಹಿಂದೂಗಳು ಸಹ ನಡೆದುಕೊಂಡರು. ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುತ್ತಿದ್ದರು. ಇದು ಆಗಿಹೋದದ್ದು, ಪ್ರಾಯಶಃ ೧೮ನೆಯ ಶತಮಾನದಲ್ಲಿ. ಆಗ ಓರ್ವ ಹಿಂದೂ ಧರ್ಮಾಭಿಮಾನಿ ನಮ್ಮ ದೇವರನ್ನೇ 'ಸತ್ಯ'ನೆಂದು ಪರಿಭಾವಿಸಿ ಪ್ರತ್ಯೇಕ ಪೂಜೆಯನ್ನೇಕೆ ಮಾಡಬಾರದು -ಎಂದು ಯೋಚಿಸಿರಬೇಕು.

ಇದನ್ನು ನಾನು ಹುಟ್ಟಿಸಿಕೊಂಡು ಹೇಳ್ತಾ ಇಲ್ಲಾರೀ. ಜಾಗತಿಕ ಖ್ಯಾತಿಯ ವಿದ್ವಾಂಸರಾದ ಡಾ. ಡಿ.ಡಿ. ಕೋಸಾಂಬಿಯವರು ಹಾಗೆಂದು ಒಂದೆಡೆ ಸೂಚಿಸಿದ್ದಾರೆ!

The most remarkable [new cults transcending religious barriers] was Satya Pir for whose cult there seems to be no real evidence before the beginning of the 18th Century. Later the Saint's life was rapidly developed and popularized by such Hindu poems as 'Satya Pirer Katha'. The cult spread all over India in the GUISE of 'Satya Narayana ' - a popular democratic Hindu observance, WITHOUT ANY EARLIER RELIGIOUS SANCTION OR FIXED DATE.

(ದೊಡ್ಡ ಅಕ್ಷರಗಳ ಒತ್ತು ನನ್ನದು)

ಅಂತೂ ನಮ್ಮ ಸತ್ಯನಾರಾಯಣನು ಉತ್ತರ ಭಾರತದಲ್ಲಿ, ಎರಡು ಶತಕಗಳ ಹಿಂದೆ ಅವತಾರ ಮಾಡಿದ. ಆಮೇಲೆ ಪಶ್ಚಿಮ ಭಾರತಕ್ಕೆ ಎಂದರೆ ಮಹಾರಾಷ್ಟ್ರಕ್ಕೆ ಕಳೆದ ಶತಮಾನದಲ್ಲಿ ತಲೆ ಎತ್ತಿ, ೧೯/೨೦ ಶತಮಾನ ಕಾಲದಲ್ಲಿ ಕರ್ನಾಟಕದಲ್ಲಿ ವ್ಯಾಪಿಸಿದ ಎಂದು ಗ್ರಹಿಸಿದರೆ ತಪ್ಪೇನಾಗಲಿಕ್ಕಿಲ್ಲವಲ್ಲ! ಅವನ ವ್ರತಪೂಜೆಯ ಹಾಗೂ ಕಥೆಯ ಕನ್ನಡ ಭಾಷಾಂತರಗಳು ಪ್ರಕಟವಾಗಬೇಕಷ್ಟೆ. ಅಂಥದೊಂದು 'ಪೋಥಿ' ಪುಸ್ತಕವು ೧೮೮೦ನೆಯ ದಶಕದಲ್ಲಿ ಬೆಳಗಾಂವಿಯಿಂದ ಪ್ರಕಟವಾಯಿತು. ಆಮೇಲೆ ೧೯೨೦ರ ಸುಮಾರಿಗೆ ಅದರ ಅಚ್ಚಿನ ಮೊಳೆಗಳ ಮುದ್ರಣ ಹೊರಬಂದಿತು. ಅದನ್ನು ಹೊರತರುತ್ತ ಕಿತ್ತೂರಿನ ನರಸಿಂಹಾಚಾರ್ಯ ಪುಣೇಕರರು ('ಕಾವ್ಯಾನಂದ'). 'ಈ ವ್ರತವು ನಮ್ಮ ಭಾಗದಲ್ಲಿ (ಎಂದರೆ

ಮುಂಬಯಿ ಕರ್ನಾಟಕದಲ್ಲಿ) ಈಚೆಗೆ ೩೫-೪೦ ವರ್ಷಗಳ ಹಿಂದಿನಿಂದ ಪ್ರಚಾರದಲ್ಲಿದೆ' - ಎಂದಿದ್ದಾರೆ.

ಅಂದ ಹಾಗೆ 'ಸತ್ಯ' ಎನ್ನುವುದಕ್ಕೆ ಎರಡು ಅರ್ಥಗಳಿವೆ. ಒಂದು 'ನಿಜವಾದ' ಎನ್ನುವುದು. ಕೋಸಾಂಬಿಯವರು ಹೇಳಿರುವುದು ಈ ಅರ್ಥದಲ್ಲಿ.(ಸಚ್ಚಾ) . ಆದರೆ ಸತ್ಯ ಎನ್ನುವುದಕ್ಕೆ 'ಪ್ರಾಮಾಣಿಕವಾದ' ಎಂಬುದೂ ಬಳಕೆಯಲ್ಲಿದೆಯಲ್ಲ? ನಮಗೆ ಗೊತ್ತಿದ್ದ ಹಾಗೆ, ಪೂಜಾ ಪುಸ್ತಕದಲ್ಲಿರುವ ಕತೆಗಳಲ್ಲಿ ಹೆಚ್ಚಿನವು ವ್ಯಾಪಾರೀ ವರ್ಗದವರಿಗೆ ಸಂಬಂಧಿಸಿವೆ. ಆ ವರ್ಗದವರಲ್ಲಿ ವ್ಯವಹಾರಗಳಲ್ಲಿ ಪ್ರಾಮಾಣಿಕತೆಯ ಅಂಶ ಕೊಂಚ ಕಡಿಮೆ ಎಂದು ತಿಳಿದು ಆ ಕಥನಕಾರ ಸೂಚ್ಯವಾಗಿ ಅವರನ್ನು ಎಚ್ಚರಿಸ ಬಯಸಿರಬಹುದೆ? ಅದಕ್ಕೇನೆ ಸತ್ಯನಾರಾಯಣ ದೇವರು ದಾರಿ ತಪ್ಪಿದವರ ಮೇಲೆ ಕ್ರುದ್ಧನಾಗಿ ಶಿಕ್ಷಿಸುತ್ತಾನೆ. ಆ ತಪ್ಪನ್ನು ಒಪ್ಪಿಕೊಂಡ ಮೇಲೆಯೇ ಕ್ಷಮಿಸುತ್ತಾನೆ - ಎಂಬೀ ಕಥಾಂಶ ನಮಗೆ ತಿಳಿದದ್ದೇ.

ಸತ್ಯನಾರಾಯಣ ಪ್ರಸಾದದ ಹುಟ್ಟು ಮಾತ್ರ ಇದಕ್ಕೂ ಮೋಜಿನದಾಗಿದೆ. ಅದು ಅತ್ಯಂತ ಸ್ವಾದಿಷ್ಟವಾದದ್ದು ಎನ್ನುವುದಂತಿರಲಿ, ಅದರ ಘಟಕಗಳು (ಹಾಲು, ಸಕ್ಕರೆ, ಸಜ್ಜಿಗೆ, ಬಾಳೆಹಣ್ಣು, ತುಪ್ಪ) ಇವೆಲ್ಲಾ ಸಮಪ್ರಮಾಣದಲ್ಲಿ ಇರಬೇಕೆಂದು ಹೇಳಿದೆ. ಈ ಬಗೆಯ Combination ಇರುವ ಯಾವ ಖಾದ್ಯ ಪದಾರ್ಥವೂ, ನಮ್ಮ ಹಳೆಯ ಪಾಕಶಾಸ್ತ್ರಗಳಲ್ಲಿ ಉಲ್ಲೇಖಗೊಂಡಿಲ್ಲ. ಈ recipe ಆ ಕಥನಕಾರನದೇ ವಿಶಿಷ್ಟವಾದದ್ದಿರಬೇಕು. ಎಂತಲೇ ಅದರ ವಿವರವನ್ನು ಕೊಟ್ಟಿದ್ದಾನೆ. (ಪೂಜಾ ಪುಸ್ತಕಗಳಲ್ಲಿ ನೈವೇದ್ಯದ ಪದಾರ್ಥವನ್ನು ಹೇಗೆ ತಯಾರಿಸಬೇಕೆಂದು ಯಾರಾದರೂ ಹೇಳ್ತಾರೆಯೆ?) ಇಷ್ಟೊಂದು ರುಚಿಕರ ನೈವೇದ್ಯವನ್ನು ಸ್ವೀಕರಿಸದೆ ಹಾಗೇ ಹೋಗಬಾರದು; ಸತ್ಯನಾರಾಯಣ ಸಿಟ್ಟಿಗೇಳುತ್ತಾನೆ - ಎಂಬ ಎಚ್ಚರಿಕೆ ಬೇರೆ! ಅದರ ಅಗತ್ಯವೇ ಇದ್ದಿಲ್ಲ, ಬಿಡಿರಿ..

'ನಾರಾಯಣ' ಎಂಬ ಉತ್ತರ ಪದದ ಬಗ್ಗೆಯೂ ನನಗೆ ತುಸು ಸಂದೇಹವಿದೆ. ಆಪಾತತಃ ಈ ನಾರಾಯಣ ನಮ್ಮ ಹರಿ-ವಿಷ್ಣುವೇ ಇದ್ದಿರಬೇಕು. ಆದರೆ ಸ್ವತಹ ವ್ರತಕಾರನಿಗೇ ಆ ಸಂಶಯವಿದೆ. "ಅವನನ್ನು 'ಕಾಲ'ನೆಂದೂ, ಈಶ್ವರನೆಂದೂ ಕರೆಯುವರು." ಎನ್ನುತ್ತಾನೆ. ಅಲ್ಲದೆ ಪೂಜೆಯನ್ನು ಸಂಜೆಗೆ ಮಾಡುವುದು ವಿಹಿತ ಎನ್ನುತ್ತಾನೆ. ವೈಷ್ಣವರಲ್ಲಿ ಸಾಯಂ-ಪೂಜೆ ಸಾಮಾನ್ಯವಾಗಿ ನಿಷಿದ್ಧ. ಇನ್ನೊಂದು ಸಂದೇಹವೆಂದರೆ , ಸತ್ಯನಾರಾಯಣನ ಪೂಜೆಯನ್ನು ಯಾವ ದಿನವಾದರೂ ಮಾಡಬಹುದಂತೆ! ಆದರೆ ಹಿಂದೂ ಸಂಪ್ರದಾಯದ ಪ್ರಕಾರ ಯಾವುದೇ ದೇವರ ಪೂಜೆಗೆ ವರ್ಷದಲ್ಲಿ ನಿಶ್ಚಿತ ದಿನ ಇರುತ್ತದಲ್ಲವೆ? ರಾಮನವಮಿ, ನೂಲ ಹುಣ್ಣಿಮೆ, ದುರ್ಗಾಷ್ಟಮಿ ಇತ್ಯಾದಿ. ಮತ್ತೊಂದು, ಈ ಪೂಜೆಯನ್ನು ನದಿಯ ದಂಡೆಯ ಮೇಲೆ, ಅರ್ಥಾತ್ ಮನೆಯ ಹೊರಗೂ ಮಾಡಬಹುದೆಂಬ concession ಬೇರೆ ಇದೆ. ಇನ್ನೊಂದು ವೈಚಿತ್ರವೆಂದರೆ, ಸಾಮಾನ್ಯವಾಗಿ ಇಂಥ ಪೂಜೆಗಳಿಗೆ ಪುರೋಹಿತರು

ಇಲ್ಲವೆ ಭಟ್ಟರು ಬೇಕಾಗುತ್ತದೆ. ಇಲ್ಲಿ ಹಾಗಿಲ್ಲ, ಅಲ್ಲದೆ ಯಾರೇ ಸ್ತ್ರೀಯರೂ ಇರಲಿ, ಬಡವರೇ ಇರಲಿ - ಈ ಸತ್ಯನಾರಾಯಣನ ಪೂಜೆಯನ್ನು ಮಾಡಬಹುದಂತೆ. ಈ ಸಾರ್ವತ್ರಿಕತೆ ನಿಜಕ್ಕೂ ಮೆಚ್ಚಬೇಕಾದದ್ದೇ. ಇಷ್ಟೇ , ಇದೆಲ್ಲ ವೈಷ್ಣವೀಯ ಪದ್ಧತಿಗೆ ಹೊಂದುವಂತಹದಲ್ಲ. ಆದ್ದರಿಂದ ಇಲ್ಲಿಯ ನಾರಾಯಣ ಮೂಲ ವಿಷ್ಣುವಿನ ಸನ್ನಿಧಿಯವನಿರಲಿಕ್ಕಿಲ್ಲ. (ಕೆಲವು ಹಳೆಯ ಕರ್ಮಠ ವೈಷ್ಣವ ಮನೆತನದವರು ಈ ವ್ರತವನ್ನು ಮಾಡುವುದೂ ಇಲ್ಲ).

ಇದರ ವ್ಯಂಗ್ಯವೆಂದರೆ ಈತ ವಿಷ್ಣುವೇ ಎಂದು ಬಗೆದು ಅದಕ್ಕೆ ಪ್ರತಿಯಾಗಿ 'ವರದ ಶಂಕರ ವ್ರತ' ಸೃಷ್ಟಿಯಾಯಿತು. ಗಣೇಶನ ಭಕ್ತರಿಗೂ ಹಾಗನಿಸಿ, ಅವರಲ್ಲೊಬ್ಬ "ಸತ್ಯ ವಿನಾಯಕ ವ್ರತ" ವನ್ನು ಹುಟ್ಟು ಹಾಕಿದ!

ನನಗೆ ತೋಚಿದ ಪ್ರಕಾರ, ಈ ಕಾಮ್ಯಕ ವ್ರತವನ್ನು ಕಲ್ಪಿಸಿದವನ ಮನಸ್ಸಿನಲ್ಲಿ ಬಡ ಸಾಮಾನ್ಯ ಜನತೆ ದೇವರಲ್ಲಿ ನಿಷ್ಠೆಯನ್ನಿರಿಸಿಕೊಂಡು ಪ್ರಾಮಾಣಿಕವಾಗಿ ಬಾಳಬೇಕು ಎಂಬ ವಿಚಾರವಿದ್ದಿತು. ಈಗೇನಾಗಿದೆ? ಸತ್ಯನಾರಾಯಣನು ಬಡವರ ಗುಡಿಸಲನ್ನು ಬಿಟ್ಟು ಸಿರಿವಂತರ ಇಲ್ಲವೆ ಆಢ್ಯತೆಯಿರುವವರ ಭವನಗಳಿಗೆ ಸಾಗಿ ಬಂದಿದ್ದಾನೆ. ಮೂಲದ ಧಾರ್ಮಿಕ ಸ್ವರೂಪ ನೆಪಕ್ಕೆ ಉಳಿದು, ಪೂಜೆಗೆ ಸಾಮಾಜಿಕ ಮಹತ್ವವೇ ಹೆಚ್ಚಾಗಿ ಇದೆ. ಆಪ್ತರನ್ನು, ಸ್ನೇಹಿತರನ್ನು, ಕರೆಕರೆದು ಪ್ರಸಾದವನ್ನು ಕೊಟ್ಟು, ಮೃಷ್ಟಾನ್ನ ಭೋಜನ ಹಾಕಿ ಬೀಳ್ಕೊಡುವುದೇ ಹೆಚ್ಚು. ಈ ಪೂಜೆಯನ್ನು ಹಮ್ಮಿಕೊಳ್ಳುವ ನಿಮಿತ್ತಗಳೂ (ಮದುವೆ, ಉಪನಯನ, ನೌಕರಿಯ ಪ್ರಮೋಶನ್, ವಾಸ್ತು ಇ.) ಅದಕ್ಕೆ ಅನುಗುಣವಾದವುಗಳೇ. ಏನೇ ಇರಲಿ ನಮ್ಮೀ ಸತ್ಯ ನಾರಾಯಣನ ಜನಪ್ರಿಯತೆ ಸಮಾಜದಲ್ಲಿ ಇನ್ನಷ್ಟು ಹಬ್ಬಲಿ.

***

೨. ವಿಷ್ಣುವಿನ ಅವತಾರಗಳು ಹತ್ತು ಮಾತ್ರವೆ ?

ಎಂಟು ವರ್ಷದ ನನ್ನ ಮೊಮ್ಮಗ ಪಡಸಾಲೆಯಲ್ಲಿ ತೂಗು ಹಾಕಿದ್ದ ಶ್ರೀ ರಾಮ-ಕೃಷ್ಣರ ಫೋಟೋ ನೋಡಿ " ಅಜ್ಜಾ, ಅಜ್ಜಾ, ಈ ಫೋಟೋಗಳಲ್ಲಿಯ ದೇವರುಗಳಿಗೆ ಮೀಸೆ ಇಲ್ಲವಲ್ಲ. ಅಪ್ಪನ ಹಾಗೆ ಇವರು ದಿನಾನೂ ದಾಡಿ ಮಾಡಿಕೊಳ್ಳುತ್ತಿದ್ದರೇನು?" ಎಂದು ಕೇಳಿದ.

ಹೌದಲ್ಲ? ಮನೆಮನೆಗಳಲ್ಲಿ ಕಂಡು ಬರುವ ಈ ದೇವರ ಚಿತ್ರಗಳಲ್ಲಿ ಒಂದೆಡೆಗೂ ಮೀಸೆಯನ್ನೇಕೆ ಕೊಟ್ಟಿಲ್ಲ? ಅದೇ, ಶಿವನಿಗೆ ಮೀಸೆ ಮೂಡಿಸಿದ ಚಿತ್ರಗಳಿವೆ.

ರಾಮ, ಕೃಷ್ಣರು ವಿಷ್ಣುವಿನ ದಶಾವತಾರಗಳಲ್ಲಿ ಬರುವಂತಹರು. ಇತರ ಅವತಾರಗಳಲ್ಲಿ ಹೇಗೆ ? ಮತ್ಸ್ಯ, ಕೂರ್ಮ, ವರಾಹಗಳು ಹೇಳಿ ಕೇಳಿ ಪ್ರಾಣಿಗಳು. ನರಸಿಂಹಾವತಾರ? ಹೇಗೂ ಅಲ್ಲಿರುವುದು ಸಿಂಹದ ಮುಖ. ವಾಮನಾವತಾರ? ಹೇಳಿ ಕೇಳಿ ಹುಡುಗ! ಆದ್ದರಿಂದ ಇರಬೇಕಾದದ್ದಿಲ್ಲ. ಇನ್ನು ೯ನೆಯ ಎಂದರೆ ಸದ್ಯದ ಅವತಾರದ ಬುದ್ಧನಂತೂ ಬತ್ತಲೆ ಇರುವವ! ಅವನಿಗೆ ಮೀಸೆ? ಛೇ ಕೂಡದು. ಕೊನೆಯ ಕಲ್ಕಿ ಅವತಾರ ಇನ್ನೂ ಎಂದೊ? ಬಿಡೋಣ. ಹಾಂ. ಪರಶುರಾಮ. ಕೈಯಲ್ಲಿ ಕೊಡಲಿ ಹಿಡಿದವ. ಇಪ್ಪತ್ತೊಂದು ಸಾರಿ ಮೀಸೆ ಹೊತ್ತ ಕ್ಷತ್ರಿಯರನ್ನು ಸಂಹಾರ ಮಾಡಿದ ವೀರಾಧಿವೀರ! ಮಹಾ ಗಂಡಸು. ಆದರೇನಂತೆ; ಅವನ ಚಿತ್ರ ಬಿಡಿಸಿ, ಮನೆಗಳಲ್ಲಿ ತೂಗುಹಾಕುವ ಪ್ರಮೇಯ ಕಂಡು ಬಾರದು.

ಇನ್ನುಳಿದವರು ಈ ರಾಮ, ಕೃಷ್ಣರು. ಅವರು ದೇವರೇನೊ ಹೌದು. ಆದರೆ ಮಾನವರಂತೆ ಜನ್ಮ ತಾಳಿ, ಬಾಲ್ಯ, ಯೌವನಗಳನ್ನು ಕಳೆದು, ಮದುವೆಯಾಗಿ ಮಕ್ಕಳನ್ನು ಪಡೆದವರು. ಅವರಿಗೆ ಮೀಸೆ ಇಲ್ಲವೇಕೆ?

ರಾಜಾ ರವಿವರ್ಮನಿಂದ ಹಿಡಿದು ಆಧುನಿಕ ಚಿತ್ರಕಾರರ ವರೆಗೆ ಯಾರೂ ಅವರನ್ನು 'ಮೀಸೆ ಹೊತ್ತ'ಗಂಡಸರನ್ನಾಗಿ ಚಿತ್ರಿಸಿಲ್ಲವಲ್ಲ! ನಾರಿಯರಿಗೂ ಮಿಗಿಲಾದ ನುಣುಪುಗಲ್ಲದವರೆಂದೇ ಯಾಕೆ ರೂಪಿಸುತ್ತಾರೆ? ಸುರೂಪ ಸುಂದರರೆಂದೆ? ಆದರೆ ಗಂಡಸು

ಎನ್ನುವವನಿಗೆ ಮೀಸೆ ಇದ್ದರೇನೆ ಶೋಭೆಯಲ್ಲವೆ?

ಹಿಂದಿನ ಕಾಲದ ರಾಮನಿಗೆ ಮತ್ತು ಕೃಷ್ಣನಿಗೆ ಮೀಸೆ, ಗಡ್ಡ ಇದ್ದೇ ಇದ್ದುವು. ಪುರಾವೆಗಳು ಬೇಕೆ? ಶ್ರೀರಾಮನು ೧೪ ವರ್ಷ ವನವಾಸ ಮುಗಿಸಿ ಅಯೋಧ್ಯೆಗೆ ಬಂದಾಗ ಅವನಿಗೆ ಜಟಾ-ಜೂಟ ಯಥೇಚ್ಛವಾಗಿ ಬೆಳೆದಿತ್ತು. ಲಕ್ಷ್ಮಣನಿಗೂ ಡಿಟ್ಟೋ. ಇತ್ತ ಅಣ್ಣನ ಹೆಸರಿನಲ್ಲಿ ರಾಜ್ಯಭಾರ ಮಾಡುತ್ತಿದ್ದ ಭರತನೂ ಮೀಸೆ ಗಡ್ಡಗಳನ್ನು ತೆಗೆಸುವ ಉಸಾಬರಿಗೆ ಹೋಗಿರಲಿಲ್ಲ. ಅಂತೂ ಅಯೋಧ್ಯೆಯಲ್ಲಿ ಬಂಧುಗಳೆಲ್ಲ ಸೇರಿದ್ದಾಗ ಅವರುಗಳೆಲ್ಲ ಯಾರು ಮೊದಲಿಗೆ ಕ್ಷೌರಿಕನಿಗೆ ತಲೆ-ಮುಖ ಒಪ್ಪಿಸಬೇಕೆನ್ನುವ ಬಗ್ಗೆ ಚರ್ಚೆ ನಡೆಯಿತೆಂಬ ಅಂಶ ಉತ್ತರ ರಾಮಾಯಣದಲ್ಲಿ ಬರುತ್ತದೆ.

ಶ್ರೀಕೃಷ್ಣನು ನಿಯಮಿತವಾಗಿ ಮೀಸೆ ಬಿಟ್ಟಿದ್ದನೆನ್ನುವುದಕ್ಕೆ ಒಂದು ಅಥೆಂಟಿಕ್ ಉಲ್ಲೇಖವಿದೆ. ಅಥೆಂಟಿಕ್ ಎಂದು ಹೇಳಿದ್ದರ ಕಾರಣವೆಂದರೆ, ಅದು ಕೃಷ್ಣಕಥೆಯನ್ನೆ ಹೇಳ ಹೊರಟಿದ್ದ ಕುಮಾರವ್ಯಾಸನದು. ಸಂದರ್ಭ;ಅವನು ಕೌರವರೊಡನೆಯ ಸಂಧಾನಕ್ಕೆಂದು ಹಸ್ತಿನಾವತಿಗೆ ಹೊರಟವನು ನೇರ ವಿದುರನ ಮನೆಗೆ ಬರುತ್ತಾನೆ. ಆಗ ಅವನನ್ನು ವಿದುರನು ಎದುರ್ಗೊಳ್ಳುವಾಗಿನ ಕೃಷ್ಣನ ಸ್ವರೂಪ ವರ್ಣನೆ ಹೀಗಿದೆ:

ಸಿರಿಮೊಗದ ಕಿರು ಬೆಮರ ತೇಜಿಯ
ಖುರಪುಟದ ಕೆಂಧೂಳಿ ಸೋಂಕಿದ
ಸಿರಿಮುಡಿಯ ಕುಡಿಮೀಸೆಯಲಿ ಕೆಂಪಡರ್ದ ರೇಣುಗಳ
ಖರ ಮರೀಚಿಯ ಜಳಕೆ ಬಾಡಿದ
ತರುಣ ತುಲಸಿಯ ದಂಡೆಯೊಪ್ಪುವ
ಗರುವ ದೇವನ ಬರವ ಕಂಡನು ಬಾಗಿಲಲಿ ವಿದುರ ||
(ಉದ್ಯೋಗ ಪರ್ವ ೮-೨)

ಕ್ರೈಸ್ತ ಧರ್ಮವು ಶ್ರೇಷ್ಠವೆಂದು ಮಿಶನರಿಗಳು ಹೇಳುವಾಗ ಹಿಂದೂ ಧರ್ಮವನ್ನು ಟೀಕಿಸಬೇಕಾದದ್ದು ಕ್ರಮಪ್ರಾಪ್ತವಾದದ್ದು. ಅವರೀ ಟೀಕೆಗೆ ಸುಲಭವಾಗಿ ಗುರಿಯಾಗುತ್ತಿದ್ದದ್ದು ಈ ದಶಾವತಾರ. ದೇವರು ಸರ್ವ ಶಕ್ತನಾಗಿದ್ದರೆ ಮೀನು, ಹಂದಿ, ಆಮೆಗಳಂತಹ ಪ್ರಾಣಿಗಳ ರೂಪವನ್ನೇಕೆ ತಾಳಬೇಕು? ಮನುಷ್ಯ ರೂಪವಿದ್ದರೂ ವಾಮನನು ಕುಳ್ಳನಾಗಿ, ಬುದ್ಧನು ಬತ್ತಲೆ-ಬುರುಕನಾಗಿ, ನರಸಿಂಹನು ಸಿಂಹದ ಮೂತಿಯನ್ನು ಹೊಂದಿಯೆ ಏಕೆ ಕಾಣಿಸಿಕೊಳ್ಳಬೇಕು? ರಾಮ, ಕೃಷ್ಣರೇನೊ ಸೌಷ್ಠವಯುಕ್ತರಾದ ಮನುಷ್ಯರು. ಆದರೆ ಅವರ ನಡವಳಿಕೆ ಮಾತ್ರ ಅತ್ಯಂತ ನಿಂದ್ಯವಾದದ್ದು. ದುಷ್ಟ ನಿಗ್ರಹವೇನೊ ಸರಿ, ಆದರೆ ಈ ರಾಮನೆಂಬ ದೇವರು ಮರೆಯಲ್ಲಿ ನಿಂತು ವಾಲಿಯನ್ನು ಕೊಲ್ಲಬೇಕಿತ್ತೆ? ಅದರಂತೆ ಅಬಲೆಯಾದ ಶೂರ್ಪನಖಿಯ ಕಿವಿ, ಮೂಗು ಕೊಯ್ಯುವುದೇ?. . . ಛೇ.

ಕೃಷ್ಣನಂತೂ ಅವರ ಪರಮಾವಧಿ ಟೀಕೆಗೆ ಗುರಿಯಾದವ. ವಿಶೇಷತಃ ಅವನ ಜಾರ ಚೋರತನ, ಅವನ ಕಪಟನಾಟಕತ್ವಗಳು. ಅದರಲ್ಲಿಯೂ ಕೃಷ್ಣನನ್ನು ಯೇಸು ಕ್ರಿಸ್ತನಿಗೆ ಹೋಲಿಸಿ 'ಕೃಷ್ಣ- ಕ್ರಿಸ್ತ ಇವರ ಹೆಚ್ಚು ಕಡಿಮೆ' ಎಂಬ ಪುಸ್ತಕವನ್ನೆ ಬರೆದಿದ್ದಾರೆ. ಯೇಸು ಪರಮ ಸಜ್ಜನ, ಪರಮ ತ್ಯಾಗಿ, ಇನ್ನೊಬ್ಬರಿಗಾಗಿ ಕಷ್ಟ ಸಹಿಸುವವ. ಅವನಲ್ಲಿ ಒಂದಾದರೂ ಅವಗುಣ ಕಾಣದು, ಇತ್ಯಾದಿ.

ಇತರ ಅವತಾರಗಳನ್ನು ಅವರು ಟೀಕಿಸುವ ಧಾಟಿ ಹೀಗಿದ್ದಿತು. " ಈ ಅವತಾರಗಳ ಕಥೆಗಳನ್ನು ನೋಡಿದರೆ ದೇವರು ಅಜ್ಞಾನಿಯೂ ಅಸಮರ್ಥನೂ ಮೂರ್ಖನೂ ಮೋಸಗಾರನೂ ಎಂದೇ ತೋರುತ್ತದೆ. ಹ್ಯಾಗೆಂದರೆ ಈ ದೇವರು ವೇದಗಳನ್ನು ಕೊಂಡೊಯ್ದ ದೈತ್ಯನನ್ನು, ಮತ್ಸ್ಯದ ರೂಪವನ್ನು ತಾಳಿ ತನ್ನ ಬಾಲದಿಂದ ಹೊಡೆದು ವಾಂತಿ ಮಾಡಿಸಿದನಷ್ಟೆ. ಆಗ ಋಗ್ವೇದವು ಪೂರ್ಣವಾಗಿ ಹೊರ ಬಂತು. ಯಜುರ್ವೇದವು ಮುಕ್ಕಾಲು ಪಾಲು; ಸಾಮವೇದವು ಅರ್ಧ ಪಾಲು; ಅಥರ್ವಣ ವೇದವು ಒಂದು ನಾಲ್ಕಾಂಶವು ಉಳಿಯಿತು. ಉಳಿದ ಭಾಗಗಳು? ಅವನ್ನು ಉಳಿಸಲು ಸರ್ವಶಕ್ತನಾದ ವಿಷ್ಣುವಿನಿಂದ ಆಗಲೇ ಇಲ್ಲ."

'ವಿಕೀರ್ಣ ಸುಭಾಷಿತ ಪ್ರಸಂಗ ಶತಕ' ಎಂಬ ಅವರ ಗ್ರಂಥದಲ್ಲಿ ಈ ರೀತಿಯ ದೋಷಾನ್ವೇಷಣೆ ಮುಂದುವರಿಯುತ್ತದೆ. ಯಾವ ದೋಷಗಳನ್ನು ಹೊರಗಿನವರು ಕಂಡಿದ್ದಾರೆಯೋ ಅವು ನಮ್ಮ ಧಾರ್ಮಿಕ ಶ್ರದ್ಧೆಯಲ್ಲಿ ಗ್ರಾಹ್ಯವಾದವುಗಳೇ. ಎಷ್ಟರ ಮಟ್ಟಿಗೆ ಎಂದರೆ ವರಾಹಮೂರ್ತಿ ಎಂದಾಗಲೀ ಕೂರ್ಮಾಚಾರ್ಯ ಎಂದಾಗಲೀ ಕರೆಯಿಸಿಕೊಳ್ಳುವುದಕ್ಕೆ ಸಂಕೋಚ ಪಡುವುದಿಲ್ಲ. ಅದರಂತೆ ಶ್ರೀ ಕೃಷ್ಣನ ಜಾರ-ಚೋರ ವಂಚನೆಗಳು ತಿಳಿದೂ ತಿಳಿದೂ ಗ್ರಾಹ್ಯವಾಗಿವೆ. ಪುರಂದರದಾಸರು ತಮ್ಮೊಂದು ಹಾಡಿನಲ್ಲಿ ಅವನನ್ನು 'ಕಪಟನಾಟಕ ಸೂತ್ರಧಾರ'ನೆಂದು ಅಭಿಮಾನ ಪುರಸ್ಸರವಾಗಿ ಸಂಬೋಧಿಸಿದ್ದಾರೆ. ಅವರೊಬ್ಬರೇ ಏಕೆ, ಎಲ್ಲ ದಾಸರೂ ದಶಾವತಾರಗಳನ್ನು ಎತ್ತಿಕೊಂಡು ಧಾರಾಳವಾಗಿ ಸ್ತುತಿಸಿದ್ದಾರೆ. ಜೊತೆಗೆ ಕಲ್ಪಕತೆಯನ್ನು ಹರಿಬಿಟ್ಟಿದ್ದಾರೆ.

ದಶಾವತಾರಗಳಲ್ಲಿ ಕಂಡು ಬರುವ ಕುರೂಪಗಳನ್ನು ದಾಸರೂ ನಿರ್ಭಿಡೆಯಿಂದ ಹೇಳುತ್ತಾರೆ. ಆದರೆ ನಿಂದಾಸ್ತುತಿರೂಪದಲ್ಲಿ. ಮತ್ಸ್ಯಾವತಾರದ್ದು 'ಗುಪ್ಪು ನಾರುವ ಮೈ'ಯಂತೆ ;ಕೂರ್ಮಾವತಾರದ 'ಬಿರುಸು ಮೈ'; ವರಾಹಾವತಾರದ 'ಸೊಟ್ಟ ಮೋರೆ'; ನರಸಿಂಹಾವತಾರದ 'ಉದ್ದನೆಯ ಹಲ್ಲು' ; ವಾಮನಾವತಾರದ 'ಭಿಕ್ಷುಕ ವೃತ್ತಿ' ಪರಶುರಾಮನ 'ಕೋಪಿಷ್ಠ ಸ್ವಭಾವ'- ಹೀಗಿರುತ್ತ ಸಮುದ್ರರಾಜನು ತನ್ನ ಮಗಳು ಲಕ್ಷ್ಮಿಯನ್ನು ಅದ್ಹೇಗೆ ಧಾರೆಯೆರೆದು ಕೊಡಲು ಮನಸ್ಸು ಮಾಡಿದನೋ! ಎಂಬುದಾಗಿ ಓರ್ವ ದಾಸರು ಕೇಳುತ್ತಾರೆ.

ಹೊರಗಿನ ಮಿಶನರಿಗಳನ್ನು ಬಿಡಿರಿ. ನಮ್ಮವರೇ ಆದ ಎಂ.ವಿ. ಹೆಗ್ಡೆ ಎಂಬವರು ಈ ಅವತಾರಗಳನ್ನು 'ವಿಷ್ಣುವಿನ ದಶಾಪರಾಧಗಳು'ಎಂಬುದಾಗಿ ಹರಟೆಯ ಶೈಲಿಯಲ್ಲಿ

ಟೀಕಿಸುವ ಲೇಖನಗಳನ್ನು ಬರೆದಿದ್ದಾರೆ. (ನವಯುಗ ವಾರಪತ್ರಿಕೆ- ೧೯೫೩):-

"ವಿಷ್ಣುವು ಮೀನಾಗಿ ಹೋಗಿ ದೈತ್ಯನನ್ನು ನುಂಗಿದನೆನ್ನುವುದು ಕ್ಷುದ್ರ ಆರೋಪ. ಸಮುದ್ರದಲ್ಲಿರುವ ತಿಮಿಂಗಿಲಗಳು ಅದೆಷ್ಟು ಬಲಿಷ್ಠರನ್ನು ನುಂಗಿಲ್ಲ? ಅಂಥದ್ದೊಂದು ತಿಮಿಂಗಲವು ನೀರಲ್ಲಿ ಮುಳುಗಿದ ದುಷ್ಟ ದೈತ್ಯನನ್ನು ನುಂಗಿರಬೇಕು. ಕೂರ್ಮ, ವರಾಹ ಅವತಾರಗಳಲ್ಲಿಯೂ ಇದೇ ಬಗೆಯ ಅಸಂಬದ್ಧತೆ ಇದೆ. ಪ್ರಹ್ಲಾದನಿಗೆ ಕೊಡುತ್ತಿದ್ದ ಪೀಡೆಯನ್ನು ನೋಡಿ ಸಹಿಸಲಾರದೆ ಅಲ್ಲಿಯ ಒಬ್ಬ ಊಳಿಗದವನು ಸಿಂಹದ ಮುಖವಾಡವನ್ನು ಧರಿಸಿ ಕಂಭದ ಮರೆಗೆ ನಿಂತು ಹಿರಣ್ಯಕಶಿಪುವನನ್ನು ಕೊಂದಿರಬೇಕು. ಅಳತೇ ವಂಚನೆಯಲ್ಲಿ ನಿಪುಣನಾದ ಕುಳ್ಳ ಶಾನುಭೋಗನೊಬ್ಬನಿಂದ ಬಲಿ ಚಕ್ರವರ್ತಿಗೆ ಮೋಸವಾಗಿರಬೇಕು. ಇನ್ನು ರಾಮ, ಕೃಷ್ಣರ ಕಾರ್ಯಗಳು ಶೌರ್ಯ, ಸಾಹಸಗಳಿಂದ ಕೂಡಿವೆ, ನಿಜ. ಆದರೆ ಅವೆಲ್ಲ ಮಾನವ ಕಾರ್ಯಗಳೇ. ರಾಗದ್ವೇಷಾದಿಗಳಿಂದ ಕೂಡಿದವುಗಳು. ತಿಳಿಯಬೇಕಾದ ಮಾತೆಂದರೆ ದುಷ್ಟರನ್ನೇ ಆಗಲಿ ಈ ರೀತಿ ವೇಷ ಬದಲಿಸಿ ಕೊಲ್ಲುವುದು ಅಪರಾಧವೆನಿಸುತ್ತದೆ. ಆದ್ದರಿಂದ ಸರ್ವಶಕ್ತನೂ ನ್ಯಾಯವಂತನೂ, ಆದ ವಿಷ್ಣುವು ಈ ಅವತಾರಗಳನ್ನು ಮಾಡಲೇ ಇಲ್ಲ-ಎಂದು ಭಾವಿಸೋಣ. ಈ ಅಪರಾಧಗಳಿಂದ ನಿರ್ದೋಷಿಯನ್ನಾಗಿ ಮಾಡೋಣ!"

ಪುಣೆಯಲ್ಲಿ ಪ್ರತಿವರ್ಷ "ವಸಂತ ವ್ಯಾಖ್ಯಾನ ಮಾಲೆ" ಎಂಬ ಜನಾಕರ್ಷಕ ಕಾರ್ಯಕ್ರಮವನ್ನು ನಡೆಸುತ್ತಾರೆ. ಕೆಲ ವರ್ಷಗಳ ಹಿಂದೆ ಓರ್ವ ಮರಾಠೀ ಭಾಷಣಕಾರರು (ಅವರ ಹೆಸರು ನೆನಪಿಗೆ ಬರುತ್ತಿಲ್ಲ) ದಶಾವತಾರಗಳನ್ನು ಕುರಿತು 'ತಾರ್ಕಿಕವಾಗಿ 'ವಿವರಿಸುವೆ-ಎನ್ನುತ್ತ ತಮ್ಮ ನಿಲುವನ್ನು ಈ ರೀತಿ ಮಂಡಿಸಿದರು:

"ಹತ್ತು ಅವತಾರಗಳಲ್ಲಿ ಒಂಬತ್ತನ್ನೇ ಲೆಕ್ಕಕ್ಕೆ ತೆಗೆದುಕೊಳ್ಳೋಣ. ಮುಂದೆ ಎಂದೋ ಒಂದು ದಿನ ಆಗಲಿರುವ ಕಲ್ಕಿ ಅವತಾರದ ಉಸಾಬರಿ ಬೇಡ. ಒಂಬತ್ತರಲ್ಲಿ ಮೂರು ಮನುಷ್ಯ ರೂಪದವು; ಎರಡು ಜಲಚರ ಪ್ರಾಣಿಗಳು; ಒಂದು ಪಶು ರೂಪದ್ದು; ಮನುಷ್ಯರವೇ ಆದರೂ ಅಸಹಜ ರೂಪದವು. ದೇವರು ಹೀಗೆ ಇನ್ನು ಮೂರು ಅಸಂಬದ್ಧವಾಗಿ ತೋರುವ ರೂಪಗಳನ್ನೇಕೆ ಧರಿಸಬೇಕಿತ್ತು? ಬೇರೆ ಬೇರೆ ಕಾಲಕ್ಕೆ ಪ್ರಾಕೃತಿಕ ಘಟ್ಟದ ಕೆಲವು ಸಾಹಸಮಯ ಘಟನೆಗಳು ಜರುಗಿರಬೇಕು. ಕಾಲ ಉರುಳಿದಂತೆ ಅವು ದೈವತ್ವವನ್ನು ಹೊಂದಿರಬೇಕು. ಇದಕ್ಕೆ ಕೃಷ್ಣನೇ ಸ್ಪಷ್ಟ ಉದಾಹರಣೆ. Child prodigy ಎನ್ನುವುದು ಈಗಲೂ ಇರುವಾಗ, ಬಾಲಕೃಷ್ಣನು ಕೆಲವು ಸಾಹಸ ಕೃತ್ಯಗಳನ್ನೆಸಗಿದ. ಪಾಂಡವ -ಕೌರವ ಘರ್ಷಣೆಯಲ್ಲಿ ತನ್ನ ಬುದ್ಧಿವಂತಿಕೆಯಿಂದಾಗಿ ನಿಸ್ಸೀಮ ವ್ಯಕ್ತಿಯೆನಿಸಿದ. ಮಾನವನಿದ್ದು ದೈವತ್ವಕ್ಕೇರಿದ. ದೇವ(ವಿಷ್ಣು)ನಿದ್ದು ಮಾನವನಾಗಿ ಅವತಾರ ತಾಳಲಿಲ್ಲ" ಇತ್ಯಾದಿ."

ನಂಬಿಕೆ, ಶ್ರದ್ಧೆ-ಇವುಗಳಿಗೆ ಮೂಢ(ನಂಬಿಕೆ), ಅಂಧ(ಶ್ರದ್ಧೆ) ಎಂಬ ವಿಶೇಷಣಗಳನ್ನು ಹಚ್ಚಬೇಕಾಗುವುದು. ಇದರರ್ಥ ಅವು ಯಾವುದೇ ತಾರ್ಕಿಕ ವಾದಕ್ಕೆ ನಿಲ್ಲುವಂತಹವಲ್ಲ. ಆ ರೀತಿಯಲ್ಲಿ ನಂಬಿಕೆ-ಶ್ರದ್ಧೆಯನ್ನುಳಿಸಿಕೊಂಡೂ ದಶಾವತಾರಗಳಿಗಿರುವ ಆಕ್ಷೇಪಗಳನ್ನು ಸೌಮ್ಯಗೊಳಿಸುವುದು ಸಾಧ್ಯವೆ? ನೋಡುವಾ.

ಮೊದಲಲ್ಲಿ ಗಮನಿಸಬೇಕಾದ ಮಾತೆಂದರೆ ಅವತಾರಗಳು ಹತ್ತೇ ಎಂಬುದಾಗಿ ಯಾವುದೇ ಪ್ರಾಚೀನ ಗ್ರಂಥದಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ವಿವಿಧ ಅವತಾರಗಳ ಮೊದಲ ಪ್ರಸ್ತಾಪವಿರುವುದು ಹರಿವಂಶ ಮತ್ತು ಭಾಗವತ ಪುರಾಣಗಳಲ್ಲಿ . ಅಲ್ಲೆಲ್ಲ ದಶ ಸಂಖ್ಯೆಯ ನಮೂದು ಇಲ್ಲ. ಇವಲ್ಲದೆ ಬೇರೆ ಅವತಾರಗಳೂ ಉಲ್ಲೇಖಗೊಂಡಿವೆ. ಉದಾಹರಣೆಗೆ ಭಾಗವತದಲ್ಲಿ ಬರುವ ಕಪಿಲ. ಇಂಥ ಇನ್ನೂ ಹಲವು-ನಮಗೆ ಪರಿಚಿತವಿರುವಂಥವು ಇವೆ: ಕೃಷ್ಣ ದ್ವೈಪಾಯನ -ವೇದವ್ಯಾಸರು, ಹಯಗ್ರೀವರು, ಧನ್ವಂತ್ರಿ ಇತ್ಯಾದಿ. ಸಮುದ್ರ ಮಥನದ ಕಾಲಕ್ಕೆ ಅಮೃತವನ್ನು ಹಂಚಿದ ಮೋಹಿನಿ ರೂಪವೂ ಒಂದು ಅವತಾರವೇ. ನಮ್ಮೀ ಕಲಿಯುಗದಲ್ಲಿ ಜಾಗೃತರಾಗಿರುವ ತಿರುಪತಿಯ ವೆಂಕಟಪ್ಪ, ಪಂಢರಪುರದ ವಿಠಲ, ಪೂರಿ ಜಗನ್ನಾಥ-ಇವರುಗಳು ವಿಷ್ಣುವಿನ ಅವತಾರರೇ. ಯಾವುದೇ ಅವತಾರಕ್ಕೆ ವಿಶಿಷ್ಟ ರೀತಿಯ ಹುಟ್ಟು ಮತ್ತು ಗುರಿ ಇರುತ್ತದೆ. ಆ ಗುರಿಯು 'ಸಾಧೂ ನಾಂ ಪರಿತ್ರಾಣಾಯ ಮತ್ತು ದುಷ್ಕೃತಾನ್ ವಿನಾಶಾಯ' ಎಂಬುದಾಗಿ ಭಗವದ್ಗೀತೆಯಲ್ಲಿ ಹೇಳಿಯೇ ಇದೆ.

ಆದ್ದರಿಂದ ಅವತಾರಗಳು ಹತ್ತೇ ಅಲ್ಲ; ಹತ್ತಿಪ್ಪತ್ತು ಎಂದು ತಿಳಿಯತಕ್ಕುದು. ಇದಕ್ಕೆ ಅನ್ಯ ಶಾಸ್ತ್ರಾಧಾರವೂ ಇದೆ. ಶ್ರೀವೈಷ್ಣವ ಮತದವರ ಪ್ರಕಾರ ಪರಮಾತ್ಮನು ಐದು ರೂಪಗಳಲ್ಲಿ ವ್ಯಕ್ತನಾಗುವನು. ಪರ, ವ್ಯೂಹ, ವಿಭವ, ಅಂತರ್ಯಾಮಿ ಹಾಗೂ ಅರ್ಚ. 'ವಿಭವ' ಎಂಬುದರಲ್ಲಿ ಈ ದಶಾವತಾರಗಳ ಪ್ರಸಕ್ತಿ ಇದೆ. ಅರ್ಚಾವತಾರ - ಎಂದರೆ, ದೇವಸ್ಥಾನಗಳಲ್ಲಿ ಅರ್ಚನೆಗೊಳ್ಳುವ ಪ್ರತಿಯೊಂದು ಮೂರ್ತಿಯೂ ಒಂದೊಂದು ಅವತಾರ ರೂಪವೇ! ಅಷ್ಟೇ ಅಲ್ಲ; 'ಆವಾಹಯಾಮಿ' ಎಂದು ನುಡಿದು, ಮಣ್ಣಿನ ಮೂರ್ತಿಯೇ ಇರಲಿ ದೇವರನ್ನು ಪ್ರತಿಷ್ಠಾಪಿಸಿದರೆ ಅದೂ ಒಂದು ಅವತಾರವೇ ಎನಿಸುತ್ತದೆ. ಹಾಗಿರುತ್ತ ಹತ್ತು ಮಾತ್ರವೇ ಅವತಾರಗಳು ಎನ್ನುವುದರಲ್ಲಿ ಹುರುಳಿಲ್ಲ.

***

೩. ನೆಂಟಸ್ತಿಕೆಯ ಹೆಸರುಗಳು

ಅಪ್ಪ, ಅಮ್ಮ, ತಾತ, ಮಾವ, ಅಂಕಲ್, ಕೋಬ್ರದರ್, ವೈನಿ.... ನೆಂಟಸ್ತಿಕೆಯ ಎಷ್ಟೊಂದು ಹೆಸರುಗಳಿವೆ! ಈ ಬಗೆಯ ನೆಂಟಸ್ತಿಕೆ ಎಷ್ಟು ಪ್ರಕಾರಗಳದ್ದಿದೆ ಎನ್ನುತ್ತೀರಿ? ೬೦ಕ್ಕೂ ಮೇಲ್ಪಟ್ಟು ಪ್ರತಿಯೊಂದು ಸಂಬಂಧಕ್ಕೂ ಒಂದೊಂದು ಬೇರೆ ಬೇರೆ ಶಬ್ದ ಇವೆಯೆ? ಸುದೈವಕ್ಕೆ ಇಲ್ಲ. ಹಾಗೆ ಇದ್ದಿದ್ದರೆ ಅವು ಒಂದೊಂದನ್ನು ನೆನಪಿಟ್ಟುಕೊಳ್ಳುವುದೂ ಸಮರ್ಪಕವಾಗಿ ಬಳಸುವುದೂ ಸಾಧ್ಯವಾಗುತ್ತಿದ್ದಿಲ್ಲ. ಈಗೇ ಅವನ್ನು ಅನೇಕ ಸಂದರ್ಭಗಳಲ್ಲಿ ತಪ್ಪುತಪ್ಪಾಗಿ ಬಳಸುತ್ತಿದ್ದೇವೆ. ಸದ್ಯ ಅವು ೩೦-೩೨ ಮಾತ್ರವೆ ಇದ್ದು, ಉಳಿದ ಸಂಬಂಧಗಳಿಗೆ ಎರಡು-ಮೂರು ಪದಗಳನ್ನು ಸೇರಿಸಿ ಹೇಳುತ್ತೇವೆ. ಉದಾಹರಣೆಗೆ ಭಾವಮೈದುನ, ಕಕ್ಕಕ್ಕನ ಮಗ.

ಇದಕ್ಕೆ ಪ್ರತಿಯಾಗಿ ಒಂದೇ ಪದವನ್ನು ಎರಡು-ಮೂರು ಸಂಬಂಧಗಳಿಗೆ ಬಳಸುವುದೂ ಉಂಟು. ಉದಾಹರಣೆಗೆ ಅಜ್ಜ/ಅಜ್ಜಿ . ಈ ಅಜ್ಜ-ಅಜ್ಜಿಯು ತಾಯಿಯ ತಂದೆ -ತಾಯಿಗಳೂ ಆಗಬಹುದು. ತಂದೆಯ ಕಡೆಯಿಂದಲೂ ಆಗಬಹುದು. ನಮ್ಮ ನೆರೆಮನೆಯಲ್ಲಿ ಮೂರು ವರ್ಷದ ಮಗು ಇದೆ. ಅವನಿಗೆ ಮೇಲೆ ಹೇಳಿದ ಇಬ್ಬರು ಅಜ್ಜಂದಿರಿದ್ದಾರೆ. ಅವರನ್ನು ಬೇರೆಯಾಗಿ ಹೆಸರಿಸುವಾಗ ಅವನಿಗೆ ಗಲಿಬಿಲಿ. ಒಬ್ಬರನ್ನು ಅವನು ಕುಂಟಜ್ಜ ಎಂದು ಕರೆಯುತ್ತಾನೆ. ಅವರ ಕಾಲು ಸ್ವಲ್ಪ ಕುಂಟು. ಈ ಕುಂಟಜ್ಜ ತಾಯಿಯ ಕಡೆಯವನಾಗಿರಬೇಕೆ? ಹೀಗಾಗಿ ಅವನು ತನ್ನ ತಾಯಿಯ ಕಡೆಯಿಂದ ಬೈಸಿಕೊಳ್ಳುತ್ತಾನೆ.

'ಮಗ' ಎನ್ನುವ ಪದವೂ ಹಾಗೇನೆ. ನಮ್ಮವನೇ ಮಗ ಅಲ್ಲದೆ, ತಮ್ಮನ/ ಅಣ್ಣನ ಮಗನೂ ನಮಗೆ ಮಗನೇ. ಇಂಗ್ಲಿಷ್‌ನಲ್ಲಿರುವ nephew ಅಥವಾ ಮರಾಠಿಯ ಪುತಣ್ಯಾ ನಮ್ಮಲ್ಲಿಲ್ಲ. ಏಕೆ ಹೀಗೆ? ಕುಟುಂಬದಲ್ಲಿ ಸಾಮೂಹಿಕ ಬೇಸಾಯ ಮಾಡುವಾಗ ಆ ಮಗನೂ ಅಷ್ಟೇ, ಈ ಮಗನೂ ಅಷ್ಟೆ. ಅದರಂತೆ ವಾತ್ಸಲ್ಯ ಭಾವನೆಯಲ್ಲಿಯೂ-ಎಂಬುದರಿಂದ ಈ ಭೇದದ ಅಗತ್ಯ ಕಂಡಿರಲಿಕ್ಕಿಲ್ಲ.

ಅಷ್ಟೇಕೆ. ಇಂದಿಗೂ ಅನೇಕ ಕುಟುಂಬಗಳಲ್ಲಿ ಸ್ವಂತದ ಮಗನಿಗಿಂತ ಅಣ್ಣ ಇಲ್ಲವೆ ತಮ್ಮನ ಮಗನೇ ಹೆಚ್ಚು ಪ್ರೀತಿ-ಸಲಿಗೆಯನ್ನು ಹೊಂದಿರುತ್ತಾನೆ.

ನಂಟುತನಕ್ಕೆ ವಿವಾಹವೇ ಮೂಲ ತಳಹದಿ. ವಿವಾಹಿತ ಸ್ತ್ರೀಗೆ ಗಂಡನ ಬಳಗದವರೂ ತನ್ನ ಬಳಗವೇ ಆಗಿಬಿಡುತ್ತದೆ. ಆ ಮುಂದೆ ಮಕ್ಕಳು, ಮೊಮ್ಮಕ್ಕಳಿಂದಾಗಿ ನಂಟುತನದ ವಿಸ್ತರಣೆ. ಈ ಆನುವಂಶಕತೆಗೆ ಸಮಾಂತರವಾಗಿ, ಗಂಡ-ಹೆಂಡತಿಯರಿಬ್ಬರ ಸೋದರ-ಸೋದರಿಯರ ಸಂಬಂಧಿಕರೂ ನೆಂಟಸ್ತಿಕೆಯ ಪರಿಧಿಯಲ್ಲಿಯೆ ಬರುವವರು. "ನನ್ನ ಹೆಂಡತಿಯ ಅಕ್ಕನ ಭಾವ ಮೈದುನನ ಹಿರಿಯ ಮಗಳ 'ನೆಗೆಣ್ಣೆ' ಎಂಬಲ್ಲಿ ನೆಂಟಸ್ತಿಕೆಯು ಹೇಗೆ ದಾಂಗುಡಿ ಬಿಟ್ಟಿದೆ!

ಗಂಡ-ಹೆಂಡತಿ ಸಂಬಂಧವೇ ದೀರ್ಘಕಾಲದ್ದು, ಹೆಚ್ಚು ದಟ್ಟವಾದದ್ದು. ಅವರ ದೈನಂದಿನ ಸಂಬಂಧದಲ್ಲಿ, ಅವರು ಪರಸ್ಪರ ಕರೆಯುವ ರೀತಿಯಲ್ಲಿ ಆತ್ಮೀಯತೆಯ ಜೊತೆಗೆ ಸಾಮಾಜಿಕ ಅಂತರವನ್ನೂ ಗುರುತಿಸಬಹುದು, ರ್ರೀ , ಏನ್ರೀ-ಮುಂತಾಗಿ ಹೆಂಡತಿ -ಕರೆಯುವ ಕ್ರಮದಲ್ಲಿ 'ಕೇಳಿಸ್ತೇನೂ' ಎಂಬುದೇ ಮೋಜಿನದು. ಗಂಡ ತನ್ನ ಕರಕರೆಯ ಮಾತನ್ನೆಲ್ಲ ಕೇಳಿ ಕಿವುಡನಾದನೇನೊ. ಹೆಸರು ಹಿಡಿದು ಕರೆಯುವುದಂತೂ ದೂರವೇ. ಇತ್ತ ಬೇರೆಯವರ ಮುಂದೆ ಪರಿಚಯಿಸುವಾಗ 'ನಮ್ಮಜುಮಾನ್ರು', 'ಯಜಮಾನ್ತಿ' ಎಂದು ಹೇಳುವುದಿದೆ. ಆದರೆ ವಸ್ತುಸ್ಥಿತಿ?

ಇಂಗ್ಲಿಶ್‌ನಲ್ಲಿ ಹೆಂಡತಿಯನ್ನು Better-half ಎಂದು ಕರೆಯುವುದರ ಔಚಿತ್ಯ ನನಗಿನ್ನೂ ಅರ್ಥವಾಗಬೇಕಿದೆ. ಯೋಗ್ಯತೆಯಲ್ಲಿ ಗಂಡನಿಗಿಂತ ಉತ್ತಮಳೆಂದೆ? ಆದರೆ 'ಹೆಚ್ಚು ಕೆಲಸ ಮಾಡುವವಳು' ಎಂಬ ಅರ್ಥವನ್ನು ಆಂಗ್ಲರದೇ ಆಕ್ಸ್‌ಫರ್ಡ್ ಡಿಕ್ಷನರಿಯಂತೂ ಹೇಳ್ತದೆ. ಹೆಂಡಂದಿರೆಲ್ಲ ಹಾಗಿರುವರೆ? ಅದಕ್ಕಿಂತ ನಮ್ಮ 'ಅರ್ಧಾಂಗಿ' ಪದ ಹೆಚ್ಚು ಸೂಕ್ತವೇ, ಆದರೆ ಗಂಡನಾದವ ಇನ್ನುಳಿದ ಅರ್ಧಾಂಗದವ ಎಂದು ಹೇಳುವ ಸ್ಥಿತಿ -ಇರ್ತದೆಯೆ? 'ಸಹಧರ್ಮಿಣಿ' ಹೇಗೆ? 'ಧರ್ಮೇಚ ಅರ್ಥೇಚ ಕಾಮೇಚ ನಾತಿ ಚರಾಮಿ' ಎಂದು ವಿವಾಹ ಕಾಲದಲ್ಲಿ ಕೊಡುವ ವಚನವನ್ನೇನೊ ಸಮರ್ಥಿಸಬಹುದು. ಅದರ ಪಾಲನೆ ಯಥಾ ಯಥಾ.

ಶಿಷ್ಟ ಭಾಷೆಯಲ್ಲಿ ಹೆಂಡತಿಯನ್ನು 'ಧರ್ಮಪತ್ನಿ'ಎಂದು ಕರೆಯುವ ಕ್ರಮವಿಷ್ಟೇ. ಹಿಂದಿನ ಕಾಲಕ್ಕೆ ಆರ್ಥಿಕ ಅನುಕೂಲತೆಯಿದ್ದವರು ರಾಜಾರೋಷವಾಗಿ ಉಪಪತ್ನಿ ಇಲ್ಲವೆ ಗಣಿಕೆಯನ್ನು ಇಟ್ಟುಕೊಳ್ಳುತ್ತಿದ್ದರು. 'ಇಟ್ಟುಕೊಂಡಾಕೆ; ಕಟ್ಟಿಕೊಂಡಾಕೆ'! ಏಕಪತ್ನೀತ್ವದ ಕಾಯದೆಯ ಮತ್ತು ಉಪಪತ್ನಿಯನ್ನು ರಾಜಾರೋಷವಾಗಿ ಇಟ್ಟುಕೊಳ್ಳಲಾಗದ ಈಗಿನ ದಿನಗಳಲ್ಲಿ ಪತ್ನಿಯು ಧರ್ಮದವಳೇ ಎಂದು ಹೇಳಲೇನಿದೆ? ಇವೆಲ್ಲಕ್ಕಿಂತ 'ನನ್ನ ಶ್ರೀಮತಿ', 'ನಮ್ಮ ರಾಯರು' ಎಂದು ಬೇರೆಯವರೆದುರು ಹೇಳುವುದೂ, ಇಬ್ಬರೇ ಇದ್ದಾಗ 'ಹಲೋ' ಅಥವಾ 'ಡಿಯರ್' ಎನ್ನುವುದು ವಾಸಿಯೇನೋ- ಸದ್ಯದ ಸಾಮಾಜಿಕ ನಡವಳಿಕೆಯಲ್ಲಿ

ಇನ್ನು ಪರಸ್ಪರರು ಹೆಸರು ಹಿಡಿದು ಕರೆದರಂತೂ ಅದಕ್ಕಿಂತ ಉತ್ತಮವಾದದ್ದು ಬೇರೊಂದಿಲ್ಲ. ಯಾವುದೊಂದು ನೆಂಟಸ್ತಿಕೆಗೆ ಇರುವ ಪದವನ್ನು ಅದೇ ಅರ್ಥದಲ್ಲಿ ಬಳಸತಕ್ಕುದು. ಆದರೆ ಯಾವಾಗಲೂ ಹಾಗಾಗುವುದಿಲ್ಲ. ಮನೆಯಲ್ಲಿ ತಮಗಿಂತ ಹೆಚ್ಚು ವಯಸ್ಸಿನವರೊಬ್ಬರು ಕರೆಯುವ ರೀತಿಯನ್ನೆ ಚಿಕ್ಕ ಮಕ್ಕಳು ಅನುಕರಿಸುವುದುಂಟು. ಅಪ್ಪನನ್ನು ಅಣ್ಣನೆಂದೂ, ಮಾಮಾ ಎಂದು ಕರೆಯುವುದು ಎಲ್ಲಿಯ ನ್ಯಾಯ? ಈ ಸಂದರ್ಭದಲ್ಲಿ ವ್ಯಂಗ್ಯ ಕವಿ ವಿ. ಜಿ. ಭಟ್ಟರ ಕವಿತೆಯೊಂದು ನೆನಪಾಗುತ್ತದೆ.

ಎದೆಗೇ ಅಪ್ಪಿ ಪ್ರೀತಿಲಿ ಪಪ್ಪಿ ಕೊಡತಾಳೆ ಅವ್ವ
ಅದಕೇ ಅವಳು ಅವ್ವ.
ಎದೆಗೇ ಅಪ್ಪಿ ಪ್ರೀತಿಲಿ ಪಪ್ಪಿ ಕೊಡತಾನೆ ಅವ್ವ
ಅವ್ವಗೆ ಕೊಡತಾನೆ ಅಪ್ಪ.
ಅದಕೇ ಅಪ್ಪನು ಅವ್ವ ಅವ್ವಗೆ ಅಪ್ಪನು ಅವ್ವ

ನಂಟುತನವೆನ್ನುವುದು ಸಮಾನವಾಗಿ ಪ್ರವಹಿಸುವುದಿಲ್ಲ. 'ತಾಯಿ ಸತ್ತರೆ ಸೋದರಮಾವ' ಎಂಬೊಂದು ಪಡೆನುಡಿ ಇದೆ. ಅದು ನಿಜವೇ. ಹಾಗೆಯೇ'ತಂದೆ ಸತ್ತರೆ ಕಕ್ಕ 'ಎಂದು ಹೇಳಲಾದೀತೆ? ಸೋದರತ್ತೆ ಆ ಸ್ಥಾನವನ್ನು ತುಂಬಬಲ್ಲಳು. ಈ ಸೋದರಮೂಲವಾದ, ಸೋದರ ಮಾವ, ಸೋದರ ಸೊಸೆ ಈ ಪದಗಳಲ್ಲಿ ವಾತ್ಸಲ್ಯದ ಬೆಳಕು ಇದೆ. ಈ ಸೋದರಮಾವ ಹೆಣ್ಣುಕೊಡುವ ಮಾವನೂ ಆದರೆ ಇನ್ನಷ್ಟು ಮೆರಗು ಬರುತ್ತದೆ. ಸೋದರಮಾವ ತನ್ನ ಮಗಳನ್ನು ಸೋದರಿಯ ಮಗನಿಗೆ ಇಲ್ಲವೆ ಸೋದರಿ ತನ್ನ ಮಗಳನ್ನು ತಮ್ಮನಿಗೆ ಮದುವೆ ಮಾಡಿಕೊಡುವುದು ಒಂದು ನೆಲೆಗೊಂಡ ಪರಿಪಾಠವೇ ಆಗಿದೆ.

ಏನು ಕಾರಣ? ಪ್ರಾಚೀನ ಕಾಲದಲ್ಲಿ ತಮ್ಮ ಬುಡಕಟ್ಟನ್ನು ಭದ್ರವಾಗಿಸಬೇಕು. ಆಸ್ತಿ ಇದ್ದರೆ ತಮ್ಮ ಬಳಗದಲ್ಲೇ ಉಳಿಯಬೇಕು- ಎನ್ನುವ ಪರಿಸ್ಥಿತಿ ಇದ್ದಿತು. ಮಾತೃಪ್ರಧಾನ ಕುಟುಂಬಗಳಲ್ಲಿ ಅದೊಂದು ಕಟ್ಟಳೆಯೇ ಎನ್ನುವಷ್ಟು ಬಳಕೆಯಲ್ಲಿದೆ. ಬೇರೆಕಡೆಗೂ ದೃಷ್ಟಾಂತಗಳು ದೊರೆಯುತ್ತವೆ. ತರುಣ ವಯದಲ್ಲಿ ಗಂಡ ಸತ್ತಾಗ, ಆಕೆ ಮದುವೆಯಾಗಲಪೇಕ್ಷಿಸಿದರೆ ತನ್ನ ಮೈದುನನನ್ನೆ ಮರುಮದುವೆಯಾಗಬೇಕು- ಎನ್ನುವ ಸಂಪ್ರದಾಯ ಕೆಲವೆಡೆ ಇದೆ. ಇಸ್ಲಾಂ ಕಟ್ಟಳೆಯ ಪ್ರಕಾರ ಅಣ್ಣನ ಮಗ ತಮ್ಮನ ಮಗಳನ್ನು ಒಂದೇ ರಕ್ತದವರಾದರೂ ಮದುವೆಯಾಗಬಹುದೆಂಬಲ್ಲಿ ತಮ್ಮ ಕುಲವನ್ನು ಕಾಯ್ದುಕೊಳ್ಳುವ ದೃಷ್ಟಿಯೇ ಇದೆ.

ಆದರೆ ಒಮ್ಮೆ ಮನೆತನವೊಂದರ ಪ್ರತಿಷ್ಠೆ ಬೆಳೆಯಿತೆಂದರೆ, ತಾಯಿಯ ತವರಿನ ಬಳಗದ ಅಂತಸ್ತು ಕೆಳಗಿನದಿದ್ದರೆ, ಆ ಬಳಗದ ಕಡೆಯಿಂದ ಕನ್ಯೆಯನ್ನು ತರುವುದು ಬೇಡವೆನಿಸುವುದು. ಮರಾಠಿಯಲ್ಲಂತೂ 'ಪರತ ವೇಲ(ಬಳ್ಳಿ) ಯೇತಾ ಕಾಮಾ ನಯೇ'

ಎಂಬ ಉಕ್ತಿಯೇ ಇದೆ.

ಅಣ್ಣ-ತಮ್ಮ- ಈ ಬಂಧುತ್ವದಲ್ಲಿಯೂ ಹಿಂದಿನ ಸಾಮಾಜಿಕ ಸ್ಥಿತಿಗತಿಯನ್ನು ಗುರುತಿಸಬಹುದು. ಇಂಗ್ಲಿಶ್ ಮತ್ತು ಹಿಂದೀ ಮುಂತಾದ ಇಂಡೋಆರ್ಯನ್ ಭಾಷೆಗಳಲ್ಲಿ Brother, ಭಾಯಿ, ಭಾವ ಎಂಬ ಶಬ್ದಗಳೇನೋ ಇವೆ. ಆದರೆ ಹಿರಿಯ, ಕಿರಿಯ ಬಂಧುತ್ವವನ್ನು ನಿದರ್ಶಿಸುವಂಥ 'ಅಣ್ಣ', 'ತಮ್ಮ' ಅವರಲ್ಲಿಲ್ಲವಲ್ಲ? ಹಾಗೆ ಬೇಕಿದ್ದರೆ, 'elder', 'younger' -ಎಂಬುದನ್ನು ಸೇರಿಸಬೇಕು. ನಮ್ಮಲ್ಲಿ ಈ ಭೇದವನ್ನು ನಿದರ್ಶಿಸುವ ಪ್ರತ್ಯೇಕ ಪದಗಳಿರುವುದರ ಕಾರಣವೆಂದರೆ ಬೇಸಾಯ ನಿಮಿತ್ತದಿಂದ ೫೦-೬೦ ಜನರಿರುವ ಅವಿಭಕ್ತ ಕುಟುಂಬದಲ್ಲಿ ಈ ಅಂತಸ್ತು ಅಗತ್ಯ ಬೀಳುತ್ತದೆ. ಅದಕ್ಕೆ ತಕ್ಕಂತೆ ಕೆಲಸದ ಹಂಚಿಕೆ, ಸ್ಥಾನಮಾನ, ಮರ್ಯಾದೆ ನಿಶ್ಚಿತವಾಗಬೇಕು. ಯಾರು ಹಿರಿಯ, ಯಾರು ಕಿರಿಯ- ಎಂಬುದು ಗೊತ್ತಾಗಬೇಕು. ಈ ಅಣ್ಣ, ತಮ್ಮ ಇದ್ದಂತೆಯೇ ಭಾವ ಮತ್ತು ಮೈದುನರು, ಹೆಂಡತಿಯಾದವಳು ತನ್ನ ಮೈದುನನೊಂದಿಗೆ ಸಲಿಗೆಯಿಂದ ವರ್ತಿಸುವಳಲ್ಲದೇ ಭಾವನೊಂದಿಗೆ ಅಲ್ಲ!

ಅನ್ಯ ಭಾಷೆಗಳ ಕೆಲವು ಶಬ್ದಗಳು ನಮ್ಮಲ್ಲಿಯ ನೆಂಟಸ್ತಿಕೆಯನ್ನು ತಮ್ಮವಾಗಿ ಮಾಡಿಕೊಂಡು ಬಿಟ್ಟಿವೆ. ಉತ್ತರ ಕರ್ನಾಟಕದಲ್ಲಿ ವಿಶೇಷತಃ ಮರಾಠಿಯ ದಾದಾ, ಮಾವಶಿ, ಕಾಕೂ, ವೈನೀ- ಇವುಗಳ ಹಾವಳಿ ಹಿಡಿಸಲಾರದಷ್ಟು. ಇವುಗಳು ಸೂಚಿಸುವ ಸಂಬಂಧವನ್ನು ವಿವರಿಸಿ ಹೇಳಿದರೂ, ದಕ್ಷಿಣ ಕರ್ನಾಟಕದವರಿಗೆ ಬೋಧೆಯಾಗುವುದಿಲ್ಲ. ಒಂದು ಸಮಾಧಾನದ ಸಂಗತಿಯೆಂದರೆ ಕನ್ನಡದಿಂದಲೂ ಮರಾಠಿಗೆ ಕೆಲವು ಬಂಧುವಾಚಕ ಪದಗಳು ಹೋಗಿವೆ. ಅಣ್ಣಾ, ಅಕ್ಕಾ, ತಾಯೀ ಮತ್ತು ಅಪ್ಪಾ. ಆದರೆ 'ಅಕ್ಕಾ' ಅಕ್ಕನೇನೂ ಆಗಿರುವುದಿಲ್ಲ. ಆಕೆ ಸೋದರತ್ತೆ ಇರಬಹುದು. 'ತಾಯೀ' ಅಕ್ಕನಾಗಿರಬಹುದು - ಮರಾಟಿಗರಲ್ಲಿ. ಗಮನಿಸಬೇಕಾದ ಸಂಗತಿಯೆಂದರೆ, ಹೀಗೆ ವಲಸೆ ಹೋದ ನಾಲ್ಕೂ ಶಬ್ದಗಳು ಹಿರಿಯ ನೆಂಟಸ್ತಿಕೆಯ ಶಬ್ದಗಳು. ಇದು ಏನನ್ನು ತೋರಿಸುತ್ತದೆ? ಇವು ಅಲ್ಲಿ ಬಳಕೆಯಾಗತೊಡಗಿದ ಮಧ್ಯಯುಗೀನ ಕಾಲದಲ್ಲಿ ಕನ್ನಡಿಗರ ಅಂತಸ್ತು ಮರಾಟಿಗರಿಗಿಂತ ಮೇಲಿನದಾಗಿತ್ತು -ಸಾಮಾಜಿಕವಾಗಿ ನಮ್ಮಲ್ಲಿಯ ತಂಗಿ, ತಮ್ಮ, ಮೈದುನ - ಇವು ಅವರಲ್ಲಿಲ್ಲದ್ದು ಈ ಮಾತನ್ನು ಪುಷ್ಟೀಕರಿಸುವಂತಿದೆ.

ಇತ್ತ ಇಂಗ್ಲೀಷಿನ ವೈಫೂ, ಹಸ್‌ಬೆಂಡೂ, ಬ್ರದರ್-ಇನ್ಲಾ, - ಎಂಬೀ ಭಾಷಾದಾಸ್ಯದ ಶಬ್ದಗಳನ್ನಂತೂ ಖುಶಿಯಿಂದ ನಾವಾಗಿ ಬಳಸುತ್ತೇವೆ. ಡಾಟರ್-ಇನ್-ಲಾ ಎಂಬ ಆರು ಅಕ್ಷರಗಳ ಶಬ್ದಕ್ಕಿಂತ ಕನ್ನಡದ ಸೊಸೆ- ಉಚ್ಚಾರಕ್ಕೆ ಸಹಜ -ಸುಲಭ ಎಂದು ಹೇಳಿದರೂ ಇನ್-ಲಾ ಪ್ರಿಯರು ತಮ್ಮ ಚಟವನ್ನೇನು ಬಿಟ್ಟುಕೊಡುವುದಿಲ್ಲ. ಹಾಗೆ ನೋಡಿದರೆ ಸುಭಗತೆಯೇ ಉಚ್ಚಾರ ಸ್ವರೂಪವನ್ನು ನಿರ್ಧರಿಸಬೇಕು. ಇಲ್ಲಿ ಅದರ ತದ್ವಿರುದ್ಧ. ದುರ್ದೈವ .

ಇದೇನೂ ಬರಿಯ ಕನ್ನಡಾಭಿಮಾನವೊಂದರಿಂದ ಹೇಳುವ ಮಾತಲ್ಲ. ಈಗ ಆಂಟಿ, ಅಂಕಲ್ ತಗೊಳ್ಳಿರಿ. ಅದರಲ್ಲಿಯೂ 'ಆಂಟಿ'ಯ ಹಾರಾಟವೇ ಹಾರಾಟ. ನೆರೆಯವರ ಮಕ್ಕಳು ನಮ್ಮಲ್ಲಿ ಬಂದಾಗ ಅಥವಾ ನಮ್ಮ ಮಕ್ಕಳು ಹೊರಗಿನ ಪರಿಚಯಸ್ಥರನ್ನು ಸಂಬೋಧಿಸುವಾಗ ಈ ಆಂಗ್ಲ ಸುಲಭೋಚ್ಚಾರದ ಆಂಗ್ಲ ಶಬ್ದಗಳು ಸಲೀಸಾಗಿ ಬಾಯಿಗೆ ಬಂದು ಬಿಡುತ್ತವೆ. ಅವೆರಡೂ ಹೀಗೆ ಹೊರಗಿನವರಿಗೇ ಇರಲಿ! ಮನೆಯೊಳಗೆ ಮಾತ್ರ ಮಾಮಾ/ಮಾಮಿ(ತಾಯಿಯ ಸೋದರ, ಸೋದರಿ) ಕಾಕಾ/ಕಕ್ಕಿ(ತಂದೆಯ ಸೋದರ/ಸೋದರಿ) ಯವರಿಗೆಂದು ಮೀಸಲಿರಲಿ. ಅದರಲ್ಲಿಯೂ ಚಿಕ್ಕಪ್ಪ, ದೊಡ್ಡಪ್ಪ ಇಂಥ ಸಂಬಂಧಗಳು ನಮ್ಮವೇ ಶಬ್ದಗಳನ್ನು ಬಳಸುವುದರಿಂದ ಇನ್ನಷ್ಟು ಆತ್ಮೀಯವೆನಿಸಬಹುದು.

ಕೆಲವೊಂದು ನೆಂಟಸ್ತಿಕೆಯ ಹೆಸರುಗಳು ತಮ್ಮ ಉಚ್ಚಾರದಲ್ಲೇನೆ ವಿಚಿತ್ರವೆನಿಸುವಂತಿವೆಯಲ್ಲ? ಉದಾ: ಷಡ್ಡಕ, ಅದರ ಮೂಲ ರೂಪ ಪ್ರಾಕೃತದ ಸಡಗ, ಸಡ್ಡಕ ಎಂದಿರುವಾಗ ಆ 'ಷ'ಕಾರ ಸೇರಿತಾದರೂ ಹೇಗೆ? ಇನ್ನೊಂದು ನೆಗೆಣ್ಣಿ- ಎಂಬ ಪದ, ಇದೂ ಉಚ್ಚಾರದಲ್ಲಿ ವಿಕೃತಗೊಂಡದ್ದೇ. ಇದರ ಮೂಲರೂಪ ಅತ್ಯಂತ ಸೊಗಸಾದದ್ದು; ನೀವದನ್ನು ಊಹಿಸಲಾರಿರಿ ಕೂಡ. ನಗೆವೆಣ್ಣು! ಹೊರಗಿನಿಂದ ನಮ್ಮ ಮನೆಯಲ್ಲಿ ಕಾಲಿಡುವ ಹೆಣ್ಣು ನಗೆಯನ್ನು ಪಸರಿಸುವವಳು -ಎಂಬ ಆಶಯ ಅದಾವ ಸಂದರ್ಭದಲ್ಲಿ ಮೂಡಿ ಬಂದಿತೊ. ಅತ್ತಿಗೆ , ನಾದಿನಿ, ನೆಗಣ್ಣಿ - ಮನೆಯಲ್ಲಿಯ ಈ ಮೂರು ಹೆಂಗಳೆಯರಲ್ಲಿ, ವಿರಸಕ್ಕಿಂತ ಸರಸದ ಪ್ರಸಂಗಗಳೇ ಹೆಚ್ಚು.

ಅಲ್ಲದಂತ[ಶುಂಠಿ] ಅತ್ತೀಗೆ, ಬೆಲ್ಲದಂತ ನಾದೀನಿ
ನೆಲ್ಲಿಕಾಯಂತ ನೇಗಣ್ಣಿ ಕೂಡಾಡಿ, ಕಲ್ಯಾಣ ತವರ ಮರೆತೇನ.

ಈ ಜಾನಪದ ಸೊಲ್ಲು ಅತಿ-ಮಧುರ, ನೆಂಟಸ್ತಿಕೆಯ ಕಟು, ಮಧುರ ಭಾವನೆಗಳನ್ನು ಹೊರಸೂಸುವ ಇನ್ನೂ ಹಲವಾರು ಜಾನಪದ ಹಾಡುಗಳೂ, ಗಾದೆಮಾತುಗಳೂ ಇವೆ. ಎಂದರೆ ನಮ್ಮ ಹಳ್ಳಿಗರು ಮನುಷ್ಯ ಸಂಬಂಧಗಳನ್ನು ಹೆಚ್ಚು ಅರಿತವರು. ನೆಂಟಸ್ತಿಕೆಗೆ ಅಂಟಿಕೊಂಡವರು. ನಾಗರಿಕರಾದ ನಾವು ಅವನ್ನು ಔಚಿತ್ಯರಹಿತವಾಗಿ, ಯಾಂತ್ರಿಕವಾಗಿ ಬಳಸುತ್ತೇವೆ.

***

೪. ಒಕ್ಕಲಗಿತ್ತಿ

ಒಂದು ಕಾಲಕ್ಕೆ ಆಡಿಟರ್‌ನಾಗಿದ್ದ ನನಗೆ ಊರೂರು ತಿರುಗುವ ಪ್ರಸಂಗ ಬರುವುದಿತ್ತು. ಅದರ ಜೊತೆಗೆ ವರ್ಗಾವರ್ಗಿ ಬೇರೆ. ಒಂದು ಊರನ್ನು ಬಿಟ್ಟು ಹೊರಡುವಾಗ ನನಗೆ ತಾಪತ್ರಯವೆನಿಸಿದರೆ ನನ್ನ ಹೆಂಡತಿಗೆ ಎರಡನೆಯ ಊರಿಗೆ ಹೋದಾಗ ತಾಪತ್ರಯಗಳು ಹೆಚ್ಚಿಗಿರುತ್ತವೆ. ಅವೆಂದರೆ, ಒಳ್ಳೆಯ ಮನೆ ಸಿಗಬೇಕು. ಸಾಮಾನಿನ ಹೊಂದಾಣಿಕೆಯಾಗಬೇಕು. ಅದಕ್ಕಿಂತ ಮುಖ್ಯವಾಗಿ ಅಲ್ಲಿ ಹೋದ ಕೂಡಲೇ ಒಬ್ಬ "ಭಲೋ" ಒಕ್ಕಲಗಿತ್ತಿ ಸಿಕ್ಕಬೇಕು.

ಒಮ್ಮೆ ವರ್ಗಾವರ್ಗಿಯಾದಾಗ ಆದದ್ದಿದು: ಮುಂಚಿತ ಹೋಗಿ ಮನೆಯನ್ನು ಹಿಡಿದೇ ಇಟ್ಟಿದ್ದೆ. ಬೀಗ ತೆಗೆದು ಒಳಗೆ ಹೋದೆವು. ಸಾಮಾನು ಇಡಿಸಿದೆವು. ನೆರೆಮನೆಯವರು ಯೋಗಕ್ಷೇಮಕ್ಕೆ ಬಂದರು. "ಬಾಡಿಗೆ ಎಷ್ಟು ಗೊತ್ತು ಮಾಡಿದಿರಿ? ""ಸುಣ್ಣ ಅವರೇ ಹಚ್ಚಿಸಿ ಕೊಟ್ಟರೋ?" "ನಿಮ್ಮ ಸ್ವಂತ ಊರು ಯಾವುದು?" , "ನಿಮಗೆ ಇವೆರಡೇ ಹುಡುಗರೇನು?" ಇತ್ಯಾದಿ. ನನ್ನ ಹೆಂಡತಿ ಅವೇ ಪ್ರಶ್ನೆಗಳನ್ನು ಅವರಿಗೂ ಕೇಳಿ ತನ್ನ ಮರುಸವಾಲುಗಳಲ್ಲಿ "ನಿಮ್ಮ ಒಕ್ಕಲಗಿತ್ತಿ ಯಾರು? ಕೆಲ್ಸಕ್ಕೆ ಹೇಗಿದ್ದಾಳೆ?" ಎಂದೂ ಕೇಳುತ್ತಿದ್ದಳು.

ನನಗೆ ಒಳಗೊಳಗೇ ನಗು. ಕೆಲಸಕ್ಕೆ ನೆಟ್ಟಗಿಲ್ಲದಿದ್ದರೆ ಅವರು ಉಳಿಸಿಕೊಳ್ಳುತ್ತಿದ್ದರೇಕೆ? ಅವರೋ ನನ್ನ ಹೆಂಡತಿಗಿಂತ ಅನುಭವಸ್ಥರು. "ನಮ್ಮದೇನು ಕೆಲಸ ಬಹಳ ಇರುವುದಿಲ್ಲ. ಎರಡು ಸುಟ್ಟ ಭಾಂಡಿ, ಒಂದೆರಡು ಪಂಚೆ, ಸೀರಿ, ಯಾವಾಗಾದರೊಮ್ಮೆ ಕಾಳುಕಡಿ ಆರಿಸಿಕೊಡುತ್ತಾಳೆ. ಹೊತ್ತು ಬಂದರೆ ಆಸರಾಗುತ್ತಾಳೆ. ನಾವೂ ನೋಡಿ ಸಂಬಳ ಕೊಡತೇವಿ" ಎಂದರು.

ಈ ಬಗೆಯ "ಮೋಘಂ" ಮಾತಿನಿಂದ ನನ್ನವಳಿಗೆ ಸಮಾಧಾನ ಹೇಗಾದೀತು? ಅವರೆಲ್ಲ ಹೋದ ಮೇಲೆ ನನಗೆ ಹೇಳಿದಳು;

"ನಿಮ್ಮ ಆಫೀಸಿನ ಗೆಳೆಯರಿಗೂ ಸ್ವಲ್ಪ ಹೇಳಿ ಇಟ್ಟಿರ್ರಿ."

"ಏನೆಂದು? ಒಬ್ಬ ಒಕ್ಕಲಗಿತ್ತಿಯನ್ನು ಹುಡುಕಿ ಕೊಡ್ರಿ ಅಂತ? ಅಲ್ಲಾ, ಇನ್ನೊಂದು ಮದುವೆ ಆಗತೇನೆ ಅಂದರೆ ಒಳ್ಳೇ ಖುಷಿಯಿಂದ ಕನ್ಯಾ ಹುಡುಕಿಯಾರು! ಅದೆಲ್ಲಾ ಬಿಟ್ಟು,

ಒಕ್ಕಲಗಿತ್ತೀನ ಹುಡುಕಿರಿ ಅಂತ ಹೇಳಲಿಕ್ಕೆ ಸಂಕೋಚ ಆಗತದೆ" ಎಂದೆ.

"ಸಾಕು, ನಿಮ್ಮ ಹುಡುಗಾಟಿಕೆ."

"ಒಕ್ಕಲಗಿತ್ತಿ ಬೇಕು ಅಂದರೆ, ನನ್ನ ಜೊತೆಗಾರರು ಬಹಳವಾದರೆ ತಮ್ಮ ಮನೆಗೆ ಬರುವವಳನ್ನು ಕಳಿಸುತ್ತೇವೆ -ಎನ್ನಬಹುದು."ಎಂದೆ. ಇವಳು ಅಷ್ಟಕ್ಕೇ ಬಿಡಲಿಲ್ಲ.

"ಬರಿಯ ಯಾವಳನ್ನಾದರೂ ತಂದು ನಿಲ್ಲಿಸಬೇಡಿರಿ. ನಮ್ಮಲ್ಲಿ ಕೆಲಸಕ್ಕ ಬರುವ ಒಕ್ಕಲಗಿತ್ತಿಯಲ್ಲಿ ನಾನು ಎರಡೇ ಗುಣಗಳನ್ನು ಅಪೇಕ್ಷಿಸುತ್ತೇನೆ" ಎಂದು ಮುಂದುವರೆಸಿದಳು:

"ಮುಖ್ಯ ಅಂದರೆ ಆಕೆ ವಾಚಾಳಿ ಇರಬಾರದು. ಆ ನಿಂಗವ್ವನನ್ನು ನಿಸ್ತರಿಸುವುದು ಎಷ್ಟು ಕಷ್ಟವಾಯಿತೆಂಬುದು ನಿಮಗೆ ಗೊತ್ತೇ ಇದೆ. (ಒಂದು ಕ್ಷಣ ನಿಂಗವ್ವನ ಆ ಮೂರ್ತಿ, ತೆರೆದ ಬಾಯಿ ನೆನಪಾದವು. ನನಗೆ ಬಡತಿ ಸಿಕ್ಕು, ೧೫-೨೦ ಜನ ಆಫೀಸಿನ ಜನರನ್ನು ಒಮ್ಮೆ ಊಟಕ್ಕೆ ಕರೆದಾಗ, ಊಟ ಮಾಡಿದ ತಾಟು, ಬಟ್ಟಲುಗಳ ರಾಶಿ ನೋಡಿ "ಯವ್ವಾ, ಸಾಹೇಬ್ರು ಖಾನಾವಳಿ ತಗದ್ದಾರೇನು?" ಎಂದು ಕೇಳಿದ್ದಳು. ಜಗಳವಾಗಿ ನಮ್ಮ ಮನೆಯ ಕೆಲಸವನ್ನು ಬಿಟ್ಟು ಹೋಗುವಾಗ, ಅವಳು ಈಕೆಗೆ, "ಮಾಡಿಕೊಂಡ ಗಂಡ ನಿನ್ನ ಮಾತು ಕೇಳತಾನಂತ, ವ್ಹಾರೇ ಮಾಡೂ ಆಳೂ ಕೇಳು -ಅಂದೇನು? ನಿನಗೆ ಬಗೀಹರದ್ರ ಮಾಡಿಸಿಕೊ, ಇಲ್ಲಾಂದರ ಬಿಟ್ಟುಬಿಡು" ಎಂದಿದ್ದಳು!) "ಮತ್ತೇನಿಲ್ಲ. ಬಹಳ ಮಾತನಾಡುವಾಕೆ ಇದ್ದರೆ ಕೆಲಸವನ್ನೇ ಮಾಡುವುದಿಲ್ಲ. ಇಷ್ಟಲ್ಲದೆ ಚಾಳಿನಲ್ಲಿ, ಮಂದಿಯ ಎದುರು ನಮ್ಮ ಮನೆಯ ವಿಷಯವನ್ನೆಲ್ಲ ಹೇಳುತ್ತಾಳೆ." ಅದಕ್ಕೂ ಹೆಚ್ಚು ನಿಂಗವ್ವನ ಪ್ರತಿಮೂರ್ತಿ ನನ್ನ ಮನದೆದುರು ನಿಲ್ಲುವುದು ಬೇಡವಾಗಿ, "ಆಯಿತು. ನಿನ್ನ ಇನ್ನೊಂದು ಕರಾರು ಏನು ಹೇಳಿಬಿಡು" ಎಂದೆ.

"ಅದು ನಿಮಗೆ ಗೊತ್ತೇ ಇದೆಯಲ್ಲ. ಅವಳಿಗೆ ಮಕ್ಕಳು ಮರಿಗಳ ಜಂಜಾಟವಿರಬಾರದು." "ಅಂದರೆ!ಒಳ್ಳೆ ನ್ಯಾಯ ಇದು!ಪಾಪ, ಒಕ್ಕಲಗಿತ್ತಿಯರಿಗೆ ಮಕ್ಕಳು ಮರಿ ಇರಬಾರದಾಯ್ತಲ್ಲ?" ಹಾಗೆಲ್ಲಿ ಹೇಳಿದೆ? ಮಕ್ಕಳು ಮರಿ ಇದ್ದ ಒಕ್ಕಲಗಿತ್ತಿ ನಮಗೆ ಬೇಡ, ಅಷ್ಟೆ. ಆ ಊರು ಬಿಟ್ಟು ಬರುವ ಮುಂದೆ ಎಷ್ಟು ತೊಂದರೆಯಾಯಿತು, ನೀವೇ ನೋಡಿದಿರಲ್ಲ. ಒಂದು ಮುಂಗಡಿ ಕೂಸು, ನಾಲ್ಕು ವರ್ಷದ್ದಿನ್ನೊಂದು ಎರಡೂ ಸದಾ ನಮ್ಮ ಮನೆಯಲ್ಲೇ ಸುತ್ತಾಡುತ್ತಿದ್ದವು. ಸಾಮಾನನ್ನು ಕಿತ್ತಾಡುತ್ತಿದ್ದವು. ನಮ್ಮ ಹುಡುಗರ ಕೈಯಲ್ಲಿ ಏನಾದರೂ ತಿನ್ನಲಿಕ್ಕೆ ಕೊಟ್ಟರೆ ನಾವು ಕಣ್ಮರೆ ಆದರೆ ಸಾಕು, ಅವರ ಕೈಯಿಂದ ಮುರಿದುಕೊಂಡು ತಿನ್ನುವುದಕ್ಕೂ ಹೆದರುತ್ತಿದ್ದಿಲ್ಲ. ಅಲ್ಲದೆ ನಮ್ಮ ಮನೆಗೆ ನಾಕು ಜನ ದೊಡ್ಡವರು ಬರಹೋಗುವವರು. ಅವರೆದುರಿಗೆ ಹೊಲಸು ಅರಿವೆ ಹಾಕಿಕೊಂಡು ಒಳಗೆ ಹೊರಗೆ ಓಡಾಡುತ್ತಿದ್ದರೆ ಸರಿ ಕಂಡೀತೆ?"

"ಛೇ, ಛೇ, ಇಲ್ಲ" ಎಂದು ಗೋಣು ಅಲುಗಾಡಿಸಿದೆ. ಸರಿ, ಸಂಜೆಗೆ ನಾನು ಬರುವಷ್ಟರಲ್ಲಿಯೇ ಮನೆಯಲ್ಲಿ ಓರ್ವ ಒಕ್ಕಲಗಿತ್ತಿ ಹಾಜರು! ಆಕೆಯ ಕೆಲಸದ ಟ್ರಾಯಲ್ ತಗೊಂಡದ್ದರ ನಿದರ್ಶನಾರ್ಥವಾಗಿ, ತಿಕ್ಕಿದ ಭಾಂಡಿಗಳು ಬೋರಲಾಗಿ ನೆಲದ ಮೇಲಿದ್ದವು.

ಅವಳು ಹೊರಗೆ ಹೊರಟು ನಿಂತಾಗ ನಮ್ಮವಳು ವಿವರಿಸುತ್ತಿದ್ದಳು. "ಒಗೆಯೋಣ, ಭಾಂಡಿ ತಿಕ್ಕೋಣ-ಇವೆರಡೇ ನಮ್ಮ ಮನೆಯ ಕೆಲಸಗಳು. ಭಾಂಡಿ ಅಂದರೆ ತಂಬಿಗೆ, ಥಾಲಿ, ಸಾಮಾನು ಹಾಕಿದ ಹಿತ್ತಾಳಿ ಡಬ್ಬಿ ಇವೂ ಬಂದವು. ಮತ್ತೆ ಒಗಯಲಿಕ್ಕೆ ಮಗ್ಗಲಾಸಿಗೆ, ಸಣ್ಣ ಚಾದರು ಯಾವಾಗಾದರೊಮ್ಮೆ ಹಾಕುವುದುಂಟು. ಆ ನಂತರ ತಕರಾರು ಬೇಡವೆಂದು ಮುಂಚೆಯೇ ಹೇಳಿದ್ದೇನೆ. ಇಲ್ಲಿ ನೀನು ಎಷ್ಟು ಮನೆಯ ಕೆಲಸ ಹಿಡಿದಿರುವಿ?"

"ನಾ ಏಟರಃ ಮನೀ ಹಿಡೀವಲ್ಲೆ ಬಿಡ್ರಿ. ನೀವು ಬಾ ಅಂದಾಗ ನಿಮ್ಮ ಕೆಲಸಾ ಮಾಡಿ ಕೊಡತೇನಿ. ಮತ್ತ ಹಿಡಿದ ಮ್ಯಾಗ ಹೆಚ್ಚು ಕಡಿಮಿ ಆಗೋದರಿ. ಸಂಭಾಳಿಸಿಕೊಂಡ್ರ ಇಬ್ಬರಿಗೂ ಬೇಶಿ" ಎಂದು ಹೇಳಿ ನಿರ್ಗಮಿಸಿದಳಾಕೆ!

ಹಿತ್ತಿಲ ಬಾಗಿಲನ್ನು ಮುಂದೆ ಮಾಡಿ ನನ್ನವಳು ಪಡಸಾಲೆಗೆ ನಾನಿದ್ದಲ್ಲಿಗೆ ಬಂದು, ಆ ಒಕ್ಕಲುಗಿತ್ತಿಯ ಹಿಂದಿನ ಅನುಭವ, ಎದುರಿಗಿನ ಮನೆಯವರ ಶಿಫಾರಸು ಇವುಗಳನ್ನು ವಿವರಿಸಿದಳು. ಸದ್ಯಕ್ಕೆ ೬೦ ರೂ. ಗೊತ್ತು ಮಾಡಿದೆಯಾಗಿ ಹೇಳಿದಳು. ಮತ್ತು ಮುಂಗಡ ಹಣ ಕೇಳಬಾರದೆಂದು ತಾಕೀತು ಮಾಡಿದ್ದನ್ನೂ ತಿಳಿಸಿದಳು. ಇಷ್ಟೆಲ್ಲ ಆಗಿ 'ಈ ಒಕ್ಕಲಗಿತ್ತಿ ನಮಗೆ ಆದೀತೆ?' ಎಂದು ಔಪಚಾರಿಕ ಸಮ್ಮತಿಯನ್ನು ಕೇಳಿದಳು.

ಅವಳ ಹೆಸರೇನು ಎಂದು ಕೇಳಿದಾಗ ರುಕ್ಮವ್ವ ಎಂದು ತಿಳಿಯಬಂತು. ಅದಕ್ಕಿಂತ ಮುಖ್ಯವಾದ ಪ್ರಶ್ನೆಯೊಂದಕ್ಕೆ ಉತ್ತರ ಬೇಕಾಗಿತ್ತು. ಆಕೆಗೆ ಮಕ್ಕಳೆಷ್ಟು ಎಂದು!

"ಎರಡು ದೊಡ್ಡ ಹುಡುಗುರವೆ ಅಂತೆ. ಹಿರಿಯ ಮಗ ಎಲ್ಲೋ ಕೆಲಸಕ್ಕಿದ್ದಾನಂತೆ. ಚಿಕ್ಕವ ಸಾಲೆಗೆ ಹೋಗುತ್ತಿದ್ದಾನಂತೆ. ಇವಳ ಗಂಡ ತೀರಿಕೊಂಡಿದ್ದಾನೆ."

ಸರಿ ಹಳೆಯ ಅತ್ತೆ ಹೊಸದಾಗಿ ಬಂದ ಸೊಸೆಯ ಗುಣವರ್ಣನೆ ಮಾಡುವಂತೆ, ನನ್ನವಳು ದಿನಾಲು ಒಂದಿಲ್ಲೊಂದು ನೆಪದಲ್ಲಿ ರುಕ್ಮವ್ವನ ವಿಷಯ ಹೇಳುತ್ತಿದ್ದಳು. ಆಕೆಯ ಕೈ ಬಾಯಿ ಬಹಳ 'ಶುದ್ಧ' ಎನ್ನುವುದಕ್ಕೆ ಒಂದು ಉದಾಹರಣೆ ಕೊಟ್ಟಳು. ನಮ್ಮ ಹಿರಿಯ ಸುಕುಮಾರ ಒಂದು ದಿನ ಅಂಗಳದಲ್ಲಿ ನಾಲ್ಕಾಣೆಯನ್ನು ಒಗೆದಿದ್ದನಂತೆ. ರುಕ್ಮವ್ವ ಅದನ್ನು ತಂದು ಕೊಟ್ಟಳಂತೆ. ಮತ್ತೊಂದು ದಿನ ರುಕ್ಮವ್ವನ ಪರೋಪಕಾರ ಹಾಗೂ ಕೋಮಲಾಂತಃ ಕರಣಗಳಿಗೆ ಪುರಾವೆ ಸಿಕ್ಕಿತು. ನಮ್ಮ ದ್ವಿತೀಯ ಸುಪುತ್ರನು ಬೆಳಗಿನ ಹೊತ್ತು ಹಟ ಹಿಡಿದು ಅಳುತ್ತ ಇವಳ ಅಡಿಗೆಗೆ ವಿಘ್ನ ಮಾಡುತ್ತಿದ್ದಾಗ, ಬೇರೊಬ್ಬರ ಮನೆಯ ಕೆಲಸಕ್ಕೆ ಹೊರಟಿದ್ದ ರುಕ್ಮವ್ವನು ಅಲ್ಲಿಗೆ ಹೋಗುವುದನ್ನು ಬಿಟ್ಟು ಅವನನ್ನು ಬಗಲಲ್ಲಿ ಹೇರಿಕೊಂಡು ನಾವು ಉದ್ದರಿ ಸಾಮಾನು ತರುವ ಕಿರಾಣಿ ಅಂಗಡಿಯಲ್ಲಿ ಎರಡು ಬಿಸ್ಕೀಟುಗಳನ್ನು ಕೊಡಿಸಿ

ಸುಮ್ಮನಾಗಿಸಿ ಅಲ್ಲಿಂದ ಹೋದಳಂತೆ.

ನಮ್ಮಾಕೆಗೆ ಅವಳ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡುವುದಕ್ಕೆ ಇನ್ನೊಂದು ಸಂಗತಿ ಕಾರಣವಾಯಿತು. ಅದೆಂದರೆ, ನಾನು ಪ್ರವಾಸಕ್ಕೆ ಹೋದಾಗ, ರುಕ್ಮವ್ವ ನಮ್ಮ ಮನೆಯಲ್ಲಿ ಮಲಗಲಿಕ್ಕೆ ಒಪ್ಪಿಕೊಂಡದ್ದು!

ಒಮ್ಮೆ ೨೦ ದಿನದ ಕ್ಯಾಂಪಿನ ಮೇಲೆ ಹೋಗಿ ಮರಳಿ ಬಂದೆ. ಆ ಅವಧಿಯಲ್ಲಿ ರುಕ್ಮವ್ವ ಇವಳೊಡನೆ ಅತಿ ಸಲಿಗೆಯಿಂದ ಮಾತನಾಡುತ್ತಿದ್ದುದು ಕಂಡುಬಂತು. ಇಬ್ಬರಲ್ಲಿ ಆತ್ಮೀಯತೆ ಹೆಚ್ಚಿದೆ ಎಂದುಕೊಂಡೆ. ಆದರೆ ಇವಳಿಗೆ ಆಕೆಯ ವೃತ್ತಿ ಅಷ್ಟೇನು ಹಿತವೆನಿಸಿದಂತೆ ಕಾಣಲಿಲ್ಲ! "ಆಕೆಯೆಲ್ಲ ನೆಟ್ಟಗಿದ್ದಾಳೆ. ಆದರೆ ಕೆಲಸವನ್ನು ಸ್ವಚ್ಛ ಮಾಡುವುದಿಲ್ಲ. ಅದು ಅವಳ ತಪ್ಪಲ್ಲ ಬಿಡಿರಿ. ಇಲ್ಲಿಯ ಚಾಳಿನವರಿಗೇ ಸ್ವಚ್ಛತೆ ಬೇಡ." ಎಂದಳು.

ಮುಂಗಡ ಹಣವನ್ನು ಕೇಳಬಾರದೆಂದಿತ್ತಲ್ಲವೆ? ರುಕ್ಮವ್ವ ಹಣವನ್ನೇನು ಕೇಳುತ್ತಿರಲಿಲ್ಲ. ಆಗಾಗ ಜೋಳದ ಹಿಟ್ಟು, ಒಂದಿಷ್ಟು ಎಣ್ಣೆ, ಅರಿವೆಗೆ ಹಚ್ಚಿ ಉಳಿದ ಸಾಬೂನು-ಹೀಗೆ ಒಂದೊಂದಾಗಿ ಪದಾರ್ಥಗಳನ್ನು (ಅದೂ ಕೇಳಿಕೊಂಡು!)ಒಯ್ಯುತ್ತಿದ್ದಳು.

ಮತ್ತೊಮ್ಮೆ ಕಚೇರಿಯಿಂದ ನಾನು ಮನೆಗೆ ಬಂದಾಗ, ಇವಳೆದುರಿಗೆ ರುಕ್ಮವ್ವ ಯಾರದೋ ಮನೆಯ ಸುದ್ದಿಯನ್ನು ಸಣ್ಣ ದನಿಯಲ್ಲಿ ಹೇಳುತ್ತಿದ್ದಳು. ನಾ ಬಂದೊಡನೆ ಅದು ನಿಂತಿತು. ಒಕ್ಕಲಗಿತ್ತಿ ಹೋದ ಮೇಲೆ ನಾನು ಆಕ್ಷೇಪಿಸಿದೆ. ಅದಕ್ಕೆ "ಒಕ್ಕಲಗಿತ್ತಿ ವಾಚಾಳಿ ಇರಬಾರದು ನಿಜ, ರುಕ್ಮವ್ವ ಹೇಳುತ್ತಿದ್ದುದು ಇನ್ನೊಬ್ಬರ ಮನೆಯ ಸುದ್ದಿ. ಈ ಕಿವಿಯಿಂದ ಕೇಳಿ, ಆ ಕಿವಿಯಿಂದ ಬಿಡುವುದಿರುತ್ತದೆ. ಮುಖ್ಯ ನಮ್ಮ ಮನೆಯ ವಿಷಯ ಇನ್ನೊಬ್ಬರ ಮುಂದೆ ಮಾತಾಡದಿದ್ದರಾಯಿತು. ರುಕ್ಮವ್ವ ಹಾಗೆ ಇಲ್ಲವೆಂದು ಖಾತ್ರಿ ಮಾಡಿಕೊಂಡಿದ್ದೇನೆ. ಹಾಗೂ ಎಲ್ಲ ರೀತಿಯಿಂದ ಆಕೆ ಪರಿಪೂರ್ಣವಾಗಿ ಇದ್ದಿದ್ದರೆ ಒಕ್ಕಲಗಿತ್ತಿ ಆಗಿ ಏಕೆ ಉಳಿಯುತ್ತಿದ್ದಳು?" ಎಂದಳು. ಅದೆಂಥ ತಿಳಿವಳಿಕೆ! ಮತ್ತೊಮ್ಮೆ ನಾನು ದೀರ್ಘ ಕ್ಯಾಂಪ್ ಮುಗಿಸಿ ಬರುವಷ್ಟರಲ್ಲಿ, ರುಕ್ಮವ್ವನ ಬದಲು , "ಈ ಮನೆಯಮ್ಮ"ನೇ ಬಟ್ಟೆಯನ್ನು ಒಣಗ ಹಾಕುತ್ತಿದ್ದಳು. ನಾನಿಲ್ಲದಾಗ ದೊಡ್ಡ ಹಗರಣವಾಯಿತೆಂದು ತಿಳಿದೆ.

ಆಮೇಲೆ ಸುಮಾರು ಅರ್ಧ ತಾಸಿನವರೆಗೆ ರುಕುಮಾಯಿಯ 'ಅಭಂಗ' ನಡೆಯಿತು. ನೆರೆಮನೆಯವರಿಗೆ ವರ್ಗವಾಗಿ ಊರು ಬಿಟ್ಟು ಹೋದಂದಿನಿಂದ ರುಕ್ಮವ್ವ ಕೆಲಸದಲ್ಲಿ ಆಸ್ಥೆ ತೋರಿಸಿದ್ದೇ ಇಲ್ಲವಂತೆ. ಕೆಲಸದ ಬಗ್ಗೆ ಗದರಿಸಿದರೆ ಗಮನವನ್ನೇ ಕೊಡುತ್ತಿದ್ದಿಲ್ಲವಂತೆ. ಒಂದು ದಿನ ಯಾರದೋ ಮದುವೆಗೆ ಹೋಗುವುದಿದೆಯೆಂದು, ಕಾಡಿ, ಬೇಡಿ ೨೦ ರೂ. ಇಸಿದುಕೊಂಡಳಂತೆ. ಊರಿಂದ ಬಂದ ಮೇಲೆ, ಒಂದೆರಡು ದಿನ

ಕೆಲಸಕ್ಕೆ ಬಂದಂತೆ ಮಾಡಿ ಅಲ್ಲಿಂದ ನಾವು ಕೊಡುವ ೬೦ ರೂ.ಗೆ ಇಷ್ಟು ದೂರ ಬರಲಿಕ್ಕಾಗುವುದಿಲ್ಲವೆಂದೂ ಸಾಲವಾಗಿ ಒಯ್ದ ಹಣವನ್ನು ತನ್ನ ಸಂಬಳದಲ್ಲಿ ಮುರಿದುಕೊಳ್ಳಬೇಕೆಂದೂ ಇನ್ನು ಉಳಿದ ಹಣವನ್ನುಹೆಚ್ಚಿನ ಕೆಲಸ ಮಾಡಿದ್ದರಲ್ಲಿ ಮಲಗಲಿಕ್ಕೆ ಬಂದಂತಹ ನೆರವನ್ನು ನೀಡಿದ್ದರಲ್ಲಿ ಬಗೆಹರಿಸಿಕೊಳ್ಳಬೇಕೆಂದೂ ಇಷ್ಟೂ ಮೀರಿ ನಿಮ್ಮ ಹಣ ಬೇಕಿದ್ದರೆ ಮುಂದಿನ ತಿಂಗಳು ತಂದುಕೊಡುವುದಾಗಿಯೂ ಹೇಳಿದಳಂತೆ.

ಇದಿಷ್ಟು ನಡೆದ ಸಂಗತಿಯೆಂದು ತಿಳಿಸಿ, ಮಧ್ಯೆ ಸ್ವಲ್ಪೇ ಕಣ್ಣೀರು ಸುರಿಸಿ ರೂಪಾಯಿ ಕೈಬಿಟ್ಟು ಹೋಯಿತಲ್ಲ ಎಂದು ಹಳಹಳಿಸಿದಳು. ಇನ್ನು ಮೇಲೆ ಈ ಹಾಳು ಒಕ್ಕಲಗಿತ್ತಿಯರೇ ಬೇಡ. ನಾನೇ ಎಲ್ಲ ಮಾಡಿಕೊಳ್ಳುತ್ತೇನೆ." ಎಂದು ಪಣತೊಟ್ಟಳು.

ನನ್ನ ಸಂಕಟ ನನಗೆ! ಒಕ್ಕಲಗಿತ್ತಿ ಇಲ್ಲದಾಗ ಪರ್ಯಾಯವಾಗಿ ನನ್ನ ಮೇಲೆ ಅನ್ಯ ಮನೆಕೆಲಸಗಳ ಭಾರ ಬೀಳದಿರುತ್ತದೆಯೆ ? ಅದಕ್ಕೆ ಹೇಳಿದೆ:

"ಹಾಗೆಲ್ಲಿ ಆಗುತ್ತದೆ? ಮನೆಯೆಂಬ ಠಾವಿಗೆ ಒಕ್ಕಲಗಿತ್ತಿ ಬೇಕೇಬೇಕು. ಮನೆಯಲ್ಲಿ ಜಡ್ಡು ಜಾಪತ್ತು ಆದಾಗ ಅತಿಥಿಗಳು ಬಂದಾಗ ನಿನಗೇ ತೊಂದರೆ. ನಿನ್ನ ಕಡೆಯಿಂದ ಮನೆಗೆಲಸ ಆಗುವುದಿಲ್ಲ ಎಂದಲ್ಲ! ಆದರೂ ನೆರವಿಗೆ ಇದ್ದರೆ ಒಳ್ಳೆಯದು."

"ಹೌದರೀ, ನನಗೆ ಇವರ ಮರ್ಜಿ ಹಿಡಿದು ಸಾಕಾಗಿದೆ. ಅವರಿಗೇನು ಕೊರತೆಯಿಲ್ಲ ಬಿಡಿರಿ. ಮನೆತನಕ ಬಂದು ಕೇಳಿ ಹೋಗುತ್ತಾರೆ. ಯೋಗ್ಯಳು ತಾನಾಗಿ ಸಿಕ್ಕುವವರಗೆ ಬೇಡವೇ ಬೇಡ" ಎಂದು ಪುನರುಚ್ಚರಿಸಿದಳು.

ಕೊನೆಗೆ ಅವಳ ಗೋಳು ನೋಡಲಾರದೆ, ನನ್ನ ಗೆಳೆಯನ ಮನೆಗೆ ಬರುತ್ತಿದ್ದ ಒಬ್ಬಳನ್ನು ನಮ್ಮಲ್ಲಿ ಕೆಲಸಕ್ಕೆ ಕಳಿಸಲು ಹೇಳಿದೆ.

ಆಕೆಯ ಹೆಸರು ರಂಗೂಬಾಯಿ. ಒಂದೇ ದಿನದ ಪ್ರೊಬೇಶನರಿಯ ಮೇಲೆ ಅವಳ ನೇಮಕ (confirm) ಆಯಿತು. (ಆಕೆ ಬಂದ ಮೊದಲ ದಿನ ನನ್ನವಳು ಸ್ವಲ್ಪ ಬಿಗುವಿನಿಂದಲೇ ವರ್ತಿಸಿದಳು) ಆಗ ನಾನು: "ಇದು ನೋಡು, ನೀನು ಕೇಳುವ ಎರಡೂ ಮುಖ್ಯ qualifications ಅವಳಲ್ಲಿದೆ. ಆಕೆ ನಮ್ಮ ಅಥವಾ ಇನ್ನೊಬ್ಬರ ವಿಷಯ ಆಡುವುದೇ ಇಲ್ಲವಂತೆ. ಆಕೆಗೆ ಐದು ಮಕ್ಕಳಿದ್ದರೂ ಒಂದನ್ನೂ ನನ್ನ ಗೆಳೆಯನ ಮನೆಗೆ ಕರೆತರುವುದಿಲ್ಲವಂತೆ. ಅವು ಯಾತಕ್ಕಾದರೂ ಇವಳು ಕೆಲಸ ಮಾಡುವಲ್ಲಿಗೆ ಬಂದರೆ ಹೊರಗಿನಿಂದ ಹೊರಗೇ ಕಳಿಸಿಕೊಡುತ್ತಾಳಂತೆ. ವಿಶೇಷವೆಂದರೆ ಅವಳು ಚಹ ಕಾಫಿ ಕುಡಿಯುವುದಿಲ್ಲ. ಅಂದರೆ ಆಕೆಯ ಹೆಸರಲ್ಲಿ ಒಂದು ಕಪ್ಪು ನೀರು ಹೆಚ್ಚು ಹಾಕುವ ಅಗತ್ಯ ಉಳಿಯಲಿಲ್ಲ. ಏನಿದ್ದರೂ ಸ್ವಲ್ಪ ಸುಧಾರಿಸಿಕೊಂಡು ಕೆಲಸಮಾಡಿಸಿಕೊ, ಆಯಿತು, ಯಾವದೇ ರಗಳಿ ಆಗದ ಹಾಗೆ. . .

"ಅಯ್ಯ, ನಾ ಯಾಕ ರಗಳೀ ಮಾಡಲಿ ನೀವು ಆರಿಸಿ ತಂದೀರಿ ಅಂದಮೇಲೆ" ಎಂದು ರಾಗ ಎಳೆದಳು.

ನಸು ಸಿಟ್ಟಿಗೆದ್ದ ಹೆಂಗಸು ಯಾವ ಗಂಡನಿಗೂ ತನ್ನ ಹೆಂಡತಿ ಚೆಲುವೆಯಾಗಿ ಕಂಡಾಳು ಮತ್ತು ಇನ್ನಷ್ಟು ಸಿಟ್ಟಿಗೆಬ್ಬಿಸಬೇಕೆಂದು ಮನಸ್ಸೂ ಆಗುವುದು."ಮತ್ತೆ ಐದು ಮಕ್ಕಳ ತಾಯಿಯಾದರೂ ಆಕೆ ನೋಡುವುದಕ್ಕೆ ಗಟ್ಟಿಮುಟ್ಟಾಗಿದ್ದಾಳಲ್ಲವೆ? ಎರಡು ಹಡೆದ ನೀನು ಅವಳ ಮುಂದೆ ಜೋಲು ಮುಖದವಳಾಗಿ ಕಾಣುತ್ತೀ. ಅವಳು ಯಾಕೆ ಹಾಗೆ ಇದ್ದಾಳೆ ಗೊತ್ತೇ? ಸ್ವತಃ ಮೈ ಬಗ್ಗಿಸಿ ದುಡಿಯುತ್ತಾಳೆ. ನಮ್ಮ ಮಧ್ಯಮ ವರ್ಗದ ಹೆಂಗಸರಿಗೆ ಮೈ ಕೈಯಿಂದ ದುಡಿಯುವುದು ಗೊತ್ತೇ ಇಲ್ಲ. ಅದಕ್ಕೇ ಮೇಲಿಂದ ಮೇಲೆ ಬೇನೆ ಬೀಳುತ್ತಾರೆ."

ನನ್ನ ಕಡೆಯ ಎರಡು ವಾಕ್ಯಗಳತ್ತ ಅವಳ ಲಕ್ಷ್ಯವಿರಲಿಲ್ಲ. ಬದಲಾಗಿ ಆಕೆ: "ನೀವು ಏನೇ ಹೇಳಿರಿ. ಯಾರದೇ ಮನೆಯೊಳಗೆ , ಒಕ್ಕಲಗಿತ್ತಿ ವಯಸ್ಸು ಆದಾಕೆಯೇ ಇರಬೇಕು, ನೋಡಿರಿ. ಗಂಡಸರ ಮನಸ್ಸು ಬೆಣ್ಣೆ ಇದ್ದ ಹಾಗೆ . ಸಾದಾ ಬಿಸಲಿಗೆ ಸಹಿತ ಅದು ಕರಗುತ್ತದೆ. ಅದನ್ನು ಸುಮ್ಮನೆ ಯಾಕೆ ಪರೀಕ್ಷೆ ಮಾಡಬೇಕು?" ಎಂದಳು. "ಎಲಾ ಹೆಣ್ಣೇ !" ಎಂದೆ ಮನಸ್ಸಿನಲ್ಲಿ. "ಮತ್ತೆ , ನಿಮ್ಮ ಬಗ್ಗೆ ನಾನು ಈ ಮಾತು ಅನ್ನತೇನೆ ಅಂತ ತಿಳೀಬೇಡಿರಿ. ಲೋಕದ ರೀತಿ ಹೇಳಿದೆ!"

ಆದರೆ ರಂಗೂಬಾಯಿ ಗಟ್ಟಿಮುಟ್ಟಾಗಿರುವುದಕ್ಕೆ ಇನ್ನೊಂದು ಕಾರಣವಿದ್ದಿತು. ಅದೆಂದರೆ ಕೆಲಸದ ವಿಷಯದಲ್ಲಿ ಅವಳು ಮೈಗಳ್ಳಿ ಇದ್ದಳು! ಇವಳು ನಾಲ್ಕು ಬೈದರೂ ಅವಳು ಗಪ್‌ಚಿಪ್! ಬಟ್ಟೆಗಳು ಹೆಚ್ಚು ಬಿದ್ದರೆ, ಅವಳು ಹಾಗೆಂದು ಹೇಳುತ್ತಿದ್ದಿಲ್ಲ. ಬದಲಾಗಿ ಎಲ್ಲವಕ್ಕೂ ನೀರು 'ತೋರಿಸಿ'ದಂತೆ ಮಾಡಿ ಹಿಂಡಿ ತಂದಿಡುತ್ತಿದ್ದಳು, ಅಷ್ಟೇ. ಪ್ರತಿ ತಿಂಗಳಿಗೊಮ್ಮೆ ಮೂರು ದಿನ ತಪ್ಪದೆ ರಜೆ ಪಡೆಯುತ್ತಿದ್ದಳು. ನಮ್ಮ ಗೆಳೆಯನ ಮನೆಯಲ್ಲಿಯಂತೆ ನಾವೂ ರೂ. ೬೫ ಸಂಬಳವನ್ನು ಅವಳಿಗೆ ಕೊಡುತ್ತಿದ್ದೆವು. ೫ ರೂ. ಹೆಚ್ಚು ಆದ್ದರಿಂದ , ನಮ್ಮವಳ ಅಭಿಪ್ರಾಯದಲ್ಲಿ. ಆಕೆ ಭಾಂಡಿ, ಬಟ್ಟೆಗಳಲ್ಲದೆ , ಕಾಳುಕಡ್ಡಿ ಆರಿಸುವ ಗಿರಣಿಗೆ ಹೋಗುವ ಕೆಲಸಗಳನ್ನು ಮಾಡಬೇಕೆಂದಿತ್ತು. ಆದರೆ ಅದು ಸುಲಭವಿರಲಿಲ್ಲ.

ಮೂರು, ನಾಲ್ಕು ತಿಂಗಳು ಎಲ್ಲವೂ ಸುಸೂತ್ರವಾಗಿ ಸಾಗಿತ್ತಾದ್ದರಿಂದ ಇನ್ನು ಒಕ್ಕಲಗಿತ್ತಿಯರ ಸಮಸ್ಯೆ ನಮ್ಮ ಮನೆಯಲ್ಲಂತೂ ಇಲ್ಲವೆಂದು ತೀರ್ಮಾನಿಸಿಕೊಂಡು ನಿಶ್ಚಿಂತನಾಗಿದ್ದೆ. ಆದರೆ ಇಂದಿನ ಜಟಿಲ ಯುಗದಲ್ಲಿ ಯಾವ ಸಮಸ್ಯೆಗೂ ಪರಿಹಾರವೆಂಬುದಿಲ್ಲ.

ಒಂದು ದಿನ ಸಂಜೆ ಕಚೇರಿಯಿಂದ ನಾ ಬಂದಾಗ ನನ್ನವಳ ಎಣ್ಣೆಗೆಂಪಿನ ಮುಖ ಇನ್ನಷ್ಟು ಕೆಂಪಾಗಿದ್ದಿತು. ಯಾರೊಡನೆಯೊ ಆದೀಗ ಜಗಳ ಮಾತಾಡಿ ಬಂದಂತಿತ್ತು. ನಾನು ಹೊರಗಿನ ಕುರ್ಚಿಯ ಮೇಲೆ ಕುಳಿತುಕೊಂಡು ಬೂಟಿನ ಲೇಸನ್ನು ಬಿಚ್ಚುತ್ತಿದ್ದೆ. ಬಂದಳು -

"ನಿಮ್ಮ ರಂಗೂಬಾಯಿ, ಪ್ರತಿಯೊಬ್ಬರ ಮನೆಯಲ್ಲಿ ಬೇರೆ ಬೇರೆ ದಿವಸಗಳಲ್ಲಿ ಮೂರು ದಿನದ ರಜೆ ಪಡೆಯುತ್ತಾಳೆ ಗೊತ್ತೆ? ಇವತ್ತು ನಾನು ನಿಮ್ಮ ಗೆಳೆಯನ ಮನೆಗೆ ಹೋದಾಗ ಎಲ್ಲ ಹೊರಬಿತ್ತು."

"ತಪ್ಪೇನಾಯಿತು? ಅದು ಅವಳ ಹಕ್ಕಿನ ರಜೆಯೇ ಇದೆ. " "ಅಂದರೆ ನಿಜವಾಗಿ ರಜೆಯ ಮೇಲಿದ್ದಾಗ ಮನೆಯಲ್ಲಿ ಮೈಲಿಗೆ ಕಲಸು ಎನ್ನುತ್ತೀರಾ"ಎಂದಳು.

ಶಾಂತಂ ಪಾಪಂ!ಹತ್ತಾರು ದೇವರ ಫೋಟೊಗಳು ಪೂಜೆಗೊಳ್ಳುತ್ತಿರುವ ನಮ್ಮ ಮನೆಯಲ್ಲಿ ನಮಗೆ ಗೊತ್ತಾಗದೇ ಅದೆಷ್ಟು ಸಲ ಮೈಲಿಗೆಯಾಗಿದೆಯೋ! ನಾನಾಗಿ ಹೇಳಿಬಿಟ್ಟೆ.

"ಹಾಗಿದ್ದರೆ ನಾಳಿನಿಂದ ಅವಳು ಕೆಲಸಕ್ಕೆ ಬರುವುದೇ ಬೇಡ"ಈ ಒಕ್ಕಲಗಿತ್ತಿಯರನ್ನು ಹುಡುಕಿ ಸಾಕಾಯಿತು. "ದಿನಪತ್ರಿಕೆಯಲ್ಲಿ ಜಾಹಿರಾತು ಕೊಡೋಣವೇ"? ಎಂದು ಸೂಚಿಸಿದೆ. "ಛೇ, ಮಂದಿ ಯಾರಾದರೂ ನಕ್ಕಾರು!"

"ಅಲ್ಲಾ, ನೀನೇ ನೋಡುತೀಯಲ್ಲ ದಿನಪತ್ರಿಕೆಗಳಲ್ಲಿ(ಕನ್ನಡದ್ದು; ನನ್ನವಳಿಗೆ ಇಂಗ್ಲೀಷ್ ಶುಂಠಿ) ಎಂಥೆಂಥ ಜಾಹೀರಾತು ಬರುತ್ತವೆ 'ಎಮ್ಮೆ ಕಳೆದಿದೆ', 'ಕೋಣ ಸಿಕ್ಕಿದೆ', ೩೦ ವರ್ಷದ ಹುಡುಗಿಗೆ ಕಲಿತ, ಯೋಗ್ಯ ವರ ಬೇಕಾಗಿದ್ದಾನೆ ಇತ್ಯಾದಿ. ಬೇಕಾದರೆ ನಮ್ಮ ಹೆಸರನ್ನು ಹಾಕೋಣ ಬೇಡ, ಬಾಕ್ಸ್ ನಂ. ಕೊಡೋಣ"ಎಂದೆ.

ಈ ವಿಷಯದಲ್ಲಿ ಇಬ್ಬರದೂ ಅರೆದಾಟವಾಗಿ ಈ ಒಕ್ಕಲಿಗಿತ್ತಿಗೆ ಕೆಳಗಿನ ಅರ್ಹತೆಗಳಿರಬೇಕೆಂದು ಬಹುಮತದಿಂದ ನಿರ್ಣಯಿಸಿದ್ದೇವೆ.

೧. ಒಕ್ಕಲಗಿತ್ತಿಯು ಮಧ್ಯ ಅಥವಾ ಇಳಿವಯಸ್ಸಿನವಳಿರಬೇಕು.

೨. ಆಕೆಯು ವಾಚಾಳಿಯಾಗಿರಬಾರದು. ತನ್ನ ಮನೆಯ ತಾಪತ್ರಯಗಳನ್ನು ನಮ್ಮ ಮುಂದೂ ನಮ್ಮ ಮನೆಯ ಸುದ್ದಿಯನ್ನು ಇನ್ನೊಬ್ಬರೆದುರೂ ಸುತರಾಂ ಹೇಳಕೂಡದು. ಇನ್ನೊಬ್ಬರ ಮನೆಯ ಸುದ್ದಿಯನ್ನು ಆಗಾಗ ಹೇಳಬಹುದು.

೩. ಅವಳು ಮಕ್ಕಳನ್ನು ಕೆಲಸದ ಮನೆಗೆ ತರತಕ್ಕದ್ದಲ್ಲ. ನಾಯಿ, ಕೋಳಿಗಳನ್ನು ಸಾಕಿದ್ದರೆ ಅವನ್ನೂ ತರಕೂಡದು. ಮುಂಗಡಿ ಕೂಸಿನ ತಾಯಿ ಆಗಿರದಿದ್ದರೆ ಉತ್ತಮ.

೪. ಗೊತ್ತು ಮಾಡಿದ ಸಂಬಳವನ್ನು ತಿಂಗಳ ಮಧ್ಯದಲ್ಲಿ ಕೇಳಬಾರದು; ಮತ್ತು ಕೈಗಡದ ರೀತಿಯಲ್ಲಿ ಯಾವ ಕಿರುಕುಳ ಪದಾರ್ಥವನ್ನೂ ಕೇಳಬಾರದು.

೫. ಬೆಳಗಿನ ಹೊತ್ತು ಚಹವನ್ನು ಕೊಡಲಾಗುವುದು. ಹಬ್ಬ ಹುಣ್ಣಿಮೆ ಬಂದಾಗ ಮಧ್ಯಾನ್ಹದ ಭಾಂಡಿಯ ಜೊತೆಗೆ ತಿನಿಸನ್ನು ಕೊಡಲಾಗುವುದು. ಇದಕ್ಕೂ ಹೆಚ್ಚಿಗೆ

ಏನನ್ನೂ ಅಪೇಕ್ಷಿಸಕೂಡದು.

೬. ಯಾವಾಗಾದರೊಮ್ಮೆ ಕೆಲಸವು ಹೆಚ್ಚಾದರೆ ತಕರಾರು ಮಾಡತಕ್ಕದ್ದಲ್ಲ.

೭. ಕೆಲಸದಲ್ಲಿ ಹೊಲಸುತನ, ಅಲಕ್ಷ್ಯ ಕಂಡುಬರತಕ್ಕದ್ದಲ. ಒಂದು ದಿನಕ್ಕಿಂತ ಹೆಚ್ಚಿಗೆ ಕೆಲಸಕ್ಕೆ ಬರಲಿಕ್ಕಾಗದಿದ್ದರೆ ಬದಲಿಗೆ ಯಾರನ್ನಾದರೂ ಕಳಿಸಬೇಕು.

೮. ತಿಂಗಳಿಗೆ ಮೂರು ದಿನ ರಜೆಯನ್ನು ಕೊಡಲಾಗುವುದು. ಮತ್ತು ಆ ೩ ದಿನಗಳಿಗೆ ಅರ್ಧ ಪಗಾರವನ್ನು ಹಿಡಿಯಲಾಗುವುದು.

೯. ಕಪ್ಪು-ಬಸಿಗಳು ಒಂದಕ್ಕಿಂತ ಹೆಚ್ಚು ಒಡೆದರೆ ಪಗಾರದಲ್ಲಿ,... (ಊಂಹು, ಹಾಗೆ ಬೇಡ) ಹೊಸತನ್ನು ಕೊಂಡುಕೊಡಬೇಕು.

೧೦. ಮನೆಯ ಯಜಮಾನರು ಮನೆಯಲ್ಲಿದ್ದಾಗ, ಗಟ್ಟಿಯಾಗಿ ಮಾತನಾಡುವುದಾಗಲೀ, ಕೆಲಸದ ನಿಮಿತ್ತ ಅವರಿದ್ದ ಕೋಣೆ, ಅಥವಾ ಸ್ಥಳದಲ್ಲಿ ಸುಳಿದಾಡುವುದಾಗಲೀ ಮಾಡಕೂಡದು.

೧೧. ಹಿತ್ತಲ ತೋಟದೊಳಗಿನ ಹೂವು ಹಣ್ಣುಗಳನ್ನು ಹರಿಯಬಾರದು.

೧೨. ಕೆಲಸದವರ ಸಂಘ-ಸಂಸ್ಥೆಗಳಿದ್ದಲ್ಲಿ ಅವಕ್ಕೆ ಸೇರಿದವಳಾಗಿರಬಾರದು.

೧೩. ಅರ್ಜಿ ಹಾಕುವಾಗ ಯಾರದಾದರೂ ಶಿಫಾರಸನ್ನು ತೆಗೆದುಕೊಂಡೇ ಬರಬೇಕು. ವಶೀಲಿ ಇಲ್ಲವೆ ನಮ್ಮ ಗುರುತಿನ ಯಾವುದೇ ದೊಡ್ಡ ಮನುಷ್ಯರ ಶಿಫಾರಸು ಇಲ್ಲದೆ ನಿಯಮಿಸಿಕೊಳ್ಳಲು ಬರುವುದಿಲ್ಲ.

ಇನ್ನೂ ಕೆಲವು ಕರಾರುಗಳಿವೆ. ಸುಳ್ಳು ಹೇಳಬಾರದು, ಕಳವು ಮಾಡಬಾರದು, ಇತ್ಯಾದಿ. ಆದರೆ ಅವನ್ನು ಬಾಯಿಯಿಂದ ಹೇಳಲಿಕ್ಕಾಗುತ್ತದೆಯೇ? ಪರೀಕ್ಷಿಸಿಯೆ ನೋಡಬೇಕಷ್ಟೆ.

ನಿಮ್ಮ ಗುರುತಿನವರಲ್ಲಿ ಯಾರಾದರೂ ಅಂಥವರು ಇದ್ದರೆ ತಿಳಿಸುತ್ತೀರಾ?

***

೫. ಹೆಸರು, ಅಡ್ಡ ಹೆಸರು, ಅಡ್ನಾಡಿ ಹೆಸರುಗಳು

ಹೆಸರಿನಲ್ಲೇನಿದೆ ಮಹಾ. What's there in a name -ಹೀಗೆ ಶೇಕ್ಸ್‌ಪಿಯರನೇ ಹೇಳಿ ಬಿಟ್ಟಿದ್ದಾನಲ್ಲ - ಎಂದು ಅನೇಕರು ಹೆಸರಿನ ಬಗ್ಗೆ ತಮ್ಮ ನಿರ್ಲಕ್ಷ್ಯವನ್ನು ಸಮರ್ಥಿಸಿಕೊಳ್ಳುತ್ತಾರೆ. ಆದರೆ ಅದು ಶೇಕ್ಸ್‌ಪಿಯರ್ ಹೇಳಿದ್ದಲ್ಲ; ಅವನ ಒಂದು ತರಲೆಯ ಪಾತ್ರ ಹೇಳಿದ್ದುದು!

ಈ ವಿಶಾಲ ಭೂಖಂಡದಲ್ಲಿ ಯಾವ ಅಂಶವೂ ಹೆಸರಿಲ್ಲದೆ ಇಲ್ಲ. ನಿರ್ಜೀವ ವಸ್ತುಗಳಿಗೂ ಹೆಸರು ಕೊಡಬೇಕಾಗುತ್ತದೆ. ಅಮೂರ್ತ ಸ್ವರೂಪದ ದೇವರಿಗೂ ಹೆಸರು ಕೊಟ್ಟಿದ್ದೇವೆ - ನಾನಾ ಬಗೆಯಾಗಿ. ಅನಾದಿ ಕಾಲದಿಂದ ಹೆಸರುಗಳು ಸೃಷ್ಟಿಯಾಗುತ್ತಲೇ ಇವೆ. ಸೃಷ್ಟಿಸಿದ ಹೆಸರುಗಳು ಮರೆಯಾಗಬಹುದಲ್ಲದೆ ಅವುಗಳಿಗೆ ಸಾವೆಂಬುವುದಿಲ್ಲ. ಹೆಸರೆಂಬುದು ಇರದೇ ಹೋದರೆ ನಮ್ಮ ದಿನದ ಯಾವ ವ್ಯವಹಾರವೂ ನಡೆಯುವುದಿಲ್ಲ. ಬೇಕಿದ್ದರೆ ಪರೀಕ್ಷಿಸಿ ನೋಡಿರಿ.

ಒಬ್ಬರಿಂದ ಇನ್ನೊಬ್ಬರನ್ನು, ಒಂದರಿಂದ ಇನ್ನೊಂದನ್ನು ಪ್ರತ್ಯೇಕಿಸುವ ಸಾಧನವೇ ಹೆಸರು. ಒಬ್ಬ ವ್ಯಕ್ತಿಯ ಹೆಸರನ್ನು ಉಚ್ಚರಿಸಿದೊಡನೆ ಅವನ ಬಗ್ಗೆ ಗೊತ್ತಿದ್ದ ಎಲ್ಲ ಅಂಶಗಳೂ ಅನಿಸಿಕೆಗಳೂ ಕ್ಷಣಾರ್ಧದಲ್ಲಿ ಮೂರ್ತ ಸ್ವರೂಪ ತಾಳುತ್ತವೆ. ಅವನದೊಂದು ಚಿತ್ರ ಕಣ್ಣ ಮುಂದೆ ನಿಲ್ಲುತ್ತದೆ. ನನ್ನ ಮುಂಚಿನ ಅಡ್ಡ ಹೆಸರು 'ಐರಣಿ'ಎಂದಿತ್ತು. ನಾಲ್ವತ್ತು ವರ್ಷಗಳ ಹಿಂದೆ ಅದನ್ನು ಬದಲಿಸಿದೆ. ಆಗ ನನ್ನ ಪರಿಚಯದ ಹಿರಿಯರೊಬ್ಬರು "ಹಾವನೂರ ಎಂದೊಡನೆ ಯಾರೋ ಬೇರೊಬ್ಬರು, ಅಪರಿಚಿತ ಎಂಬ ಭಾವನೆ ಬರುತ್ತದೆ. ಐರಣಿ ಎಂದೇ ಕರೆಯುತ್ತೇನೆ" ಎಂದಿದ್ದರು. ಹಾಗೇನೆ ಕರೆಯುತ್ತಿದ್ದರು.

ಹೆಸರಿನ ಬಗ್ಗೆ ಮರೆಯಲಾರದ ಅಂಶವೆಂದರೆ, ಹೆಸರೇನೋ ನಮ್ಮದು. ಬಳಸುವವರು ಮಾತ್ರ ಬೇರೆಯವರು. ಅನ್ಯರಿಗಾಗಿಯೇ ನಮ್ಮ ನಾಮಾಂಕನ. ಆದ್ದರಿಂದ ಇನ್ನೊಬ್ಬರ ಕಿವಿಯ ಮೇಲೆ ನಮ್ಮ ಹೆಸರು ಬೀಳುವಾಗ ಅದು ಸ್ಪಷ್ಟವಾಗಿ, ಉಚ್ಚಾರಸುಲಭವಾಗಿ ಇರಬೇಕಲ್ಲದೆ, ನಮ್ಮ ಪ್ರತ್ಯೇಕ ಅಸ್ತಿತ್ವವನ್ನು ತೋರ್ಪಡಿಸುವಂತಿರಬೇಕು.

ಈ ಪ್ರತ್ಯೇಕತೆಗೆ ತೊಟ್ಟಿಲ ಹೆಸರು ಸಾಕೆ? ಹಿಂದಿನ ಕಾಲದಲ್ಲಿ ಸಾಕಾಗುತ್ತಿತ್ತೇನೋ. ನಮ್ಮ ಯಾವುದೇ ಕವಿಯಾಗಲೀ, ರಾಜನಾಗಲೀ ಒಂದೇ ಹೆಸರಿನಿಂದ ಗುರುತಿಸಲ್ಪಡುತ್ತಿದ್ದರು-ಅವರವರ ಕಾಲದಲ್ಲಿ. ಈಗ ನಮಗೆ ಅದೊಂದು ತೊಡಕಾಗುವುದರಿಂದ, ಮುಮ್ಮಡಿ ಕೃಷ್ಣರಾಜ, ನಾಲ್ಕನೆಯ ಮಂಗರಸ-ಎಂದೆಲ್ಲ ಪ್ರತ್ಯೇಕಿಸುತ್ತೇವೆ. (ಮಂಗರಸ!) .ಅಜ್ಜ ಅಜ್ಜಿಯರ ಹೆಸರನ್ನೇ ಮೊಮ್ಮಕ್ಕಳಿಗೆ ಇಟ್ಟಾಗಲೂ ಆಗ ಪ್ರತ್ಯೇಕತೆಯನ್ನು ಉಳಿಸಿಕೊಂಡಿದ್ದೆವು - ಸಣ್ಣರಾಮ, ಪುಟ್ಟಂಜಿ ಮುಂತಾಗಿ.

ಅದೀಗ ಸಾಧ್ಯವಿಲ್ಲ. ಜನಸಂಖ್ಯೆಯ ಹೆಚ್ಚಳದಿಂದಾಗಿ. ಜೊತೆಗೆ ಪರಸ್ಪರ ಸಂಪರ್ಕವೂ ಹೆಚ್ಚಾಗಿದೆ. ಆ ಕಾರಣದಿಂದ ಹೊಸ ಹೊಸ ಹೆಸರುಗಳು ಸೃಷ್ಟಿಯಾಗತೊಡಗಿವೆ. ರಾಮು,ಕೃಷ್ಣ, ಬಸವ, ಗಂಗಾ, ಗೌರಿ - ಇವು ಕ್ರಮೇಣ ಹಿನ್ಸರಿದವು. ಗಿರೀಶ ಸತೀಶರು ಕಾಣಿಸಿಕೊಂಡರು. ಅಲ್ಲಿಂದ ದೇವರ ಹೆಸರುಗಳನ್ನು ಕೈಬಿಟ್ಟು, ವಸಂತ, ಮೋಹನ, ಗೀತಾ, ಕವಿತಾರತ್ತ ವಾಲಿದೆವು. ಈ ಹೆಸರಿದ್ದವರ ಸಂಖ್ಯೆಯೂ ಬೆಳೆದಂತೆ, ಸಾರ್ಥಕ್, ಅಮೇಯ, ಪ್ರಮೇಯ ಮುಂತಾದ ಭಾವನಾಮಗಳನ್ನು ಅರಸಿಕೊಂಡು ಹೋದೆವು. ಅವು ಕೂಡ ಹೊಸತನದ ಮೆರುಗನ್ನು ಕಳೆದುಕೊಂಡವು. ಪರಿಣಾಮವಾಗಿ ಯಾರೂ ಇಟ್ಟಿರದ ನವನವೀನ ಹೆಸರುಗಳನ್ನು ಹುಡುಕಿ ಮಗುವಿಗೆ ಹೆಸರು ಇಡಬೇಕು ಎಂಬ ಸ್ಪರ್ಧಾತ್ಮಕ ಮನೋಭಾವ ನಮ್ಮದಾಯಿತು. ದಿನದಿನಕ್ಕೆ ಆ ಛಲ ಎದ್ದು ಕಾಣುತ್ತಿದೆ. ನನ್ನೊಬ್ಬ ಮಿತ್ರನ ಮೊಮ್ಮಗನಿಗೆ ತರುಣ ಎಂದು ನಾಮಕರಣ ಮಾಡಿದ್ದಾರೆ. ಹುಟ್ಟಿದ ಕ್ಷಣಾರ್ಧದಲ್ಲಿ 'ತರುಣ' ಆದ ಅವನಿಗೆ ತೊಟ್ಟಿಲ ಬಾಸಿಂಗವನ್ನು ಕಟ್ಟಬೇಕೇನೋ. ಇನ್ನು ಅವನು ಬೆಳೆದು ದೊಡ್ಡವನಾಗಿ, ಮುದುಕನಾದ ಮೇಲೆ ಅವನನ್ನು 'ತರುಣ' ಎಂದು ಕರೆಯುವುದು ಆಭಾಸವಾಗಲಿಕ್ಕಿಲ್ಲವೆ? ಅದಿರಲಿ, ಆ ಮುದಿ ವಯಸ್ಸಿನಲ್ಲಿ ಅವನು ತನ್ನನ್ನು 'ತರುಣ'ನೆಂದು ತಿಳಿದು ಹಾಗೆ ವರ್ತಿಸಿದರೆ? ಫಜೀತಿ-! "ಈ ಹಿಂದೆ ಯಾರೂ ಇಟ್ಟಿರದ ಹೆಸರೇ ಆಗಬೇಕು. ಅಂಥದೊಂದು ಹೆಸರು ಹೇಳ್ರಿ, ಅಂಕಲ್" ಎಂಬುದಾಗಿ ತಂದೆಯಾಗಲಿರುವ ಒಬ್ಬ ತರುಣ ನನ್ನನ್ನು ಕೇಳಿದ: ದೃಷ್ಟದ್ಯುಮ್ನನ ಹೆಸರು ಹೇಳಿದೆ ! ಉಚ್ಚಾರಕ್ಕೆ ಕಷ್ಟವಾಗುವುದೆಂದ. "ಹಾಗಿದ್ದರೆ, ಅರ್ಧನಾರೀಶ್ವರ ಆದೀತೆ?" ಎಂದು ಸೂಚಿಸಿದ್ದೇನೆ.

'ಹೆಸರು' ಈ ಶಬ್ದಕ್ಕೆ ವಿವಿಧ ಕ್ರಿಯಾಪದಗಳನ್ನು ಜೋಡಿಸಿದರೆ ವಿಶಿಷ್ಟ ಅರ್ಥಗಳೇ ಹೊರಡುವುವು. ಶಾಲೆಗಳಲ್ಲಿ 'ಹೆಸರು ಹಚ್ಚು'ವುದು ಜೂನ್ ತಿಂಗಳಲ್ಲಿ ಭರದಿಂದ ನಡೆಯುತ್ತದೆ. 'ಹೇಳು'ವುದು ಒಂದು ಸಾದಾ ವಿಷಯ. ಆದರೆ ಮಗುವಾಗಲೀ, ನವ ವಿವಾಹಿತೆಯಾಗಲೀ (ವರನದು) ಹೆಸರನ್ನು ಹೇಳುವುದೇ ಒಂದು ಸೊಗಸು.ಅದೇ ರೀತಿ ಇರುವ 'ಹೆಸರಾಗು', 'ಹೆಸರು ಮಾಡು' - ಇವು ಒಂದೊಂದರ ವಿಶೇಷಾರ್ಥವನ್ನು ಗಮನಿಸುವುದು. ಹುಟ್ಟಿದ ಮಗುವಿಗೆ ಹೆಸರು 'ಇಡು'ತ್ತೇವೆ. ನಮಗೆ ಬೇಡವಾದ ವ್ಯಕ್ತಿ

ಇಲ್ಲವೆ ವಸ್ತುವಿಗೂ 'ಹೆಸರಿಡು'ತ್ತೇವೆ.! ಬರಿಯೆ ಸಂಧಿ ಮಾಡುವುದರಿಂದ ಅರ್ಥ ಹೇಗೆ ಬದಲಾಗುತ್ತದೆ ನೋಡಿದಿರಾ? 'ಎತ್ತು'ವ ಕ್ರಿಯೆ ಭಾರವಾದ ವಸ್ತುವಿಗೆ ಅನ್ವಯಿಸುತ್ತದೆ. ಆದರೆ "ಎಲೇ, ನನ್ನ ಹೆಸರೆತ್ತಿದಿ ಅಂದ್ರ ನೋಡು! ನಿನ್ನ."

ಅಂದ ಹಾಗೆ 'ಅಡ್ಡಿ ಮಾಡು' ಇದರಲ್ಲಿ 'ಅಡ್ಡ' ಇದೆಯೇ? ಇಲ್ಲ. ಅಡಕಿಯನ್ನು ಹೋಳು ಮಾಡುವ ಅಡಕೊತ್ತಿನಲ್ಲಿ, ಅಡಕಿ ಪೂರ್ವಪದವಾಗಿ ಇಲ್ಲ. 'ಅಡ್ಡಕ್ಕೆ ಒತ್ತು' ಎಂಬುದು ಇದ್ದಿರಲು ಸಾಕು. (ತುಳುವಿನಲ್ಲಿಯ 'ಇಡಕತ್ತಿ' ಯನ್ನು ಗಣನೆಗೆ ತಂದುಕೊಳ್ಳಿರಿ.) 'ಅಡ್ನಾಡಿ' ಶಬ್ದದಲ್ಲಿ ಮಾತ್ರ ನಿಶ್ಚಿತವಾಗಿಯೂ 'ಅಡ್ಡ' ಎಂಬುದಿದೆ. ಬಹಳ ಜನಪ್ರಿಯವಾದ ಪದ! ಅದಕ್ಕೇ ಪುರಂದರದಾಸರ ಒಂದು ಹಾಡಿನಲ್ಲಿ 'ಅತ್ತೆಯೆಂಬೋಳು ಬಲು ಖೋಡಿ, ಮಾವ ಅಡ್ನಾಡಿ' ಎಂಬ ಮಾತು ಬರುತ್ತದೆ.

ಮೂಲಾರ್ಥ ಏನೇ ಇರಲಿ, ಅಡ್ಡ ಹೆಸರುಗಳು ನಮ್ಮ ನಾಮಾಂಕದ ಅವಿಭಾಜ್ಯ ಅಂಗವಾಗಿ ಬಿಟ್ಟಿವೆಯಷ್ಟೆ. ಅವುಗಳ ಅಡ್ನಾಡಿತನವನ್ನು ಗಮನಿಸಲೇಬೇಕು. ಉದಾ: ಊರ ಹೆಸರಿನವು. ಆ ಊರಿನಲ್ಲಿರುವವರು- ಎಂಬ ಮೂಲ ವಿಚಾರವು ಹೊರಟು ಹೋಗಿ ಬಿಡುತ್ತದೆ. ಕೆಲವು ಊರುಗಳ ಹೆಸರುಗಳು ಎಷ್ಟೊಂದು ವಿಚಿತ್ರವಾಗಿರುತ್ತವೆ! ಅಕ್ಕತಂಗೇರ ಹಾಳ, ಕೋಣನತಂಬಿಗಿ, ಸಿಡಿಲಫಟ್ಟ, ಬಿಂಡಿಗನವಲೆ, ಶಿಮುಂಜೆ-ಪರಾರಿ. ಸ್ಥಳ ನಾಮಗಳೊಂದೊಂದಕ್ಕೂ ಇತಿಹಾಸವಿದೆಯಾದ್ದರಿಂದ ಅವು ಹಾಗೇ ಇದ್ದುಕೊಳ್ಳಲಿ. ಆದರೆ ಅದನ್ನೇ ತಮ್ಮ ಅಡ್ಡ ಹೆಸರನ್ನಾಗಿ ಇಟ್ಟುಕೊಳ್ಳುವುದು ಎಷ್ಟರ ಮಟ್ಟಿಗೆ ಸರಿಕಂಡೀತು!

ವೃತ್ತಿ ಮೂಲದವರೆಂದು ಕುಲಕರ್ಣಿ, ಶೆಟ್ಟಿ, ದೇಸಾಯಿ, ಪಾಟೀಲ, ಪಾಟೀಲ-ಕುಲಕರ್ಣಿ, ಭಟ್ಟ ಜೋಶಿ, ಮುಂತಾದವುಗಳೇನೋ ಇವೆ. ಆ ವೃತ್ತಿಯಲ್ಲಿ ಅವರು ಸದ್ಯ ಇರುವುದಿಲ್ಲ ಎಂಬ ಮಾತಂತಿರಲಿ, ಈ ಒಂದೊಂದು ಅಡ್ಡ ಹೆಸರಿನವರು ನೂರಾರು ಜನರಿರುವಾಗ ಇವರಿಗೆ ಸ್ವಂತದ ಅಸ್ಮಿತೆ ಎನ್ನುವುದು ಉಳಿಯುತ್ತದೆಯೇ? ಜೊತೆಗೆ initials ಇದ್ದರೂ, ಆ ವ್ಯಕ್ತಿಯ ವ್ಯಕ್ತಿತ್ವ ನಮ್ಮ ಮುಂದೆ ನಿಲ್ಲುವುದೇ ಇಲ್ಲ. ಒಮ್ಮೆ ಬೇಂದ್ರೆಯವರಲ್ಲಿ ಒಬ್ಬ ಬಂದು ನಾನು "ಸಿ. ಟಿ. ಕುಲಕರ್ಣಿ" ಎಂದು ಹೇಳಿದಾಗ ಅವರಿಗೆ ಗುರುತು ಸಿಗಲಿಲ್ಲ. ಪ್ರತಿಯಾಗಿ ಅವರು "ಯಾವ 'ಸಿಟಿ'ಯ ಕುಲಕರ್ಣಿ? ನೀ ಎಂದಾದರೂ ಆ ವೃತ್ತಿಯನ್ನು ಮಾಡಿದ ಅನುಭವವಿದೆಯೇ? ಅದರ ಅರ್ಥವಾಗುತ್ತದೆಯೇ? 'ಸಿ.ಟಿ.' ಎನ್ನುವ ಅಡ್ನಾಡಿ ಇನಿಶಿಯಲ್ಸ್‌ಗಿಂತ ನಿನ್ನ ಸಿಟಿಯ-, ಎಂದರೆ ಊರಿನ ಹೆಸರನ್ನಾದರೂ ಜೋಡಿಸಿದರೆ ಎಷ್ಟೋ ನೆಟ್ಟಗಾದೀತು" ಎಂದೆಲ್ಲ ಹೇಳುತ್ತ ಹೋದಾಗ ಆತ ತಬ್ಬಿಬ್ಬಾದ .

ತಮ್ಮ ಅಸ್ಮಿತೆಯನ್ನು ಕಳಕೊಂಡ ಈ ಶೆಟ್ಟಿ ಕುಲಕರ್ಣಿಯವರ ಜೊತೆಗೆ ರಾವ್, ಮೂರ್ತಿ, ಆಚಾರ್, ಕುಮಾರ್, ಜೋಶಿ ಎಂಬೀ ಬಗೆಯ ಅಡ್ಡ ಹೆಸರಿನವರನ್ನೂ ಸೇರಿಸಬೇಕು. ಇವು ಬರಿಯ ಉಪಪದಗಳು. ಹೋತಿನ ಮೊಲೆಗಳಂತೆ ನಿಜನಾಮಕ್ಕೆ ಜೋತು

ಬಿದ್ದವುಗಳು. ಇನ್ನು ಮಿಸ್ ರಾವ್, ಕುಮಾರಿ ಮೂರ್ತಿ ಎಂದು ಕರೆಯಿಸಿಕೊಳ್ಳಲಿಚ್ಛಿಸುವ ಹುಡುಗಿಯರನ್ನು ಅರಸಿಕರೆಂದೆ ಎಣಿಸುತ್ತೇನೆ.

ಇತ್ತ ಹಿರೇಮಠರು! ಅವರ ಸಂಖ್ಯೆ ಪ್ರತಿಷ್ಠಿತರ ಶ್ರೇಣಿಯಲ್ಲಿ ದಿನದಿನಕ್ಕೆ ಏರುತ್ತಲಿದೆ. ಚಿಕ್ಕಮಠರೂ ಇದ್ದಾರೆ. ಆದರೆ ಹಿರೇಮಠರ ಮುಂದೆ ಅವರು ತಲೆ ತಗ್ಗಿಸಬೇಕೆನ್ನುವಷ್ಟು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಜೊತೆಗೆ ಕಾಶೀಮಠರಿದ್ದಾರೆ; ಉಳ್ಳಾಗಡ್ಡಿಮಠ, ಕೆಂಡದಮಠ, ನಿರ್ವಾಣಿಮಠರೂ ಕಾಣಿಸಿಕೊಳ್ಳುತ್ತಾರೆ. ಬರೀ 'ಮಠ'ದವರೂ ಸಿಕ್ಕುತ್ತಾರೆ. ನನ್ನ ಒಬ್ಬ ವಕೀಲ ಮಿತ್ರರು ತಮ್ಮ ಮುಖದ ಮೇಲಿನ ನಗೆ ಒಂದಿಷ್ಟೂ ಮಾಸದಷ್ಟು ಪ್ರಸನ್ನವದನರು. ಆದರೆ ಅವರ ಅಡ್ಡ ಹೆಸರು- ಪ್ರಳಯಕಾಲಮಠ!

ಸಾರಸ್ವತರಲ್ಲಿ ಅವೇ ಅವೇ ಅಡ್ಡ ಹೆಸರಿನವರ ಎಂದರೆ ಪೈ, ಕಾಮತ್, ಪ್ರಭುಗಳದ್ದೇ ಪ್ರಾಬಲ್ಯ. ಬಾಳಿಗಾ , ಶಾನಭಾಗರೂ ಕಾಣಿಸಿಕೊಳ್ಳುತ್ತಾರೆ-ತಕ್ಕಮಟ್ಟಿಗೆ . ಅಂದ ಹಾಗೆ ಈ ಶಾನಭಾಗರಿಗೂ ಹಿಂದಿನ ಸೇನಬೋವರ ಶಾನಭೋಗಿಕೆಗೂ ಸಂಬಂಧವಿದೆಯೇ? ಇದ್ದಿರಲಾರದು. ಪರ್ಶಿಯನ್ ಭಾಷೆಯಲ್ಲಿ ಕರವಸೂಲಿ ಮಾಡುವವರನ್ನು ಶಹನಬಾಗ ಎಂದು ಕರೆಯುತ್ತಾರಂತೆ. ಆದ್ದರಿಂದ ಯಾರ ಸಂಬಂಧ ಯಾರಿಗಿದೆಯೆಂಬುದನ್ನು ನೀವೇ ನಿರ್ಧರಿಸಬಹುದು. ಅಪರೂಪಕ್ಕೆ ವಾಗಳೆ, (ಸಂಸ್ಕೃತ ವಲ್ಗುಲದಿಂದ ಬಂದದ್ದು) ಕುಡ್ವರು (ಕುಟಪ= ದುರ್ಗಾಧಿಪತಿ) ಭೆಟ್ಟಿಯಾಗುತ್ತಾರೆ. ಏನಿದ್ದರೂ ಹೆಚ್ಚಿನ ಸಾರಸ್ವತರು -ಪೈ, ಕಾಮತರುಗಳಾಗಿ ಶೆಟ್ಟಿ, ರಾವ್, ಕುಲಕರ್ಣಿ, ಹಿರೇಮಠರ ಹಾದಿಯಲ್ಲೇ ಸಾಗಿ ಬೀಗಿದ್ದಾರೆ. ಥಕ್ಕನೆ ಗುರುತು ಸಿಗಲಾರದ ಅಡ್ಡ ಹೆಸರುಗಳ ಏಕತಾನತೆಯನ್ನು ಹೇಗೂ ಸಹಿಸಬಹುದು. ಆದರೆ ಶ್ರುತಿ-ದುಷ್ಟವಾಗಿರುವುದಕ್ಕೆ ಏನೆನ್ನೋಣ? 'ಧಡ್ಡ'(ಧಃಡ), ಗೊಡ್ಡೆಮ್ಮಿ, ಉಪ್ಪಿನ, ಬ್ಯಾಳಿ, ಮೆಣಸಿನಕಾಯಿ, ಚುರಮುರಿ ಇತ್ಯಾದಿ. ಇನ್ನು ಈ ಕೆಳಗಿನ ಅಡ್ಡ ಹೆಸರುಗಳು ಕೇಳುವವರ, ಅವನ್ನು ಉಚ್ಚರಿಸುವವರ ಪಾಲಿಗೆ ಅಶ್ಲೀಲಮಯವಾಗಿವೆ: ಹಾದರಗೇರಿ, ಎಳಮಲಿ, ಸೂಳೇಭಾವಿ, ದೊಡಕುಂಡಿ ಇಂಥ ಅಡ್ಡ ಹೆಸರುಗಳನ್ನು ಸಂಬಂಧಪಟ್ಟವರು ಯಾವ ಸಂಕೋಚವಿಲ್ಲದೆ ಇಟ್ಟುಕೊಂಡಿರುತ್ತಾರಲ್ಲ?

ಮಹಾರಾಷ್ಟ್ರದವರ ಅಡ್ಡ ಹೆಸರುಗಳು ಎಷ್ಟೋ ವೈವಿಧ್ಯಮಯವಾಗಿದೆ. ಅವುಗಳಲ್ಲಿ 'ಅಡ್ಡಾಡಿ'ಗಳೂ ಇವೆ. ಅಲ್ಲಿ ಅಂಕಿಗಳೂ ಅಡ್ಡ ಹೆಸರುಗಳಾಗಬಹುದು. ಉದಾ.ಗೆ ಸಾಠೆ, ಹಜಾರೆ. ಎರಡೇ ಮಕ್ಕಳಿರುವ ಕುಟುಂಬದ ಅಡ್ಡ ಹೆಸರು 'ಅಷ್ಟಪುತ್ರೆ' ಎಂದಿರುವುದು ವಿಚಿತ್ರವಲ್ಲವೆ. ಪ್ರಾಣಿಗಳ ಹೆಸರಿರುವ ಅಡ್ಡ ಹೆಸರುಗಳು - ವಾಘ, ಢೇಕಣೆ (ತಗಣಿ!), ಮಾದರಿಯವು ಕನ್ನಡದಲ್ಲಿ ಇವೆಯೇ? ಅದರಂತೆ ಅವರಲ್ಲಿ ಸಸ್ಯ ಮೂಲದವೂ ಇವೆ. (ಪಿಂಪಳೆ, ಫುಲೆ). ಕನ್ನಡದಲ್ಲಿ ಇವು ಅಪರೂಪ.

ಮರಾಠೀ ಅಡ್ಡ ಹೆಸರುಗಳ ಕೊನೆಯಲ್ಲಿ ಎರಡು ವೈಶಿಷ್ಟ್ಯಗಳನ್ನು ಗುರುತಿಸಬಹುದು. ಒಂದು, ಊರಿನ ಹೆಸರನ್ನಿಟ್ಟುಕೊಂಡವರು 'ಕರ್' ಎಂದು ಸೇರಿಸಿಕೊಳ್ಳುವುದು. ಇನ್ನೊಂದು ಯಾವುದೇ ಅಡ್ಡ ಹೆಸರನ್ನು ಎಕಾರಾಂತಗೊಳಿಸುವುದು. ಚೌಗುಲೆ, ಲೇಲೆ, ಫಡಕೆ, ಭೋಸಲೆ, ಘೋರ್ಪಡೆ -ಇತ್ಯಾದಿ. ಈ 'ಎ'ಕಾರವು ಬಹುವಚನ ಸೂಚಕವಾಗಿದೆ. ಭೋಸಲಾ ಮನೆತನದವರು ಭೋಸಲೆಯವರು ಎಂದಂತೆ. ಟಾಕವಾಲೆ ಎಂದರೆ ಮಜ್ಜಿಗೆಯವರು! ಹನುಮಂತೆ -ಎಂಬ ಅಡ್ಡ ಹೆಸರಿನಲ್ಲಿ ಅದರ ಬಹುವಚನವನ್ನು ಕಾಣಬೇಕೆ? 'ರಾಣೆ' ರಾಣಿ-ಇದರ ಬಹುವಚನ ಎನ್ನಬೇಕೆ? ಬೇಡ! ಅದು ಪ್ರಾಯಶಃ 'ರಾಣಾ' ಇದರ ಬಹುವಚನ.

ಕರ್ನಾಟಕಕ್ಕೆ ವಿಶಿಷ್ಟವಾದ ಇನ್ನೊಂದು ಬಗೆಯ ಅಡ್ಡ ಹೆಸರುಗಳಿವೆ. ಅವೆಂದರೆ ರಂಗನಗೌಡರ, ದಾಸಪ್ಪನವರ, ತಮ್ಮಣಶಾಸ್ತ್ರಿಯವರ, ಮುಂತಾದವುಗಳು. ಮನೆತನದ ಓರ್ವ ಮುಖ್ಯ ವ್ಯಕ್ತಿಯ ನಿಮಿತ್ತವಾಗಿ ಬಂದವುಗಳು. ಅದೇ ರೀತಿಯಾಗಿ ಇರುವ ದ್ಯಾಮಕ್ಕನವರ, ಸೋಮಕ್ಕನವರ-ಎಂಬವು ನಮ್ಮ ಒಂದು ಕಾಲದ ಮಾತೃಪದ ಪದ್ಧತಿಯ ಕುರುಹಾಗಿ ಉಳಿದಿದೆ. 'ಭೀಮಾ ತಾಯೀ ಮುರಗವ್ವ'- ಎಂಬವು ಸ್ವಾತಂತ್ರ್ಯ ಪೂರ್ವದ ಕಾಲಕ್ಕೆ ಇದ್ದುವು. ಹರಿಜನರ ಶಾಲೆಯಲ್ಲಿ ಹೆಸರು ಹಚ್ಚುವ ರೀತಿ -ಅದಾಗಿದ್ದಿತು. ಆದರೀಗ ಅವನ್ನು ಯಾರೂ ಬಳಸುವುದಿಲ್ಲ. ಈಚೆಗೆ ಪಾಶ್ಚಾತ್ಯ ದೇಶಗಳಲ್ಲಿ ಮದುವೆ ಆಗದೇನೆ ಸಂಸಾರ ಮಾಡಿಕೊಂಡಿರುತ್ತಾರೆ. ಮಗು ಹುಟ್ಟುತ್ತದೆ. ಜನನದ ದಾಖಲೆ ಬರೆಸುವಾಗ ತಂದೆಯ ಹೆಸರೇನೂ ಗೊತ್ತಿರುತ್ತದೆ. ಆದರೆ ಅಧಿಕೃತವಾಗಿ(legally) ಅಲ್ಲ. ಆದ್ದರಿಂದ ತಾಯಿಯ ಹೆಸರನ್ನೆ ಜನ್ಮದಾತೃವಿನ ಜಾಗದಲ್ಲಿ ಹಚ್ಚುತ್ತಾರೆ.

ಈ ಮಾತೃಪದ ಪದ್ಧತಿಯ ಪ್ರಕ್ರಿಯೆ ಮಹಾಭಾರತದ ಪಾತ್ರಗಳ ಹೆಸರುಗಳಲ್ಲಿಯೂ ಕಂಡುಬರುವುದೆಂದು ಬೆಂಗೇರಿ ಹುಚ್ಚರಾಯರು ಒಂದೆಡೆ ಅದರ ವಿವರಣೆ ಕೊಟ್ಟಿದ್ದಾರೆ. ಭೀಷ್ಮನು ಗಾಂಗೇಯನಂತೆ. 'ಶಾಂತನು' ಎಂದೂ ಅವನನ್ನು ಏಕೆ ಕರೆದಿಲ್ಲ? ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನನ್ನು ಕೌಂತೇಯ ಎಂದೇ ಹೆಚ್ಚಾಗಿ ಸಂಬೋಧಿಸಿದ್ದಾನೆ.

ಅದು ದ್ವಾಪರಯುಗದ ಮಾತಾಯಿತು. ಈ ಕಲಿಯುಗದಲ್ಲಿ ಮಹಿಳೆಯರು ಇದ್ದ ಹೆಸರನ್ನೂ ಕಳೆದುಕೊಳ್ಳುತ್ತಿದ್ದಾರೆ. ಅರ್ಥಾತ್ ವಿವಾಹವಾಗಿ ಗಂಡನ ಮನೆ ಸೇರಿದ ಮೇಲೆ ತವರು ಮನೆಯಲ್ಲಿ ೨೦-೨೫ ವರ್ಷಗಳನ್ನು ಎಂದರೆ ಆಯುಷ್ಯದ ಕಾಲುಭಾಗವನ್ನು ಕಳೆದು, ತನ್ನದೇ ಆದ ಅಸ್ಮಿತೆಯನ್ನು ಕಾಯ್ದುಕೊಂಡಿರುವಾಗ, ವಿವಾಹಪೂರ್ವ ಹೆಸರಿನಿಂದ ಅವಳ ವ್ಯಕ್ತಿತ್ವ ನಿಂತಿರುವಾಗ ಅವನ್ನು ಕ್ಷಣಾರ್ಧದಲ್ಲಿ ಬಿಟ್ಟು ಕೊಡಲು ಸ್ತ್ರೀಯರು ಅದ್ಹೇಗೆ ಧಡಪಡಿಸುವರೋ? ತವರು ಮನೆಯನ್ನು ತ್ಯಜಿಸಿದ್ದರೂ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಇರುವಾಗ ಹೆಸರಿನ ಬದಲಾವಣೆ ಸಮಂಜಸವಾಗಿ ಕಂಡೀತೆ? ಈ ವಿಷಯದಲ್ಲಿ ಮರಾಠೀ ಮಹಿಳೆಯರ ದೃಷ್ಟಿ ಅನುಕರಣೀಯವಾಗಿದೆ. ಅವರು ಎರಡೂ ಅಡ್ಡ ಹೆಸರುಗಳನ್ನು

ಉಳಿಸಿಕೊಳ್ಳುತ್ತಾರೆ. ಕುಮಾರಿಯಾಗಿದ್ದ ಅಶ್ವಿನಿ ಭಿಡೆ ಎಂಬ ಸುಪ್ರಸಿದ್ಧ ಗಾಯಕಿ 'ಸೌ'ವತಿ, ಆದ ಮೇಲೆ ಅಶ್ವಿನಿ ಭಿಡೆ- ದೇಶಪಾಂಡೆ ಎಂಬ ಹೆಸರಿನಿಂದ ಸಂಗೀತ ಕಾರ್ಯಕ್ರಮ ನಡೆಸಿಕೊಡುತ್ತಿದ್ದಾರೆ.

ಹೆಸರಿನ ಹಿಂದೆ ಅಂಟಿಸುವ ಉಪಾಧಿಗಳ ಬಗ್ಗೆ ತುಸು ಯೋಚಿಸಿದ್ದೀರಾ? ಹಿಂದಿನ ರಾವಬಹದ್ದೂರ, ರಾವಸಾಹೇಬರು ಈಗ ಇಲ್ಲ. ಹಾಗೆಂದು ಪದ್ಮಭೂಷಣ, ಪದ್ಮಶ್ರೀ ಎಂಬ ಉಪಪದಗಳೂ ಸಲ್ಲ. ಪ್ರಚಲಿತವಿರುವ ಪ್ರೊ. , ಪ್ರಾ, ಡಾ., ಶ್ರೀ, ಶ್ರೀಮತಿ ಕುಮಾರಿಯರ ಕುರಿತು ನಮ್ಮ ಗಮನ ಹರಿಯುವುದೇ ಇಲ್ಲ. ಅರ್ಥಾತ್ ಅವುಗಳಿಗೆ ವಿಶೇಷ ಅರ್ಥವೇ ಇಲ್ಲದಂತೆ ಬಳಸುತ್ತಿದ್ದೇವೆ. ಪ್ರೊಫೆಸರ್ ಎಂಬುದು ಹಿರಿಮೆಯ ಹುದ್ದೆ. ಆದರೇನು, ಉತ್ತರ ಕರ್ನಾಟಕದಲ್ಲಿ ಕಾಲೇಜಿನ ಡೆಮಾನ್‌ಸ್ಟ್ರೇಟರನೂ ಪ್ರೊಫೆಸರನೇ. ಇನ್ನು ಪ್ರಾಂಶುಪಾಲ! ಇದು ಉಡುಪಿಯ ಸಂಸ್ಕೃತ ಪಂಡಿತರ ಸೃಷ್ಟಿ. ಪ್ರಿನ್ಸಿಪಾಲ್ ಹುದ್ದೆಯ ತದ್ಭವವೆಂದು ತಿಳಿಯಬೇಕೆ? ಏನೇ ಆಗಲಿ, ಚೆನ್ನಾಗಿದೆ. ಆದರೆ ಅದನ್ನು ಸಂಕ್ಷಿಪ್ತವಾಗಿ ಹೆಸರಿಗೆ ಅಂಟಿಸುವುದು ಹೇಗೆ? Prin ಬದಲಿಗೆ 'ಪ್ರಾಂಶು' ಎಂದೇ ? ಅದರಂತೆ 'ಡಾ' ಎಂಬುದು ಗೊಂದಲಕ್ಕೀಡು ಮಾಡುತ್ತದೆ. ಯಾತರ ಡಾಕ್ಟರಿಕೆ? ಸಮಾಜದಲ್ಲಿ ಸ್ಟೆಥೋಸ್ಕೋಪಿನ ಡಾಕ್ಟರರಿಗಿರುವಷ್ಟು ಮರ್ಯಾದೆ ಗ್ರಂಥ ವ್ಯಾಸಂಗದಿಂದ ಡಿಗ್ರಿ ಪಡೆದವರಿಗಿಲ್ಲ. ಯಾಕಿರಬೇಕು, ಹೇಳಿರಿ! 'ಕೃತಿಚೌರ್ಯ' ಎಂಬುದನ್ನು ಕೇಳಿದ್ದೀರಿ. ಒಬ್ಬ ಲೇಖಕನಿಂದ , ಅವನ ಹೆಸರು ಹೇಳದೆ ತೆಗೆದುಕೊಂಡು ಬಳಸಿದರೆ ಅದು ಕೃತಿ ಚೌರ್ಯ. ಅಂಥ ನಲ್ವತ್ತು ಕೃತಿಗಳಿಂದ ವಿಷಯವನ್ನು ಹೇಳದೆ ತೆಗೆದುಕೊಂಡು ನಾಲ್ಕಾರು ನೂರು ಪುಟ ತುಂಬಿಸಿದರೆ ಅದಕ್ಕೆ ಪಿಎಚ್.ಡಿ. ಪದವಿ ಸಿಗಬಹುದಂತೆ ಅಂದಾಗ, ಯಾರು ಯಾಕೆ ಅವರಿಗೆ ಮರ್ಯಾದೆ ಕೊಡಬೇಕು? ಇಂಥ ಡಾ. ಗಳು ಕಾಲಿಗೊಂದು ಕೊಸರಿಗೊಂದು ಎಂಬಂತೆ ಈಗೀಗ ಎಲ್ಲೆಡೆಗೆ ಸಿಗುತ್ತಾರೆ. ಇನ್ನು ಕನ್ನಡದಲ್ಲಿ ಪಿಎಚ್.ಡಿ. ಪಡೆದವರಿಗೆ ನನ್ನದೊಂದು ಸೂಚನೆ. ದಯಮಾಡಿ ನಿಮ್ಮ ಪಿಎಚ್.ಡಿ. ವಿಷಯ ಕನ್ನಡ ಇತ್ತೆಂದು ಹೇಳಹೋಗಬೇಡಿರಿ. ಅದರಿಂದ ಇದ್ದ ಮರ್ಯಾದೆಯೂ ಹೋದೀತು! ಕನ್ನಡ ವಿಷಯದಲ್ಲಿ ಪಿಎಚ್. ಡಿ. ಗಿಟ್ಟಿಸುವುದು ಈಗೀಗ ಎಷ್ಟೊಂದು ಹಗುರೆಂಬುದು ಜನಕ್ಕೆ ಚೆನ್ನಾಗಿ ವೇದ್ಯವಾಗಿದೆ.

ಹೆಂಗಸರ ಹೆಸರಿನ ಉಪಾಧಿಗಳನ್ನು ತುಸು ನೋಡೋಣ. ಶೇಕ್ಸ್‌ಪಿಯರ್ ಹೇಳಿರುವ Seven stages of man ಎಂಬ ರೀತಿಯಲ್ಲಿ, ನಾವು ಆಧುನಿಕ ಸ್ತ್ರೀ ಜೀವನದಲ್ಲಿ ಐದು ಘಟ್ಟಗಳನ್ನು ಗುರುತಿಸಬಲ್ಲೆವು. ಕಲಿಯುತ್ತಿರುವ ಕುಮಾರಿಯರು, ನೌಕರಿ ಮಾಡುವ ವಿವಾಹಪೂರ್ವ ತರುಣಿಯರು, ಮದುವೆಯಾಗಿ ಗಂಡನ ಮೇಲೆ ಯಜಮಾನಿಕೆ ನಡೆಸುವವರು, ಗಂಡನನ್ನು ಕಳೆದುಕೊಂಡವರು, ಮತ್ತು ಮೊಮ್ಮಕ್ಕಳನ್ನಾಡಿಸುವ ಮುದುಕಿಯರು - ಈ ಐದು ಅವಸ್ಥಾಂತರಗಳಿಗೆ ತಕ್ಕಂತೆ

ಉಪಾಧಿಗಳಿದ್ದಿದ್ದರೆ ನೆಟ್ಟಗಿತ್ತು. ಮದುವೆಯಾದ ಮರಾಠೀ ಗೃಹಿಣಿಯರು 'ಸೌ' ಎಂದು ಹೆಮ್ಮೆಯಿಂದ ಸೇರಿಸಿಕೊಳ್ಳುತ್ತಾರೆ. ವಿಧವೆಯರಿಗೆ ಈ ಹಿಂದೆ ಗಂ. ಭಾ. (ಗಂಗಾ ಭಾಗೀರಥಿ) ಎಂಬ ಉಪಾಧಿ ಇದ್ದಿತು. ಕುಂಕುಮ, ಮಂಗಳ ಸೂತ್ರಗಳನ್ನು ಕಳಚಿಬಿಡುವ ತಾವು ವಿಧವೆಯರೆಂದು ತೋರಿಸಿಕೊಳ್ಳಲಿಕ್ಕೆ ಈಗಿನವರೂ ಸಂಕೋಚ ಮಾಡಿಕೊಳ್ಳುವುದಿಲ್ಲ. ಅಂದಾಗ ಇಂಥವರಿಗಾಗಿ ಬೇರೊಂದು ಸೂಕ್ತವಾದ ಉಪಾಧಿಯನ್ನು ಕಂಡು ಹಿಡಿಯಬಾರದೇಕೆ?

'ಕುಮಾರಿ' ಎಂಬ ಪದ ಮಾತ್ರ ನನಗೆ ಬಗೆಹರಿಯದ ಸಮಸ್ಯೆಯಾಗಿದೆ. ನಾನು ಮುಂಬಯಿಯಲ್ಲಿ ಗ್ರಂಥಪಾಲನಾಗಿ ಕೆಲಸ ಮಾಡುತ್ತಿದ್ದಾಗ ವಾರ್ಷಿಕ ವರದಿ ಬರೆಯಬೇಕಾಗಿ ಬಂದಿತು. ಅನುಬಂಧವಾಗಿ, ಲೈಬ್ರರಿಯಲ್ಲಿ ಕೆಲಸ ಮಾಡುವ, ಗಂಡಸು ಹೆಂಗಸರ ಯಾದಿ ಕೊಟ್ಟಿದ್ದೆ. ಒಬ್ಬಾಕೆ, ಬಂದು ಹೇಳಿದಳು:

"ಸಾರ್, ನನ್ನ ಹೆಸರಿನ ಹಿಂದೆ 'Kumari' ಎಂಬ ಉಪಾಧಿಯನ್ನು ಸೇರಿಸಿದ್ದೀರಿ - ನನ್ನ ಮದುವೆ ಆಗಿಲ್ಲ ಎಂಬ ಕಾರಣದಿಂದ. ಸರಿಯೇ. ಆದರೆ ಸ್ಟಾಫಿನವರಲ್ಲಿ ಒಬ್ಬಿಬ್ಬ ಪುರುಷರದೂ ಮದುವೆ ಆಗಿಲ್ಲ. ಅವರ ಹೆಸರಿನ ಹಿಂದೆ 'Kumar' ಎಂಬ ಪದವನ್ನೇಕೆ ಸೇರಿಸಲಿಲ್ಲ?"

ಅವಳ ತರ್ಕ ನ್ಯಾಯವೆಂಬುದಾಗಿ ನನಗೆ ಕಂಡಿತು. ಕೆಲವು ವರ್ಷಗಳಾದ ಮೇಲೆ ನಾನು ಮಂಗಳೂರು ವಿಶ್ವವಿದ್ಯಾನಿಲಯವನ್ನು ಸೇರಿದೆ. ಒಂದು ವರ್ಷ ಎಂ.ಎ. ದಲ್ಲಿ ರ್‍ಯಾಂಕ್ ವಿಜೇತರೆಂದು ಮೂವರ ಹೆಸರನ್ನು ಪತ್ರಿಕೆಗಳಿಗೆ ಕೊಡಬೇಕಾಗಿ ಬಂದಿತ್ತು. ಅದರಲ್ಲಿ ಇಬ್ಬರು ಗಂಡಸರು, ಒಬ್ಬಳು ಕನ್ಯೆ. ಅವರುಗಳ ಹೆಸರಿನ ಹಿಂದೆ 'ಶ್ರೀ' ಮತ್ತು 'ಶ್ರೀಮತಿ' ಎಂಬ ಉಪಪದಗಳನ್ನು ಸೇರಿಸಿದ್ದೆ. ಅದು ಪ್ರಕಟವಾದ ಮರುದಿನ ಆ ಕನ್ಯೆಯ ತಂದೆ ಬಂದು ನನ್ನನ್ನು ತರಾಟೆಗೆ ತೆಗೆದುಕೊಂಡರು. "ಇದೇನ್ರೀ? ನೀವು ನನ್ನ ಮಗಳ ಹೆಸರಿಗೆ 'ಶ್ರೀಮತಿ' ಸೇರಿಸಿದ್ದೀರಿ. ಅವಳ ಮದುವೆಯಾಗಿದೆ ಎಂದು ಜನ ತಿಳಿಯುವಂತೆ ಮಾಡಿಬಿಟ್ಟಿರಿ. ಅವಳಿಗಾಗಿ ವರ ಶೋಧನೆಯಲ್ಲಿದ್ದ ನಮಗೆ ಇದರಿಂದ ತೊಡಕಾಗ್ತದೆ!"

ಕೊನೆಯದಾಗಿ ತೊಟ್ಟಿಲ ಹೆಸರು, ಅಡ್ಡ ಹೆಸರು ಇವುಗಳಲ್ಲಿ ಯಾವುದಕ್ಕೆ ಮಹತ್ವ ಕೊಡಬೇಕು? ಸಿದ್ಧಲಿಂಗ ಪಟ್ಟಣಶೆಟ್ಟಿ, ಜಿ. ಎಸ್. ಸಿದ್ಧಲಿಂಗಯ್ಯ-ಇವುಗಳಲ್ಲಿ ಯಾವ ಪ್ರಕಾರದ್ದು ಹೆಚ್ಚು ಸೂಕ್ತವಾದದ್ದು? ಈ ಕುರಿತು ಯಾರೂ ತಮ್ಮ ಕ್ರಮವನ್ನು ಬಿಟ್ಟು ಕೊಡುವವರಲ್ಲ. North is north; South is south ! ಆದರೆ ಪಶ್ಚಿಮದಲ್ಲಿ ಎಂದರೆ ಕರಾವಳಿಯಲ್ಲಿ ಇರುವವರು? ಇತರ ಬಾಬತಿನಲ್ಲಿಯಂತೆ ದ. ಕ. ಜಿಲ್ಲೆಯವರು

ಇಲ್ಲಿಯೂ ತಮ್ಮ ಅನುಕೂಲ ಸಿಂಧುತ್ವವನ್ನು ಪ್ರಕಟಪಡಿಸಿದ್ದಾರೆ. ಆ ಜಿಲ್ಲೆಯಲ್ಲಿ ಮೈಸೂರ ಕಡೆಯವರ ರೀತಿಯ ಕೆ.ಎಸ್. ಹರಿದಾಸಭಟ್ಟರೂ ಇದ್ದಾರೆ. ಉತ್ತರ ಕರ್ನಾಟಕದ ರೀತಿಯ ರಾಮಚಂದ್ರ ಉಚ್ಚಿಲರೂ ಇದ್ದಾರೆ. ಒಂದೇ ಸೂರಿನಡಿ ಹುಟ್ಟಿ ಬೆಳೆದ ಅಣ್ಣ ತಮ್ಮರ ಹೆಸರಿನ ರೀತಿ ಒಂದೇಯಾಗಿರಬೇಕಲ್ಲವೆ? ಯಕ್ಷಗಾನ ಕಲಾವಿದ ಕುಂಬಳೆ ಸುಂದರರಾಯರ ಹೆಸರನ್ನು ನೀವು ಬಲ್ಲಿರಿ. ಕನ್ನಡ ಪ್ರಾಧ್ಯಾಪಕರಾದ ಅವರ ಖಾಸ ತಮ್ಮನದು? ಡಾ. ನಾ. ದಾಮೋದರ ಶೆಟ್ಟಿ.

ಹೆಸರುಗಳ ವಿಷಯವಾಗಿ ನಾವು ಎಷ್ಟೊಂದು ಅಡ್ನಾಡಿತನವನ್ನು ತೋರುತ್ತಿದ್ದೇವೆ! ಅವುಗಳ ಅನ್ವರ್ಥಕತೆಯತ್ತ ಕಿಂಚಿತ್ತಾದರೂ ಗಮನ ಕೊಡುತ್ತಿಲ್ಲ. ಅಸಂಬದ್ಧತೆಯೇ ಅವುಗಳ ಮುಖ್ಯ ಲಕ್ಷಣ. ಈ ಹಿನ್ನೆಲೆಯಲ್ಲಿ ನಿಮ್ಮ ಹೆಸರು ಮತ್ತು ಅಡ್ಡ ಹೆಸರು ಎಷ್ಟರ ಮಟ್ಟಿಗೆ ಅಡ್ನಾಡಿ ಇವೆ?

***

೬. ಹೆಸರನ್ನೇ ಮರೆತಾಗ !

ಮರೆತು ಹೋಗುವುದು; ನೆನಪಿಟ್ಟುಕೊಳ್ಳುವುದು , ಇವು ಒಂದೇ ನಾಣ್ಯದ ಎರಡು ಬದಿಗಳು. ನೆನಪಿದ್ದದ್ದು ಎಷ್ಟೋ ಸಲ ಮರೆತುಹೋಗುತ್ತದೆ. ಮರೆತದ್ದು ಥಕ್ಕನೆ ನೆನಪಿಗೆ ಬರುತ್ತದೆ. ಆದರೆ ಗುರುತು ಇದ್ದವರ ಹೆಸರಿನ ವಿಷಯದಲ್ಲಿ ಮರೆಯುವ ಪ್ರಮೇಯವು ಹೆಚ್ಚು ಕಷ್ಟಕ್ಕೆ ಸಿಲುಕಿಸುತ್ತದೆ. ಮುದುಕರಿಗಂತೂ ಮರೆವು ಎನ್ನುವುದು ಒಂದು ಸಹಜ ಪ್ರವೃತ್ತಿ. ಆದರೆ ಹೆಸರುಗಳ ಬಾಬತಿನಲ್ಲಿ ಮಧ್ಯವಯದವರೂ ಯಥೇಚ್ಛವಾಗಿ ಮರೆಯುತ್ತಾರಲ್ಲ!

ಒಮ್ಮೆ ನನ್ನೊಬ್ಬ ಮಿತ್ರನ ಬಳಿಗೆ ಹೋಗಿದ್ದೆ. ಆಗ ಅಲ್ಲಿ ಇನ್ನಿಬ್ಬರು ಬಂದು ಮಾತಿನಲ್ಲಿ ತೊಡಗಿದ್ದರು. ನಾನೂ ಸೇರಿಕೊಂಡೆ. ತುಸು ತಡೆದಾದರೂ ನನ್ನ ಗೆಳೆಯ ಅವರಿಗೆ ನನ್ನ ಪರಿಚಯ ಮಾಡಿಕೊಡಬೇಕೊ ಬೇಡವೋ?ಕೊನೆಗೆ ನಾನೇ ಅವರಿಗೆ ನನ್ನ ಹೆಸರನ್ನು ಹೇಳಿದೆ. ಆಗ ಎಚ್ಚೆತ್ತವರಂತೆ ನನ್ನ ಗೆಳೆಯ 'ಅರೆ, ನಿಮ್ಮಗಳ ಪರಿಚಯ ಇದೆಯೆಂದು ತಿಳಿದಿದ್ದೆ' ಎನ್ನುತ್ತ ನನ್ನ ಬಗ್ಗೆ ಇನ್ನಷ್ಟು ಮಾಹಿತಿ ಕೊಟ್ಟ. ಅದರಂತೆ, ಅವರ ಬಗ್ಗೆಯೂ. ಆದರೆ ಆಗೂ ಅವರ ಹೆಸರನ್ನ ಹೇಳಿರಲಿಲ್ಲ. ಅವರು ಹೊರಟು ಹೋದ ಮೇಲೆ "ಹೀಗೇಕೆ ಮಾಡಿದಿ?" ಎಂದು ಕೇಳಿದೆ. ನಿಜ ಸಂಗತಿಯೆಂದರೆ ಅವನಿಗೆ ಅವರಲ್ಲಿ ಒಬ್ಬನ ಹೆಸರು ಮಾತ್ರ ನೆನಪಿನಲ್ಲಿ ಇದ್ದಿತಂತೆ. "ಇಷ್ಟು ಪರಿಚಯವಿದ್ದರೂ ಹೆಸರನ್ನು ಮರೆತನಲ್ಲ - ಎಂದು ಅವರು ಅನ್ನುವ ಹಾಗೆ ಮಾಡಿದಿ" ಎಂದು ನನ್ನನ್ನು ಬೈದ.

ಮುದುಕರು ಮಾತ್ರ ತಮ್ಮ ವಯೋಭಾರದಿಂದ ಹೆಸರಿನ ವಿಸ್ಮೃತಿಯನ್ನು ನಿರ್ಭಿಡೆಯಿಂದ ಸಾರಬಲ್ಲರು. ಒಬ್ಬರಂತೂ "ಮರೆಯುವುದು ನಮ್ಮ ಜನ್ಮ ಸಿದ್ಧಹಕ್ಕು" ಎಂದು ಹೆಮ್ಮೆಪಟ್ಟದ್ದುಂಟು. ಅನುದ್ಯೋಗಿಗಳಾಗಿ ಮನೆ ಹಿಡಿದು ಕೂತ ಅವರು ಏನನ್ನು ಮರೆತರೂ ನಡೆಯುತ್ತದೆ. ಆದರೆ ಅದರಿಂದ ಅವರಿಗೆ ಹಾನಿ.

ಕೆಲವು ವರ್ಷಗಳ ಹಿಂದೆ ನಿವೃತ್ತರಾಗಿದ್ದ ರಂಗರಾಯರಿಗೆ ಆರು ಜನ ಮಕ್ಕಳು(೩+೩) ಕೆ. ಇ. ಬಿ. ಯಲ್ಲಿ ಅವರು ನೌಕರಿಯಲ್ಲಿ ಇದ್ದಾಗ ಇಡೀ ಹಗಲು + ರಾತ್ರಿಯ ಆರಂಭದ ಒಂದೆರಡು ತಾಸು ಕಚೇರಿಯಲ್ಲಿಯೇ ಇರುತ್ತಿದ್ದ ಅವರು ಅನೇಕಾನೇಕ ಗ್ರಾಹಕರ

ಹೆಸರುಗಳನ್ನು ಈಗಲೂ ನೆನಪಿಟ್ಟು ಹೇಳಬಲ್ಲರು. ಆದರೆ ತಮ್ಮ ಮಕ್ಕಳ ಹೆಸರುಗಳನ್ನು ನೆನಪಿನಿಂದ ಹೇಳಲಾರರು. "ಗೋಪೂ, ಅಲ್ಲಲ್ಲ ರಾಮೂ, I mean Raju ರಾಜೂ" ಎಂದೆಲ್ಲ ಕರೆಯತೊಡಗಿದಾಗ ಮಕ್ಕಳು ಸಿಡಿಮಿಡಿಗೊಳ್ಳುತ್ತ ಬರುತ್ತಾರೆ. ಒಮ್ಮೊಮ್ಮೆ "ಅವ ಇಲ್ಲ" ಎಂದು ಹೇಳಿ ಜಾರಿಕೊಳ್ಳುತ್ತಾರೆ.

ಕೆ.ಇ.ಬಿ.ಯ ರಂಗರಾಯರು ಹೇಗೂ ವಯಸ್ಸಾದವರು. ಅವರನ್ನು ಬಿಡೋಣ. ನನ್ನ ಅಕ್ಕನ ಗಂಡನ ಚಿಕ್ಕಪ್ಪನ ಮಗಳ ಮಗನಾದ ಪ್ರಕಾಶ್ ನಾಲ್ವತ್ತರ ಒಳಹೊರಗಿನವ. ಅವನಿಗೆ ಒಂದರ ಮೇಲೊಂದು ಮೂರು ಹೆಣ್ಣುಗಳು ಹುಟ್ಟಿದವು. ಧೀಮತಿ, ಶ್ರೀಮತಿ, ವಸುಮತಿ - ಈ ಅನುಕ್ರಮದಲ್ಲಿ ಅವರ ಹೆಸರುಗಳು. ಮೂರು ಮಕ್ಕಳು ಸಾಕಲ್ಲ! ಅಪರೇಶನ್ ಮಾಡಿಸಿಕೊಳ್ಳಬೇಕು. ಆದರೆ ಗಂಡು ಮಗು ಹುಟ್ಟದೇ ಅದು ಸಾಧ್ಯವಿಲ್ಲ ಎಂದಳಾ ಸಾಧ್ವೀಮಣಿ. ನಾಲ್ಕನೆಯದೇನೊ ಅವತರಿಸಿತು. ಆದರೆ ಮತ್ತೆ ಹೆಣ್ಣು! ಇಟ್ಟ ಹೆಸರು 'ಚಂದ್ರಮತಿ'. ಗಂಡು ಸಂತಾನದ ತನ್ನ ಹಂಬಲವನ್ನು ಮುಂದಿನ ಜನ್ಮಕ್ಕೆ carry forward ಮಾಡುವುದಕ್ಕೆ ಅವಳೇನೊ ಸಿದ್ಧಳಿದ್ದಳು. ಆದರೆ ಪ್ರಕಾಶನಿಗೆ 'ಪಂಚಕನ್ಯಾಸ್ಮರೇನ್ನಿತ್ಯಂ' ಎಂಬುದನ್ನು ಸಾಧಿಸಿ ತೋರಬೇಕೆಂದು ಹಟ ಹೊಕ್ಕಿತು. ಅವಳು ಯಥಾಪ್ರಕಾರ ಗರ್ಭಿಣಿ. ಮೊನ್ನೆಯವರೆಗಂತೂ. 'ಮತಿ' ಪ್ರಿಯನಾದ ಪ್ರಕಾಶ ಅದಕ್ಕೆ 'ಬಾಸಮತಿ' ಎಂದು ಹೆಸರಿಡುವುದಾಗಿ ನುಡಿದಿದ್ದ! ಅದೇನೆ ಇರಲಿ, ಈಗಿದ್ದ ನಾಲ್ವರ ಹೆಸರನ್ನು ನೆನಪಿಟ್ಟುಕೊಳ್ಳುವುದು ಅವನಿಗೆ ಕಷ್ಟಕ್ಕಿಟ್ಟಿದೆಯಂತೆ. ಯಾವುದೊ ಕೆಲಸಕ್ಕೆಂದು ಐನೆಯ ಕ್ಲಾಸಿನಲ್ಲಿರುವವಳನ್ನು ಕರೆಯಲೆಂದಾಗ ಎಸ್.ಎಸ್.ಎಲ್. ಸಿ. ಯಲ್ಲಿ ಇದ್ದವಳು ವಟಗುಟ್ಟುತ್ತ ಬರುತ್ತಾಳಂತೆ!

ನಮ್ಮ 'ಅಪರಂಜಿ'ಯು ಹೇಳಿದ ಒಂದು ಘಟನೆ ಇದು. ಅಮೆರಿಕೆಯಲ್ಲಿದ್ದ ಓರ್ವ ಮೊಮ್ಮಗಳು ತನ್ನ ಅಜ್ಜ ಅಜ್ಜಿಯರ ಊರಾದ ತೀರ್ಥಹಳ್ಳಿಗೆ, ಕೆಲ ದಿನಗಳ ಮಟ್ಟಿಗೆ ಬಂದಳು. ಹೀಗೇ ಮಾತಾಡುತ್ತಾ ಕುಳಿತಾಗ ಅಜ್ಜನು ಅಡುಗೆಯ ಮನೆಯಲ್ಲಿದ್ದ ಹೆಂಡತಿಗೆ ಕೂಗಿ ಹೇಳಿದ:

"ಡಾರ್ಲಿಂಗ್, ಬಚ್ಚಲು ಮನೆಯಲ್ಲಿಯೊ, ಅಡುಗೆ ಮನೆಯಲ್ಲಿಯೊ ನನ್ನ ಕನ್ನಡಕ ಮರೆತಿದ್ದೇನೆ. ಸ್ವಲ್ಪ ಹುಡುಕುತ್ತೀಯ, ಪ್ಲೀಸ್".

"How romantic you are, Grandpa!" ಎಂದು ಮೊಮ್ಮಗಳು ನುಡಿದಳು. ಆತ ಹೇಳಿದ: "ಮಗೂ, ನಿಜ ಹೇಳಬೇಕಂದ್ರೆ ಅವಳ ಹೆಸರು ಫಕ್ಕನೆ ನೆನಪಿಗೆ ಬರೋದಿಲ್ಲ. ಆಗೆಲ್ಲಾ ಈ ಡಾರ್ಲಿಂಗ್ ಸಂಬೋಧನೆ!"

ಮರೆವು ಗಂಡಸರಿಗೇನೆ ಹೆಚ್ಚು ಇರ್‍ತದೆ ಎನ್ನಬಹುದೆ? ಇರಬಹುದು. ಆದರೆ

ಹೆಂಗಸರೂ ಮರೆಗುಳಿಯಾಗಿದ್ದ ಒಂದು ಸಂದರ್ಭ ನೆನಪಿಗೆ ಬರ್ತದೆ: ಮೊನ್ನೆ ಮೊನ್ನೆ ಪರಿಚಯವಾದ ಒಬ್ಬರ ಮಗನ ಮದುವೆಗೆ ಹೋಗಿದ್ದೆ. ಸಪ್ತಪದಿ ಇತ್ಯಾದಿ ಮುಗಿದ ಮೇಲೆ ಆರತಿ ತಟ್ಟೆ ಹಿಡಿದುಕೊಂಡು ಇಬ್ಬರು ಸುವಾಸಿನಿಯರು ವಧೂ-ವರರ ಮುಂದೆ ನಿಂತರು. ಅವರಲ್ಲೊಬ್ಬಳು ಮುದಿ ಐದೆ. ಒಗಟು ಹಾಕಿ ಗಂಡನ ಹೆಸರು ಹೇಳಬೇಕೆಂದು, ವರ ಮಹಾಶಯ ಆರತಿ ತಟ್ಟೆಯನ್ನು ಹಿಡಿದ. ಮುದುಕಿ ಹೇಳಲೇ ಒಲ್ಲಳು. ಮತ್ತೆ ಮತ್ತೆ ಕೇಳುವುದಾಯಿತು. ವರನಂತೂ ತಟ್ಟೆಯ ಹಿಡಿತವನ್ನು ಬಿಗಿ ಮಾಡಿದ. ಕೊನೆಗೆ ಪುರೋಹಿತರು "ಆಯ್ತು. ಗಂಡನ ಹೆಸರಾದರೂ ಹೇಳಿಬಿಡಿಯಮ್ಮಾ" ಎಂದರು. ಆಗೂ ಮುದುಕಿಯ ನಕಾರ! ಆಗ ಅಲ್ಲಿಯೆ ನಿಂತಿದ್ದ ಅವಳ ಯಜಮಾನರು "ಲೇ, ನನ್ನ ಹೆಸರು ಬಾಲಸುಬ್ರಹ್ಮಣ್ಯ. ಹೇಳಿಬಿಡು, ಅವರಿಗೆ" ಎಂದರು. ಅನಂತರ ನಮ್ಮೆಡೆ ತಿರುಗಿ "ಅವಳು ಯಾವಾಗಲೂ ನನ್ನನ್ನು 'ಇವರೇ' ಎಂದು ಕರೆದು ಕರೆದು ರೂಢಿ. ಗಂಡನ ಹೆಸರು ಮರೆತುಹೋಗಿದೆ" ಎಂದಾಗ ನಾವೆಲ್ಲ ಮನದಣಿ ನಕ್ಕೆವು. ಅವಳೋ ಗಂಡನೆಡೆಗೆ ತನ್ನ ಕಡುಕೋಪದ ಕಟಾಕ್ಷವನ್ನು ಬೀರಿದಳು. ಮನೆಗೆ ಹೋದ ಮೇಲೆ ಗಂಡನಿಗೆ ತಕ್ಕ ಮಂಗಳಾರತಿ ಮಾಡಿರಲೂ ಸಾಕು.

ಇನ್ನು ನನ್ನ ಮರೆವಿನ ಬಗ್ಗೆ ಹೇಳುವುದಾದರೆ, ನಾನೇನೊ 'ಸೀನಿಯರ್ ಸಿಟಿಝುನ್' ಇದ್ದೇನೆ; ಮುದುಕನಾಗಿಲ್ಲ. ನನ್ನ ನೆನಪಿನ ಶಕ್ತಿ ಚೆನ್ನಾಗಿದೆ. ನಾನು ಓದಿ ತಿಳಿದಿದ್ದ ಇತಿಹಾಸದ ಯಾವುದೇ ಇಸವಿಯನ್ನು ಫಟಾಫಟ್ ಹೇಳಬಲ್ಲೆ. ಪ್ಲಾಸಿ ಯುದ್ಧ ಯಾವಾಗ ಆಯಿತು ಹೇಳಲೆ? ಪಂಪನು ಹುಟ್ಟಿದ ಇಸವಿ ಬೇಕೆ? ಆದರೇನಂತೆ . ವ್ಯಕ್ತಿಗಳ ಹೆಸರುಗಳು ಮಾತ್ರ ನೆನಪಿನಂಗಳದಲ್ಲಿ ನಿಲ್ಲುವುದೇ ಇಲ್ಲ.

ಒಮ್ಮೆ ನನ್ನ ಮನೆಗೆ ಒಬ್ಬರು 'ಜೂನಿಯರ್ ಸಿಟಿಝುನ್'ಬಂದರು.

"ನಮಸ್ಕಾರ್ರೀ"

"ನಮಸ್ಕಾರ. ಆದರೆ . . "

"ಯಾಕ ಗುರುತು ಹತ್ತಲಿಲ್ಲೇನು?"

ಸ್ವಲ್ಪ ಸ್ವಲ್ಪ ಹತ್ತಿತು. ಆದರೆ ಹೆಸರು . . "

"ನಾನ್ರೀ ಕುಲಕರ್ಣಿ. ತುಳಪುಳೆ ಅವರ ಮನೆಯಲ್ಲಿ ಭೆಟ್ಟಿಯಾಗಿದ್ದೆವು. ಅವತ್ತು ಜನವರಿ ೨೬ ಇತ್ತು. ನಮ್ಮ ತಂದೆಯ ಪರಿಚಯ ಇದೆ ಅಂತ ಹೇಳಿದ್ದಿರಿ. ಇಷ್ಟೇ ಅಲ್ಲ... "

ಅಷ್ಟೇ ಅಲ್ಲದಿದ್ದರೂ, ತನ್ನ ಹೆಸರನ್ನು ಕುಲಕರ್ಣಿ ಅಂತ ಹೇಳಿದ್ದರೂ, ಆತ ಯಾರೆಂಬುದರ ಬೋಧೆಯಾಗಲಿಲ್ಲ. ಈ ಕುಲಕರ್ಣಿಗಳು, ರಾವ್‌ಗಳು, ಶೆಟ್ಟಿಗಳು ಹಜಾರೋ ಮಂದಿ. ಅವರನ್ನು ನಿಶ್ಚಿತವಾಗಿ identify ಮಾಡೋದು ಯಾರಿಗೂ ಕಷ್ಟದ್ದೇ.

ಬಂದಿದ್ದ ಕುಲಕರ್ಣಿಯವರಿಂದ ನನಗೆ ಆಗಬೇಕಾದ್ದೇನೂ ಇರಲಿಲ್ಲ. ಆದ್ದರಿಂದ

'ಮರೆತಿದ್ದೇನೆ" ಎಂದು ಸ್ಪಷ್ಟವಾಗಿ ಹೇಳಿದೆ. ಹೀಗೆ ಎಲ್ಲ ಸಂದರ್ಭಗಳಲ್ಲಿಯೂ ಹೇಳಲಾಗುವುದಿಲ್ಲ. ಪರಸ್ಪರ ಸಂಬಂಧ ತಕ್ಕಮಟ್ಟಿಗೆ ಚೆನ್ನಾಗಿ ಇದ್ದಾಗ ಹಾಗೆ ಹೇಳಿದರೆ ಆ ವ್ಯಕ್ತಿ ತಕ್ಷಣ ತಪ್ಪು ತಿಳಿಯುತ್ತಾನೆ. 'ನಾನು ಎಷ್ಟೊಂದು ಹಚ್ಚಿಕೊಂಡಿದ್ದೇನೆ. ಈತನಿಗೆ ನನ್ನ ಹೆಸರು ನೆನಪಿಡದಷ್ಟು ಅನಾಸ್ಥೆ, ಅಸಡ್ಡೆ!' ಎಂದು ಅಂದುಕೊಳ್ಳುವನು. ನಿಮಗೂ ಇಂಥ ಪ್ರಸಂಗಗಳು ಬಂದು ಹೋಗಿರಲು ಸಾಕು.

ಒಮ್ಮೊಮ್ಮೆ ಹೆಸರಿನ initials ಮರೆತರೂ ಅಪಾರ್ಥವಾಗುತ್ತದೆ. ಕೆಲವು ವರ್ಷಗಳ ಹಿಂದೆ ನಾನು ವಿದೇಶಕ್ಕೆ ಹೊರಟು ನಿಂತಾಗ ಇನ್ನಂಜೆಯಲ್ಲಿ ಇದ್ದ ಶೆಟ್ಟಿ ಅನ್ನುವವರು (ಗಲ್ಫ್‌ನಲ್ಲಿ ದುಡ್ಡು ಮಾಡಿದವರು) ಸಾಲ ಕೊಡುತ್ತೇನೆಂದು ಹಿಂದೊಮ್ಮೆ ಹೇಳಿದ್ದರು. ಹೊರಡುವ ದಿನಕ್ಕೆ ಸಾಕಷ್ಟು ಮುಂಚೆ ಅವರಿಗೆ ಬರೆದೆ. ಉತ್ತರ ಬರಲೇ ಇಲ್ಲ. ಸರಿಯಾದ ವಿಳಾಸಕ್ಕೆ ಪತ್ರ ಹಾಕಿದ್ದೆ. ಆ ಹಣದ ಮೇಲೆಯೇ ಭರವಸೆ ಇಟ್ಟದ್ದರಿಂದ ಇನ್ನಂಜೆಯ ತನಕ ಹೋಗಲೇಬೇಕಾಯಿತು. ಹೋದೆ. ಹಣಕೊಟ್ಟರು. ಹೋಗುವಾಗ ಹೇಳಿದರು: "ನನ್ನ ಪೂರ್ಣ ಹೆಸರು ಕೆ. ವಸಂತ ಶೆಟ್ಟಿ ಅಂತ. ವಿಳಾಸದಲ್ಲಿ ಬರಿ "ಕೆ. ಶೆಟ್ಟಿ ಅಂತ ಬರೆದಿದ್ದೀರಿ. ತುಂಬಾ ಜನ ಶೆಟ್ಟಿ ಹೆಸರಿನವರು ಇದ್ದಾರೆ, ಸಾಹೇಬರೇ" ಅವರ ದನಿಯಲ್ಲಿಯ ಆ ಕೊಂಕನ್ನು ನಾನು ಇಂದಿಗೂ ಮರೆತಿಲ್ಲ.

ಈ ರೀತಿಯ ಅವಮಾನಕ್ಕಿಂತಲೂ ಬೇರೊಂದು ಅಂಶ ನನ್ನನ್ನು ಸಂಕಟಪಡಿಸಿದೆ. 'ಹೆಸರು ಮರೆತಿದೆ'ಎಂದು ಯಾರಿಗೇ ಆಗಲಿ ಹೇಳುವ ಪರಿಸ್ಥಿತಿ ಇಲ್ಲದಾಗ, ಅದರ ನೆನಪು ಮಾಡಿಕೊಳ್ಳುವುದಕ್ಕೆ ಒದ್ದಾಡುತ್ತೇನೆ. ಅದರ ಹೆಸರಿನ ಹುಡುಕಾಟದಲ್ಲಿ ನಾನು ಎಷ್ಟೆಷ್ಟು ಒದ್ದಾಡುತ್ತೇನೆಯೊ ಅಷ್ಟಷ್ಟು ಅದು ನುಣುಚಿಕೊಳ್ಳುತ್ತದೆ.

ಪರಿಚಯ ಆಗಿದ್ದರೂ ಸಂಬಂಧಪಟ್ಟವರ ಹೆಸರು ಏಕೆ ನೆನಪಾಗುವುದಿಲ್ಲ? ಆ ಮಟ್ಟದಲ್ಲಿ ನನ್ನ ಅವರ ಸಂಬಂಧ -ಬಂದಿರುವುದಿಲ್ಲ ಎಂದು ಹೇಳಿ ಪಾರಾಗಲು ಇಚ್ಛಿಸುವುದಿಲ್ಲ. ಆದರೆ ಅನೇಕರ ಹೆಸರುಗಳು ತೀರಾ ಸಾದಾ ಆಗಿ, ಸವಕಲು ನಾಣ್ಯದಂತೆ ಇರುತ್ತವೆ. ರಾಮಚಂದ್ರ, ಶಂಕರ, ಕಮಲಾ, ಶಿವಣ್ಣ, ಜಾನ್, ರಾಜೂ, ಇಂಥವನ್ನು ನೆನಪಿನಲ್ಲಿ ನಿಲ್ಲಿಸಿಕೊಳ್ಳುವುದು ಹೇಗೆ ಸಾಧ್ಯ? ಹೂಂ. ಸಾಧ್ಯ! ಒಂದೋ ಅವರೊಡನೆ ಹಣಾಹಣಿ ಜಗಳಾಡಿರಬೇಕು. ಇಲ್ಲವೆ ಅವರಿಂದ ನಮ್ಮದೊಂದು ಕೆಲಸ ಮಾಡಿಸಿಕೊಳ್ಳುವುದಿರಬೇಕು!

ಅಂತೂ ಹೆಸರನ್ನು ಮರೆಯುವುದು ಅನಿವಾರ್ಯ. ಈ ಸಮಸ್ಯೆಯನ್ನು ನೀಗಲು ನಾನು ಕೆಲವೊಂದು ಶಿಷ್ಟ ಉಪಾಯಗಳನ್ನು ಕಂಡು ಹಿಡಿದಿದ್ದೇನೆ.

ಒಂದು "Sorryಆ. ನಿಮ್ಮ initials ಮರೆತಿದ್ದೇನೆ" ಎನ್ನುವುದು. ಆಗ ಅವರು

"ಜಿ. ಎಸ್. ಪಾಟೀಲ" ಎಂದು ಸಾಹಜಿಕವಾಗಿ ಪೂರ್ಣ ಹೆಸರನ್ನು ಹೇಳಿಬಿಡುವರು.

ಎರಡನೆಯದು "ನಿಮ್ಮ ವಿಳಾಸ ಬದಲಾಗಿದೆಯಂತಲ್ಲ?" ಎನ್ನುವುದು. ಆಗ ಅವರು ಇಲ್ಲ ಅನ್ನಬಹುದು, ಅಥವಾ ಬದಲಾಗಿದೆ ಎಂದು ನುಡಿಯಬಹುದು. "ಏನೇ ಆಗಲಿ. ಈ ಅಡ್ರೆಸ್ ಬುಕ್ಕಿನಲ್ಲಿ ನೀವೇ ಬರೆದುಬಿಡಿರಿ. ನಿಮ್ಮ ಆಟೋಗ್ರಾಫ್ ಇದ್ದ ಹಾಗಾಗುತ್ತದೆ" ಎನ್ನುತ್ತ ದೇಶವಾರಿ ನಗೆಯನ್ನು ಬೀರುವುದು.

ಆದರೆ ಎಲ್ಲ ಕಾಲಕ್ಕೂ ಈ ನಯಗಾರಿಕೆಯಿಂದ ಯಶಸ್ಸು ದೊರೆಯದು. ಮೂರೂವರೆ ದಶಕಗಳ ಹಿಂದಿನ ನನ್ನ ಸರಕಾರೀ ನೌಕರಿಯಲ್ಲಿ ಇಬ್ಬರು ಸಹೋದ್ಯೋಗಿಗಳಿದ್ದರು. ಅಷ್ಟು ವರ್ಷಗಳ ಅಂತರದ ಮೇಲೆ, ಅವರು ಈಚೆಗೆ ನನ್ನಲ್ಲಿ ಧುತ್ ಎಂದು ಆಗಮಿಸಿದರು. ಹಳೆಯ ಸ್ನೇಹ ನೋಡಿ; ಏಕವಚನದಲ್ಲಿ ಪರಸ್ಪರ ಕರೆಯುವಷ್ಟು. "ಶ್ರೀ. ಹಾ. ಪುಣೆ" ಎಂದು ಪೇಪರುಗಳಲ್ಲಿ ಆಗೀಗ ನನ್ನ ಲೇಖನ ನೋಡುತ್ತಿದ್ದರಂತೆ. ಪ್ರಕೃತ ಪುಣೆಗೆ ಬರುವುದಿದ್ದು ಅದು ಹೇಗೋ ನನ್ನ ವಿಳಾಸ ದೊರಕಿಸಿ ಹಾಜರಾಗಿದ್ದರು. ತುಂಬಾ ಹರಟಿದೆವು. ಆಗಿನ ಮೋಜಿನ ಘಟನೆಗಳನ್ನು ನೆನೆದುಕೊಂಡೆವು. ಉಪ್ಪಿಟ್ಟು, ಚಹಾ ಸೇವನೆಯಾಯಿತು.

ಸುರುವಾಯಿತು ನನ್ನ ಗೋಳು . ನನಗೆ ಅವರಿಬ್ಬರ ಹೆಸರೇ ನೆನಪಾಗಲೊಲ್ಲದು. ಅವರಲ್ಲಿ ಒಬ್ಬನಿಗೆ "ನಿನ್ನ ಇನಿಶಿಯಲ್, ಮರೆತಿದೆ. ಹೇಳು" ಎಂದೆ. ಅವನಿಗೆ ಸಂಶಯ ಬಂದಿತೊ ಅಥವಾ ಸ್ವಭಾವದ ಕಿಡಿಗೇಡಿತನವೋ ತಿಳಿಯಲಿಲ್ಲ "ಮೊದಲು ನನ್ನ surname ಹೇಳು" ಅನ್ನಬೇಕೆ?ನಾನು ಸುಮ್ಮನಿದ್ದುದನ್ನು ಕಂಡು ಇನ್ನೊಬ್ಬನು "ಆಯ್ತು. ನಾನು ಹೇಳುತ್ತೇನೆ. ಅವನದು ಎಂ. ಎಸ್. ಈಗ ಹೇಳು ಅವನ ಅಡ್ಡ ಹೆಸರನ್ನು"ಅಂತಂದ. ಬರಿ ಇನಿಶಿಯಲ್ಸ್‌ನಿಂದ ಯಾರಿಗಾದರೂ ಹೆಸರು ಹೇಳುವುದು ಶಕ್ಯವೆ? ಆ ಭಂಡ ಅಲ್ಲಿಗೇ ಮುಗಿಸದೇ-

"ಒಳ್ಳೇದು. ನನ್ನ ಹೆಸರಾದರೂ ನಿನಗೆ ಗೊತ್ತಿದೆಯೆ? ಇಲ್ಲವಾ? ಆಯ್ತು. ನಿನ್ನ ಬಾಯಿಂದಲೇ ನನ್ನ ಹೆಸರನ್ನು ಹೊರಡಿಸುವೆ" ಎಂದ.

ಮೊದಲಿಗೆ ಅವನು ನಮ್ಮ ಆ ನೌಕರಿಯ ಕಾಲದ ಹಾಜರಿ ಪುಸ್ತಕದಲ್ಲಿದ್ದವರ ಒಂದೊಂದೇ ಪೂರ್ಣ ಹೆಸರು ಹೇಳುತ್ತ ಹೋದ. ಒಮ್ಮೆ ಹೆಡ್ ಆಫೀಸಿನ ದೊಡ್ಡ ಸಾಹೇಬರು ಬಂದಾಗ, ನಮ್ಮ ಸ್ಥಳೀಯ ಸಾಹೇಬ, ನಮ್ಮನ್ನು ಪರಿಚಯಿಸುವಾಗ ಇವನ ಹೆಸರನ್ನು ತಪ್ಪಾಗಿ ಹೇಳಿದ್ದನ್ನು ನೆನಪಿಸಿದ.

"ಗೊತ್ತಾಯಿತೆ. ನನ್ನ ಹೆಸರು? "ಎಂದು ಕೇಳಿದ.

"ಉಹುಂ" ಎಂದೆ.

ಅಲ್ಲಿಂದ ಅವನ initials ಬಗ್ಗೆ ನನ್ನ ಪರೀಕ್ಷೆ ನಡೆಯಿತು. ಕೇಳಿದ.ಆ ಎರಡು ಅಕ್ಷರಗಳ ನಡುವೆ 'ಆಂಡ್'ಸೇರಿಸಿದರೆ ಕೇಂದ್ರ ಸರಕಾರದ ಒಂದು ದೊಡ್ಡ ಇಲಾಖೆಯ ಸಂಕ್ಷಿಪ್ತ ಹೆಸರಾಗುವುದು. ("ಗೊತ್ತಾಯಿತೆ?" ಹೋಗಲಿ. ಅವರೆಡು ಅಕ್ಷರಗಳನ್ನು ಕೂಡಿಸಿ ಉಚ್ಚಾರಮಾಡಿದರೆ ಆಂಗ್ಲಭಾಷೆಯಲ್ಲಿ 'ಕರುಣೆ' ಎಂಬ ಅರ್ಥ ಹೊರಡುವುದು. "ಈಗಲಾದರೂ ತಿಳಿಯಿತೆ? ಅದೂ ಹೋಗಲಿ. ಅದು ಓರ್ವ ಸುಪ್ರಸಿದ್ಧ ಓಟಗಾರ್ತಿಯ initials." ಎಂದು ಕೆಣಕಿದ.

ಹಾಂ. ಈ ಕೆಳಗಿನ ಭಂಡತನಕ್ಕೆ ಏನೆನ್ನುವಿರಿ? ವರ್ಷದಲ್ಲಿ ಒಂದೆರಡು ಸಲ ನಾನು ನಮ್ಮ ಹಳ್ಳಿಗೆ ಹೋಗುವುದುಂಟು-ಒಂದೆರಡು ದಿನದ ಮಟ್ಟಿಗೆ. ಆಗೆಲ್ಲ ಬಿಳಿ ಧೋತರ, ಕುರ್ತಾ ಜಾಕೀಟು ಮತ್ತು ಗಾಂಧಿ ಟೊಪ್ಪಿಗೆ ಧರಿಸಿದ ಒಬ್ಬ ವ್ಯಕ್ತಿ ಭೆಟ್ಟಿಯಾಗುತ್ತಾನೆ. ಆತ ಊರಲ್ಲಿ ಹಲವಾರು ಬಗೆಯ ರಾಜಕಾರಣ ಮಾಡುವವ ಎಂದಷ್ಟೆ ಗೊತ್ತು. ಭೆಟ್ಟಿಯಾದಾಗ ನಮ್ಮದು ಉಪಚಾರದ ಒಣಮಾತು. ನನಗೆ ಅದೇನು ದುರ್ಬುದ್ಧಿ ಮೂಡಿತೋ, ಅವನಿಗೆ ಹೇಳಿದೆ.

"ಅಂದ ಹಾಗೆ ನಿಮ್ಮ ಹೆಸರು ಮರೆತೇನಿ."

"ಇಲ್ಲ. ನೀವು ಮರೆತಿಲ್ಲ. - ಅಂತೀನಿ."

"ಮರೆಯುವ ಪ್ರಶ್ನೆಯೇ ಇಲ್ಲ. ನೀವು ಮರೆತಿಲ್ಲ."

"ಎಷ್ಟು ಸಲ ಹೇಳಲಿ?. ನಾನು ನಿಮ್ಮ ಹೆಸರನ್ನು ಮರೆತೀನಿ."

'ಅದು ಶಕ್ಯವೇ ಇಲ್ಲ. ನೀವು ಮರೆತಿಲ್ಲ."

"ಊಹುಂ. - ನನ್ನ ಮಾತನ್ನು ನಂಬಲೇಬೇಕು. ಮರೆಯದಿದ್ದರೆ ನಾನು ನಿಮ್ಮ ಹೆಸರು ಹೇಳಿ ಬಿಡ್ತಿದ್ದೆ." ಎಂದು ಸಿಟ್ಟು ಬೆರೆಸಿ ಹೇಳಿದೆ.

"ನನ್ನ ಮಾತನ್ನು ನೀವು ನಂಬಬೇಕು. ನೀವು ಮರೆತಿಲ್ಲ. ಯಾಕಂದ್ರೆ ನನ್ನ ಹೆಸರನ್ನು ನಾನು ನಿಮಗೆ ಹೇಳೇ ಇಲ್ಲ!!"

***

೭. ನಿಂದೆ, ಟೀಕೆ, ವಿಮರ್ಶೆ ಮುಂತಾದ್ದು

"ಹಂದಿಯಿದ್ದ ಓಣಿ, ನಿಂದಕನಿದ್ದ ಊರು ಯಾವಾಗಲೂ ಸ್ವಚ್ಛ" ಅಂತ ಹಳೆಯ ಗಾದೆಯ ಮಾತೊಂದಿದೆ. ಹಂದಿಯೂ, ನಿಂದಕನೂ ಸಮಾಜೋಪಕಾರಿಗಳು ಎಂಬುದು ಇದರ ಅರ್ಥ. ಆದರೆ ಹಂದಿ, ನಿಂದಕರನ್ನು ಹೀಗೆ ಸಮಾನ ಸ್ಥಾನದಲ್ಲಿರಿಸುವುದು ನ್ಯಾಯವೆ? ಹಂದಿಯ ಪ್ರವೃತ್ತಿಯೇ ಬೇರೆ; ನಿಂದಕನ್ದೇ ಬೇರೆ. ಅಲ್ಲದೆ ಈಗಿನ ಕಾಲದಲ್ಲಿ - ಅದೂ ಈಚಿನ ಹತ್ತಿಪ್ಪತ್ತು ವರ್ಷಗಳಲ್ಲಿ ಈ 'ಸ್ವಚ್ಛತಾ ಕಾರ್ಯಕ್ರಮ'ದ ಸ್ವರೂಪ ಬದಲಾಗಿ ಬಿಟ್ಟಿದೆ. ಈಗಿನ ಓಣಿಗಳಲ್ಲಿ ಹೊಲಸಿಗೆ ಅವಕಾಶವೇ ಕಡಿಮೆ; ಆದರೆ ನಿಂದೆ, ಟೀಕೆ, ವಿಮರ್ಶೆಗಳಿಗೆ ಅವಕಾಶ ಬೇಕಾದಷ್ಟು ಇದೆ. ಮತ್ತು ನಿಂದಕನು ಸಮಾಜದ 'ಹೊಲಸ'ನ್ನೇನು ಕಳೆಯುವುದಿಲ್ಲ. ಬದಿಯಲ್ಲಿ ಇರುವ ಹೊಲಸನ್ನು ತನ್ನ ನಾಲಗೆ ಅಥವಾ ಲೆಕ್ಕಣಿಕೆಯ ಮೂಲಕ ರಸ್ತೆಗೆ ಚೆಲ್ಲುತ್ತಾನೆ. ಎಲ್ಲೆಡೆಗೆ ಅದರ ದುರ್ಗಂಧವನ್ನು ಪಸರಿಸುತ್ತಾನೆ. ಅಂದಾಗ ಹಂದಿ, ನಿಂದಕರನ್ನು ಒಂದೆಡೆ ತರುವುದು, ಅವರಲ್ಲೊಬ್ಬರಿಗೆ ಅಪಮಾನಾಸ್ಪದವಾಗಲಿಕ್ಕಿಲ್ಲವೆ?

ಚಂದದ ಹೆಣ್ಣನ್ನು (ಹಾಗೆ ಇಲ್ಲದ್ದೂ ಆದೀತು) ನೋಡಿದರೆ ಕಾಮವು ಸ್ಫುರಿಸುತ್ತದೆ-ತಂತಾನೇ. ನಮ್ಮ ಮನಸ್ಸಿಗೆ ಬೇಡವಾದದ್ದು ಘಟಿಸಿದರೆ, ಕೋಪ ಬರುತ್ತದೆ- ಅತಿ ಸಹಜವೆಂಬಂತೆ. ಹೀಗೆ ಈ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬವು ಸಹಜ ಪ್ರವೃತ್ತಿಗಳು. . . ಅಂಥದ್ದೇ ನಮ್ಮ ಇನ್ನೊಂದು ಪ್ರವೃತ್ತಿಯೆಂದರೆ ಇನ್ನೊಬ್ಬರ ಬಗ್ಗೆ ಆಡಿಕೊಳ್ಳುವುದು. ನಿಮ್ಮಿಂದ ಉಪಕಾರ ಹೊಂದಿಯೋ ನಿಮ್ಮ ಆಶ್ರಯದಲ್ಲಿದ್ದವರೋ ಆಗಿದ್ದರೂ ಸಹ ನಿಮ್ಮ ಬಗ್ಗೆ ಲಘುವಾಗಿ, ಹೀನಾಯವಾಗಿ ಆಡಬೇಕೆನಿಸುವುದು. ಅದು ಅತ್ಯಂತ ಸಹಜವಾಗಿ ನಮ್ಮ ಬಾಯಿಗೆ ಬಂದು ಬಿಡುತ್ತದೆ. 'ತೆಗಳುವಿಕೆ ಉಗುಳುವಿಕೆಯಷ್ಟೇ ಸಹಜವಾದದ್ದು'- ಪಂಜೆ ಉವಾಚ! ಪುರಾತನ ಕಾಲದಿಂದಲೂ ಇದು ಅಸ್ತಿತ್ವದಲ್ಲಿದೆ ಎನ್ನುವುದಕ್ಕೆ ರಾಮಾಯಣದಲ್ಲಿಯೆ ಉದಾಹರಣೆ ಇದೆಯಲ್ಲ! ಯಕಃಶ್ಚಿತ್ ಅಗಸನೊಬ್ಬ ಸೀತೆಯಂಥ ಸಂಭಾವಿತ ಮಹಾರಾಜ್ಞಿಯನ್ನೇ ಆಡಿಕೊಳ್ಳುವುದೆಂದರೆ, ಅದು ಸಹಜ ಪ್ರವೃತ್ತಿಯಲ್ಲದೆ ಇನ್ನೇನು? ತಾತ್ಪರ್ಯ:ಕಾಮ ಕ್ರೋಧಾದಿಗಳ ಜೊತೆಗೆ ಏಳನೆಯದಾಗಿ

ಇದನ್ನೂ ಪರಿಗಣಿಸತಕ್ಕದ್ದು. ಷಡ್ರಿಪುಗಳಲ್ಲ; ಸಪ್ತರಿಪುಗಳು.

ಅಂದ ಹಾಗೆ ಇದನ್ನು ರಿಪು ಎನ್ನುವುದು ಸರಿಯೆ? ಸಹಜವಾಗಿ, ನೈಸರ್ಗಿಕವಾಗಿ, ತಂತಾನೆ ಹೊರಬರುವಂತಾದುದು ರಿಪು ಹೇಗಾದೀತು? ಮನೆಯಲ್ಲಿ ಹೆಂಡತಿಯಿದ್ದರೂ ನೆರೆಮನೆಯ ಹೆಂಗಸಿನ ಮೇಲೆ ಮೋಹಗೊಳ್ಳುವುದಾದರೆ? ಈ ಮೋಹ ಹದ್ದು ಮೀರಿದರೆ ಮಾತ್ರ ತಾಪದಾಯಕ ಎಂದು ಹೇಳೋಣ. ಆದರೆ ಯಾರಿಗೆ? ಬೇರೆಯವರಿಗೆ! ನಮ್ಮ ಕಾಮ, ಕ್ರೋಧ, ನಿಂದೆ ಇವು ಅಭಿವ್ಯಕ್ತಗೊಳ್ಳಲಿಕ್ಕೆ ಬೇರೆ ಯಾರಾದರೂ ಗುರಿಯಾಗಬೇಕು ತಾನೇ. ಆಗ ಅವರು react ಆಗದೆ ಸುಮ್ಮನಿರುವುದಿಲ್ಲ. ಆಗ ಮಾತ್ರ ಅಂಥವರು ನಮಗೆ ರಿಪುಗಳಾದಾರು.

ಆಡಿಕೊಳ್ಳುವುದು-ಇದಕ್ಕೆ ಹಲವು ಮಗ್ಗುಲುಗಳಿವೆ. ಆಡಿಕೊಳ್ಳುವುದು ಕಟುವಾಗಿದ್ದರೆ ನಿಂದೆಯೆನಿಸುವುದು. ನಿಂದಕನು ಉಲಕೋಚಿಯಿದ್ದರೆ ಟೀಕೆ ಇಲ್ಲವೆ ಕೊಂಕು ನುಡಿಯಾಗಿ ಪರಿಣಮಿಸಬಹುದು. ಯಾವುದೇ ಇರಲಿ, ಅದಕ್ಕೆ ತುತ್ತಾದ ವ್ಯಕ್ತಿ ಆ ಪ್ರಸಂಗದಲ್ಲಿ ಎದುರಿಗೆ ಇರುವುದಿಲ್ಲ. ಇರಲೂ ಬಾರದು! ಅಂದರೇನೆ ನಿಂದೆ-ಟೀಕೆಗಳಿಗೆ ಮೊನಚು ಉಂಟಾಗುವುದು; ರಂಗೇರುವುದು, ಆಗ ಟೀಕೆಯ ಮಾತನ್ನು ಕೇಳುವುದು ಎಷ್ಟೊಂದು ರುಚಿ! ಕೇಳಕೇಳುತ್ತ ನಾಲಗೆ ಚಪ್ಪರಿಸಿಯೇವು. ಇತ್ತ ನಮ್ಮ ಸಾಹಿತ್ಯಕಾರರು ಟೀಕೆ ಮಾಡಿದರೆ, ಅದಕ್ಕೆ 'ವಿಮರ್ಶೆ' ಎಂಬ ಸಭ್ಯವಾದ ಹೆಸರಿದೆ. ಅದು ಅವರ exclusive privilege.

ಟೀಕೆಗೆ ಹೇಳಿ ಮಾಡಿಸಿದ ಪ್ರಶಸ್ತ ಸ್ಥಳವೆಂದರೆ ಪತ್ರಿಕೆಗಳಲ್ಲಿ ವಾಚಕರ ಪತ್ರಗಳಿಗಾಗಿ ಕಾದಿರಿಸಿದ ಸ್ಥಳ. ಸಣ್ಣ ಕಿಡಿಯ ರೂಪದಲ್ಲಿರುವ ಟೀಕಾಂಶವನ್ನು ಕಾಳ್ಗಿಚ್ಚಿನಂತೆ ಹಬ್ಬಿಸುವಲ್ಲಿ ಈ ಕಾಲಮ್‌ಗಳಿಂದ ಅಮೋಘ ಸೇವೆ ಸಲ್ಲುವುದು. ನಿಂದೆ-ಆರೋಪಗಳಿಗೆಂದೇ ಇರುವ ಪೀತ ಪತ್ರಿಕೆಗಳಂತಿರಲಿ, ಪೀತೇತರ ಬಣ್ಣಗಳನ್ನು ತಳೆದಿರುವ ಸಭ್ಯಗೃಹಸ್ಥ ಪತ್ರಿಕೆಗಳು ಈ ವಿಷಯದಲ್ಲಿ "ನೋಡಿ, ಇದು ನಿಮ್ಮದೇ ಕಾಲಮ್. ನಾವೋ ನಿರ್ಲಿಪ್ತರು. ನೀವು ಬರೆದರೂ ಹಾಕುತ್ತೇವೆ. ಅವರು ಉತ್ತರ ಕೊಟ್ಟಿದ್ದನ್ನೂ ಪ್ರಕಟಿಸುತ್ತೇವೆ." ಎನ್ನುತ್ತ ಡಾಣಾಡಂಗುರವಾಗಿ ಉತ್ತರ-ಮಾರುತ್ತರ-ಹಾರುತ್ತರ-ಏನೆಲ್ಲ ಪ್ರಕಟಿಸಿ, 'ಕೊಂಟ್ರೋವರ್ಸಿ'ಯನ್ನು ಸೃಷ್ಟಿಸುತ್ತವೆ. ಅದರಿಂದ ಓದುಗರಿಗೆ ಖುಶಿಯೋ ಖುಶಿ!ಹೀಗೆ ಹಲವಾರು ಪತ್ರಗಳು ಪ್ರಕಟವಾಗಿ, ಸಂಪಾದಕರಿಗೇ ಬೇಸರ ಬರುತ್ತದೆ."ಇಲ್ಲಿಗೆ ಈ ಪತ್ರವ್ಯವಹಾರವನ್ನು ನಿಲ್ಲಿಸಿದೆ" ಎಂಬ ಭರತವಾಕ್ಯದೊಂದಿಗೆ ಟೀಕೆಗೆ ತೆರೆ ಎಳೆಯುತ್ತಾರೆ. ಆದರೆ ಮೊದಲ ಬಾರಿ ಟೀಕೆ ಪ್ರಕಟವಾದಾಗ , ಅದನ್ನು ಅಪಾತತಃ ನಂಬಿದ ಅನೇಕಾನೇಕ ನಿಷ್ಪಾಪದ ವಾಚಕರ ಮನಸ್ಸಿನಲ್ಲಿಯ ಕಹಿ ಭಾವನೆ ಮಾಸುವುದಿಲ್ಲವಲ್ಲ?

ನಿಂದೆ-ಟೀಕೆಗಳ ಸ್ಥಾಯೀ ಭಾವವೆಂದರೆ ನಮ್ಮಲ್ಲಿಯ ಮತ್ಸರ ಬುದ್ಧಿ. ಸ್ವಂತಕ್ಕೆ

ಯೋಗ್ಯತೆ ಕಡಿಮೆ ಇದ್ದಾಗ, ತನಗೆ ಅದೇ ರಂಗದಲ್ಲಿ ಮುಂದುವರಿಯುವುದು ಸಾಧ್ಯವಿಲ್ಲದಿದ್ದಾಗ ಹಾಗೆ ಮುಂದೆ ಸಾಗಿದವರ ಬಗ್ಗೆ ಹೊಟ್ಟೆಕಿಚ್ಚು ಉಂಟಾಗುವುದು ಸಹಜವೇ. ಅದರಿಂದ ನಮ್ಮಲ್ಲಿ ಆ ಎದುರಾಳಿಯ ಬಗ್ಗೆ ಅಸಹನೆ, ಇಲ್ಲವೇ ಅಸಹಾಯಕ ಸಿಟ್ಟು ಉದ್ದೀಪನಗೊಳ್ಳುವುದು. ಜೊತೆಗೆ ನಿಂದಕನಲ್ಲಿ ಕೀಳ್ತನ ಭಾವವೂ ಸೇರಿಕೊಂಡಿರಬಹುದು.

ಇನ್ನು ಹಲವು ಪ್ರಸಂಗಗಳಲ್ಲಿ ನಿಂದಕನಿಗೆ ಯಾವ ಉದ್ದೀಪನವೂ ಬೇಕಾಗುವುದಿಲ್ಲವೇನೋ!! ತನ್ನ ಮೈ ಮೇಲಿನ ನೊಣವನ್ನೂ ಓಡಿಸಲಾಗದೆ ರಸ್ತೆಯ ಬದಿಯಲ್ಲಿ ಬಿದ್ದುಕೊಂಡಿರುವ ಬಡಕಲು ನಾಯಿಯು ಒಮ್ಮೆಲೇ ಕುಂಯ್‌ಗುಡತೊಡಗಿದ್ದಾದರೆ? 'ಎಲೇ, ಇದರ ಹತ್ತಿರ ಯಾರೂ ಸುಳಿದಿಲ್ಲ; ಕಲ್ಲು ಒಗೆದಿಲ್ಲ. ಆದರೂ ಯಾಕೆ ಬೊಗಳ್ತದೆ?" ಅಂತ ಅನಿಸುವುದು . ಅದಕ್ಕೆ ಬೊಗಳುವ ವಿಷಯದಲ್ಲಿ ಯಾವುದೋ ಅದಮ್ಯವಾದ ಅಕ್ಷುಣ್ಯವಾದ ಅಂತಃಪ್ರೇರಣೆ...

'ನಿಂ- ಟೀ -ವಿ' ಮಾಡುವುದರಲ್ಲಿ ಹಲವಾರು ನಮೂನೆಗಳಿವೆ. ಜಲಾಶಯದ ಕಪ್ಪೆಗಳು ಒಂದೇ ಸಮನೆ 'ಕೊಟರ್ ಕೊಟರ್'ಎಂದು ಕರ್ಕಶವಾಗಿ ವಟಗುಟ್ಟುತ್ತಲೇ ಇರುತ್ತವೆ. ಅದಕ್ಕೆ ಗೊತ್ತಿರೋದು ಅದೊಂದೇ ಸ್ವರ. ಮಳೆಯಾಗಿ ಹೊಸ ನೀರು ಸೇರಿಕೊಂಡರಂತೂ ಅವುಗಳ ವಟಗುಟ್ಟುವಿಕೆಯು ಜೋರಾಗುವುದು. ' ಇಲ್ಲಿಗೆ ಯಾರೂ ಬರಕೂಡದು' ಎಂದು ಹೇಳುವಂತೆ ಭಾಸವಾಗುತ್ತದೆ. (ನೀರಡಿಸುವ ದನಕರುಗಳು ಅದನ್ನು ಲೆಕ್ಕಿಸುವುದಿಲ್ಲ; ಆ ಮಾತು ಬೇರೆ) ಕೆಲವರ ಟೀಕಾಧ್ವನಿ ಆ ರೀತಿಯದು. 'ನಾಯಿ ಇದೆ; ಎಚ್ಚರಿಕೆ' ಎಂದು ಕಾಂಪೌಂಡ್ ಗೋಡೆಗೆ ಬೋರ್ಡು ತಗಲಿಸುವುದಕ್ಕೆ ಕಾರಣವಾಗಿರುವಂಥ ನಾಯಿಯ ಬೊಗಳುವಿಕೆಯನ್ನು ನೀವು ಕೇಳಿಯೇ ಇದ್ದೀರಿ. ರಸ್ತೆಯ ಮೇಲೆ ತಮ್ಮ ಪಾಡಿಗೆ ಹೋಗುವವರನ್ನು ಕಂಡರೂ ಅದು ಗುರ್ ಎನ್ನುತ್ತದೆ - ಮೈ ಸೊಕ್ಕಿನಿಂದ.

ನಾಯಿಯ ಬಗುಳಾಟ ಆಗೊಮ್ಮೆ ಈಗೊಮ್ಮೆ ಇರುವುದಾದರೆ ಕಾಗೆಯ ಕಿರುಚಾಟ ಹಾಗಲ್ಲ. ಅದು ಕಿರುಚ್ತಾನೇ ಇರ್ತದೆ. ಆದರೂ ನಾಯಿಯದಕ್ಕೆ ಕೊಟ್ಟಷ್ಟು ಗಮನವನ್ನು ಇದಕ್ಕೆ ನಾವು ಕೊಡುವುದಿಲ್ಲ. ಕಾರಣ ಸ್ಪಷ್ಟವಿದೆ. ಅದು 'ಕಾವ್ ಕಾವ್' ಎನ್ನುವುದು ನಮ್ಮ ಕಿವಿಯಂತರದಿಂದ ಎಷ್ಟೋ ಮೇಲ್ಗಡೆ. ಆದರೆ ಅವುಗಳೊಳಗೇ ಕಚ್ಚಾಟ ಉಂಟಾದರೆ, ಆಗಿನ ಕಿರುಚಾಟ ನಮ್ಮ ಕಿವಿಯನ್ನು ಗಡಚಿಕ್ಕಿಸದೇ ಬಿಡದು! ಕೆಲವು ನಿಂದಕರ ಹಾಗೂ ಅವರ ನಿಂದೆಯ ಸ್ವರೂಪ ಹೀಗೆಯೇ ಇರುವುದಲ್ಲವೇ?

ಸೊಳ್ಳೆ ಗೊತ್ತಲ್ಲ, ನಿಮಗೆ. ಅದಕ್ಕೆ ಮನುಷ್ಯನನ್ನು ಕಚ್ಚುವ ಪ್ರವೃತ್ತಿ ಇದ್ದಿರದಿದ್ದರೆ ಅದರ ಗುಂಯ್‌ಗುಡುವ ಗುಂಜಾರವವನ್ನು ಟೇಪ್‌ರೆಕಾರ್ಡರಿನಲ್ಲಿ ಹಿಡಿದಿಡುತ್ತಿದ್ದೆ. ಅಷ್ಟೊಂದು ಅದರ ಇಂಪು! ಮಾರು ದೂರದಲ್ಲಿದ್ದ ಸೊಳ್ಳೆ ನಮ್ಮ ಕಿವಿಯ ಹತ್ತಿರವೇ

ಬಂದು ಗುಂಯ್‌ಗುಡುವಾಗಲೂ ಅದು ಇಂಪಾಗಿಯೇ ತೋರುವುದು. ಆ ಮೇಲೆ ಗೊತ್ತೇ ಇದೆಯಲ್ಲ. ನಿಮ್ಮ ಗಲ್ಲವನ್ನು ಬಲವಾಗಿ ಕಚ್ಚಿ ರಕ್ತ ಹೀರುವುದು. ಹಾಗೆ ಕಚ್ಚಿದಾಗಲೂ ಆ ಕ್ಷಣಕ್ಕೆ ನಿಮ್ಮ ಹೊಸಪ್ರಿಯತಮೆಯ ಸುಡುಸುಡುವ ಚುಂಬನವೆಂದೇ ಭಾಸವಾದೀತು! ಆದರೆ ಒಂದು ಕ್ಷಣ ಮಾತ್ರ. ನೀವು ಜೋರಿನಲ್ಲಿ ಕೈ ಬೀಸಿದಿರೆಂದರೆ ಹೊರಟು ಹೋಗುವುದು. ಕೆಲವು ನಿಂದಕರ ನಡೆವಳಿಕೆ ಹೀಗೆಯೇ ತಾನೆ?

'ಶಾಲಿನಲ್ಲಿ ಮಡಿಸಿ ಚಪ್ಪಲಿಯಿಂದ ಹೊಡೆಯೋದು' ಎಂಬ ವಾಗ್ರೂಢಿಯೊಂದಿದೆ. ಆ ಕಲೆಯಲ್ಲಿ ನಿಷ್ಣಾತರೆಂದರೆ ಮೇಲೆ ಹೇಳಿದ ಸಾಹಿತ್ಯ ವಿಮರ್ಶಕರು. ಏನವರ ಮಾತಿನ ಗತ್ತುಗಾರಿಕೆ! ಆ ಚಾಣಾಕ್ಷತನ! ನಮ್ಮ-ನಿಮ್ಮಂಥ ಸಾಮಾನ್ಯರಿಗೆ ತಿಳಿಯುವಂಥದೇ ಅಲ್ಲ.... ಅವರು ಹೊಗಳುವ ರೀತಿಯಲ್ಲಿ ಆರಂಭಿಸುತ್ತಾರೆ. ಮೆತ್ತಗೆ ಒದಿಕೆ ಕೊಡುತ್ತಾರೆ; ಇಲ್ಲವೆ ಗಂಭೀರವಾಗಿ ಲೇವಡಿ ಮಾಡುತ್ತಾರೆ. ಶಬ್ದಗಳನ್ನು ಹೀಗೆ ಬಗ್ಗಿಸಿ ಒಗ್ಗಿಸುವಲ್ಲಿ ಅವರು ನಿಷ್ಣಾತರು. ಸ್ವಾತಂತ್ರ್ಯಪೂರ್ವ ಕಾಲದಲ್ಲಿದ್ದ ಸಾಹಿತ್ಯ ವಿಮರ್ಶಕರು ತಮಗೆ ಹೇಳ ಬೇಕಾದ್ದನ್ನು ನೇರವಾಗಿ, ಪ್ರಸಂಗ ಬಂದರೆ ಖಂಡತುಂಡ ರೀತಿಯಲ್ಲಿ ಬರೆಯುತ್ತಿದ್ದರು. ಛಿದ್ರಾನ್ವೇಷಣೆಯಲ್ಲಿ ತೊಡಗುತ್ತಿದ್ದಿಲ್ಲ... ಆದರೆ ಈಗಿನವರ ರೀತಿ ಬೇರೆ. ನೇರವಾಗಿ ಹೇಳುವುದು ಗೊತ್ತಿದ್ದರೂ ಹಾಗೆ ಬರೆಯುವವರಲ್ಲ. ಒಳ್ಳೆಯ ಮಾತು ಹೇಳಬೇಕಿದ್ದರೂ ತುಸು ಬಿಗುಮಾನದಿಂದಲೇ ಹೇಳುವರು. ತೆಗಳಿಕೆಯ ಮಾತು ಇದ್ದರೆ, ಮೇಲೆ ಹೇಳಿದಂತೆ ಕಲಾಬತ್ತಿನ ಶಾಲಿನಲ್ಲಿ ಚಪ್ಪಲಿಯನ್ನು ಅಡಗಿಸಿ ಹೊಡೆಯುವರು! ಅದರ ಪೆಟ್ಟು ಜೋರಾಗಿ ಇರಲಿಕ್ಕಿಲ್ಲ. ಆದರೆ ಸೂಕ್ಷ್ಮಮತಿಯಾದ ಕವಿ-ಲೇಖಕನಿಗೆ ಅಷ್ಟೇ ಸಾಕಲ್ಲ. ಅಂತೂ ಕಿರಿಕಿರಿ ತಪ್ಪಿದ್ದಲ್ಲ. ರಶಿಯನ್ ಸಾಹಿತಿ ಪುಷ್ಕಿನ್ ವಿಮರ್ಶಕರನ್ನು ಎತ್ತಿನ ಡುಬ್ಬದ ಮೇಲೆ ಕೂಡ್ರುವ ನೊಣಕ್ಕೆ ಹೋಲಿಸಿದ್ದಾನೆ. ಎತ್ತು ತನ್ನ ಪಾಡಿಗೆ ಬಂಡಿಯನ್ನು ಎಳೆದುಕೊಂಡು ಹೋಗ್ತಾ ಇರ್ತದೆ. ಆಗ ನೊಣವು ಅದರ ಡುಬ್ಬದ ಮೇಲೆ, ಅದೂ ಮಧ್ಯದಲ್ಲಿ ಕುಳಿತು ಚಿಟುಕು ಮುಳ್ಳಾಡಿಸುವುದು. ಎತ್ತು ತನ್ನ ಬಾಲವನ್ನು ಮೇಲೆ ಬೀಸಿದಾಗ ನೊಣ ಎದ್ದು ಹೋಗುವುದು. ಆದರೆ ತಾತ್ಕಾಲಿಕವಾಗಿ! ಮತ್ತೆ ಬಂದು ತನ್ನ ಕಾಯಕವನ್ನು ಸುರುವು ಮಾಡುವುದು.

ಈ ವೈವಿಧ್ಯ ಏನೇ ಇರಲಿ, ಯಾವನೊಬ್ಬ ನಿಂದಾಪ್ರಹಾರಕ್ಕೆ ಗುರಿಯಾಗುವಂತಹ ಪಾಪವನ್ನೇನು ಮಾಡಿರ್ತಾನೆ? ನಾಲ್ಕು ಜನರ ಕಣ್ಣಿಗೆ ಬೀಳುವಂತೆ ಆತ ಕಾರ್ಯಪ್ರವೃತ್ತನಾಗಿರುವುದೇ ಅದಕ್ಕೆ ಕಾರಣ. ಬೇರೆಯವರೂ ಅದೇ ಬಗೆಯ ಕಾರ್ಯ ಮಾಡುತ್ತ ಇರುವಾಗ ಯಾರದೇ ಕಣ್ಣಿಗೆ ಬೀಳದಂತೆ ಏನನ್ನು ಮಾಡಲೂ ಸಾಧ್ಯವಿಲ್ಲ. ಇಷ್ಟೇ ಅಲ್ಲ. ಸ್ಪರ್ಧೆಯಲ್ಲಿದ್ದವರಂತೆ ಮುಂದುವರಿಯಬೇಕಾಗುವುದು. ಹಾಗೆ ಮಾಡುವಾಗ ಅವನಿಗೆ ಯಶಸ್ಸು ಸಿಗುವಂತೆ ಕಂಡಿತೋ ಕೆಲವರಲ್ಲಿ ಹೊಟ್ಟೆಯ ಕಿಚ್ಚು ತಲೆಗೆ ಏರುತ್ತದೆ:ಚಿಟುಕು ಮುಳ್ಳಾಡಿಸುತ್ತದೆ. ಅಲ್ಲಿಂದ ಟೀಕೆ-ನಿಂದೆಗಳ ಆರಂಭ.

ನೀವು ಸಾರ್ವಜನಿಕ ಸೇವಾ ನಿರತರಾಗಿದ್ದು ಅದರಲ್ಲಿ ಹೆಸರು ಗಳಿಸಿದ್ದವರಂತೂ ನಿಂ-ಟೀ-ವಿಯವರಿಗೆ ಭಾರೀ ದೊಡ್ಡ ಛಾನ್ಸ್! ನೀವೇನೋ ಸಮಾಜ ಋಣವನ್ನು ತೀರಿಸುವ ದೃಷ್ಟಿಯಿಂದ ಯಾವದೊಂದು ಸಂಸ್ಥೆಯಲ್ಲಿ ಗೌ. ಕಾ. ಇಲ್ಲವೆ ಅಧ್ಯಕ್ಷರಾಗಿ ಕೆಲಸ ಮಾಡ್ತೀರಿ - ಚೆನ್ನಾಗಿಯೇ. ಮರುವರ್ಷವೂ ನಿಮ್ಮನ್ನೇ ಆ ಸ್ಥಾನಕ್ಕೆ ಚುನಾಯಿಸುತ್ತಾರೆ.- ಸರ್ವಾನುಮತದಿಂದ. ನೀವು ಉಬ್ಬಿ ಅದಕ್ಕೆ ಒಪ್ಪಿಕೊಂಡು ಬಿಡುವಿರಿ. ಅಲ್ಲೇ ನೀವು ತಪ್ಪುವುದು. ಏಕೆಂದರೆ ಆದಾಗಲೇ ನಿಂ-ಟೀ-ವಿಯವರ ಕಾಕದೃಷ್ಟಿ ನಿಮಗೆ ತಾಗಿರುತ್ತದೆ. ಮರುವರ್ಷ ಅವರು ಕಿರುಕುಳವನ್ನು ಆರಂಭಿಸುವುದೂ ಆರಂಭಿಸಿದ್ದನ್ನು ತ್ವರಿತಗೊಳಿಸುವುದೂ ಸಹಜ-ನ್ಯಾಯ. ಅದಕ್ಕೆ ನೀವು ಸಿದ್ಧರಾಗಿದ್ದರೆ go ahead! ಅದೇ ನೀವು ಸೌಮ್ಯ ಭಾವದವರಾಗಿದ್ದರೆ "ಸಾಕಪ್ಪಾ ಸಾಕು, ನಾನು ರಾಜೀನಾಮೆ ಕೊಟ್ಟು ಬಿಡುವೆ" ಎಂದು ರೋಸಿ ಹೋಗುವಷ್ಟು ಟೀಕಾಕಾರರು ಹುಯಿಲೆಬ್ಬಿಸುತ್ತಾರೆ. ಇತ್ತ ನಿಮ್ಮ ಹೆಂಡತಿಯೂ "ನಿಮಗೆ ಯಾಕ್ರೀ ಇದೆಲ್ಲಾ ಕಾರಭಾರ-ಆಫೀಸು ಮುಗಿದ ಮೇಲೆ ಮನಿಗೆ ಬಂದು ಥಣ್ಣಗ ಕೂಡ್ರೋದು ಬಿಟ್ಟು . . . "ಎಂದು ಮುಂತಾಗಿ ಹೇಳಬಹುದು.

ಹಾಗೆಂದು ಬಿಟ್ಟುಗಿಟ್ಟೀರಿ! ಹೆಂಡತಿ -ಎಂಬಾಕೆ ಇನ್ನೂ ಹಲವಾರು ಸಂದರ್ಭಗಳಲ್ಲಿ ಹೀಗೆ ಹೇಳ್ತಾನೇ ಇರ್ತಾಳೆ. ಅದಾವ ಗಂಡ ಇವಳ ಇಂಥ ಆಕ್ಷೇಪಕ್ಕೆ ಬೆಲೆ ಕೊಡ್ತಾನೆ? ಇತ್ತ ನಿಂ-ಟೀ-ವಿ ಯವರಾದರೂ ನಿಮ್ಮ ಮೇಲೆ ತಮ್ಮ ಟೀಕೆಯಿಂದ ಉಪಕಾರವನ್ನೇ ಮಾಡ್ತಾರೆ. ಅವರ ಈ ಡೆಮಾಕ್ಲಿಸ್ ಕತ್ತಿ ನಿಮ್ಮ ತಲೆಯ ಮೇಲೆ ಯಾವಾಗ ಬಿದ್ದೀತೋ ಎಂಬ ಹೆದರಿಕೆ ಇದ್ದಿತೆಂದರೆ, ನೀವು ಬುದ್ಧಿಪೂರ್ವಕ ತಪ್ಪು ಮಾಡಲಾರಿರಿ. "ಮಂದಿಗೆ ಗೊತ್ತಾದರೆ..." ಎಂಬ ಸಣ್ಣ ಪ್ರಶ್ನೆ ಮನದಲ್ಲಿ ಸುಳಿಯುವುದು ಒಳ್ಳೆಯದೇ . ಆಗ ನಿಮ್ಮ ಕೆಲಸವೂ ಸುಸೂತ್ರ ಮುಂದುವರಿಯುವುದು. ಆದರೂ ಟೀಕಾ ಸ್ವರ ಕೇಳುತ್ತಲೇ ಇದ್ದು, "ಎಲಾ, ನನ್ನಿಂದೇನು ತಪ್ಪಾಗಿಲ್ಲವಲ್ಲ?" ಎಂಬ ಸಂದಿಗ್ಧದಲ್ಲಿ ನೀವು ಬಿದ್ದರೆ, ಇವೆರಡು ಪ್ರಶ್ನೆಗಳನ್ನು ನಿಮ್ಮಲ್ಲಿಯೇ ಕೇಳಿಕೊಳ್ಳಿರಿ.

'ನನ್ನ ಕೆಲಸ ಸದುದ್ದೇಶದಿಂದ ಕೂಡಿದೆಯೆ? ಮತ್ತು ಬಹುಜನರ ಅಭಿಮತ ನನಗೆ ಅನುಕೂಲ ಇದೆಯೆ?' ಎಂದು. ಸಾರ್ವಜನಿಕ ರಂಗದಲ್ಲೇ ಸದಾ ಇರುವ ರಾಜಕಾರಣಿಗಳಿಗೆ ಮಾತ್ರ ಇದಾವುದೂ ಅನ್ವಯಿಸುವುದಿಲ್ಲ. ದಪ್ಪ ತೊಗಲಿನವರಾದ ಇವರು ಇನ್ನೊಬ್ಬರನ್ನು ಟೀಕಿಸುವುದಕ್ಕೂ ಅದಕ್ಕೆ ಪ್ರತಿ ಟೀಕೆಯನ್ನು ಸ್ವೀಕರಿಸುವುದಕ್ಕೂ ಗಟ್ಟಿಯೇ ಇದ್ದಾರೆ. ಅದೇ ಸೂಕ್ಷ್ಮ ಸಂವೇದಿಗಳಾದವರು ಮಾತ್ರ ನಿಂದಕರ ನಡವಳಿಕೆಯಿಂದ ಘಾಸಿಗೊಳ್ಳುವುದರಲ್ಲಿ ಸಂಶಯವೇನಿಲ್ಲ. ಆದರೂ ಎದುರಿಸಲೇಬೇಕು- ಈ ಟೀಕಾಕೃತ್ಯಾದರನ್ನು. ಹೇಗೆ?

ಇದಕ್ಕೊಂದು ದಿವ್ಯ ಮಂತ್ರವಿದೆ! ಅದೇನೆಂಬುದನ್ನು ನಮ್ಮ ಗೋವಿಂದ ಪೈಗಳ

ಬದುಕಿನ ಒಂದು ಘಟನೆಯ ಮೂಲಕ ನಿಮಗೆ ಉಪದೇಶಿಸುವೆ.

ಕದಿರೆಯ ಮಂಜುನಾಥ ದೇವರ ಚರಿತ್ರೆಯ ಕುರಿತು ಪೈಗಳು ಹೊಸ ವಿಚಾರವನ್ನು ಕಂಡು ಹಿಡಿದು ಐವತ್ತು ವರ್ಷಗಳ ಹಿಂದೆ ಒಂದು ಲೇಖವನ್ನು ಪ್ರಕಟಿಸಿದರು. ಆದರೆ ಅಲ್ಲಿಯ ನಾಥ ಪಂಥದ ಕೆಲವು ಬಾವಾಜಿಗಳಿಗೆ ಅದು ಹಿಡಿಸಲಿಲ್ಲ. ಪೈ ನಿಲುವನ್ನು ಬಿಡಿರಿ; ತಮ್ಮ ಪಂಥದ ತತ್ವಗಳನ್ನೇ ಅವರು ತಿಳಿದುಕೊಂಡವರಲ್ಲ. ಸರಿ, ಪೈಗಳನ್ನು ಹಿಡಿದು, ತೆಗಳುವುದೊಂದೇ ಅವರಿಗೆ ತೋಚಿದ ಮಾರ್ಗ. ಮಂಗಳೂರು - ಮಂಜೇಶ್ವರಗಳ ನಡುವೆ ಪೈಯವರು ಆಗಾಗ ರೈಲಿನಲ್ಲಿ ಹೋಗಿ ಬರುತ್ತಿದ್ದ ವಿಷಯ ತಿಳಿದೊಡನೆ, ಅಂಥ ಒಂದು ದಿನ, ಮಂಗಳೂರು ರೈಲ್ವೇ ಸ್ಟೇಷನ್ನಿಗೆ ಐದಾರು ಜನ ಬಾವಾಜಿಗಳು ಬಂದರು. ಹಿಂದೀ -ಕನ್ನಡ ಎರಡು ಭಾಷೆಗಳಲ್ಲಿ ಹೇಳತೊಡಗಿದರು.

'ಹಾಗೆಲ್ಲ ಬರೆಯಲು ನಮ್ಮ ಮತದ ಬಗ್ಗೆ ನಿನಗೆ ಏನು ಗೊತ್ತುಂಟು?"

"ಪೋಲೀಸರಿಗೆ ಕಂಪ್ಲೇಂಟ್ ಕೊಡುವವರಿದ್ದೇವೆ. ತಿಳಿಯಿತೆ?"

"ಕೂಡಲೇ ನಮ್ಮ ಗುರುಗಳ ಬಳಿಗೆ ಬಂದು ಕ್ಷಮೆ ಕೇಳತಕ್ಕದ್ದು. ಇಲ್ಲವೆಂದರೆ ನಿನ್ನ ಫಜೀತಿ ನೆಟ್ಟಗಾಗಲಿಕ್ಕಿಲ್ಲ"

"ಅಷ್ಟು ಧೈರ್ಯವಿದ್ದರೆ ಕೆಳಗೆ ಇಳಿದು ಬಾ"

"ಇವನ ವೇಷ ನೋಡಿರೋ, ಒಳ್ಳೇ ಭಿಕಾರಿ."

"ಮೀಸೆ ಬಿಳಿಯಾಗಿದ್ದರೂ ನಿನಗೆ ಬುದ್ಧಿ ಬರಲಿಲ್ಲವಲ್ಲಯ್ಯ."

ಈ ರೀತಿ ಮುಂದುವರಿಯುತ್ತಿದ್ದಾಗ ಜನ ಮುಕುರಿದರು. ಆದರೆ ಅವರುಗಳ ಮಾತಿನ ರೀತಿಯಿಂದ ನೆರೆದವರಿಗೂ ಅದೊಂದು ಗಂಭೀರ ಸಂಗತಿಯಾಗಿ ಅನಿಸಲಿಲ್ಲ. ಇತ್ತ ಪೈಗಳನ್ನು ಕಳಿಸ ಬಂದ ಬಂಟ್ವಾಳಕರ ಎಂಬವರಿಗೆ ಕಳವಳ: ಬಾವಾಜಿಗಳನ್ನು ತಡೆದು, ಅಲ್ಲಿಂದ ಸಾಗಿಸುವುದು ಹೇಗೆ? ಪೋಲಿಸರಿಗೆ ಹೇಳೋಣವೆ?...

ಇಷ್ಟೆಲ್ಲಾ ನಡೆದಿದ್ದರೂ ಕಂಪಾರ್ಟ್‌ಮೆಂಟಿನಲ್ಲಿ ಕಿಟಕಿಯ ಬಳಿ ಕೂತಿದ್ದ ಪೈಗಳು ಬಾಯಿ ತೆರೆದದ್ದೇ ಇಲ್ಲ! ಬಾವಾಜಿಗಳ ಹಾವಭಾವದ ಕಡೆಗೆ ನಿರ್ಲಿಪ್ತ ರೀತಿಯಿಂದ ನೋಡುತ್ತಿದ್ದರು. ಆದರೆ ಯಾವ ಪ್ರತಿಕ್ರಿಯೆಯನ್ನೂ ತೋರಿಸಲಿಲ್ಲ. ಆಮೇಲೆ ತಾವು ಕೈಯಲ್ಲಿ ಹಿಡಿದಿದ್ದ ಪುಸ್ತಕವನ್ನು ಓದುವುದರಲ್ಲಿ ಮಗ್ನರಾಗಿ ಬಿಟ್ಟರು. ಗಾಡಿ ಚಲಿಸತೊಡಗಿತು. ಆಮೇಲೆಯೂ ಬಾವಾಜಿಗಳ ಬಾಯಿ - ಕೈ ಕೆಲಸ ಮಾಡುತ್ತಲೇ ಇತ್ತು.

ತಿಳಿಯಿತಲ್ಲವೆ ಪೈಗಳು ತೆಗಳಿಕೆಯನ್ನು ಎದುರಿಸಿದ ರೀತಿ? ಅದೆಂದರೆ ದಿವ್ಯ ನಿರ್ಲಕ್ಷ್ಯ. ನಿಂದಕರನ್ನು ಸಮರ್ಥ ರೀತಿಯಲ್ಲಿ ಎದುರಿಸುವ ಪಂಚಾಕ್ಷರೀ ಮಂತ್ರವೂ ಅದೇನೆ!!.

"ನಿಂದೆಯೂ ಹುಸಿಯೂ ಅವಳಿ ಜವಳಿ
ಕೂಸುಗಳು. ನಿಂದೆಯಿದ್ದಲ್ಲಿ ಹುಸಿ ತಾನು

ಮುಂದೆ - ಎನ್ನುವುದು. ನಿಂದೆಯ ಎದೆ ಕೆಡುಕು; ಹುಸಿಯ ನಾಲಗೆ ಕೆಡುಕು. ಪ್ರೇಮಳಾದೇವಿ ನಿಂದಾಬಾಯಿಗೆ ಅತ್ತಿಗೆ ಇದ್ದಂತೆ. ಪ್ರೇಮಳೆಯು ಮನೆಯಲ್ಲಿಲ್ಲದಿದ್ದರೆ ಬಾಲವಿತಂತುವಾದ ನಿಂದಾದೇವಿಯ ಆರ್ಭಟೆ ಹೆಚ್ಚು."

***

"ಇನ್ನೊಬ್ಬರ ತಪ್ಪು ತೋರುವಾಗ ಎಚ್ಚರವಿರಬೇಕು. ಬಿರುಸಾಗಿ ಊದಿದರೆ ಬೆಂಕಿ ಆದೀತು. ಮೆಲ್ಲನೆ ಊದಿದರೆ ಹೊಗೆ ತುಂಬೀತು... ಕೆಲವರು ಕಂಡವರ ಮನೆಯಲ್ಲಿ ತಲೆಹಾಕಿ ತೂತುಗಳನ್ನು ನೋಡಿಕೊಂಡು ತಮಗೆ ಬೇಕುಬೇಕಾದಂತೆ - ಆ ಛಿದ್ರಗಳನ್ನು ಇನ್ನೂ ಬಿರಿಯುತ್ತಾರೆ. ಇಂಥವರು ನೆರೆಯವರನ್ನು ತಿದ್ದುವವರಲ್ಲ; ಗುದ್ದುವವರು.

ಪಂಜೆ ಮಂಗೇಶರಾಯರು
(1905ರ 'ಸತ್ಯ ದೀಪಿಕೆ'ಯಲ್ಲಿ)

***

೮. ಮನಃಶಾಂತಿಯ ಸಪ್ತ ಸೂತ್ರಗಳು

ಮನಶ್ಶಾಂತಿಃ ! ಎಲ್ಲಿದೆ? ಯಾರಿಗಿದೆ? ಈಗಿನ ದಿನಗಳಲ್ಲಿ ಅದೊಂದು ಮರೀಚಿಕೆ. 'ದಿನವಿಡೀ ಮನಸ್ಸು ಶಾಂತ ಹಾಗೂ ಉಲ್ಲಸಿತವಾಗಿ ಇರಬೇಕು; ಯಾವಾಗಾದರೊಮ್ಮೆ ತುಸು ಕಿರಿಕಿರಿಯಾದರೆ ತಪ್ಪೇನಿಲ್ಲ' ಎಂಬುದಾಗಿ ಪ್ರತಿಯೊಬ್ಬನೂ ಬಯಸುವನು. ಆದರೆ ಸದ್ಯದ ನಮ್ಮ ದೈನಂದಿನಿಯು ತದ್ವಿರುದ್ಧ ಸ್ಥಿತಿಯಲ್ಲಿರುತ್ತದೆ. ಸದಾ ಕಾಳಜಿ, ಚಿಂತೆ ದುಗುಡ, ಟೆನ್ಶನ್! ನಾವೆಲ್ಲ ಸುಖಾಪೇಕ್ಷಿಗಳಷ್ಟೇ. ಹಾಗೆ ಸುಖಪಡುವುದಕ್ಕೆ ಅನೇಕ ಬಾಹ್ಯ ಸಾಧನಗಳಿವೆ. ಮನಶ್ಶಾಂತಿಗೆ ಮಾತ್ರ ಹೊರಗಿನ ಯಾವ ಪ್ರಮೇಯವೂ ಪ್ರಯೋಜನಕ್ಕೆ ಬಾರದು. ಮನಸ್ಸೇ ಆ ಸ್ತಿಮಿತವನ್ನು ಪಡೆಯಬೇಕು.

ಭಾವನೆಗಳಿಗೆ, ಬದುಕಿನ ಏರು-ಪೇರುಗಳಿಗೆ ಸಮನಾಗಿ ಸ್ಪಂದಿಸುವವರ ಲಕ್ಷಣವನ್ನು ಭಗವದ್ಗೀತೆಯಲ್ಲಿ ಹೇಳಿದೆ. ಅಂಥವರಿಗೆ 'ಸ್ಥಿತಪ್ರಜ್ಞ' ಎಂಬ ಬಿರುದೂ ಇದೆ. ಆದರೇನು ದ್ವಾಪರ ಯುಗದಲ್ಲಿ ಅದನ್ನು ಕೇಳಿಸಿಕೊಂಡ ಅರ್ಜುನನಿಗೂ ಮನಶ್ಶಾಂತಿ ಸಾಧ್ಯವಾಗಿತ್ತೆ? ಕಲಿಯುಗದ ಇಪ್ಪತ್ತೊಂದನೆಯ ಶತಮಾನದಲ್ಲಿ ಪದಾರ್ಪಣ ಮಾಡಲಿರುವ ನಮಗಂತೂ ಅದು ಸಾಧ್ಯವೇ ಇಲ್ಲ.

ನಮ್ಮ ಚಿಂತೆ ಕಾಳಜಿಗಳಿಗೆ ಮೂರು ಕಾರಣಗಳು. ಒಂದನೆಯದಾಗಿ, ನಮ್ಮ ನಮ್ಮ ಸ್ವಭಾವ ಅದರಂತೆ ಜನರೊಡನೆ ಸಂಬಂಧ ಹಾಗೂ ಹೊರಗಿನ ಪರಿಸ್ಥಿತಿ. ಇವುಗಳಲ್ಲಿ ಹುಟ್ಟುಗುಣವಾದ ಸ್ವಭಾವವನ್ನು ಅದೆಂತು ಬದಲಿಸಲು ಸಾಧ್ಯ? ಇತ್ತ ಜನಸಂಪರ್ಕವನ್ನೂ ಕಳಚಲಿಕ್ಕಾಗದು; ನಾವು ಅರಣ್ಯವಾಸಿಗಳಲ್ಲವಲ್ಲ. ಅದರಂತೆ, ಅಗೋಚರವಾದ ಹೊರಗಿನ ಪರಿಸ್ಥಿತಿಯೂ ನಮಗೆ ಎಲ್ಲ ಕಾಲಕ್ಕೆ ಅನುಕೂಲವಾಗಿರದು. ಇಂದಿನ ಯಾಂತ್ರಿಕ ನಾಗರಿಕತೆಯಲ್ಲಿ ನಮಗರಿಯದಂತೆ ಏನಾದರೂ ಹೆಚ್ಚು ಕಡಿಮೆ ಆಗಿಯೇ ಆಗುತ್ತದೆ.

ಮನಸ್ಸಿನ ಅಶಾಂತಿಯನ್ನು ನೀಗಬೇಕಾದರೆ ಒಂದು ಬೀಜಮಂತ್ರವಿದೆ. ಅದೆಂದರೆ ಬದುಕಿನ ಬಗ್ಗೆ, ಪರಿಚಿತ ಜನರ ಬಗ್ಗೆ ನಮ್ಮ ನಿಲುವನ್ನೇ ಬದಲಿಸಿಕೊಳ್ಳುವುದು! ಇದಕ್ಕೆ ಅನುಗುಣವಾಗಿ ಕೆಲವು ಸೂತ್ರಗಳನ್ನು ರೂಪಿಸಿದ್ದೇನೆ. ನನ್ನ ಮಟ್ಟಿಗೆ ರೂಢಿಸುತ್ತಾ ಇದ್ದೇನೆ.

ಇಕೋ, ನಾನು ಮೊದಲಿಗೇ ಸ್ಪಷ್ಟಪಡಿಸುವೆ; ಇದೇನು ಉಪದೇಶದ ಮಾತಲ್ಲ. (ಉಪದೇಶವನ್ನು ಕೊಡುವವರು ಜೀವನದಲ್ಲಿ ಏನನ್ನೂ ಸಾಧಿಸದ ಕೈಲಾಗದವರು.) ನನ್ನ ಹಾಗೂ ಇನ್ನೂ ಹಲವರ ಲೌಕಿಕ ಅನುಭವವು ಕಲಿಸಿದ್ದರ ಫಲವಿದು.

***

ಮೊದಲಲ್ಲಿ ಹೇಳಬೇಕಾದ ಸೂತ್ರವೆಂದರೆ ' ಕರ್ತವ್ಯದತ್ತ ಪೂರ್ಣ ಗಮನ'. ಹೋ! ಇದು ಮಾಮೂಲಿಯ ಮಾತಾಯ್ತಲ್ಲ ಎಂದು ನೀವನ್ನಬಹುದು. ಆದರೆ ಕರ್ತವ್ಯದ ವಿಚಾರವು 'ಅತಿಪರಿಚಯಾದವಜ್ಞಾ' ಎಂಬಂತಾಗಿದೆ. ನಮ್ಮಲ್ಲಿ ಕರ್ತವ್ಯ ಪ್ರಜ್ಞೆಯು ಸಾಕಷ್ಟು ಇದ್ದೇ ಇದೆ. ಆದರೆ ಈ ಸೂತ್ರದಲ್ಲಿ ಒತ್ತುಕೊಟ್ಟಿರುವುದು 'ಪೂರ್ಣ' ಎಂಬುವುದಕ್ಕೆ. ನಾವು ಮಾಡಬೇಕಾಗಿರುವ ಕೆಲಸವು ಅಲ್ಪವಿದ್ದೇ ಇರಲಿ, ಅದರಿಂದ ಲಾಭ ಇಲ್ಲದೆ ಇರಲಿ, ಯಾವುದೇ ಕೆಲಸವನ್ನು ಮನಮುಟ್ಟಿ ಚೆನ್ನಾಗಿ ಮಾಡಬೇಕೆನ್ನುವುದೇ ಈ ಸೂತ್ರದ ಮರ್ಮವಾಗಿದೆ.

ನೌಕರಿ ಇಲ್ಲವೆ ಉದ್ಯಮ, ಗೃಹಿಣೀತ್ವ ಮತ್ತು ವಿದ್ಯಾಭ್ಯಾಸ ಇವು ಮೂರು ನಮ್ಮ, ಅಂದರೆ ನಮ್ಮ ಶಿಕ್ಷಣವಂತ ಶ್ರೀಸಾಮಾನ್ಯರ ಮುಖ್ಯ ಕರ್ತವ್ಯಗಳಷ್ಟೆ. ಇದರಲ್ಲಿ ಬಡವ-ಬಲ್ಲಿದ, ಹಿರಿಯ-ಕಿರಿಯ ಎಂಬ ಭೇದ ಇಲ್ಲದೆ, ಅವರವರಿಗೆ ಅವರ ಕರ್ತವ್ಯ ಮಹತ್ವದ್ದಿರುತ್ತದೆ. ಎಮ್. ಟೆಕ್ ಮಾಡುವ ವಿದ್ಯಾರ್ಥಿ ತನ್ನ ಓದಿನತ್ತ ಯಾವ ಗಮನವನ್ನು ಕೊಡುವನೋ, ಅಷ್ಟೇ ಗಮನವನ್ನು ಪ್ರಾಥಮಿಕ ಇಯತ್ತೆಯಲ್ಲಿರುವ ಚಿಕ್ಕ ಹುಡುಗನೂ ಕೊಡುವನು. ನಮ್ಮ ಕರ್ತವ್ಯವನ್ನು (Duty ಮತ್ತು Work)... ಎರಡೂ ಅರ್ಥದಲ್ಲಿ ದಕ್ಷತೆಯಿಂದ ನೆರವೇರಿಸುತ್ತ ಇದ್ದಲ್ಲಿ ಒಂದು ಬಗೆಯ ಮನಸ್ಥೈರ್ಯ ಬರುತ್ತದೆ. ಯಾರೇನು ನನಗೆ ಮಾಡಿಯಾರು? ಎಂಬ ಎದೆಗಾರಿಕೆ ಮೂಡುತ್ತದೆ. ದಿನದ ಗರಿಷ್ಠ ಭಾಗವನ್ನು ಯಾವುದಾದರೊಂದು ಮುಖ್ಯವಾದ ಕೆಲಸದಲ್ಲಿ ಕಳೆಯುವಾಗ, ಆ ನಿಮಿತ್ತದಿಂದ ಒದಗುವ ಹೆಚ್ಚು ಕಡಿಮೆಗಳಿಗೆ ನಮ್ಮ ಮನಸ್ಸು ಬೇಗುದಿಗೊಳ್ಳುವ ಪ್ರಸಂಗವು ಇದರಿಂದ ತಪ್ಪುವುದು.

***

ಮುಖ್ಯ ಕರ್ತವ್ಯದ ಜೊತೆಗೆ ನಮಗೆಲ್ಲ ಉಪಕರ್ತವ್ಯವೆಂಬುದೂ ಇರುತ್ತದೆ. ಇರತಕ್ಕದ್ದು. ಇಡೀ ದಿನವನ್ನು ನಾವು ಯಾರೂ ಮುಖ್ಯ ಕರ್ತವ್ಯದಲ್ಲಿಯೇ ಕಳೆಯುವುದಿಲ್ಲ. ಆಫೀಸಿಗೆ ಹೋಗಿ ಒಂದಿಷ್ಟು ದುಡಿದು ಬಂದೆವೆಂದರೆ ಮಹಾ ಶತಕೃತ್ಯ ಮಾಡಿದೆವಾಗಿ ಬಗೆಯುತ್ತೇವೆ. ನಮ್ಮ ಪಾಲಿನ ಕರ್ತವ್ಯ ಮುಗಿಯಿತೆಂದೇ ಭಾವಿಸುತ್ತೇವೆ. ಆದರೆ ಉಳಿದ ವೇಳೆಯನ್ನು ಶಿಕ್ಷಣ ಕ್ಷೇತ್ರದಲ್ಲಿಯೋ, ಸಂಘ ಸಂಸ್ಥೆಗಳಲ್ಲಿಯೋ ತೊಡಗಿಸುವುದರ ಮೂಲಕ ತುಸು ಸಮಾಜ ಸೇವೆಯನ್ನು ಮಾಡಲು ಸಾಧ್ಯವಿಲ್ಲವೆ? ಸಮಾಜದ ಋಣವನ್ನು ಎಷ್ಟು ತೀರಿಸಿದರೂ ಕಡಿಮೆಯೇ ಎನ್ನುವುದನ್ನು ಮರೆಯುತ್ತೇವೆ. ನನ್ನ ಒಬ್ಬ ಪರಿಚಿತರ ಉಪಕರ್ತವ್ಯವೆಂದರೆ ಶವ ಸಂಸ್ಕಾರದ ಸಹಾಯ. ಸಾವು ಕಾಲಿರಿಸಿದ ಮನೆಯೊಂದರ ಜನಕ್ಕೆ ಇಂಥವರ ಸಹಾಯ (ಅಪರಕರ್ಮ ಮುಗಿಯುವ ವರೆಗೂ) ಎಷ್ಟೊಂದಿದೆಯೆಂಬುದನ್ನು

ನಾವು ಬಲ್ಲೆವು.

ಮುಂಬಯಿಯಲ್ಲಿಯ ಒಬ್ಬ ಡಾಕ್ಟರ್ ದಂಪತಿಗಳ ವಿಶಿಷ್ಟ ಸಮಾಜ ಸೇವೆಯ ಬಗೆಗೆ ಕೆಲವು ವರ್ಷಗಳ ಹಿಂದೆ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಆಸ್ಪತ್ರೆಯಲ್ಲಿ ಬಿಡುವಿಲ್ಲದೆ ದುಡಿದ ಮೇಲೆಯೂ ರಾತ್ರಿ ತಮ್ಮ ವ್ಯಾನ್ ತೆಗೆದುಕೊಂಡು ಅವರು ಫೈವ್ ಸ್ಟಾರ್ ಹೋಟೆಲುಗಳಿಗೆ ಹೋಗೋದು: ಅಲ್ಲಿ ಉಳಿದಿರುವ ಖಾದ್ಯವಸ್ತುಗಳನ್ನೂ (ಉಚ್ಛಿಷ್ಟವನ್ನಲ್ಲ) ಜಮಾಯಿಸಿ ಕುಷ್ಠರೋಗದ, ಇಲ್ಲವೆ ಅನಾಥರ ಆಶ್ರಮಗಳಿಗೆ ಹಂಚುವುದು.

ಸಮಾಜ ಸೇವೆಯನ್ನು ಬಿಡೋಣ, ಮನೆಯಲ್ಲಿಯೇ, ನಮ್ಮ ನೆರೆಯಲ್ಲಿಯ ನಿಯಮಿತವಾದ ಒಂದು ಉಪಕೃತ್ಯವನ್ನು ನಿರ್ವಹಿಸುವುದು ಸಾಧ್ಯ. ಅನೇಕ ವರ್ಷಗಳ ಹಿಂದಿನ ಮಾತು. ನಾವು ಒಂದು ಚಾಳಿನಲ್ಲಿದ್ದಾಗ ಓರ್ವ ಕಾಲೇಜು ಕನ್ಯೆ ಪ್ರತಿದಿನ ಸಂಜೆ ಅಲ್ಲಿಯ ಮಕ್ಕಳನ್ನೆಲ್ಲ ಕಲೆಹಾಕಿ ಅವರಿಂದ ನಾನಾ ಬಗೆಯ ಆಟಗಳನ್ನು ಆಡಿಸುತ್ತಿದ್ದಳು. ಅದನ್ನು ಪ್ರತಿದಿನ ನೋಡುವುದು ನನ್ನ ಕಣ್ಣಿಗೆ ಹಬ್ಬವಾಗಿತ್ತು. ಈಚೆಗೆ ಅಂದರೆ ೧೫-೨೦ ವರ್ಷ ಕಳೆದ ಮೇಲೆ ಗೃಹಿಣಿಯಾಗಿದ್ದ ಅವಳನ್ನು ಕಂಡೆ. ಅದೇ ಪ್ರಸನ್ನ ಮುಖ ಮುದ್ರೆ. ಅವಳ ಗೆಲುವಿನ ಮಾತನ್ನು ಕೇಳುತ್ತಿದ್ದಾಗ ನನಗೆ ತುಂಬಾ ಖುಷಿಯಾಯಿತು. ಅವಳ ಉಭಯ ಕರ್ತವ್ಯಗಳ ಪಾಲನೆಯ ಅರಿವೂ ಆಯಿತು.

ನೆನಪಿಡಿ: ಉಪಕರ್ತವ್ಯವೂ ಒಂದು ಕರ್ತವ್ಯವೇ. ಅದು ಕಡಿಮೆ ಪ್ರಮಾಣದ್ದು ಇರಬಹುದು; ಹಾಗೆಂದು 'ಬಿಡುವಿದ್ದಾಗ ನೋಡೋಣವಂತೆ' ಅಥವಾ 'ಮಾಡದಿದ್ದರೂ ನಡೀತದೆ' ಎಂಬ ಭಾವನೆ ಸಲ್ಲದು. ಈ ಬಗೆಯ ಕೆಲಸಗಳಿಂದ ಮನಸ್ಸಿಗೊದಗುವ ಶಾಂತಿ ಸಂತೃಪ್ತಿಗಳನ್ನು ಅನುಭವಿಸಿಯೇ ಈ ಮಾತನ್ನು ಹೇಳುತ್ತಿದ್ದೇನೆ.

***

ಉಪಕರ್ತವ್ಯದ ಜೊತೆಗೆ ಹೇಳಬೇಕಾದದ್ದು , ಯಾವುದೊಂದು ಹವ್ಯಾಸ ಸಾಧನೆ. ಇತರ ಪ್ರಾಣಿಗಳಲ್ಲಿ ಕಂಡು ಬರುವ ಒಂದು ವಿಶಿಷ್ಟ ಚೇತನ ಮನುಷ್ಯನಲ್ಲಿದೆ. ಉಣ್ಣು-ತಿನ್ನುವ ಪಶುಭೂಮಿಕೆಯನ್ನು ದಾಟಿ ಉತ್ತಮ ಸಂಸ್ಕಾರದಿಂದ ಬಾಳನ್ನು ನಾವು ಸಾಗಿಸಬಲ್ಲೆವು. ಅಂಥ ಅನುಕೂಲಗಳಲ್ಲಿ ಹವ್ಯಾಸವೂ ಒಂದು. ಚಟ, ವ್ಯಸನಗಳಿಗೂ ಇದಕ್ಕೂ ತುಂಬಾ ಅಂತರ. ಅವು ದೈಹಿಕ; ಹವ್ಯಾಸವು ಮೂಲತಃ ಮಾನಸಿಕ ಚೇತನಕ್ಕೆ ಸಂಬಂಧಿಸಿದ್ದು.

ಹವ್ಯಾಸಕ್ಕೆ ವಿಷಯಗಳು? ಲೆಕ್ಕವಿಲ್ಲದಷ್ಟು. 'ಸಾಹಿತ್ಯ, ಸಂಗೀತ, ಚಿತ್ರಕಲೆ' ಫೋಟೋಗ್ರಫಿ-ಇವಂತೂ ತಿಳಿದ ಹವ್ಯಾಸಗಳೇ. ಏನಾದರೊಂದು ಕರಕುಶಲ ಕೈಗಾರಿಕೆಯೂ

ಆದೀತು. ಅಂಚೆಚೀಟಿಯ ಸಂಗ್ರಹ ಆ ಬಾಲವೃದ್ಧರಲ್ಲಿಯೂ ಜನಪ್ರಿಯ. ಕ್ರಿಕೆಟ್ ಆಟದ ಅಂಕಿ ಸಂಖ್ಯೆಗಳ ದಾಖಲೆ? ಅದನ್ನೂ ಒಂದು ಹವ್ಯಾಸವೆಂದೇ ತಿಳಿಯತಕ್ಕುದು. ಇನ್ನು ಕೆಲವನ್ನು ಕೇಳಿರಿ: ಓರ್ವ ಸಯಾಮೀ ರಾಜಕುವರ ದೇಶವಿದೇಶಗಳಲ್ಲಿಯ ಕಡ್ಡಿಪೆಟ್ಟಿಗೆಗಳ ಲೇಬಲ್ ಕಲೆ ಹಾಕಿದ್ದನಂತೆ!ನನ್ನ ಸಹೋದ್ಯೋಗಿಯೊಬ್ಬರ ಹದಿಹರೆಯದ ಮಗ ತಾನು ನೋಡಿದ ಮೊತ್ತ ಮೊದಲಿನ ಸಿನೆಮದ ಟಿಕೆಟ್ಟಿನಿಂದ ಇದುವರೆಗಿನ ಎಲ್ಲವುಗಳನ್ನು ಹಾಗೂ ಆ ಸಿನೆಮ ನೋಡಿದಾಗ ತನ್ನ ಜೊತೆಗೆ ಇದ್ದವರ ಹೆಸರುಗಳನ್ನು ಸೇರಿಸಿ ಆಲ್ಬಮ್‌ಗೆ ತಾಗಿಸಿದ್ದಾನೆ. (ಅವರ ಮನೆಯಲ್ಲಿ ನಾನು ಅದನ್ನು ತಿರುವಿಹಾಕುತ್ತಿದ್ದಾಗ, ಅವನ girl friend ಯಾರೆಂಬುದನ್ನು ಗುರುತಿಸಿದೆ). ನಾನಾ ತರಹದ ಪೆನ್ನುಗಳ ಸಂಗ್ರಹವನ್ನು ಬೆಂಗಳೂರಿನ ಒಬ್ಬ ಪತ್ರಿಕೋದ್ಯಮಿ ಮಾಡಿದ್ದಾನೆಂದು ಈಚೆಗೆ ವರದಿಯಾಗಿತ್ತಲ್ಲವೆ?

ನನ್ನ ಪರಿಚಯದ ಒಬ್ಬರು ಅಕೌಂಟೆಂಟ್ ಹುದ್ದೆಯಿಂದ ನಿವೃತ್ತರಾದವರು. ಲೆಕ್ಕ ಪತ್ರ ಗಳಲ್ಲಿಯೇ ಆಯುಷ್ಯದ ಬಹುಭಾಗವನ್ನು ಅವರು ಕಳೆದಿದ್ದರೂ ಸೊಗಸಾಗಿ ಹರಟೆ ಹೊಡೆಯುತ್ತಾರೆ. ತಮ್ಮ ಅನುಭವಗಳನ್ನು ಸೇರಿಸಿ ಕತೆ ಮಾಡಿ ಹೇಳುತ್ತಾರೆ. ಅವರೇನಾದರೂ ಕತೆ - ಕಾದಂಬರಿ ಬರೀತಿದ್ದರೆ, ಇಂದಿನ ಹಲವು ಜನಪ್ರಿಯ ಲೇಖಕರನ್ನು ಮೀರಿಸುತ್ತಿದ್ದರೇನೊ. ಅಂತು ಅವರ ಸುಖಸಂಕಥೆಗಳನ್ನು ಕೇಳುವುದಕ್ಕೆ ನಮಗೆಲ್ಲಾ ತುಂಬಾ ಖುಶಿ. ಈಚೆಗೆ ಆ ಶ್ರೋತೃವೃಂದ ಎಷ್ಟೊಂದು ಬೆಳೆದಿದೆಯೆಂದರೆ, ಅವರ ಮನೆಯಲ್ಲಿ ಪ್ರತಿ ಸಂಜೆ ಅಥವಾ ರಾತ್ರಿ ಏಳೆಂಟೂ ಜನರಾದರೂ ಜಮಾಯಿಸಿರುತ್ತಾರೆ. ಇದೂ ಒಂದು ಉತ್ತಮ ಹವ್ಯಾಸವೆಂದೇ ಬಗೆಯಬೇಕಲ್ಲವೆ?

ಮಂಗಳೂರಿನಲ್ಲಿ ನಾನಿದ್ದಾಗ, ನಮ್ಮ ಬೀದಿಯ, ಓರ್ವ ಪರಿಚಯದ ಹುಡುಗ ನನ್ನ ಪರ್ಸನ್ನು ಕಂಡು; "ಸಾಕಷ್ಟು ಹಳೆಯದಾಗಿದೆ, ಅಂಕಲ್. ನನಗೆ ಕೊಡಿರಿ. ನೀವು ಇನ್ನೊಂದನ್ನು ಕೊಳ್ಳಿರಿ" ಎಂದ. ಅದು ನಿಜವೇ. ಕೊಟ್ಟೆ; ಹೊಸದನ್ನು ಕೊಂಡೆ. ಮರುದಿನ ಅವನ ತಂದೆ ಭೆಟ್ಟಿಯಾದಾಗ ಅವರೇ ಅದನ್ನು ಪ್ರಸ್ತಾಪಿಸಿ, "ಇದೇ ರೀತಿ ಸವಿ ಮಾತಾಡಿ ತುಂಬಾ ಪರ್ಸ್‌ಗಳನ್ನು ಕೂಡಿಹಾಕಿದ್ದಾನೆ" ಎಂದು ಹೇಳಿ ನಕ್ಕರು. ಹೀಗೆ ಹವ್ಯಾಸಗಳ ಆಯ್ಕೆಗೆ ಮಿತಿಯೆಂಬುದಿಲ್ಲ. ಅದು ಯಾವುದೇ ಇರಲಿ ಕಾಲಕಾಲದ ನಮ್ಮ ಮನೋಜಾಡ್ಯವನ್ನು ನೀಗಲು ಇದೊಂದು ಉತ್ತಮವಾದ ಸಾಧನೆ.

***

ನಮ್ಮ ಮಾನಸಿಕ ಕಿರಿಕಿರಿಗೆ ನಮಗೆ ಗೊತ್ತಿರದ ಪರಿಸ್ಥಿತಿಯೂ ಕಾರಣವಾಗಬಹುದು- ಎಂದೆನಲ್ಲವೆ? ಆಗ ಕೈಕೊಂಡ ಯಾವುದೇ ಕೆಲಸವಿರಲಿ, 'ನೋ ಗ್ಯಾರಂಟಿ' ನಿಲುವನ್ನು ತಾಳಿದರೆ ಹೇಗೆ? ನಾನಂತೂ ಯಾವದೊಂದು ಕಾರ್ಯವು ಅದು ಯಃಕಶ್ಚಿತವೇ ಇರಲಿ, ಕೈಗೂಡದು ಎಂಬ ಗ್ರಹಿಕೆಯಿಂದಲೇ ಅದಕ್ಕೆ ತೊಡಗುವೆ.

ಮಹತ್ವದ ಕಾರ್ಯವಿದ್ದರಂತೂ ಅದಕ್ಕಾಗಿ ಎಷ್ಟೆಲ್ಲ ಸಿದ್ಧತೆ ಮಾಡಿಕೊಂಡಿರುತ್ತೇವೆ! ಅದರ ಕೈಗೂಡುವಿಕೆಗೆ ಹೊರಗಿನ ಆಗು ಹೋಗುಗಳನ್ನು ಅವಲಂಬಿಸಿರುತ್ತೇವೆ. ಅವುಗಳೋ ನಮ್ಮ ಅಳವಿನಲ್ಲಿ ಇಲ್ಲದವುಗಳು. ಮುಂದೇನು? ಹೇಗೆ ಆದೀತೋ? ಇವರು -ಅವರು ಏನು ಮಾಡಿಯಾರು? ಎಂದೆಲ್ಲ ಅನಿಶ್ಚಿತತೆ ನಮ್ಮನ್ನು ಕಾಡುತ್ತಲೇ ಇರುವುದು. ಇಷ್ಟೆಲ್ಲ ಆಗಿ, ಕೊನೆಯಲ್ಲಿ ಆ ಕೆಲಸ ಕೈಗೂಡದೇ ಇದ್ದರಂತೂ ತುಂಬಾ ನಿರಾಶೆ ಕವಿಯುವುದು. ಕೆಲಸದ ಆರಂಭದಿಂದಲೇ ಅದು ಕೈಗೂಡದು ಎಂಬ ಗ್ರಹಿಕೆಯಿಂದ ಹೊರಡುವಾ, ಇದು ಸಿನಿಕತನದ ಅಥವಾ ಕೈಲಾಗದವರ ಮನೋವೃತ್ತಿ ಏನಲ್ಲ.

'ನೋ ಗ್ಯಾರಂಟಿ'ಯ ಇಂಗಿತ ಅಷ್ಟಕ್ಕೆ ಮುಗಿಯುವುದಿಲ್ಲ. ಯಾವದೊಂದು ಕೆಲಸವು ಆಗಲಿಕ್ಕಿಲ್ಲ ಎಂದಾಗ ಬದಲೀ ವ್ಯವಸ್ಥೆಯನ್ನು ಮಾಡದಿದ್ದರೆ ಹೇಗೆ? ಆ ಕೆಲಸವು ಅ-ಮಹತ್ವದ್ದೇ ಇರಲಿ; ಅತಿ ಮಹತ್ವದ್ದೇ ಇರಲಿ ಅದರ ಬದಲಿಗೆ ಏನು? ಎಂದು ಯೋಚಿಸಿ ಇಟ್ಟಿರುವುದೊಳಿತು. Alternative! ನಮ್ಮ ಕೆ.ಇ.ಬಿ.ಯ ವಿದ್ಯುತ್ತಿನ ಪೂರೈಕೆಗೆ ಪ್ರತಿಯಾಗಿ ಮನೆಯಲ್ಲಿ ಮೇಣಬತ್ತಿಯ ಬದಲೀ ವ್ಯವಸ್ಥೆ ಇರುವಂತೆ. ಒಂದು ಮಾತು: ಹೇಗೂ ಬದಲಿ ವ್ಯವಸ್ಥೆ ಇದೆಯೆಂದು . ಆ ಕೆಲಸದ ವಿಷಯಕವಾದ ನಮ್ಮ ಪ್ರಯತ್ನದಲ್ಲಿ ಅರೆಕೊರೆಯಾಗಕೂಡದು.

ಆಫೀಸಿನಲ್ಲಿ ನಿಮ್ಮನ್ನು ಬೇರೊಂದು ಊರಿಗೆ ವರ್ಗಾಯಿಸುವ ಹುಕುಮನ್ನು ಹೊರಡಿಸಿಬಿಟ್ಟಿದ್ದಾರೆ. ನಿಮಗೆ ಊರು ಬಿಡುವುದು ಸಾಧ್ಯವೇ ಇಲ್ಲ. ವ್ಯವಹಾರಕುಶಲರಾದ ನೀವು ಏನೆಲ್ಲ ಉಪಾಯಗಳನ್ನು ಯೋಚಿಸಿ ಅದನ್ನು ರದ್ದುಪಡಿಸಲು ಪ್ರಯತ್ನ ಮಾಡುತ್ತಿರುವಿರಿ. ಆದರೂ 'ನೋ ಗ್ಯಾರಂಟಿ' ಅಂತ ಭಾವಿಸಿ ಸಾಮಾನು ಕಟ್ಟುವ, ಮನೆ ತೆರವು ಮಾಡುವ, ಮುಂತಾಗಿಯೂ ಯೋಚಿಸಿ ಇಟ್ಟಲ್ಲಿ, ನಿಮ್ಮ ಪ್ರಯತ್ನಗಳಿಗೆ ಫಲ ಸಿಕ್ಕದಿದ್ದರೆ ಮನಸ್ಸು ಅಷ್ಟೊಂದು ತಲ್ಲಣಗೊಳ್ಳಲಾರದು.

ಮಗಳು ಕುರೂಪಿಯಲ್ಲವಾದರೂ 'ರಾಶೀ' ಕನ್ಯಾಮಣಿ. ಈಗಾಗಲೇ ಏಳು ಜನ ನೋಡಿ ನಾಪಾಸು ಮಾಡಿದ್ದಾರೆ. ಆದರೆ ಈಗ ನೋಡ ಬರುವವ ಹಾಗಲ್ಲವೆಂದು ತೋರುತ್ತದೆ. ಅವನೂ ಸಾದಾ ವರನೇ. ಅಲ್ಲದೆ ಅವರಿವರಿಂದ ಹೇಳಿಸಿದ್ದೀರಿ... ಇತ್ತ ನಿಮ್ಮ ಹೆಂಡತಿ ತುಂಬಾ ಆಸೆ ಹಿಡಿದಿದ್ದಾಳೆ. ಆಗ ಮಾತ್ರ ನೀವು ಅವಳಿಗೆ 'ನೋ ಗ್ಯಾರಂಟಿ'ಯ ಎಚ್ಚರ ಹೇಳಲೇಬೇಕು. ಮತ್ತೂ ಒಂದು ವರನ ಪ್ರಸ್ತಾಪವನ್ನು ಮಾಡಿ ಇಟ್ಟಿರಬೇಕು!

ಅದರಂತೆ 'ನೋ ಗ್ಯಾರಂಟಿ'ಯನ್ನು ಅನ್ವಯಿಸಬೇಕಾದ ಪ್ರಸಂಗಗಳೆಂದರೆ ವಿದೇಶ ಪ್ರಯಾಣ, ರವಿವಾರದ ಸಿನೆಮಾ, ಎರಡು ಹೆಣ್ಣು ಮಕ್ಕಳಾದ ಮೇಲೆ ಮೂರನೆಯದು

ಗಂಡೇ ಹುಟ್ಟಬೇಕೆನ್ನುವ ಅಪೇಕ್ಷೆ. ಈ ಸೂತ್ರವನ್ನು ನಿಮಗೆ ಮನಗಾಣಿಸಲು ಇನ್ನೂ ಅನೇಕ ಉದಾಹರಣೆಗಳನ್ನು ಕೊಟ್ಟೇನು !

***

ಮನಸ್ಸಿನ ಅಶಾಂತಿಗೆ ಇರುವ, ಸುರುವಿಗೆ ಹೇಳಿದ ಮೂರು ಪ್ರಮೇಯಗಳಲ್ಲಿ ಕೊನೆಯದು, ನಮ್ಮ ಹಾಗೂ ಇತರ ಜನರೊಡನೆ ಸಂಬಂಧ. ಈ ಮನುಷ್ಯ ಸಂಬಂಧದ ಮುಖ್ಯವಾದ ಕೊಂಡಿ ಎಂದರೆ ಮಾತು. ಆದರೆ ಮಾತಿನ ಸಂದರ್ಭದಲ್ಲಿ ನಾವು ಎಷ್ಟೊಂದು ನಿರ್ಲಕ್ಷ್ಯದಿಂದ ಇರುತ್ತೇವೆ! ಏನೇನೋ ಆಡುತ್ತೇವೆ. ಅತಿಯಾಗಿಯೂ ಮಾತಾಡುತ್ತೇವೆ- ನಮ್ಮ ಧ್ವನಿಗೆ ನಾವೇ ಮರುಳಾಗುವವರಂತೆ. ಕೆಲವು ಸಲ ಹೇಗೆ ಹೇಳಬೇಕೆಂದು ತಿಳಿಯದೆ ಪೆಚ್ಚಾಗಿ ಪೇಚಾಡುತ್ತೇವೆ. ಸಿಟ್ಟಿನ ಭರದಲ್ಲಿ ಮಾತನಾಡುವುದಂತೂ ಅಪದ್ಧತನದ ಪರಮಾವಧಿಯಾಗಿರುತ್ತದೆ. ಮಾತರಿಯದವ ಜಗಳವ ತಂದ - ಎನ್ನುವುದು ಸದಾ ಸತ್ಯದ್ದು, ಪರಿಣಾಮ? ನಮ್ಮ ಮನಸ್ಸಿನ ನೆಮ್ಮದಿ ಹೇಳ ಹೆಸರಿಲ್ಲದೆ ಹೊರಟು ಹೋಗುತ್ತದೆ. ಜಗಳದ ಪರಿಸ್ಥಿತಿ ಇರದಿದ್ದರೂ ಅನೇಕ ಸಲ ಸರಿಯಾಗಿ ನಾವು ಹೇಳಲಾಗದ್ದರಿಂದ ಅದನ್ನು ಕೇಳಿಸಿಕೊಂಡವರು ಅರ್ಥಮಾಡಿಕೊಳ್ಳುವುದಿಲ್ಲ. ನಮ್ಮ ಉದ್ದೇಶ ಈಡೇರುವುದಿಲ್ಲ. ಆದ್ದರಿಂದ ಆ ಇನ್ನೊಬ್ಬರನ್ನು ಗಮನದಲ್ಲಿ ಇಟ್ಟುಕೊಂಡೇ ಮಾತಿಗೆ ತೊಡಗಬೇಕಲ್ಲದೆ, ಏನೇನೊ ಹೇಳಿಬಿಟ್ಟರೆ ಆಗದು.

ಮಾತಿಗೆ ಕಾಲು ಇಲ್ಲವಾದರೂ 'ಕರ್ಣೋಪಕರ್ಣಿಕಯಾ' ತುಂಬಾ ಹರಿದಾಡುತ್ತದೆ. ಆದರೆ ಒಬ್ಬರು ಇನ್ನೊಬ್ಬರಿಗೆ ಹೇಳುತ್ತ ಹೋದಂತೆ, ಆ ಮಾತಿನ ಅರ್ಥವು ವಿಕೃತಿಗೊಳ್ಳುವುದೇ ಹೆಚ್ಚು. ಈ ವಿಕೃತಿಯಿಂದಾಗಿ ನಾನು ಹಲವರ ವಿರಸಕ್ಕೆ ಗುರಿಯಾಗಿದ್ದೇನೆ. "ನಾನು ಹಾಗೆ ಹೇಳಲಿಲ್ಲ. ಅವರು ತಪ್ಪು ತಿಳಿದಿದ್ದಾರೆ." ಎಂದೆಲ್ಲ ಮುಂದೆ ಸಮರ್ಥಿಸಿಕೊಳ್ಳುವ ಪ್ರಸಂಗಗಳೂ ಆಗಿ ಹೋಗಿವೆ. ಇವಕ್ಕಿಂತ ಹೆಚ್ಚಾಗಿ, ಇನ್ನೊಬ್ಬರನ್ನು ಬೈಯುವ, ಆಕ್ಷೇಪಿಸುವ ಇಲ್ಲವೆ ವ್ಯಂಗ್ಯವಾಗಿ ತಿವಿಯುವ ಮಾತಿನ ಸಂದರ್ಭಗಳಂತೂ ಮನಸ್ಸಿನ ಶಾಂತಿಯನ್ನು ಬಹುವಾಗಿ ಕದಡುವುವು - ಆಡಿದವರು, ಅನ್ನಿಸಿಕೊಂಡವರಿಬ್ಬರಿಗೂ ! ತಿಳಿಯಬೇಕಾದ ಅಂಶವೆಂದರೆ ಇಂದಿನ ದಿನಗಳಲ್ಲಿ ಯಾರೂ- ಅವರು ನಮಗಿಂತ ಕೆಳಗಿನ ಸ್ತರದವರಿರಲಿ, ನಮ್ಮ ಋಣದಲ್ಲಿಯೇ ಇರಲಿ, ವಯಸ್ಸಿನಲ್ಲಿ ಚಿಕ್ಕವರಿರಲಿ, ಯಾರೂ ಅನ್ನಿಸಿಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಕಾರಣವಿಷ್ಟೇ. ನಾವು ಪ್ರತಿಯೊಬ್ಬರೂ ಹೆಚ್ಚೆಚ್ಚು ಸೂಕ್ಷ್ಮವೇದಿಗಳಾಗತೊಡಗಿದ್ದೇವೆ. ನಮ್ಮ ಯೋಗ್ಯತೆ, ಇಲ್ಲವೆ ಸ್ಥಾನವು ಯಾವ ಮಟ್ಟದ್ದೇ ಇರಲಿ. ಸ್ವಂತದ ಬಗ್ಗೆ ನಮಗೆ ತುಂಬಾ ಅಭಿಮಾನ; ಅಹಮಹಮಿಕೆ. Touch me not ಅನ್ನುವ ತರಹ.

ಈ ಅಂಶವನ್ನು ಗಮನದಲ್ಲಿ ಇರಿಸಿಕೊಳ್ಳದೇ ಬಿರುಸು ಮಾತನ್ನು ಆಡಿದ್ದೇ ಆದರೆ ಪರಸ್ಪರ ಸಂಬಂಧವು ಅಪನಂಬಿಕೆ, ಜಗಳಗಳಲ್ಲಿ ಪರ್ಯವಸಾನಗೊಳ್ಳುತ್ತದೆ. ಆದ್ದರಿಂದ

ನಮ್ಮ ಮನಸ್ಸಿಗೇ ಸಾಕಷ್ಟು ಕಿರಿಕಿರಿ. 'ಹೋ ನಾನೇನು ಕೇರ್ ಮಾಡೋದಿಲ್ಲ' ಎನ್ನುವ ದರ್ಪಶಾಹೀ ಮನೋಭಾವವು ಆ ಕ್ಷಣಕ್ಕೆ ಮಾತ್ರ ಸರಿಹೋದೀತು. ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಯಾರಾದರೂ ನಮಗೆ ಕೆಟ್ಟದ್ದನ್ನು ಕೃತಿಯಲ್ಲಿ ತಂದರೆ, ಅದರ ಪರಿಣಾಮ ಅಷ್ಟು ಗಂಭೀರವಿರಲಿಕ್ಕಿಲ್ಲ. ಅದೇ ಹೀನಾಯದ ಅಥವಾ ನಿಂದೆಯ ಮಾತನಾಡಿದರೆ, ಅದು ಮನದ ಒಂದು ಮೂಲೆಯಲ್ಲಿ ಉಳಿದುಕೊಂಡುಬಿಡುತ್ತದೆ. ಮಾಸುವುದೇ ಇಲ್ಲ.

ಆದ್ದರಿಂದ 'ಮಾತು ಇನ್ನೊಬ್ಬರಿಗಾಗಿ' ಎಂಬ ಹಿನ್ನೆಲೆಯಲ್ಲಿ ಆ ಕೇಳುಗರು ಸರಿಯಾಗಿ ಅರ್ಥ ಮಾಡಿಕೊಳ್ಳುವಂತೆ, (ಜೊತೆಗೆ ಅವರ -egoಗೆ) ತಗಲದಂತೆ ಮಾತನಾಡುವುದು ಹೆಚ್ಚು ಪ್ರಯೋಜನಕಾರಿ. ಉದ್ದೇಶ ಅದೇ; ನಮ್ಮ ಮನಶ್ಯಾಂತಿಯನ್ನು ಕಾಯ್ದುಕೊಳ್ಳುವುದು.

***

"ಛೇ, ಕೆಲಸ ಸರಿಯಾಗಿ ಮಾಡಲೇ ಇಲ್ಲ. ಕೆಡಿಸಿಬಿಟ್ಟ."

"ಈ ಮಗನಿಗೆ ಹೇಳಿ ಹೇಳಿ ಸಾಕಾಯ್ತು. ಏನು ಮಾಡೋದು "

"ಕೃತಘ್ನತೆಯ ಪರಮಾವಧಿ ಇದು. ಇನ್ನೊಮ್ಮೆ ಬರಲಿ ನನ್ನ ಕಡೆಗೆ, ಸುಳ್ಳು ಹೇಳೋದಕ್ಕೂ ಒಂದು ಮಿತಿ ಇರಬೇಕು."

ಈ ಬಗೆಯ ಸಂತಾಪ, 'ಧುಸುಧುಸು' ಸದಾ ಇದ್ದುದೇ. ದಿನದಲ್ಲಿ ಒಂದಾದ ಮೇಲೊಂದು ಇಂಥವನ್ನು ನಮ್ಮ ಮನದಲ್ಲಿ ನೆಟ್ಟು ಬೆಳಸಿ, ಹೊರಹಾಕುತ್ತೇವೆ. ಮನಸ್ಸಿನ ಬಹ್ವಂಶದ ಬೇಗುದಿಗೆ ಜನರ ಬಗ್ಗೆ ತಳೆದಿರುವ ಇಂಥ ಭಾವನೆಗಳೇ ಹೆಚ್ಚಾಗಿ ನಿಮಿತ್ತವಾಗುತ್ತವೆ. ನಮಗೆ ಯಾರೊಬ್ಬರ ಮಾತಾಗಲೀ, ನಡತೆಯಾಗಲೀ ಒಪ್ಪಿಗೆ ಆಗದಿದ್ದಾಗ ಹೀಗೆಲ್ಲ ಮನಃಕ್ಲೇಶ. ನಮ್ಮ ವಿಚಾರದ ಹಾಗೆಯೇ ಇನ್ನೊಬ್ಬರು ನಡೆದುಕೊಳ್ಳಬೇಕು; ನಮ್ಮ ಬೇಕು;ಬೇಡಗಳ ಪ್ರಕಾರವೇ ಮನೆಯಲ್ಲಿಯ ಇತರರು ವರ್ತಿಸಬೇಕು ಎಂಬ ಛಲವನ್ನು ತಾಳುತ್ತೇವೆ. ಅದರಿಂದ ಪ್ರಯೋಜನವಾಗುತ್ತಿದ್ದರೆ, ಅರ್ಥಾತ್ ನಮ್ಮ ಅಪೇಕ್ಷೆಯಂತೆ ಇತರರು ನಡೆದುಕೊಳ್ಳುತ್ತಿದ್ದರೆ ಅವಶ್ಯವಾಗಿ ಹಾಗೆ ಮಾಡಬಹುದಿತ್ತು. ಆದರೆ ಅಂಥ ಸ್ಥಿತಿ ಇಲ್ಲವಲ್ಲ! ಕಾರಣ ಇಷ್ಟೇ; ಮೇಲೆ ಹೇಳಿದ ಆತ್ಮಾಭಿಮಾನದ ಪ್ರಯುಕ್ತ ಪ್ರತಿಯೊಬ್ಬನೂ ತಾನು ಮಾಡುವುದು ಸರಿಯಾದದ್ದೇ ಎಂದು ತಿಳಿದಿರುತ್ತಾನೆ. ಒಂದು ವೇಳೆ ಒಬ್ಬ ತಪ್ಪು ಮಾಡಿದ್ದರೂ, ಅವನ ಮುಖದೆದುರೇ ಹೇಳುವಷ್ಟು ಅದು ಸ್ಪಷ್ಟವಾಗಿದ್ದರೂ ಅವನು ನೇರವಾಗಿ ಒಪ್ಪುವುದೇ ಇಲ್ಲ. ಬದಲಾಗಿ 'ಅದು ಅನಿವಾರ್ಯವಾಗಿತ್ತು' ಎಂಬ ಧರತಿಯಲ್ಲಿ ಸಮರ್ಥಿಸಿಕೊಳ್ಳುವನಲ್ಲದೆ, ಪಶ್ಚಾತ್ತಾಪದ ಅಥವಾ ತಿದ್ದಿಕೊಳ್ಳುವ ಮನೋಭಾವವನ್ನು ತೋರುವುದಿಲ್ಲ.

ಆಫೀಸಿನ ಸಿಪಾಯಿಗೆ ಒಂದು ಅಗತ್ಯದ ಕೆಲಸ ಹೇಳ್ತೀರಿ. ಆತ ಮಾಡೋದಿಲ್ಲ. ಕೇಳಿದರೆ 'ಹೌದು ಸರ್, ಆಗಲಿಲ್ಲ' ಎಂದು ನುಡಿದು ಸ್ಥಿತಪ್ರಜ್ಞನಂತೆ ನಿಲ್ಲುವನು! ಆಗ ನೀವು ಬೈಯ್ಯಬಹುದು. 'ಮೇಲಿಂದ ಮೇಲೆ ಹೀಗೆ ತಪ್ಪಿಸುತ್ತಾನೆ' ಎಂದು ಗುಪ್ತ ವರದಿ ಬರೆಯಬಹುದು. ಕಾರ್ಯಸಾಮರ್ಥ್ಯವುಳ್ಳ ನೀವು ಅವನ ಮೇಲೆ ಇನ್ನಾವುದೇ ಕ್ರಮ ತಗೊಳ್ಳಬಹುದು. ಏನಾದರೇನು, ಬಿರುಗಾಳಿಯ ಗಿಡವೊಂದನ್ನು ಉರುಳಿಸಬಹುದು, ಆದರೆ ಹುಲ್ಲುಗರಿಕೆಯನ್ನಲ್ಲ!

ನೀವು ನಿಮ್ಮ ಆತ್ಮೀಯ ಮಿತ್ರನೋರ್ವನ ದುಡ್ಡಿನ ಅಡಚಣೆಯಲ್ಲಿ ನೆರವಾಗುತ್ತೀರಿ. ಅದೂ ಬೇರೊಬ್ಬರಿಂದ ಸಾಲ ಪಡೆದು, ಮಿತ್ರನು ಆ ಹಣವನ್ನು ಕ್ಲುಪ್ತ ಸಮಯಕ್ಕೆ ಹಿಂದಿರಿಗಿಸುವುದಿಲ್ಲ. ಆಗ ನೀವು 'ಆ ಬೇರೊಬ್ಬರ ದೃಷ್ಟಿಯಲ್ಲಿ, ಖೊಟ್ಟಿ ಆದೆನಲ್ಲ' ಎಂದು ಬೇಸರ ಪಟ್ಟುಕೊಳ್ಳುತ್ತೀರಿ. ಮತ್ತು ನಿಮ್ಮ ಗೆಳೆಯನಿಗೆ "ಅಲ್ಲೋ, ಕೊಡುವಾಗಲೇ ಇಂಥ ತಾರೀಖಿಗೆ ಕೊಡಬೇಕೆಂದು ಕರಾರು ಮಾಡಿಯೆ ಕೊಟ್ಟಿದ್ದೆನಲ್ಲ? ಹಾಗೆಂದು ನೀನು ಭರವಸೆ ಕೊಟ್ಟಿದ್ದಿ." ಎಂದು ಸಿಟ್ಟಿಗೇಳಹೋದರೆ , ನಿಮ್ಮನ್ನು ಅರ್ಧಕ್ಕೆ ತಡೆದು ಆತ ಹೇಳುವ, "ಹೌದು, ಹೌದು, ನಾನೆಲ್ಲಿ ಇಲ್ಲವೆಂದೆ? ಸಾಧ್ಯ ಆಗಲಿಲ್ಲಪಾ. ಐ ಆ್ಯಮ್ ಸಾರಿ." ಎಂದು ಉತ್ತರಿಸುವನು. ('ಸಾರಿ' ಮತ್ತು 'ಥ್ಯಾಂಕ್ಸ್' ಎಂಬೀ ಶಬ್ದಗಳು ನಮ್ಮ ಬೇಜವಾಬ್ದಾರಿಯನ್ನು ಅಥವಾ ಇನ್ನೊಬ್ಬರ ವಿಷಯದಲ್ಲಿ ನಮಗಿರುವ ನಿರ್ಲಕ್ಷ್ಯವನ್ನು ಮರೆಮಾಚಲಿಕ್ಕೇ ಹುಟ್ಟಿದಂತಿವೆ!) ಹಾಗೆ ಹೇಳುವಾಗ ಅವನು ನಿಮಗಾದ ತೊಂದರೆಯನ್ನು ಗಮನಿಸಿರುವುದೇ ಇಲ್ಲ. ಇಂಥದೇ ಒಂದು ಪ್ರಸಂಗ ನಿಜವಾಗಿ ನಡೆಯಿತು. ಹಲವು ವರ್ಷಗಳ ಹಿಂದೆ ನನ್ನೊಬ್ಬ ಗೆಳೆಯನಿಗೆ ದೊಡ್ಡ ಮೊತ್ತದ ಹಣವನ್ನು ಕೈಗಡವಾಗಿ ಕೊಟ್ಟಿದ್ದೆ. ಹಲವು ತಿಂಗಳುಗಳು ಕಳೆದರೂ, ನಾನು ಸಾಕಷ್ಟು ಸಲ ನೆನಪಿಸಿದರೂ ಕೊಟ್ಟಿರಲಿಲ್ಲ. ಆಗ ನಾನು ಅವನಿಗೆ ಹೇಳಿದೆ:

"ದುಡ್ಡಿನ ವಿಚಾರದಲ್ಲಿ ನಿನ್ನಷ್ಟು ತೊಂದರೆ ಕೊಟ್ಟ ಗೆಳೆಯನು ಇದುವರೆಗೆ ಇನ್ನಾರೂ ಇಲ್ಲ.

ಆತ: ಖರೇನೋ! ನಾನಾದರೂ ನಿನಗೆ ತೊಂದರೆ ಕೊಟ್ಟಷ್ಟು ಇನ್ನಾರಿಗೂ ಕೊಟ್ಟಿಲ್ಲ!"

ಪಿ.ಯು.ಸಿ. ಯಲ್ಲಿರುವ ಮಗಳು ಮನೆ ತುಂಬ ತನ್ನ ವಸ್ತು -ಬಟ್ಟೆಗಳನ್ನು ಹರವುತ್ತಾಳೆ. ತಾಯಿಯಾದ ನೀವು ತಿಳಿಸಿ ಹೇಳುತ್ತೀರಿ. ಬೈಯುತ್ತೀರಿ. ಒಂದಲ್ಲ ಹತ್ತು ಬಾರಿ ನೀವೇ ಎತ್ತಿ ಇಡುತ್ತೀರಿ. ಊಹುಂ. ಅವಳ ನಡತೆಯಲ್ಲಿ ಕಿಂಚಿತ್ತೂ ಬದಲಾವಣೆ ಇಲ್ಲ ...' ಈಗಿನ ಕಾಲದ ಹುಡುಗಿಯರೇ ಹೀಗೆ 'ಎಂದು, ನೀವು ಸುಧಾರಿಸಿಕೊಳ್ಳದೆ ಅನ್ಯ ದಾರಿ ಇಲ್ಲ.

ನೀವು ಗಂಡ-ಹೆಂಡತಿ ಇಬ್ಬರೂ ನೌಕರಿ ಮಾಡ್ತೀರಿ. ಮನೆಯಲ್ಲಿರುವ ಮುದಿ ತಂದೆ ನೆರವಾಗುವುದಂತೂ ಇಲ್ಲ. ಬದಲಾಗಿ ಅದೇಕೆ ಹೀಗೆ? ಇದೇಕೆ ಹಾಗೆ- ಎಂದು ತಕರಾರು ಮಾಡುತ್ತಲೇ ಇರುತ್ತಾನೆ. ಜೊತೆಗೆ ಕೊಂಕು ಮಾತು. ಅಲ್ಲದೆ "ನನ್ನನ್ನು ಯಾರೂ Care ಮಾಡ್ತಾನೇ ಇಲ್ಲ" ಎಂಬ ಸೊಲ್ಲು ಆಗೀಗ ಅವನಿಂದ ಇದ್ದದ್ದೇ. ಆಗ ಮಗನಾದ ನೀವು ಏನು ಮಾಡಬಲ್ಲಿರಿ? ಈ ಮುದುಕರ ಸ್ವಭಾವವೇ ಹೀಗೆ" ಎಂದು ತಿಳಿಯಬೇಕಲ್ಲವೆ?

ಬರುವ ರವಿವಾರದ ಒಂದು ಸಮಾರಂಭಕ್ಕಾಗಿ ಹೊಸ ಬಟ್ಟೆ ಹೊಲೆಹಾಕಿದ್ದೀರಿ. ಟೇಲರ್ ಮಹಾಶಯನಿಗೆ ಮೂರು ದಿನ ಮುಂಚಿತವಾಗಿಯೇ ಅದನ್ನು ಕೊಡಲು ಹೇಳ್ತೀರಿ. ಅವನು ಒಪ್ಪಿದ್ದಾನೆ. ಆದರೆ ಆ ಗುರುವಾರ ಸಿದ್ಧವಾಗಿಲ್ಲ. ಶುಕ್ರವಾರ ಹೋಗಿ ಕೇಳ್ತೀರಿ.. ಉತ್ತರ "ಅದನ್ನು ಹೊಲಿಯಲು ಕೈಗೆ ತಗೊಂಡವ ಈ ದಿನ ಕೆಲಸಕ್ಕೆ ಬಂದಿಲ್ಲಾರೀ. ನಾಳೆ ಖಂಡಿತ ಕೊಡುವೆ." ಆಗ ನೀವು 'ಬೆಳಿಗ್ಗೇನೆ ಕೊಡಬೇಕು' ಅಂತೀರಿ . "ಹೂಂ..." ಎನ್ನುವ. ಶನಿವಾರ ಬೆಳಗಿನಲ್ಲಿ ಅವನಲ್ಲಿಗೆ ಹೋಗ್ತೀರಿ. ಆಗ ಅವನು ನಿಮಗೆ ಬಟ್ಟೆಯನ್ನೇನು ಕೊಡುವುದಿಲ್ಲ. ಒಂದು ಕಪ್ ಚಹಾ ತರಿಸಿಕೊಟ್ಟು "ಸಂಜೆಗೆ ೧೦೦% ತಯಾರಾಗಿರ್ತದೆ ಬರ್ರಿ" ಅಂತಾನೆ. ಏನು ಮಾಡೋದು? ಸಂಪಿಗರ ಕಸಬೇ ಹಾಗೆ! ಅಲ್ಲವೆ.

ಇಂಥ ಅನೇಕಾನೇಕ ಸಣ್ಣ ದೊಡ್ಡ ಪ್ರಸಂಗಗಳಿಂದ ನಮಗಾಗುವ ಚಿರಿಚಿರಿ ಹಿಂಸೆಗಳಿಂದ ಪಾರಾಗುವ ಬಗೆ ಇದೆ. ಅದೆಂದರೆ 'ಜನ ಇರೋದೇ ಹೀಗೆ' ಎಂಬ ನಿಲುವನ್ನು ತಾಳುವುದು! ಹಾಗೆ ಮಾಡದೇ ಹೋದೆವೋ ಅದನ್ನು ಸರಿಪಡಿಸಲಾಗದೇ ಒದ್ದಾಡುವುದು ನಿಶ್ಚಿತ. ಈ ನಿಲುವಿನ ಇನ್ನೊಂದು ದೊಡ್ಡ ಪ್ರಯೋಜನವೆಂದರೆ, ಬೇರೆಯವರೊಡನೆಯ ತಿಕ್ಕಾಟದ ಪ್ರಸಂಗಗಳಲ್ಲಿ 'ಪ್ರತೀಕಾರದ' ಪ್ರಶ್ನೆ ಏಳುವುದಿಲ್ಲ. ನಮ್ಮೊಡನೆ ತಪ್ಪಾಗಿ ನಡೆದ ಯಾರ ಬಗ್ಗೆಯೇ ಆಗಲಿ, ನಮ್ಮ ಪ್ರತಿಕ್ರಿಯೆ ನ್ಯಾಯವಾದದ್ದೇ ಇರಲಿ, ಅವರು ಎದುರು ಬೀಳದೇ ಬಿಡಲಿಕ್ಕಿಲ್ಲ - ಆಗ ಅಲ್ಲದಿದ್ದರೂ, ಇನ್ನಾವಾಗಲಾದರೂ. (ನೆಲಕ್ಕೆ ಒಗೆದ ಚೆಂಡು ಪುಟಿದೇಳುವಂತೆ) ಅಂತೂ ನಮ್ಮ ಮನಃಶಾಂತಿಯನ್ನು ಕದಡುವ ಪರಿಸ್ಥಿತಿ.

ಸಾರಾಂಶ: ಯಾರೊಬ್ಬರು ನಮಗೆ ಅನ್ಯಾಯ ಬಗೆದಿರಲಿ, ನಮ್ಮನ್ನು ಟೀಕಿಸಿರಲಿ, ಕೃತಘ್ನತೆಯಿಂದ ವರ್ತಿಸಿರಲಿ, ಆ ಪ್ರಸಂಗಾನುಸಾರ ಆ ಕ್ಷಣಕ್ಕೆ ನಮ್ಮ ಪ್ರತಿಕ್ರಿಯೆ ತೋರಿಸೋಣ. ಅನಂತರ ಮಾತ್ರ ಅವರ ನಡವಳಿಕೆಯ ಬಗ್ಗೆ ತಲೆಕೆಡಿಸಿಕೊಳ್ಳೋದು ಬೇಡ. 'ಜನ ಇರೋದೇ ಹೀಗೆ' ಎಂದು ತಿಳಿಯೋಣ.

ಇದೂ ಒಂದು ನಡೆದ ಘಟನೆಯೇ. ನೆರೆಯ ಮನೆಗಳಲ್ಲಿದ್ದ ಇಬ್ಬರು ಗೃಹಿಣಿಯರು ಅತೀವ ಅನ್ಯೋನ್ಯವಾಗಿದ್ದರು. ಅವರಲ್ಲಿ ಒಬ್ಬಾಕೆ ಮಧ್ಯವಯಸ್ಸಿನಲ್ಲಿ ತೀರಿಕೊಂಡಳು. ಗೆಳತಿಯ ಮಕ್ಕಳು ಅನಾಥವಾದುವೆಂದು ಇನ್ನೊಬ್ಬ ಗೃಹಿಣಿ ಅವುಗಳ

ಯೋಗಕ್ಷೇಮವನ್ನು ವರ್ಷಗಟ್ಟಲೆ ನೋಡಿಕೊಂಡಳು. ಈ ಅತಿಯಾದ ನಂಟು ಬೇಡವೆಂದು ಗಂಡ ಆಗೀಗ ಎಚ್ಚರಿಸುತ್ತಲೇ ಇದ್ದ: ಅವಳು ಅಲಕ್ಷಿಸಿದಳು. [ಸ್ವರ್ಗದಲ್ಲಿದ್ದ ಗೆಳತಿ ಏನೆಂದುಕೊಂಡಾಳು!] ಆದರೆ ಆ ಮಕ್ಕಳು ದೊಡ್ಡವಾದ ಮೇಲೆ ಇವಳನ್ನು ಹಚ್ಚಿಕೊಳ್ಳಲಿಲ್ಲ. ಇವಳಿಗೆ ಬೇಸರ. ಅನಂತರ ತನ್ನ ಖಾಸಾ ತಮ್ಮನ ಎಸ್.ಎಸ್.ಎಲ್.ಸಿ. ಅಭ್ಯಾಸಕ್ಕೆ ತಮ್ಮ ಚಿಕ್ಕ ಮನೆಯಲ್ಲಿ ಅವಕಾಶವಿಲ್ಲದಾಗ, ಗೆಳತಿಯ ಮನೆಯ ಒಂದು ಹೆಚ್ಚಿನ ಕೋಣೆಯನ್ನು ಆ ಮೂರು ತಿಂಗಳ ಮಟ್ಟಿಗೆ ಕೇಳಿದಳು- ಸಿಕ್ಕೇ ಸಿಗುವುದೆಂಬ ಖಾತ್ರಿಯಿಂದ. ಆದರೆ ಆ ವಿಧುರ ಕೊಡಲಿಲ್ಲ! [ಮನಸ್ಸು ಮಾಡಿದ್ದರೆ ಅಸಾಧ್ಯವೇನೂ ಇರಲಿಲ್ಲ.] ಇವಳಿಗೆ ಕಡುಕೋಪ. ಅಸಹಾಯದ್ದು! ಮುಂದೆ ಅವಳು ಆ ಮನೆಯ ಉಸಾಬರಿಯನ್ನೇ ಬಿಟ್ಟಳು. ಈ ಸಂಬಂಧದ ವ್ಯಂಗ್ಯವೆಂದರೆ ಆ ಇಬ್ಬರು ಗಂಡಸರು ತಮ್ಮ ನೆರೆಹೊರೆತನದ ಮೊದಲ ವರ್ಷದಿಂದ ಹೇಗಿರಬೇಕೊ ಹಾಗೆಯೇ ಇದ್ದಾರೆ - ಈಗಲೂ. ["ನಮಸ್ಕಾರ, ಆಫೀಸಿಗೆ ಹೊರಟಿರಾ?" "ಹೇಗಿದ್ದೀರಿ?" ಇತ್ಯಾದಿ ಮಾತುಗಳಿಂದ!] ಯಾರ ವಿಷಯವನ್ನೇ ಆಗಲಿ ಅತಿಯಾಗಿ ಮೈಮೇಲೆ ತಗೊಂಡದ್ದರ ಪರಿಣಾಮವಿದು. ಅನೇಕರ ಆಫೀಸ್ ಕೆಲಸಗಳಲ್ಲಿಯೂ ಒದಗಿ ಬರುವಂತಹದು. ನೀವು ಬಹಳ sincere ಆಗಿ ದುಡೀತೀರಿ. ಆದರೂ ಮೇಲಧಿಕಾರಿಯು ಅದನ್ನು ಲೆಕ್ಕಕ್ಕೆ ಹಿಡಿಯದೇ ನಿಮ್ಮ ಬಗ್ಗೆ ಯಾವುದೇ consideration ತೋರಿಸದೇ ಇರಬಹುದು. ನಿಮ್ಮ ಆಪ್ತೇಷ್ಟರ ವಿಷಯವೂ ಹಾಗೇನೆ. ಹಲವಾರು ಬಳಗದವರಿಗೆ ಉಪಕಾರ ಮಾಡ್ತಾನೆ ಇರ್ತೀರಿ. ಮುಂದೊಮ್ಮೆ ನಿಮ್ಮ ವಯಸ್ಸಾದ ತಂದೆಯ ಒಂದು ಶಸ್ತ್ರಕ್ರಿಯೆಗೆ ನೀವು ಹಣ ಒದಗಿಸಬೇಕು, ಹಲವು ಸಾವಿರ ರೂಪಾಯಿಗಳಷ್ಟು. ಆದರೆ ಅವರಿಂದ ನೆರವು ಸಿಕ್ಕುವುದಿಲ್ಲ. ನಿಮ್ಮಿಂದ ವಿಶೇಷ ಉಪಕೃತಿ ಹೊಂದಿದ ಬೇರೆಯವರಿಂದಲೂ ಇದೇ ಪ್ರತಿಕ್ರಿಯೆ.

ತಿಳಿಯಬೇಕಾದ ಮಾತೆಂದರೆ ಯಾರೇ ಇರಲಿ. ಉಪಕಾರ ಭಾವವೇ ಕ್ಷಣಿಕವಾಗಿರುತ್ತದೆ; ಕೆಲವು ಕಾಲದ ವರೆಗೆ ಮಾತ್ರ ಉಳಿದುಕೊಂಡು ಬರುತ್ತದೆ. ಆದ್ದರಿಂದ ಉಪಕಾರ ಮಾಡಿಸಿಕೊಂಡವರಿಂದ ಕಾಲಕ್ರಮದಲ್ಲಿ ಏಕ ಪ್ರಕಾರವಾದ ಕೃತಜ್ಞತೆಯನ್ನು ಅಪೇಕ್ಷಿಸಿದರೆ ನಮ್ಮಂಥ ವ್ಯವಹಾರಶೂನ್ಯರು ಬೇರಾರು ಇರಲಿಕ್ಕಿಲ್ಲ! ಗುರು ಶಿಷ್ಯ ಸಂಬಂಧಕ್ಕಂತೂ ಈ ಮಾತು ಹೆಚ್ಚಾಗಿ ಅನ್ವಯಿಸುವುದು.

ಹಾಗೆ ನೋಡಿದರೆ ಇಂದಿನ ವ್ಯಾವಹಾರಿಕ ಜಗತ್ತಿನಲ್ಲಿ ಮನುಷ್ಯ-ಮನುಷ್ಯರ ಸಂಬಂಧಗಳೇ ಅತ್ಯಂತ ಚಂಚಲ ಹಾಗೂ ಅಡ್ಡಾದಿಡ್ಡಿ ಇರುತ್ತವೆ. ರಕ್ತಸಂಬಂಧ ಹಾಗೂ ಅಂತಃಕರಣವಿದ್ದಲ್ಲಿ ಇದು ಇನ್ನೂ ಅಷ್ಟು ಅನಿಶ್ಚಿತ! ಹೆಂಡತಿ-ಗಂಡ, ತಂದೆ-ಮಕ್ಕಳು, ಆಫೀಸಿನ ಸಹೋದ್ಯೋಗಿಗಳು ಇಂಥ ಸಂಬಂಧಗಳಲ್ಲಿ ಎಲ್ಲಾ ಕಾಲಕ್ಕೂ ಮನಸ್ಸಿನ ಶಾಂತತೆ ಸ್ತಿಮಿತಗಳನ್ನು ಕಾಯ್ದುಕೊಳ್ಳುವುದು ಸಾಧ್ಯವಾಗದು. ಅದಕ್ಕಾಗಿ ನನ್ನ ನಿಖರವಾದ ಸಲಹೆಯೆಂದರೆ ಯಾರೊಡನೆಯೇ ಆಗಲಿ ತುಸು ಅಂತರವಿಟ್ಟು ಕೊಂಡು ವ್ಯವಹರಿಸುವುದು . ಇದರ ಪರಿಣಾಮ

ಎಂದರೆ ಯಾರೊಡನೆಯೂ ಇರುಸುತನ, ಜಗಳಗಳಿಗೆ, ಹಾಗೂ ಆ ಮೂಲಕವಾದ ಮನೋಕ್ಲೇಶಕ್ಕೆ ಎಡೆಯಿಲ್ಲ. ಯಾರೇ ಇರಲಿ, ಸಾಧ್ಯವಾದಷ್ಟು ಕೂಡಿಕೊಂಡು ಹೋಗೋದು. ವಿರಸದ, ನಮಗೆ ಬೇಸರ ಬರಿಸುವ ಸಂದರ್ಭಗಳಿದ್ದರೂ -'ಜನ ಇರೋದೇ ಹೀಗೆ' ಎಂಬ ಸೂತ್ರವನ್ನು ಅನ್ವಯಿಸಿಕೊಂಡು ಅದನ್ನು ಗಣನೆಗೆ ತಾರದೇ, ಸ್ನೇಹದಿಂದಲೇ ನಡೆದುಕೊಳ್ಳುವುದು. ಆಗೂ ಬಗೆಹರಿಯದಿದ್ದರೆ? 'ಅವರಷ್ಟಕ್ಕೆ ಅವರು ನಮ್ಮಷ್ಟಕ್ಕೆ ನಾವು!' ಸರಿ ತಾನೇ? ಆದರೆ ರಕ್ತ ಸಂಬಂಧವಿದ್ದಲ್ಲಿ [ವಿಶೇಷತಃ ತಾಯಂದಿರು] ಇದು ನಡೆಯದೆಂಬುದನ್ನು ಬಲ್ಲೆ. ಅದರಂತೆ ಪ್ರಣಯಿಗಳಿಗೂ ಇದು ಅನ್ವಯಿಸದು!.

***

ಇನ್ನೊಂದೇ ಸೂತ್ರವನ್ನು ಹೇಳಿ ಮುಗಿಸುವೆ. ಅದರ ಹಿನ್ನೆಲೆ ಹೀಗಿದೆ: ನಾವು ಒಂದು ಅಪೇಕ್ಷೆ, ಗುರಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುತ್ತೇವೆ. ಅದು ಕೈಗೂಡಲು ನಮ್ಮ ಪ್ರಯತ್ನ ಹಾಗೂ ಬಾಹ್ಯ ಪರಿಸ್ಥಿತಿಗಳ ಅನುಕೂಲತೆ ಬೇಕು. ಹಾಗಾದಾಗ , ಕಾರ್ಯಸಿದ್ಧಿ. ಅಲ್ಲಿಗೆ ಅದು ಸರಿಯೇ. ಆದರೆ ಯಾವಾಗಲೂ ಹಾಗೆ ಆದೀತೆ? ನಾವು ಕಾರ್ಯ ಸಮರ್ಥರಿದ್ದು, ಅದಕ್ಕಾಗಿ ಸರ್ವ ಪ್ರಯತ್ನ ಮಾಡುತ್ತೇವೆ. ಜನ ಸಹಾಯವೂ ಒದಗಿ ಬಂದೀತು. ಆದರೂ ಅನೇಕ ಬಾರಿ ಕಾರ್ಯದ ಸಫಲತೆಯನ್ನು ಕಾಣೆವು. 'ನೋ - ಗ್ಯಾರಂಟಿ'ಯ ಮತ್ತಿತರ ಸೂತ್ರಗಳಿಂದ ಏನೂ ಸಮಾಧಾನ ಸಿಕ್ಕದಷ್ಟು ಕಾರ್ಯ ವಿಫಲತೆಯ, ಮತ್ತು ಆ ಸೋಲಿನ ಗಾಯ ಅತ್ಯಂತ ಆಳವಾಗಿ ಇರುತ್ತದೆ. ಆಗ ಯಾವುದೋ ಒಂದು ಕಾಣದ ಕೈ ಅಡ್ಡ ಬಂದಿತು ಎಂದು ಭಾಸವಾಗುತ್ತದೆ. ಅದನ್ನೇ 'Bad luck' ಎಂಬುದಾಗಿ ಹೆಸರಿಸುತ್ತೇವೆ. ಇಂಥ ಸೋಲು ಮೇಲಿಂದ ಮೇಲೆ ಬಂದರೆ 'ಸಾಡೇಸಾತಿ' ಎಂದು ತಿಳಿಯುತ್ತೇವೆ. ಈ 'ಕಾಣದ ಕೈ' ಯ ಅಸ್ಪಷ್ಟ ಅನಿಸಿಕೆಯು ನಾವು ಕಾರ್ಯದಲ್ಲಿ ತೊಡಗಿದಾಗಲೂ ಇರಲು ಸಾಧ್ಯ. ನಾವು ಮಾಡುವ ಪ್ರಯತ್ನ, ಕಾರ್ಯಸಾಮರ್ಥ್ಯ-ಇತ್ಯಾದಿ ನಮ್ಮ ಕಾರ್ಯದ ಗುರಿಯನ್ನು ಮುಟ್ಟಲಾರದು ಎಂಬ ಶಂಕೆ ತಲೆದೋರಿದಾಗ , 'ನಮ್ಮ ದೈವ ಹೇಗಿದೆಯೋ' ಅಂತ ಎಂದುಕೊಳ್ಳುವೆವು.

ಅವಳೊಬ್ಬ ಎಂ. ಎಸ್ಸಿ. ಪದವೀಧರೆ. ಬೌದ್ಧಿಕವಾಗಿ ಗಟ್ಟಿ ಹೆಣ್ಣುಮಗಳು. ಅಪ್ಪಟ ವಿಚಾರವಾದಿ., ಏನೆಲ್ಲ, ಅವಳ ಮಗುವಿಗೆ ಕಾಯಿಲೆ-ಸಖತ್ ಜ್ವರ. ಡಾಕ್ಟರರು ಕೊಡುವ ಔಷಧಿಯಲ್ಲಿ ಪರಮ ವಿಶ್ವಾಸ. ಆದರೆ ಮಗುವಿನ ಜ್ವರ ನಿಲ್ಲದು. ಇತ್ತ ಮಗುವಿನ ಅಜ್ಜಿ ಆ ಈ ದೇವರಿಗೆ ಹರಕೆ ನೀಡಲು ಸೂಚಿಸುತ್ತಾಳೆ. ಅದಕ್ಕೆ ಈ ವಿಚಾರವಾದಿ ಒಪ್ಪಿಯಾಳೆ? ಮುಂದೆಯೂ ಮಗುವಿನ ಜ್ವರ ನಿಲ್ಲುವುದಿಲ್ಲ. ಆಗ ? "ಆಯ್ತು. ತಾಯಿ ಹೇಳ್ತಾನೇ ಇದ್ದಾಳೆ. ಹರಕೆಯ ಪ್ರಭಾವ ಹೇಗೇ ಇರಲಿ. ಮಾಡಿ ನೋಡುವಾ" ಎಂದು ಅನಿವಾರ್ಯವಾಗಿ ಒಪ್ಪುತ್ತಾಳೆ! ಇಲ್ಲಿ ಗಮನಿಸಬೇಕಾದದ್ದು, ಅವಳ ವಿಚಾರಸರಣಿಯು ದೈವವಾದದತ್ತ ವಾಲಿದುದು.

ಇಂಥ ವಿಚಾರಗಳಲ್ಲಿ ಮನಸ್ಸಿನ ಮುಗುಡವನ್ನು ಕಡಿಮೆಗೊಳಿಸಲು 'ಅತೀತ' ವಾದ ಯಾವುದೊಂದು ಅಂಶದಲ್ಲಿ ವಿಶ್ವಾಸವಿಟ್ಟು ಅನನ್ಯ ಭಾವದಿಂದ ಅದಕ್ಕೆ ಶರಣಾಗುವುದು ಒಳ್ಳೆಯದು. ನನಗೆ ಗೊತ್ತು. ಅನೇಕರು ಈ ಸೂಚನೆಗೆ ಸುತರಾಂ ಒಪ್ಪುವುದಿಲ್ಲ" ಎಂದು. ಆದರೆ ಅನಿವಾರ್ಯ. ಅದೊಂದು last resort ಎಂಬಂತೆ.

ಇದರ ಪ್ರಯೋಜನಕ್ಕೆ ಒಂದು ಸಾದೃಶ್ಯವನ್ನು ಕೊಡಬೇಕೆನಿಸುವುದು; ನೀರಿನಲ್ಲಿ ಈಸಿ, ಈಸಿ, ಕೈಸೋತು, ಒಬ್ಬ ಇನ್ನೇನು 'ಮುಳುಗಿ ಸತ್ತೇ ಹೋಗುವೆ' ಎಂಬ ಹತಾಶ ಪರಿಸ್ಥಿತಿಯಲ್ಲಿ ಇದ್ದಾನೆಂದು ತಿಳಿಯಿರಿ. ಆಗ ಅವನಿಗೆ ಹುಲ್ಲಿನ ಉದ್ದನೆಯ ಎಳೆಯೊಂದು ಕಾಣಿಸುತ್ತದೆ. ಅದರಿಂದ ಏನೇನೂ ಪ್ರಯೋಜನವಾಗದು ಎಂಬುದು ತಿಳಿಯದಷ್ಟು ಆತ ಮಂಕಾಗಿದ್ದಾನೆ. ಅದನ್ನು ಹಿಡಿಯಲು ಧಾವಿಸುತ್ತಾನೆ. ಅದು ಮುಂದೆ ಮುಂದೆ ಹೋಗುತ್ತಲೇ ಇದೆ. ಈತ ಇದ್ದದ್ದೆಲ್ಲ ಶಕ್ತಿಯನ್ನು ವಿನಿಯೋಗಿಸಿ ಅದನ್ನು ಹಿಡಿಯಬೇಕೆನ್ನುವಷ್ಟರಲ್ಲಿ, ದಡವೇ ಬಂದುಬಿಡುತ್ತದೆ!

ಈ ಅತೀತ ಶಕ್ತಿ ಎಂಬುದಕ್ಕೆ ಬಾಹ್ಯ ಅಸ್ತಿತ್ವವಿರಲಿಕ್ಕೂ ಇಲ್ಲ, ಅಥವಾ ಅದನ್ನು ಸರ್ವವ್ಯಾಪಿಯಾದ ಪರಮಾತ್ಮನೆಂದು ನೀವು ತಿಳಿಯದಿದ್ದರೂ ನಡೀತದೆ. ಏಕೆಂದರೆ, ಇದು ಅಂತರ್ಯಾಮಿ! ನಮ್ಮ ಮನದಲ್ಲಿಯೇ ಈ 'ದೇವರ' ಹುಟ್ಟು. ನಾವು ಹೇಗೆ ಪರಿಭಾವಿಸುತ್ತೇವೆಯೋ ಹಾಗೆ. ಈ ದೇವರು ಕೃಷ್ಣನಂತೆ ಬಾಲಕನಿರಬಹುದು. ರೌದ್ರರೂಪದ ದುರ್ಗೆಯಾಗಿರಬಹುದು. ಅಂತೂ ಸಗುಣ ಪೂಜೆಯ ಸಂಸ್ಕಾರವಿದ್ದವರು ಹೇಗೆ ಬೇಕೋ ಹಾಗೆ ಅದನ್ನು ಆತ್ಮಸಾತ್ ಮಾಡಿಕೊಳ್ಳಬಹುದು. ಆದಾಗ್ಯೂ ಇದು ನಿಮಗೆ ಹಿಡಿಸದಿದ್ದರೆ, ನಮ್ಮ ಸಮರ್ಪಣ ಭಾವವನ್ನು ಯಾವುದೇ ಸಾಧು, ಗುರುಗಳು ಅಥವಾ ನಮ್ಮವರೇ ಆದ ಹಿರಿಯರಲ್ಲಿಯೂ ತೋರ್ಪಡಿಸಬಹುದು. ಮತ್ತೆ ಇದೇನೂ ಪರಲೋಕದ ಮೋಕ್ಷ ಸಾಧನೆಗಾಗಿ ಅಲ್ಲ. ಕೇವಲ ಈ ಲೋಕದ ನಮ್ಮ ಸ್ವಾರ್ಥಕ್ಕಾಗಿ.

ನನ್ನ ಪರಿಚಯದವನೊಬ್ಬನಿಗೆ ಒಬ್ಬ ಮುಗ್ಧ ತಾಯಿ ಇದ್ದಳು. ಆಕೆ ಜೀವಂತವಿದ್ದಾಗ ಅವಳತ್ತ ತುಂಬಾ ನಿರ್ಲಕ್ಷ್ಯ. ಬೈದದ್ದೂ ಉಂಟು. ಆಕೆ ತನ್ನ ಕಣ್ಣೆದುರೇ ಕೊನೆಯುಸಿರನ್ನೆಳೆದಾಗ ಮಾತ್ರ ಭೋರೆಂದು ಅತ್ತ. ಮುಂದೆ ಅವಳದೊಂದು ಭಾವಚಿತ್ರವನ್ನು ತನ್ನ ಕೋಣೆಯಲ್ಲಿ ಹಾಕಿದ. ತನ್ನ ಆಮೇಲಿನ ಬದುಕಿನಲ್ಲಿ ಏನೇ ವಿಪತ್ತು ಸಂಭವಿಸಲಿ, ಅವಳ ಚಿತ್ರದ ಮುಂದೆ ನಿಂತು ಒಂದು ಕ್ಷಣ surrender (ಇದು ಅವನದೇ ಶಬ್ದ) ಆದನೆಂದರೆ, ಆ ನೋವನ್ನು ಸಹಿಸುವ ಸಾಮರ್ಥ್ಯ ಬರುತ್ತದೆಂದು ಹೇಳುತ್ತಿದ್ದ. ಪ್ರಾಸಂಗಿಕವಾಗಿ ಒಂದು ಮಾತು: ನಮ್ಮ ಶ್ರದ್ಧೆ, ಶರಣಾಗತಿಯು ಏಕಾಂತಿಕವಾಗಿದ್ದಷ್ಟು ಫಲ ಜಾಸ್ತಿ.

ಈ ಬಗೆಯ ಶರಣಾಗತಿಯು ಮಹಾನ್ ಬುದ್ಧಿಜೀವಿಗಳಿಗೂ, ಕಾರ್ಯ ಸಾಹಸಿಗಳಿಗೂ ಬೇಕಾಗುತ್ತದೆ. ಏಕೆಂದರೆ ನಮ್ಮ ಮುಂದಿನ ಗುರಿ, ಮತ್ತೆ ಅದರ ಸಾಧನೆಯತ್ತ

ಸಾಗಿರುವ ನಮ್ಮ ಪ್ರಯತ್ನ ಇವೆರಡರ ನಡುವಿನ ಅಂತರವೇ ಇದರ ಕಾರಣ. ಈ ಬಗೆಯ ಶ್ರದ್ಧೆಯನ್ನಿರಿಸಿಕೊಂಡು ಮನಶ್ಶಾಂತಿಯನ್ನು ಪಡೆದವರು ಲೆಕ್ಕವಿಲ್ಲದಷ್ಟು ಜನ ಇದ್ದಾರೆ. ಅಂಥವರ ಬಗ್ಗೆ ತಿರಸ್ಕಾರ, ಅನಾದರ ಭಾವನೆ ಮೂಡಬಹುದು; 'ನೆಗಾಡ' ಬೇಕೆನಿಸಬಹುದು. ಆದರೆ ಇದು ಅವರವರ ಸ್ವಂತದ ಅನುಭವದ್ದಾದುದರಿಂದ ಹಾಗೆ ಮಾಡುವುದು ಸಲ್ಲದು. 'ಜನರ ಶ್ರದ್ಧಾಸ್ಥಾನಗಳನ್ನು ಸಡಲಿಸ ಹೋಗುವುದು ಸರಿಯಲ್ಲ' ಎಂಬ ಡಿ.ವಿ.ಜಿ. ಅವರ ಹಿತೋಕ್ತಿ ಇಲ್ಲಿ ಪ್ರಸ್ತುತ.

ಮುಗಿಸುವ ಮುನ್ನ ಒಂದು ಮಾತು. ಇಲ್ಲಿ ಹೇಳಿದ ಸೂತ್ರಗಳ ಬಗ್ಗೆ ನಿಮ್ಮಲ್ಲಿ ಬೇರೊಂದು ಅಭಿಪ್ರಾಯ ಇದ್ದಿರಬಹುದು; ಬೇರೆ ದೃಷ್ಟಿಕೋಣಗಳಿರಬಹುದು. ಆದರೆ ಇಲ್ಲಿ ಅವನ್ನು ಮಂಡಿಸುತ್ತಿರುವುದು ಮನಸ್ಸಿನ ಸ್ತಿಮಿತದ ದೃಷ್ಟಿಕೋಣದಿಂದ ಮಾತ್ರ. ಇವು ಪ್ರತಿಯೊಂದೂ, ಪ್ರತಿಯೊಬ್ಬರಿಗೆ ಹೊಂದಿಕೊಳ್ಳಲಿಕ್ಕಿಲ್ಲ. ಆದಾಗ್ಯೂ ಇವುಗಳಲ್ಲಿ ಕೆಲವಾದರೂ ನಿಮಗೆ ಹಿಡಿಸುವವೆಂಬ ಖಾತ್ರಿ ನನಗಿದೆ!.

***

೯. ನನ್ನಷ್ಟಕ್ಕೆ ನಾನು

ಇದು, ಈ ಹಿಂದೆ ಹೇಳಿದ ಮನಶ್ಶಾಂತಿಯನ್ನು ಪಡೆಯುವ ಇನ್ನೊಂದು ಮಗ್ಗಲು.

ಜೀವನದಲ್ಲಿ ನಾನು ಅಪೇಕ್ಷಿಸುವುದೇನನ್ನು? ಸುಖ ಮತ್ತು ಶಾಂತಿ ತಾನೇ. ಅದಕ್ಕಾಗಿ ನಾನು ನಿಮಗೆ ದೇವರ ಭಜನೆ ಮಾಡಿರಿ; ಸಂಸಾರ ಕ್ಷಣಭಂಗುರವೆಂದು ತಿಳಿಯಿರಿ-ಎಂದು ಧರ್ಮೋಪದೇಶ ಮಾಡುವುದಿಲ್ಲ. ಕಾಮ, ಕ್ರೋಧ ಮೊದಲಾದ ಮೂಲ ಪ್ರವೃತ್ತಿಗಳನ್ನು ನಿಗ್ರಹಿಸಿ, ತ್ರಿಕರಣ ಶುದ್ಧಿಯನ್ನು ಸಾಧಿಸಿರೆಂದು ಹೇಳುವುದಿಲ್ಲ. ನಿಮ್ಮ ಯೋಗ್ಯತೆಯನ್ನು ಮೀರಿದ ದಾನ, ಧರ್ಮ, ಪರೋಪಕಾರ, ದೀನ ದಲಿತರ ಸೇವೆ ಮಾಡಬೇಕೆನ್ನುವುದಿಲ್ಲ. ನಿಮ್ಮಿಂದ ಕೈಗೂಡಬಹುದಾದ ಒಂದು ಸುವರ್ಣಸೂತ್ರವನ್ನು ನಿಮ್ಮೆದುರು ಇಡುತ್ತಿದ್ದೇನೆ. ಅದುವೆ:

ನನ್ನಷ್ಟಕ್ಕೆ ನಾನು ; ತುಸು ಮಟ್ಟಿಗೆ ಪರರು : ಇದಾವ ದೊಡ್ಡ ಮಾತು? ಸ್ವಾರ್ಥಿಗಳಾಗಬೇಕು ಎಂದಲ್ಲವೆ ಇದರ ಅರ್ಥ?ನಾವೆಲ್ಲ ಹಾಗೇ ಇದ್ದೇವೆ-ಎಂದು ನೀವೆನ್ನಬಹುದು. ಇದರಲ್ಲಿ ಬರಿಯೇ ಸ್ವಾರ್ಥ ದೃಷ್ಟಿ ಇಲ್ಲ. ಇಷ್ಟಕ್ಕೂ 'ನನಗಾಗಿ ನಾನು'ಎಂದು ಹೇಳಿಲ್ಲವಲ್ಲ! ಎಷ್ಟೋ ಜನ ತಮ್ಮಷ್ಟಕ್ಕೆ ತಾವಿರುವುದಿಲ್ಲ-ಎಂತಲೇ ಒದ್ದಾಡುತ್ತಾರೆ, ಇತರರನ್ನೂ ಒದ್ದಾಡಿಸುತ್ತಾರೆ!

'ನನ್ನಷ್ಟಕ್ಕೆ ನಾನು' ಎಂದಾಗ ಒಂಟಿ ಮರದ ಹಾಗೆ ನಾನು ಬೆಳೆದು ಬದುಕಬಲ್ಲೆ ಎಂದಲ್ಲ. ಎಲ್ಲೆಲ್ಲಿಯೂ ತಮ್ಮ ಹಾಗೆಯೇ ಜನ, ಮತ್ತಷ್ಟು ಜನ-ಇರುವಾಗ ಹೇಗೆ ತಾನೇ ನಮ್ಮಷ್ಟಕ್ಕೆ ನಾವಿರೋದು? ಹೆಜ್ಜೆ ಹೆಜ್ಜೆಗೂ ನಮಗೆ ಇತರರ ಸಂಪರ್ಕ ಬರುತ್ತದೆ. ಅಲ್ಲದೆ ನಮಗೆ ಇತರರ ನೆರವು ಅವಶ್ಯವಾಗಿ ಬೇಕಾಗುತ್ತದೆ. ಹಾಗೆ ನೋಡಿದರೆ, ಪರ್ಯಾಯವಾಗಿ ನಾವು ಹತ್ತಾರು ಜನರ ಋಣದಲ್ಲಿದ್ದುಕೊಂಡೇ ಬಾಳುವೆ ಸಾಗಿಸುತ್ತೇವೆ. ಆದ್ದರಿಂದ 'ನನ್ನ ಸ್ವಂತದ ಏಳ್ಗೆ, ಸುಖಕ್ಕಾಗಿ ನಾನು ಪ್ರಯತ್ನಿಸಬೇಕು' ಎಂಬುದು ಇದರ ಒಂದು ಅರ್ಥ.

ಪರರೊಡನೆಯ ಸಂಪರ್ಕದಲ್ಲಿ ಎಷ್ಟರ ಮಟ್ಟಿಗೆ ಹೊಂದಿಕೆ ಇದೆ? ಎರಡು ಗಡಿಯಾರಗಳು ಹೇಗೆ ಏಕಸಮಯವನ್ನು ಎಂದೂ ತೋರಿಸುವುದಿಲ್ಲವೋ ಹಾಗೆಯೇ ಎರಡು ಮನಸ್ಸುಗಳು. ಎಷ್ಟು ಪಿಂಡಗಳೋ ಅಷ್ಟು ಪ್ರಕೃತಿಗಳು! ಒಬ್ಬೊಬ್ಬರದೂ ಒಂದೊಂದು

ರೀತಿ. ಒಬ್ಬನ ಕೈಬೆರಳಿನ ಗೆರೆಗಳು ಸಹ, ಒಂದು ಕೋಟಿ ಜನರಲ್ಲಿ ಇನ್ನೊಬ್ಬನಿಗೆ ಸಮಾನವಾಗಿ ಸಿಗುವುದಿಲ್ಲ! ಅಲ್ಲದೆ ಒಬ್ಬನೇ ವ್ಯಕ್ತಿ ಬೇರೆ ಬೇರೆ ಕಾಲಕ್ಕೆ ಬೇರೆಯಾಗಿಯೇ ನಡೆದುಕೊಳ್ಳುವನು. ಅಂತೂ ಪ್ರತಿಯೊಬ್ಬನೂ ತನ್ನದೇ ಆದ ರೀತಿಯಲ್ಲಿ ನಡೆಯುವ ಸ್ವಾತಂತ್ರ್ಯವನ್ನು ಪಡೆದಿದ್ದಾನೆ.

ಪರಿಣಾಮ? : ಘರ್ಷಣೆ! ಅನಾದಿ ಕಾಲದಿಂದ ಇದು ನಡೆದುಕೊಂಡು ಬಂದದ್ದು. ಇಷ್ಟೇ, ಸದ್ಯದ ಜೀವನದ ಜಟಿಲತೆಯಿಂದಾಗಿ ಈ ಘರ್ಷಣೆ ಇನ್ನಷ್ಟು ಹೆಚ್ಚಾಗಿದೆ. ಎತ್ತಿನ ಬಂಡಿಯಲ್ಲಿ ಎರಡೇ ಕಡೆಗೆ ಘರ್ಷಣೆ-ಎರಡು ಗಾಲಿಗಳ ಮಧ್ಯೆ, ಅಲ್ಲಿಗೆ ಅಷ್ಟು 'ಹೆರೆಣ್ಣೆ' ಹಚ್ಚಿಬಿಟ್ಟರೆ ಸಾಕಾಗುತ್ತಿತ್ತು. ಅದೇ, ಒಂದು ಟ್ರಕ್‌ನಲ್ಲಿ ೫೦-೬೦ ಕಡೆಗೆ ಗ್ರೀಜಿಂಗ್‌ನ ಅಗತ್ಯ ಬೀಳುತ್ತದೆ. ಇಂದಿನ ನಮ್ಮ ಜೀವನದ ಪಾಡು ಅದೇ ಆಗಿದೆ. ಈ ತಿಕ್ಕಾಟ-ವೈಮನಸ್ಯಗಳನ್ನು ನೆನೆದೇ "ನನ್ನಷ್ಟಕ್ಕೆ ನಾನು; ತುಸು ಮಟ್ಟಿಗೆ ಪರರು" ಎಂದು ಹೇಳುತ್ತಿರುವುದು.

ನಾವು ನೀವು ಸಾಮಾನ್ಯ ಮನುಷ್ಯರಾದರೂ ಬರಿಯ ಆಹಾರ ನಿದ್ರಾದಿಗಳಲ್ಲಿ ತೃಪ್ತರಾಗುವವರಲ್ಲ. ಜೀವನದಲ್ಲಿ ಏನನ್ನಾದರೂ ಸಾಧಿಸಬೇಕು- ನಾಲ್ಕು ಜನರಲ್ಲಿ ಎದ್ದು ಕಾಣಬೇಕು ಎಂಬುವ ಅದಮ್ಯವಾದೊಂದು ಪ್ರವೃತ್ತಿ ಹೆಚ್ಚು ಕಡಮೆಯಾಗಿ ಎಲ್ಲರಲ್ಲೂ ಇರುತ್ತದೆ. ಈ ಬಗೆಯ ಹಂಬಲವಿಲ್ಲದ ಮಧ್ಯಮವರ್ಗೀಯನೇ ಇಲ್ಲ. ನಮ್ಮಲ್ಲಿರುವ ಆ ವಿಶೇಷತೆಯನ್ನು ಬೆಳೆಸಿಕೊಳ್ಳುವ ದೃಷ್ಟಿಯಿಂದ ಕಾರ್ಯಪ್ರವೃತ್ತರಾಗೋಣ. ನಮ್ಮ ದುಡಿಮೆಯ ದಾರಿಯಲ್ಲಿ ಅಥವಾ ಯಾವುದೊಂದು ಸಾರ್ವಜನಿಕ ಕಾರ್ಯದಲ್ಲಿ ಇಲ್ಲವೆ ಕಲೆಯೊಂದನ್ನು ಬೆಳೆಸಿಕೊಳ್ಳುವಲ್ಲಿ ಆ ವಿಶೇಷತೆಯು ಹೊರಹೊಮ್ಮಬಹುದು. ಹಾಗೆ ಮಾಡಿದಾಗಲೇ ನಾವು ಜೀವನದಲ್ಲಿ ಏನನ್ನಾದರೂ ಸಾಧಿಸಿದಂತಾದೀತು. ಸತ್ತ ಮೇಲೆ ದಿನಪತ್ರಿಕೆಯಲ್ಲಿ ನಮ್ಮ ಹೆಸರು ಬರುವಷ್ಟಾದರೂ ನಮ್ಮ ಬದುಕಿನಲ್ಲಿ ನಾವು ಕಾರ್ಯವನ್ನು ಸಾಧಿಸಿರಬೇಕು! ಮರಣಾನಂತರ ಕೆಲವು ಕಾಲವಾದರೂ ನಮ್ಮ ಹೆಸರು ಮತ್ತು ಕಾರ್ಯ ಉಳಿದಿರಬೇಕು.

ನಮ್ಮ ಕಾರ್ಯಸಾಧನೆಯಲ್ಲಿ ಅಗತ್ಯ ಕಂಡರೆ ಇನ್ನೊಬ್ಬರ ನೆರವನ್ನು ಪಡೆಯಬಹುದು. ಆದರೆ ಅವಲಂಬಿಸಬಾರದು. ನಮ್ಮಷ್ಟಕ್ಕೆ ನಾವು! ಹಾಗೇನಾದರೂ ಅವಲಂಬಿಸಿದ್ದಾದರೆ ನಮ್ಮ ಕಾರ್ಯಶಕ್ತಿ ಕುಂಠಿತವಾಗುವುದು. God helps those who help themselves.

ಏನಾದರೊಂದು ಕಾರ್ಯವನ್ನು ಸಾಧಿಸಬೇಕೆಂದು ನಮಗೆ ಅನಿಸುವುದೇನೋ ನಿಜ, ಆದರೆ ಮರುಕ್ಷಣಕ್ಕೆ ಪರಿಸ್ಥಿತಿ ಅನುಕೂಲವಿಲ್ಲ ಎಂದೆನಿಸಿ ಬಿಟ್ಟುಬಿಡುವೆವು. ಊಹುಂ. ಅದಾಗದು. ಈ ರೀತಿ ಹೆಚ್ಚಿನದನ್ನು ಸಾಧಿಸುವ ಹಂಬಲದ ಪೂರ್ತಿಗೆ ಏಕಮೇವವಾಗಿ ಬೇಕಾದದ್ದು ನಮ್ಮ ಕಾರ್ಯೋತ್ಸಾಹ. ಹಾಗೆ ಮುನ್ನುಗ್ಗಿದರೆ ದಾರಿಯ ತೊಡಕುಗಳೆಲ್ಲ

ತಾವೇ ಬಗೆಹರಿಯುವುವು. ಇಂಗ್ಲೆಂಡಿನ ಡಿಸಿರೇಲಿಯು, ಪಾರ್ಲಿಯಾಮೆಂಟಿನಲ್ಲಿ ಮಾಡಬೇಕಾಗಿದ್ದ ತನ್ನ ಮೊದಲ ಭಾಷಣಕ್ಕಾಗಿ ಏನೆಲ್ಲ ಸಿದ್ಧತೆ ಮಾಡಿದ್ದ. ಆದರೇನು, ಸಭಾಸದರು ಅವನ ಒಂದೊಂದು ವಾಕ್ಯಕ್ಕೂ ಅವಹೇಳನೆಯಿಂದ ನಕ್ಕರು. ಭಾಷಣ ಮುಂದುವರಿಯದಂತೆ ನೋಡಿಕೊಂಡರು. "ಆಗಲಿ ಈಗ ನಿಲ್ಲಿಸುವೆ, ಮುಂದೊಂದು ದಿನ ನೀವು ಖಚಿತವಾಗಿ ನನ್ನ ಭಾಷಣವನ್ನು ಲಕ್ಷ್ಯವಿಟ್ಟು ಆಲಿಸುವಿರಿ" ಎಂದು ಹೇಳಿ, ಡಿಸರೇಲಿಯು ಕುಳಿತುಕೊಂಡನು. ಅದು ನಿಜವೇ ಆಯಿತಲ್ಲ! ತನ್ನ ವಿಶೇಷತೆಯನ್ನು ಆತ ಕಂಡುಕೊಂಡಿದ್ದ. ಅದಕ್ಕಾಗಿ ವಿಶೇಷ ಪ್ರಯತ್ನ ಮಾಡಿದ. ನಮ್ಮ ದೇಶದ ಪ್ರಧಾನಮಂತ್ರಿ ಪದಕ್ಕೆ ಲಾಲಬಹದ್ದೂರ ಶಾಸ್ತ್ರಿಯವರ ಆಯ್ಕೆಯಾದಾಗ ಗೇಲಿ ಮಾಡಿದವರು ಅದೆಷ್ಟೋ ಜನ, "I am what I am" ಎಂದು ಅವರು ಉತ್ತರ ಕೊಟ್ಟಿದ್ದರು. ಆಮೇಲೆ, ತಮ್ಮ ಯೋಗ್ಯತೆಯನ್ನೂ ವ್ಯಕ್ತಿವಿಶೇಷವನ್ನೂ ಎಷ್ಟು ಚೆನ್ನಾಗಿ ಪ್ರದರ್ಶಿಸಿದರಲ್ಲ!

ಹೀಗೆ ಕಾರ್ಯೋತ್ಸಾಹದಿಂದ ಒಂದಿಲ್ಲೊಂದು ದುಡಿಮೆಯಲ್ಲಿ ನಾವು ವಿಶೇಷವಾಗಿ ನಿರತರಾಗಿದ್ದರೆ ಇನ್ನೊಂದು ಲಾಭವಿದೆ: ಅದರಿಂದ ಪರಪೀಡನೆ ತಪ್ಪುತ್ತದೆ! ಅಲ್ಲದೆ ಸ್ವಕಾರ್ಯ ನಿರತರಾದಾಗ ಇನ್ನೊಬ್ಬರ ಬಗ್ಗೆ ಕೆಟ್ಟ ವಿಚಾರ ಮಾಡುವ ಅವಕಾಶ ಕಡಿಮೆ.

ಕಾರ್ಯನಿರತರಾದಾಗ ಅನೇಕ ಬಾರಿ, ನಮ್ಮ ಯೋಗ್ಯತೆಯನ್ನು ಮೀರಿದ ಅವಕಾಶಗಳು ಒದಗಿ ಬರುತ್ತವೆ. ಆಗ "ಇದು ನಮ್ಮ ಕೈಮೀರಿದ ಕೆಲಸ"ವೆಂದು ಭಾವಿಸಿ, ಬಿಟ್ಟುಬಿಡಬೇಕೆಂದು ನಿರ್ಧರಿಸುವೆವು. ಇದು ತಪ್ಪು. Opportunities are God- sent! ಕರ್ತವ್ಯಪ್ರಿಯರಿಗೆ ದೇವರು ತಾನಾಗಿ ಕಳಿಸಿದ ಸದವಕಾಶ. ಆ ಗಳಿಗೆಗೆ ಅಸಾಧ್ಯ, ಅಶಕ್ಯ ಎಂದು ಕಂಡರೂ ಮತ್ತೆ ಮತ್ತೆ ಆ ಕುರಿತು ಯೋಚನೆ ಮಾಡುತ್ತ ಹೋದಾಗ, ಅಸಾಧ್ಯವೆನ್ನುವುದು 'ಕಷ್ಟ ಸಾಧ್ಯ' ಎಂದೂ ಸಂಪೂರ್ಣ ಅಶಕ್ಯವೆನ್ನುವುದು 'ಪ್ರಯತ್ನಪಟ್ಟರೆ ಶಕ್ಯವಾದೀತು'- ಎಂದೂ ಗೋಚರವಾಗುವುದು.

ಸ್ವಪ್ರಯತ್ನ ದುಡಿಮೆಗಳಿಂದ ಬರುವ ದೊಡ್ಡ ಪ್ರಯೋಜನವೆಂದರೆ ದುಡ್ಡು, ದುಡಿಯಿರಿ; ಬ್ಯಾಂಕಿನಲ್ಲಿಯ ನಿಮ್ಮ ಶಿಲ್ಕನ್ನು ಏರಿಸಿರಿ! ದೇಶದಲ್ಲಿಯ ಪ್ರತಿಯೋರ್ವನ Bank balance ಏರಿದ್ದಾದರೆ, ಅದು ಅವನದೊಂದೇ ಅಲ್ಲ, ಇಡೀ ದೇಶದ ಆರ್ಥಿಕ ಸುಭದ್ರತೆಯ ಪ್ರತೀಕವೆನಿಸುವುದು.

ದೇಶದ ಮಾತು ಬಿಡೋಣ. ನಿಮ್ಮ ಬ್ಯಾಂಕಿನ ಶಿಲ್ಕು ಸಾಕಷ್ಟಿದ್ದರೆ ಮನಸ್ಸಿಗೆ ಅದೆಂಥ ನೆಮ್ಮದಿ! ಆತ್ಮವಿಶ್ವಾಸದಿಂದ ಬೀಗುವಿರಿ. ಸರಿಕರಲ್ಲಿ ಮರ್ಯಾದೆ ಸಲ್ಲುವುದು. ಹೊರಗಿನವರೇಕೆ? ನೀವು ಮುಪ್ಪಿನ ಹಾದಿಯಲ್ಲಿದ್ದರೂ ನಿಮ್ಮ ಹೆಂಡತಿಯು ನಿಮ್ಮ ಹುಟ್ಟು ಹಬ್ಬವನ್ನು ಸಂಭ್ರಮದಿಂದ ಆಚರಿಸಲು ಮುಂದಾಗುವಳು! ನೀವು ದುಡ್ಡನ್ನು ಕೂಡಿ ಇಟ್ಟಿರೆಂದರೆ ನಿವೃತ್ತಿಯ ಕಾಲದಲ್ಲಿ ಮಕ್ಕಳ ಕಾಲು ಹಿಡಿಯುವ ಪ್ರಸಂಗ ಬರುವುದಿಲ್ಲ.

ಸಮಾಜಶಾಸ್ತ್ರದ ಅಭ್ಯಾಸಿಯೊಬ್ಬ ದಿಲ್ಲಿಯ ಕನ್ಯಾಮಣಿಗಳ ಕುರಿತು ಎತ್ತಿಕೊಂಡ ಸಮಸ್ಯೆಯಿದು: ಅವರು ತಾವು ಕೈ ಹಿಡಿಯಲಿರುವ ವರನಲ್ಲಿ ಯಾವುದಕ್ಕೆ ಪ್ರಾಶಸ್ತ್ಯವೀಯುತ್ತಾರೆ? ರೂಪ? ಸದ್ಗುಣ? ಉಚ್ಚ ಮನೆತನ? ಊಂಹು, ಅವನ ಹಣ ಗಳಿಕೆಯ ಸಾಮರ್ಥ್ಯ! ಅದಿದ್ದರೆಯೇ ತನಗೆ ಸಮಾಜದಲ್ಲಿ ಪ್ರತಿಷ್ಠೆ ಸಿಗುವುದೆಂಬುದನ್ನು ಇಂದಿನ ವಿದ್ಯಾವಂತ ಮಹಿಳೆಯರು ಚೆನ್ನಾಗಿ ಬಲ್ಲರು.

ತ್ರಿವೇಣಿಯವರು 'ಮೊದಲ ಹೆಜ್ಜೆ' ಕಾದಂಬರಿಯಲ್ಲಿ ಇದನ್ನೇ ಒಂದೆಡೆ ಪುಷ್ಟೀಕರಿಸಿದ್ದಾರೆ. ಯುವಕನೊಬ್ಬನ ಸ್ವಗತ ಭಾಷಣವಿದು: ' ನಾನು ಚೆಲುವ ಎಂಬುದು ನನಗೆ ಚೆನ್ನಾಗಿ ತಿಳಿದಿತ್ತು. ಆದುದರಿಂದಲೇ ನಾನು ಚಂದ್ರಮುಖಿಯ ಬೆನ್ನ ಹಿಂದೆ ಅಲೆದಾಡುವ ಧೈರ್ಯ ಮಾಡಿದ್ದೆ. ಆದರೆ ಆಕೆಗೆ ಚೆಲುವಾದ ಯುವಕನಿಗಿಂತಲೂ ಶ್ರೀಮಂತ ಯುವಕನಲ್ಲಿ ಹೆಚ್ಚು ಮೋಹವಿರುವಂತೆ ತೋರಿತು. ಕಾಲೇಜಿನ ಇತರ ಹುಡುಗಿಯರೂ ನನ್ನನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ!' ...

'ನೀವು ಹೇಳುವುದೇನೋ ಸರಿ. ನಾವು ತಕ್ಕಮಟ್ಟಿಗೆ ಹಣವನ್ನೇನೋ ಗಳಿಸುತ್ತೇವೆ. ಹಣ ಶೇಖರಿಸುವುದು ಎಂದಾದರೂ ಸಾಧ್ಯವೆ, ಈಗಿನ ದಿನಗಳಲ್ಲಿ?- ಎಂದು ಅನೇಕರು ಕೇಳಬಹುದು, ಹಣವನ್ನು ಶೇಖರಿಸುತ್ತ ಹೋಗಬೇಕು- ಎಂಬುದರಲ್ಲಿ ನಾವು ಚೆನ್ನಾಗಿ ದುಡಿಯಬೇಕು ಎಂಬುದೇ ಅದರ ಮಥಿತಾರ್ಥ. ಬ್ಯಾಂಕ್ ಶಿಲ್ಕನ್ನು ಏರಿಸಲಾಗದಿದ್ದರೂ ಇದ್ದ ಹಣದಲ್ಲಿಯೇ ಸಂಸಾರ ನಿರ್ವಹಣೆಯನ್ನು ಸಾಗಿಸುವುದು ನಮ್ಮ ಕೈಯಲ್ಲಿದೆ. ಅದೆಷ್ಟು ಅನವಶ್ಯಕ ವೆಚ್ಚಗಳನ್ನು ಮಾಡುತ್ತೇವೆ! ಸಮಾರಂಭಗಳ ಹೆಸರಿನಲ್ಲಿ ಮನೆಯ ಹೆಂಗಸರು ಹಣದ ಅಪವ್ಯಯ ಮಾಡುವುದಾದರೆ ಇಲ್ಲದ ಪ್ರತಿಷ್ಠೆಗಾಗಿ ಮತ್ತು ಚಟಗಳಿಗಾಗಿ ಗಂಡಸರು ಹಣವನ್ನು ಪೋಲು ಮಾಡುತ್ತಾರೆ. ಅವರವರ ಸಾಂಸಾರಿಕ ವಿಷಯದಲ್ಲಿ ನಾನು ಇದಕ್ಕೂ ಹೆಚ್ಚು ಕೈ ಹಾಕಲಿಚ್ಛಿಸುವುದಿಲ್ಲ. ಆದರೆ ದೇಶಭಕ್ತ ದಿ. ಹುಕ್ಕೇರಿಕರ ರಾಮರಾಯರ ಜೀವನದಲ್ಲಿಯ ಒಂದು ಘಟನೆಯನ್ನು ಹೇಳದೆ ಮುಂದುವರಿಯಲಾರೆ. ಅವರು ತಮ್ಮ ಮಗನ ಮುಂಜಿ ಮಾಡಬೇಕೆಂದಾಗ ಕೈಯಲ್ಲಿ ಹಣವಿರಲಿಲ್ಲ(ಆಗಿನ್ನೂ ದೇಶಕ್ಕೆ ಸ್ವಾತಂತ್ರ್ಯ ಬಂದಿರದ ಕಾಲ) ನಗದು ಹಣ ಇದ್ದದ್ದು ಒಂದೆರಡು ರೂಪಾಯಿ ಮಾತ್ರ. 'ಸಾಲ ಮಾಡದೇ, ಇದ್ದುದರಲ್ಲಿ ಉಪನಯನ ಮುಗಿಸಿಬಿಡೋಣ' ಎಂದಾಗ ಅವರ ಹೆಂಡತಿ ಒಪ್ಪಿಬಿಟ್ಟರಂತೆ. ಎಷ್ಟು ಜನ ಹೆಣ್ಣು ಮಕ್ಕಳಲ್ಲಿ ಈ ಸದ್ಬುದ್ಧಿ ಇದೆ?

ಸಾಲ ಮಾಡಲಾಗದು : 'ನನ್ನಷ್ಟಕ್ಕೆ ನಾನು' ಎಂಬ ಸುವರ್ಣಸೂತ್ರಕ್ಕಂತೂ ಇದು ಅತ್ಯವಶ್ಯ. ಸಾಲಗಾರನು ಎಂದೂ ತನ್ನ ಕಾಲ ಮೇಲೆ ತಾನು ನಿಲ್ಲಲಾರ. ಖಾಲಿ ಚೀಲ ಎದ್ದು ನಿಲ್ಲದು; ಅದೇ ನಾಣ್ಯವಿದ್ದ ಚೀಲ - ಸೆಟೆದು ನಿಲ್ಲುವುದು. ಸಾಲ ಮಾಡಿದವನ ಮನಸ್ಸು ನಿರ್ವಿಣ್ಣವಾಗುವುದು. ಋಣದ ಭಾರವು ನಮ್ಮ ಕಾರ್ಯಶಕ್ತಿಯನ್ನೆ ಕುಂಠಿತಗೊಳಿಸುವುದು. ಅದಕ್ಕೇನೆ Let it be your first care not to be in any

man's debt-ಎಂದು ಜಾನ್ಸನ್ ಮೊದಲಾದ ಪ್ರಭೃತಿಗಳು ಹೇಳಿದರು. ನಮ್ಮ ಸರ್ವಜ್ಞನ ಮೂಲಕ 'ಸಾಲವನು ಕೊಂಬಾಗ' ಮತ್ತು 'ಸಾಲಿಗನು ಬಂದು ಎಳೆವಾಗಿನ' ಸ್ಥಿತಿಯನ್ನು ತಿಳಿದಿದ್ದೇವೆ. ಆದರೆ ಸಾಲವನ್ನು ಕೊಳ್ಳುವ ಹಿಂದಿನ ಸಂದರ್ಭ ಮತ್ತು ಸಾಲಗಾರನಾದಾಗಿನ ಅವಧಿ -ಇವೆರಡೂ ಅಷ್ಟೇ ದಾರುಣವಾಗಿವೆ. ಒಂದು ಕಿವಿ ಮಾತು: ನೀವು ಸಾಲ ಮಾಡಿಯೇ ಸಂಸಾರ ಸಾಗಿಸುವವರಾದರೆ ನಿಮ್ಮ ಹೆಂಡತಿ ನಿಮ್ಮನ್ನು ಒಳಗೊಳಗೆ ಅಸಡ್ಡೆಯಿಂದ ಕಾಣುತ್ತಾಳೆ! ಮಕ್ಕಳೂ ಹಾಗೇನೆ.

'ಋಣಂ ಕೃತ್ವಾ ಘೃತಂ ಪಿಬ' ಎಂಬುದನ್ನು ಸೂತ್ರವಾಗಿಟ್ಟುಕೊಂಡವರು ಕೇವಲ ಮಧ್ಯಮ ವರ್ಗೀಯರು. ಅನಕ್ಷರಸ್ಥರು, ಕೆಳವರ್ಗದವರು ಈ ವಿಷಯದಲ್ಲಿ ಎಷ್ಟೋ ಪಾಲು ಜಾಣರು. ಈಚಿನ ಒಂದು ಸಂಗತಿ ಹೇಳುವೆ. ಮಲ್ಲವ್ವ ಎಂಬ ಒಕ್ಕಲಗಿತ್ತಿ ಕಳೆದ ಮೂರು-ನಾಲ್ಕು ವರ್ಷದಿಂದ ನಮ್ಮಲ್ಲಿ ಕೆಲಸಕ್ಕಿದ್ದಳು. ಅವಳ ಮನೆಯಲ್ಲಿ ಎರಡು ಹೊತ್ತಿನ ಊಟಕ್ಕೆ ಅಭಾವ- ಎಂಬ ಪರಿಸ್ಥಿತಿ. ದುಡ್ಡಿನ ಅಡಚಣೆಯಿಂದಾಗಿ ದಿನವೂ ತಂದೆ-ತಾಯಿಗಳಲ್ಲಿ ರಗಳೆ-ರಸಕಸಿ; ಹಣಾಹಣಿ ಜಗಳ. ಹನ್ನೆರಡು ವರ್ಷದ ಮಲ್ಲವ್ವನ ಎಳೆಯ ಮನಸ್ಸಿನ ಮೇಲೆ ಅದು ತುಂಬಾ ಪರಿಣಾಮ ಬೀರಿತ್ತು. ಒಂದು ದಿನ ಸಾಲಗಾರನೊಬ್ಬನನ್ನು ತಪ್ಪಿಸಲು ಮನೆ ಬಿಟ್ಟು ಹೋದ ತಂದೆ ಮರಳಿ ಬರಲೇ ಇಲ್ಲ. ಆಗ ನಮ್ಮಲ್ಲಿ ಬಂದ ಮಲ್ಲವ್ವ ಬದಿಯ ೨-೩ ಮನೆಗಳಲ್ಲಿಯೂ ಕೆಲಸ ಹಿಡಿದಳು. ಬಿಡುವೇ ಇಲ್ಲದ ದುಡಿತ; ಊಟ-ತಿಂಡಿ, ಬಟ್ಟೆ-ಬರೆ ಎಲ್ಲ ಹೊರಹೊರಗೇ. ಅವಳ ಹೆಸರಿನಲ್ಲಿ ತೆರೆದ ಬ್ಯಾಂಕ್ ಖಾತೆಯಲ್ಲಿ ಪಗಾರ ಜಮೆಯಾಗುತ್ತಿತ್ತು. ಕಳೆದ ತಿಂಗಳು ಆಕೆ ಮುಂಬಯಿ ಬಿಟ್ಟು ತನ್ನ ಹುಟ್ಟೂರಾದ ಗಾಣಗಾಪುರಕ್ಕೆ ಹೋಗುವುದಾಗಿ ಸಾರಿದಳು! ನಿವೃತ್ತಿ ಪೂರ್ವದ ೭ ದಿನದ 'ಹಕ್ಕಿನ ರಜೆ'ಯಲ್ಲಿ ನಮ್ಮ ಮಲ್ಲವ್ವ ಪ್ರತಿ ದಿನ ಒಂದರಂತೆ ಸಿನೇಮಾ ನೋಡಿದಳು. ಮುಂಬೈ ಊರನ್ನು ತುಸು ಸುತ್ತಾಡಿಕೊಂಡು ಬಂದಳು. ಬಟ್ಟೆಬರೆ ಮತ್ತು ಒಂದು ಟ್ರಾನ್ಸಿಸ್ಟರ್ ಕೊಂಡಳು. ಹೀಗೆ ವೆಚ್ಚವಾಗಿ, ಬ್ಯಾಂಕಿನಲ್ಲಿ ಉಳಿದಿದ್ದ ಹಣ ಎಷ್ಟೆನ್ನುತ್ತೀರಿ? ೧೩೦೦ ರೂಪಾಯಿಗಳು! ನಮ್ಮಿಂದ ಆಕೆ ಅದನ್ನು ಪಡೆದು, ಊರಿನಲ್ಲಿ ಬಿಜಿನೆಸ್ ಮಾಡುವ ಇಚ್ಛೆಯನ್ನು ವ್ಯಕ್ತಪಡಿಸಿ ಹೊರಟುಹೋದಳು. ಆಳಾಗಿ ದುಡಿದು ಅರಸಿಯಾಗಿ ಮೆರೆದ ಮಲ್ಲವ್ವ ದುಡಿಮೆ ಹಾಗೂ ದುಡ್ಡಿನ ಮಹತ್ವವನ್ನು ಎಷ್ಟು ಚೆನ್ನಾಗಿ ಅರಿತಿದ್ದಾಳಲ್ಲ ಎಂದು ಅಚ್ಚರಿಪಡುತ್ತಿದ್ದೇನೆ.

ದುಡಿಮೆಯ ಜೀವನದ ಊರುಗೋಲೆಂದರೆ ನೀತಿಮತ್ತೆ-ಪ್ರಾಮಾಣಿಕತೆ. ಹಾಗೆಂದು ನೀವು ಎಲ್ಲ ಕಾಲಕ್ಕೆ ಧರ್ಮಬುದ್ಧಿಯವರೂ ಹರಿಶ್ಚಂದ್ರನ ಗೋತ್ರಜರೂ ಆಗಿರಬೇಕೆಂದಲ್ಲ. ಎದುರಿಗೆ ನೀವು ಕಂಡಾಗ, ಈತನೊಬ್ಬ ಕೆಟ್ಟ ಮನುಷ್ಯ ಎಂಬ ಭಾವನೆ ಇತರರಿಗೆ ಬಾರದಷ್ಟು ಮಟ್ಟಿಗೆ ನೀವು ಒಳ್ಳೆಯವರಿದ್ದರೆ ಸಾಕು! ನಿಮ್ಮ ಗುರುತಿನ ಜನ, 'ನೀವು ವಂಚಕರು, ಕ್ಷುದ್ರರು' ಎಂದು ಭಾವಿಸುವುದು ಬೇಡ. ನೀತಿಮತ್ತೆ ಒಂದು ಅಮೂಲ್ಯ ಆಸ್ತಿ. ಅದಿದ್ದರೆ ಬುದ್ಧಿಬಲ, ಜನಬಲ, ಧನಬಲಗಳ ಅಭಾವ ಪರಿಸ್ಥಿತಿಯನ್ನು ನೀಗಬಹುದು. ಈ ನೈತಿಕ ಬಲವು,

ದೈಹಿಕ ಬಲಕ್ಕಿಂತ ಹತ್ತುಪಟ್ಟು ಮಿಗಿಲೆಂದು ನೆಪೋಲಿಯನ್ ತನ್ನ ಸೈನಿಕರಿಗೆ ಪದೇ ಪದೇ ಹೇಳುತ್ತಿದ್ದ.

ಅಪ್ರಾಮಾಣಿಕತೆಯ ಒಂದು ಲಕ್ಷಣವೆಂದರೆ, ಒಳಗೊಂದು ಹೊರಗೊಂದು ಎಂಬ ಮನೋಭಾವ. ನಿಮಗೆ ಮನಶ್ಶಾಂತಿ ಬೇಕಲ್ಲವೆ? ಈ ದ್ವೈತ ಭಾವದಿಂದ ಅದೆಂದಿಗೂ ಸಿಗದು; ನೀವು ಜಾತ್ಯಾ ಭಂಡರಲ್ಲವಾದುದರಿಂದ, ಸುಳ್ಳು ಹೇಳುವ, ಖೊಟ್ಟಿತನದ ಪ್ರಸಂಗಗಳಲ್ಲಿ ನಿಮ್ಮ ಮನಸ್ಸು ಕಿರಿಕಿರಿಗೊಳ್ಳುತ್ತದೆ. ಆದ ಕಾರಣ ನಿಮ್ಮ ವಿವೇಕಕ್ಕೆ ಸರಿತೋರಿದಷ್ಟನ್ನೆ ಆಡಬೇಕು; ಅದರಂತೆ ಮಾಡಬೇಕು.

ಒಳ್ಳೆಯವರಿರಬೇಕು- ಇದರ ಅರ್ಥ ಕೆಟ್ಟವರಾಗಲೇಬಾರದೆಂದಲ್ಲ! ಈಗಿನ ದಿನಗಳಲ್ಲಿ ಹಾಗಿರಲು ಅನೇಕ ಬಾರಿ ಸಾಧ್ಯವಿಲ್ಲ. ನೀವು ಸದಾಕಾಲ ಒಳ್ಳೆಯವರಿದ್ದರೆ, ಇತರರು ಅದರ ದುರುಪಯೋಗ ತೆಗೆದುಕೊಳ್ಳುತ್ತಾರೆ. ಆದ ಕಾರಣ, ಪ್ರಸಂಗ ಬಂದರೆ ಆ ಮಟ್ಟಿಗೆ ಕೆಟ್ಟವರಾಗಲು ಹಿಂಜರಿಯಬಾರದು. ಉದಾಹರಣೆ ಕೊಡುವೆ: ನನ್ನ ನಿಕಟ ಪರಿಚಯದ ಇಂದ್ರಜಿತ್ ಪೂರಿ ಎಂಬ ಆಫೀಸರರಿದ್ದಾರೆ. ಅವರು ತಮ್ಮ ಕೆಲಸದಲ್ಲಿ ನಿಷ್ಣಾತರು. ಹಸನ್ಮುಖಿಗಳು, ಇನ್ನೊಬ್ಬರ ಉಸಾಬರಿಗೆ ಹೋಗುವವರಲ್ಲ, ಕೈಕೆಳಗಿನವರಿಗೆ ತೊಂದರೆ ಕೊಡುವವರಲ್ಲ. ಅಂತೂ ಇವರೊಬ್ಬ ಅತೀ ಒಳ್ಳೆಯವರು ಎಂಬ ಭಾವನೆ ಹಬ್ಬಿಬಿಟ್ಟಿತು. ಕೈಕೆಳಗಿನವರು ಸ್ವಚ್ಛಂದವಾಗಿ ವರ್ತಿಸತೊಡಗಿದರು. ತಮ್ಮ ಸೌಜನ್ಯದ ದುರುಪಯೋಗವಾಗುತ್ತಿದೆಯೆಂದು ತಿಳಿದು, ಇಂದ್ರಜಿತರು ಓರ್ವ ಮೈಸೊಕ್ಕಿನ ಹಾಗೂ ಮೈಗಳ್ಳ ನೌಕರನ ಹಿಂದೆ ತಾಗಿದರು. ಮೆಮೊ ಇತ್ಯಾದಿ ಹೊರಡಿಸಿ, ನೌಕರಿಯಿಂದ ತೆಗೆದೇ ಬಿಟ್ಟರು! ಪರಿಣಾಮ! ಆ ಮಾತಿಗೆ ಹತ್ತು ವರ್ಷವಾಯಿತು; ಇಂದಿನ ವರೆಗೆ ಅವರ ಆಫೀಸಿನಲ್ಲಿ ಎಲ್ಲವೂ ಸುಸೂತ್ರ; ಇತರ ಕಡೆಗಳಲ್ಲಿ ಕಂಡು ಬಾರದ ಹೆಚ್ಚಿನ ಕಾರ್ಯಕ್ಷಮತೆ.

ಇನ್ನೊಬ್ಬರು ಕೆಟ್ಟವರಿದ್ದರೂ ನೀವು ಒಳ್ಳೆಯವರಿರಬೇಕು-ಎಂದಲ್ಲವೆ ಕ್ರೈಸ್ತ ಮಹಾಶಯ ಹೇಳಿದ್ದು? ನಿಮ್ಮ ಬಲಗೆನ್ನೆಗೆ ಯಾರಾದರೂ ಹೊಡೆದರೆ ಎಡಗೆನ್ನೆಯನ್ನು ತೋರಿಸು ಎಂಬ ಅವನ ಉಪದೇಶಕ್ಕೆ ಇದು ವಿರುದ್ಧ ಎಂದು ನಿಮಗನ್ನಿಸಬಹುದು. ಹಾಗಿಲ್ಲ. ನೀವಾಗಿ ಆ ವ್ಯಕ್ತಿಗೆ ಅನ್ಯಾಯ ಬಗೆದಿಲ್ಲ ಎಂದು ತಿಳಿಯುವ. ಆತ ನಿಮ್ಮ ಬಲ ಕೆನ್ನೆಗೆ ಹೊಡೆದ - ಎಂದಿಟ್ಟುಕೊಳ್ಳುವ. ಆಗ ನೀವು ನಿಮ್ಮ ಎಡ ಕೆನ್ನೆಯನ್ನು ಅವಶ್ಯ ತೋರಿಸಿರೆಂದು ನಾನೂ ಹೇಳುತ್ತೇನೆ. ಬರಿಯೆ ತೋರಿಸಿರಿ ಮಾತ್ರ! ಹೊಡೆಸಿಕೊಳ್ಳಬೇಡಿರಿ. ಎರಡನೆಯ ಬಾರಿ ಹೊಡೆಯಲೆಂದು ಕೈ ಎತ್ತಿದರೆ? ಆ ಕೈಯನ್ನು ತಡೆದು, ಚೆನ್ನಾಗಿ ಬಾರಿಸಿರಿ! ಯಾಕೆ? ನೀವೇನೋ ನಿಮ್ಮ ಎರಡನೆಯ ಕೆನ್ನೆಯನ್ನು ತೋರಿ, ನಿಮ್ಮ ಕ್ಷಮಾಗುಣ, ಔದಾರ್ಯಗಳನ್ನು ವ್ಯಕ್ತಪಡಿಸಿದಿರಿ. ಅದನ್ನು ಅರಿಯುವಷ್ಟು ಮಾನವೀಯತೆ ಅವನಲ್ಲಿ ಇರಬೇಡವೆ?

ನನಗಾಗಿ ನಾನು; ನನ್ನ ಸೋಕ್ಷ-ಮೋಕ್ಷವನ್ನು ನಾನೇ ಕಂಡುಕೊಳ್ಳಬೇಕೆಂದು ಇಷ್ಟರವರೆಗೆ ಪ್ರತಿಪಾದಿಸಿದ್ದಾಯಿತು. ಇದು ನಿಮಗೆ ಸಮ್ಮತವಾಗಿದ್ದರೆ 'ತುಸು ಮಟ್ಟಿಗೆ ಪರರು' ಎಂಬುದನ್ನು ತುಸು ಪರಿಶೀಲಿಸೋಣ. ಯಾರು ಈ ಪರರು? ಕುಟುಂಬದವರು, ಉದ್ಯೋಗ ಕ್ಷೇತ್ರದಲ್ಲಿದ್ದವರು ಮತ್ತು ಸಾರ್ವಜನಿಕರು. ಸಾರ್ವಜನಿಕರೊಡನೆ ಹೇಗೂ ನಮಗೆ ತುಸುವೇ ಸಂಬಂಧ ಬರುವುದಾದ್ದರಿಂದ ಅವರನ್ನು ಬಿಡೋಣ.

ನೌಕರಿ ಅಥವಾ ಉದ್ಯೋಗ ಕ್ಷೇತ್ರದಲ್ಲಿದ್ದವರೊಟ್ಟಿಗೆ ನೀವು ದಿನದ ಎಳೆಂಟು ತಾಸನ್ನು ಕಳೆಯುತ್ತೀರಿ- ಕುಟುಂಬದವರೊಡನೆ ಕಳೆಯುವುದಕ್ಕಿಂತ ಹೆಚ್ಚಾಗಿ. ಅವರಲ್ಲಿ ಕೆಲವರು ನಿಮಗೆ ಮಿತ್ರರು; ಹಿತಚಿಂತಕರು. ಕೆಲವರು ನಿಮಗೆ ಆಗದವರು! ಮತ್ತೆ ಕೆಲವರು ಯಥಾಯಥಾ. ಒಬ್ಬಿಬ್ಬರು ನಿಮ್ಮ ಮೇಲೆ ಹೊಟ್ಟೆಕಿಚ್ಚು ಪಡುವವರೂ ಇರಬಹುದು. ಅಂತೂ ಘರ್ಷಣೆ ತಪ್ಪಿದ್ದಲ್ಲ: ತಪ್ಪು ತಿಳಿವಳಿಕೆಗಂತೂ ಸದಾ ಅವಕಾಶ. ಯಾರಿಗೂ ನೀವು ಬಿರುಸು ಮಾತನಾಡುವಂತಿಲ್ಲ. ನೀವು ಮತ್ತೊಬ್ಬರೊಟ್ಟಿಗೆ ವಿಶೇಷ ಸ್ನೇಹದಿಂದ ಇದ್ದರೂ ಕಷ್ಟ. ಏಕೆಂದರೆ ಅವರನ್ನು ಕಂಡರೆ ಆಗದವರು ಬೇರೆ ಜನ ಇರುತ್ತಾರಲ್ಲ! ಅಂತೂ ಇನ್ನೊಬ್ಬರ ವಿಷಯದಲ್ಲಿನ ಬೇಸರ, ಸಿಟ್ಟು, ಅವಹೇಳನ- ಇವೆಲ್ಲವನ್ನೂ ನುಂಗಿಕೊಂಡಿರಬೇಕು. ಅದಾಗದಿದ್ದರೆ ವೈರ ಕಟ್ಟಿಕೊಂಡು ಅದೇ ಜನರೊಡನೆ ಪ್ರತಿನಿತ್ಯವೂ ಒದ್ದಾಡಬೇಕು. ಮನೆಗೆ ಬಂದ ಮೇಲೂ ನೀವು ಆಫೀಸಿನ ಕರಕರೆಯನ್ನು ಕಟ್ಟಿಕೊಂಡೇ ಇರುವುದಾದರೆ?

ಇದಕ್ಕೆಲ್ಲ ಒಂದೇ ಉಪಾಯ; "ತುಸು ಮಟ್ಟಿಗೆ ಪರರು" ಎಂಬುದನ್ನು ಪೂರ್ತಿ ಅನ್ವಯಿಸಿರಿ. ದೃಷ್ಟಾಂತರೂಪವಾಗಿ ಹೇಳುವುದಾದರೆ, ನೀವು ಗಾಡಿಯ ಪ್ರವಾಸದಲ್ಲಿ ಇದ್ದೀರಿ; ಅಲ್ಲಿ ಆಫೀಸಿನವರು ನಿಮ್ಮ ಸಹಪ್ರವಾಸಿಗಳು ಎಂಬುದಾಗಿ ನೀವು ತಿಳಿದು ವರ್ತಿಸತಕ್ಕುದು. ರೇಲ್ವೆ ಪ್ರವಾಸದಲ್ಲಿದ್ದಾಗ ಇತರರೊಡನೆ, ಇಲ್ಲವೆ ಹೊಲಸು ಮಾಡುವವರೊಡನೆ ಜಗಳವಾಡುತ್ತೇವೆ. ಎಲ್ಲೆಲ್ಲಿಯದೊ ಸಂಬಂಧವನ್ನು ಎಳೆದು ತಂದು ಪರಿಚಯಸ್ಥರಂತೆ ನಡೆದುಕೊಳ್ಳುತ್ತೇವೆ. ಇಸ್ಪೀಟು ಆಡುತ್ತೇವೆ. ಬೇನೆಯವರು, ಮುದುಕರು, ಎಳೆಯ ಮಕ್ಕಳು, ಜೊತೆಗಿದ್ದರೆ ಅಷ್ಟಿಷ್ಟು ನೆರವನ್ನೂ ನೀಡುತ್ತೇವೆ. ಅಲ್ಲಿಗೆ ಮುಗಿಯಿತು! ನಿಮ್ಮ ಸ್ಥಾನಕ್ಕೆ ತಲುಪಿದ ಮೇಲೆ ನಿಮ್ಮ ಸಹಪ್ರವಾಸಿಕರ ಬಗ್ಗೆ ರವಷ್ಟಾದರೂ ಯೋಚಿಸುತ್ತೀರಾ? ಸಂಬಂಧ ಬೆಳೆಸಿಕೊಳ್ಳುತ್ತೀರಾ?

ಹಾಗೆಯೇ ಇಲ್ಲಿಯೂ! ಆಫೀಸಿನಲ್ಲಿ ಕೆಲಸದತ್ತ ಹೆಚ್ಚು ಗಮನವಿರಬೇಕಲ್ಲದೆ ಜೊತೆಯ ಕೆಲಸಗಾರರ ಕಡೆಗಲ್ಲ. ಯಾರನ್ನೂ ಅತಿಯಾಗಿ ಹಚ್ಚಿಕೊಳ್ಳದೆ ನಿಮಗೆ ಸಹಜ, ಸುಲಭವೆಂದು ತೋರುವ ಮಟ್ಟಿಗೆ ಮಾತ್ರ ಸಹೋದ್ಯೋಗಿಗಳಿಗೆ ನೆರವಾಗಬಹುದು. ಇತ್ತ ನಿಮ್ಮ, ಅವರ ರೀತಿ-ನೀತಿಯಲ್ಲಿ, ಕೆಲಸದಲ್ಲಿ ಹೊಂದಿಕೆ ಇಲ್ಲದಿದ್ದರೆ ಅವರಷ್ಟಕ್ಕೆ ಅವರನ್ನು ಬಿಟ್ಟುಬಿಡಿ. ವಿಶೇಷ ಸ್ನೇಹವೂ ಬೇಡ, ಘರ್ಷಣೆಯೂ ಬೇಡ. ನಿಮಗಿಂತ ಮೇಲಿನ ಹಾಗೂ

ಕೆಳಗಿನ ನೌಕರ ವರ್ಗದವರ ಸಂಗಡವಂತೂ ಸರ್ವಥಾ ಬೇಡ!

ಕುಟುಂಬದವರೊಟ್ಟಿಗೆ ನಡೆದುಕೊಳ್ಳುವ ವಿಷಯದಲ್ಲಿಯೂ ನೀವು ಸಾಕಷ್ಟು ಎಚ್ಚರವಹಿಸಬೇಕು. "ಎಲ್ಲಾ ನಮ್ಮವರೇ. ಹೇಗೆ ಇದ್ದರೂ ಏನು ಮಾಡಿದರೂ ನಡೀತದೆ" ಎಂಬ ಅಸಡ್ಡೆ ಬೇಡ. ನಿಮ್ಮ ಮನಶ್ಶಾಂತಿ ಕದಡುವ ಸಂದರ್ಭಗಳು ಮನೆಯಲ್ಲಿಯೇ ಹೆಚ್ಚು.

ಕುಟುಂಬದವರಲ್ಲಿ ಪರಸ್ಪರ ಆಕರ್ಷಣೆ ಎಷ್ಟಿದೆಯೋ ಅದಕ್ಕಿಂತ ಹೆಚ್ಚಾಗಿ ಅಪಕರ್ಷಣೆ ಇದೆ. ಏಕೆ? ಗಂಡಸು ಹೆಂಡತಿ, ಮಕ್ಕಳ ಮೇಲೆ ಅಧಿಕಾರ ನಡೆಸಬೇಕು- ಎಂದು ಹಿಂದಿನ ಕಾಲದಂತೆ ಅಪೇಕ್ಷಿಸುತ್ತಾನೆ. ಅದು ಕೈಗೂಡುವುದಿಲ್ಲ. ಆಕೆ ಈಗಿನ ಕಾಲದ ಹೆಂಗಸು; ಅಷ್ಟಿಷ್ಟು ಕಲಿತಾಕೆ. ಹೊರಗಿನ ಕೆಲಸಗಳಲ್ಲಿ ಪಾಲುಗೊಳ್ಳುವಾಕೆ. ಆದಕಾರಣ, ನೀವು ಅಂದದ್ದನ್ನು ಅನಿಸಿಕೊಳ್ಳುವವಳಲ್ಲ. ಇನ್ನು ಮಕ್ಕಳೋ-ಅಪರಿಮಿತ ಸ್ವಾತಂತ್ರ್ಯಾಪೇಕ್ಷಿಗಳು. ನೀವು ಕೊಡಬಾರದೆಂದರೂ ನಿಮ್ಮಿಂದ ಅವರು ಅದನ್ನು ಕಿತ್ತುಕೊಳ್ಳುವಷ್ಟು ಪ್ರಬಲರು! ಈಗಿನ ಮಕ್ಕಳನ್ನು ನಿಮ್ಮ ಸ್ವಂತದ ನಡತೆಯಿಂದ ಮತ್ತು ಸಾಮದಾನಗಳಿಂದ ಮಾತ್ರ ಹಾದಿಗೆ ತರಲು ಸಾಧ್ಯ; ಯಜಮಾನ-ತಂದೆ ಎಂಬ ಅಧಿಕಾರದಂಡದಿಂದಲ್ಲ. ಹನ್ನೆರಡು ವರ್ಷ ದಾಟಿದ ಮೇಲಂತೂ ನೀವು ಅವರ ವಿಷಯದಲ್ಲಿ ನಿಮ್ಮ ಹಟವನ್ನು ನಡೆಸಿಯೇ ತೀರುವೆ ಎಂದರೆ ಶಕ್ಯವಿಲ್ಲ; ಹೀಗಾಗಿ ದಿನನಿತ್ಯ ಜಗಳದ ಮಾತು, ತಿಕ್ಕಾಟ, ಚಕಮಕಿ ಏಳಬಹುದು. ಇದಕ್ಕೆ ಒಂದೇ ಉಪಾಯವಿದೆ. ಮನೆಯಲ್ಲಿ ಹೆಂಡತಿಗೂ ೧೨ ವರ್ಷ ದಾಟಿದ ಮಕ್ಕಳಿಗೂ ಅವರವರ ಸ್ವಾತಂತ್ರ್ಯವನ್ನು ಕೊಟ್ಟುಬಿಡಿರಿ. ನಿಮ್ಮದನ್ನು ನೀವಿಟ್ಟುಕೊಳ್ಳಿ! ಜೊತೆಗೆ Veto power ಕೂಡಾ ಇರಲಿ. ಪರಿಸ್ಥಿತಿ ಗಂಭೀರವಾಗಿದ್ದರೆ, ನಿಮ್ಮ ಮಾತಿಗೆ ಮನ್ನಣೆ ಉಳಿಯಲಿ. ಹೀಗೆ ಮನೆಯಲ್ಲಿ ಪ್ರತಿಯೊಬ್ಬರಿಗೆ ಅವರ ಸ್ವಾತಂತ್ರ್ಯವನ್ನು ಕೊಡುವಲ್ಲಿ ನೀವು 'ತುಸು ಮಟ್ಟಿಗೆ ಪರರು' ಎಂಬ ಸೂತ್ರವನ್ನೇ ಅನ್ವಯಿಸುತ್ತಿದ್ದೀರಿ.

ಕುಟುಂಬ, ಕಚೇರಿ, ಸಾರ್ವಜನಿಕ ಕ್ಷೇತ್ರ - ಎಲ್ಲಿಯೇ ಇರಲಿ, ನಾವು ಆಡುವ ಮಾತೇ ಎಷ್ಟೋ ಬಾರಿ ವೈಮನಸ್ಯ-ಘರ್ಷಣೆಗಳಿಗೆ ಕಾರಣವಾಗುತ್ತದೆ. ಕೃತಿಗಿಂತ ಮಾತಿನ ಪೆಟ್ಟು ಜೋರಿನದು. ತಪ್ಪು ದಾರಿಯ ಮಾತುಕತೆಯ ಪ್ರಕಾರಗಳಿವು:

ಹಗುರುಬಾಯಿ : ಇನ್ನೊಬ್ಬರ ಕುರಿತು ಅತ್ಯಂತ ಲಘುವಾಗಿ ಮಾತಾಡಿಬಿಡುತ್ತೇವೆ-ಅವರು ಬಳಿಯಲ್ಲಿ ಇಲ್ಲ, ಎಂಬ ಭಾವನೆಯಿಂದ. ಅನಂತರ ಅದು ಹೇಗೋ ಅವರ ಕಿವಿಗೆ ಸೇರುತ್ತದೆ. ನಾವು ಅವರ ವಿಷಯವಾಗಿ ಬೇರೆ ಸಂದರ್ಭಗಳಲ್ಲಿ ಒಳ್ಳೆಯ ಕಾರ್ಯ ಮಾಡಿದ್ದರೂ ಒಳ್ಳೆಯ ಮಾತು ಆಡಿದ್ದರೂ - ನಾವು ಆಡಿದ ಲಘು ಮಾತಿನಿಂದ ಮೂಡಿದ್ದ ತಪ್ಪು ಭಾವನೆ ಹೋಗುವುದೇ ಇಲ್ಲ. ಅವರು ಪ್ರಸಂಗ ಬಂದಾಗ ನಮಗೆ ಚೆನ್ನಾಗಿಯೇ

ಬಿಸಿ ತಾಗಿಸುತ್ತಾರೆ!

ಅನವಶ್ಯಕ ಮಾತು : ನಾವು ಆಡುವ ವಿಷಯದಲ್ಲಿ ಅವರಿಗೆ ಆಸ್ಥೆ, ಅಥವಾ ಕೇಳುವಲ್ಲಿ ಉತ್ಸುಕತೆ ಇರಲಿ, ಬಿಡಲಿ ನಾವು ಒಂದೇ ಸಮನೆ ಮಾತಾಡುತ್ತೇವೆ.

ಒಣ ಚರ್ಚೆ : ನಮ್ಮ ಅಭಿಪ್ರಾಯವನ್ನು ಇನ್ನೊಬ್ಬರ ಮೇಲೆ ಹೇರುವುದಕ್ಕಾಗಿ ವಾದ ಹಾಕುತ್ತೇವೆ. ಈ ಬಗೆಯ ವಾದದಿಂದ ಇನ್ನೊಬ್ಬರ ಮನದಲ್ಲಿ ಮೂಡಿದ್ದ ಅಭಿಪ್ರಾಯವನ್ನು ಕಿತ್ತುಹಾಕುವುದು ಕಠಿಣ. ತಮ್ಮದು ತಪ್ಪೆಂದು ತಿಳಿದು ಬಂದ ಮೇಲೂ ಅವರು ಒಪ್ಪಿಕೊಳ್ಳುವುದಿಲ್ಲ-ಪ್ರತಿಷ್ಠೆಯಿಂದಾಗಿ! ವಾದೇ ವಾದೇ ಜಾಯತೇ ತತ್ವಬೋಧ:? ಕ್ಷಮಿಸಿ, ಈ ಶತಮಾನದವರಿಗೆ ಅದು ಅನ್ವಯಿಸುವುದಿಲ್ಲ. ಕಹಿ ಭಾವನೆಯೊಂದೇ ಅದರಿಂದ ಬರುವ ಲಾಭ.

ಸಿಟ್ಟು, ಆಕ್ರೋಶ : ಯಾರೊಬ್ಬರ ಮೇಲಿನ ಸಿಟ್ಟನ್ನು ನಾವು ಮಾತಿನಲ್ಲಿ ಬಹು ಬೇಗ ವ್ಯಕ್ತಪಡಿಸುತ್ತೇವೆ. ಹಾಗೆ ಅನಿಸಿಕೊಂಡವರು ಯಾವ ಕಾಲಕ್ಕೂ ನಮ್ಮನ್ನು ಕ್ಷಮಿಸುವುದಿಲ್ಲ. ನಮ್ಮ ಅಧೀನದಲ್ಲಿರುವವರು ನಮ್ಮಿಂದ ಬೈಸಿಕೊಂಡು ಆ ಗಳಿಗೆಗೆ ಸುಮ್ಮನಿರಬಹುದು. ಆದರೆ ಅವರು ಒಳಗೊಳಗೇ ನಮ್ಮ ಬಗ್ಗೆ ಬೇಸರ- ತಿರಸ್ಕಾರ ಭಾವನೆಯನ್ನು ತಳೆಯುತ್ತಾರೆ. ಅದನ್ನು ಹೊರಹಾಕಲು ತಕ್ಕ ಸಮಯವನ್ನು ಕಾಯುತ್ತಾರೆ, ಇಷ್ಟಕ್ಕೂ ಸಿಟ್ಟಿನ ಮನೋಭಾವದಿಂದ ನಮಗೇನೆ ಎಷ್ಟೊಂದು ತಾಪ!

ಈಗಿನ ದಿನಗಳಲ್ಲಿ ಉಪಕಾರ ಮಾಡಹೋಗುವುದು ಎಷ್ಟು ಮಟ್ಟಿಗೆ ಸೂಕ್ತ? ಒಂದು ಅಪರಾಧ! ಪರೋಪಕಾರವು ಪುಣ್ಯದ ಕೆಲಸವೇನೋ ಹೌದು. ಆದರೆ ಯಾವಾಗಲೂ ಅಲ್ಲ. ಉಪಕಾರವನ್ನು ನೀವು ಮಾಡಬಹುದು. ಅದರಿಂದ ನೀವು ಪ್ರತ್ಯುಪಕಾರವನ್ನು ಬಯಸಿದಿರೊ, ಅಲ್ಲಿಗೆ ಅವರ ಋಣ ಮುಗಿಯಿತು. ಉಪಕಾರ ಹೊಂದಿದವರ ಮನದಲ್ಲಿ ಮೂಡಿದ ಕೃತಜ್ಞತಾಭಾವನೆಯು ಮಂಜಿನಂತೆ ಕ್ಷಣಿಕ. ನೀವು ಮಾಡಿದ್ದ ಉಪಕಾರವನ್ನು ಬಾಯಿಬಿಟ್ಟು ಹೇಳಿದರಂತೂ ಪ್ರತ್ಯುಪಕಾರವನ್ನು ಪಡೆಯಲಾರಿರಿ. ಆಗ ನಿಮಗೆ ನಿರಾಶೆ ಕಟ್ಟಿಟ್ಟದ್ದು. ಅಗತ್ಯವಿದ್ದ ಮಟ್ಟಿಗೆ, ನಿಮಗೆ ಶಕ್ಯವಿದ್ದ ಮಟ್ಟಿಗೆ ಮಾತ್ರ ಪರೋಪಕಾರ!

ಇನ್ನೊಬ್ಬರಿಗೆ ಸಹಾಯದ - ಉಪಕಾರದ ಅಗತ್ಯ ಎಷ್ಟರ ಮಟ್ಟಿಗೆ ಇದೆಯೆಂಬುದರ ಕಲ್ಪನೆ ಇಲ್ಲದೇನೇ ಹಲವರು ಪರರಿಗಾಗಿ ಮುಗಿಬಿದ್ದು ಸಹಾಯ ಮಾಡಹೋಗುತ್ತಾರೆ! ನಮ್ಮ ಊರಿನವನೊಬ್ಬ ತಡವಾಗಿ ಮದುವೆಯಾದ. ಇಂಥವರು ತಮ್ಮ ಪತ್ನಿಮಣಿಯರೊಡನೆ ಅದೆಷ್ಟು ಆದರ, ಭಯಗಳಿಂದ ನಡೆದುಕೊಳ್ಳುತ್ತಾರೆಂಬುದು ತಿಳಿದ ವಿಷಯ. ಅದಲ್ಲವಾದರೂ ತನ್ನ ಸ್ವಭಾವಾನುಸಾರ ಈತ ತನ್ನ ಹೆಂಡತಿಯ ತಂಗಿಗೆ ವರ ಹುಡುಕುವ ಬಗ್ಗೆ ವಿಶೇಷ ಪ್ರಯತ್ನಿಸಿದ. ಸಿಕ್ಕಿತೊಂದು ವರ. ಮದುವೆಯಲ್ಲಿಯೂ ತಾನೇ ಖುದ್ದಾಗಿ

ಓಡಾಡಿದ. ಅದರಿಂದ ತನ್ನ ಹೆಂಡತಿ ಮತ್ತು ಅವಳ ತವರಿನವರಿಗಾದ ಸಂತೋಷವನ್ನು ಕಂಡು ಹೆಮ್ಮೆಯಿಂದ ಬೀಗಿದ. ಆದರೆ ೪-೫ ವರ್ಷಗಳಾದ ಮೇಲೆ ಗೊತ್ತಾಯಿತು - ಆ ಜೋಡಿಯಲ್ಲಿ ಸಾಮರಸ್ಯದ ಲವಲೇಶವೂ ಇಲ್ಲವೆಂದು. ಸರಿ, ಈಗ ಎರಡೂ ಕಡೆಯವರು ಇವನ ಹೆಸರಿನಲ್ಲಿ ಕಲ್ಲು ಹಾಕುತ್ತಿದ್ದಾರೆ. ಈ ಮಧ್ಯೆ ತನ್ನ ಪೂರ್ವ 'ಯಶಸ್ಸಿ'ನಿಂದಾಗಿ ಈತ ಯಾರ ಯಾರದೋ ಸಲುವಾಗಿ ಓಡಾಡಿ, ನಾಲ್ಕಾರು ಮದುವೆಗಳನ್ನು ಹೊಂದಿಸಿದ. ಆದರೆ ಒಂದು ಸಂದರ್ಭದಲ್ಲಿ, ಓರ್ವ ಕನ್ಯೆಯ ಅಣ್ಣನ ಕಡೆಯಿಂದ ಮೈನುಗ್ಗಾಗುವಂತೆ ಹೊಡೆಸಿಕೊಂಡು ನರಳಿದ. ಕಾರಣವಿಷ್ಟೇ. ಈಗಾಗಲೇ ಮದುವೆಯಾಗಿ ಹೆಂಡತಿಯನ್ನು ಬಿಟ್ಟಂಥ ಗಂಡನ್ನು, ನಿಜ ಸಂಗತಿ ತಿಳಿಯದೆ ಈತ ಆ ಕನ್ಯೆಗೆ ಆಯ್ಕೆ ಮಾಡಿದ್ದ! ಈಚೆಗೆ ಇವನು ವರಕನ್ಯಾ ಶೋಧವನ್ನು ಕಡಿಮೆ ಮಾಡಿದ್ದರೂ ಮಂದಿ ಕೇಳಲಿ, ಬಿಡಲಿ ಉಪಕಾರ ಮಾಡುತ್ತಲೇ ಇರುತ್ತಾನೆ; ಅವರು ಮಾಡಿಸಿಕೊಳ್ಳುತ್ತಾರೆ-ಹಕ್ಕಿನಿಂದ ಎಂಬಂತೆ! ಅವನ ಸಹಾಯದ ಬಗ್ಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವುದಂತೂ ದೂರವೇ. ಸಾಕಷ್ಟು ಅಲಕ್ಷ್ಯ ಮಾಡುತ್ತಾರೆ. ಅತ್ಯುಪಕಾರದ ಮತ್ತು ಅಗತ್ಯಕ್ಕಿಂತ ಹೆಚ್ಚಿನ ಉಪಕಾರ ಮಾಡುವ ಉಸಾಬರಿಗೆ ಹೋಗಲಾಗದೆಂಬ ಪಾಠವನ್ನು ಯಾರೂ ಅವನ ಪರಿಸ್ಥಿತಿಯಿಂದ ಕಲಿಯಬಹುದು.

ತುಸು ಮಟ್ಟಿಗೆ ಪರರು ಎಂಬುದರಲ್ಲಿ ಪರರೊಡನೆಯೆ ವ್ಯವಹಾರ ಅತಿಯಾಗಬಾರದೆಂಬುದೇ ಅದರ ಇಂಗಿತಾರ್ಥ. ಹಾಗೆಂದು ಪರರ ವಿಷಯದಲ್ಲಿ ಅತೀವ ನಿರ್ಲಿಪ್ತತೆ, ತಾಟಸ್ಥ್ಯ ಇರಬೇಕೆಂದಲ್ಲ, ಇನ್ನೊಬ್ಬರ ಕಷ್ಟಗಳ ವಿಷಯದಲ್ಲಿ ಕಳಕಳಿ ಅವಶ್ಯವಾಗಿರಲಿ. ಆದರೆ ಅದಕ್ಕೆ ನಿಮ್ಮ ಪ್ರತಿಕ್ರಿಯೆಯು, ಅಗತ್ಯಕ್ಕಿಂತ ಹೆಚ್ಚಾದ, ಅದರಂತೆ ನಿಮ್ಮ ಕಾರ್ಯಯೋಗ್ಯತೆಯನ್ನು ಮೀರಿದ ಉಪಕೃತಿಯಲ್ಲಿ ವ್ಯಕ್ತವಾಗುವುದು ಬೇಡ.

ಇಷ್ಟೆಲ್ಲ ಆಯಿತು. 'ನಿಮ್ಮಷ್ಟಕ್ಕೆ ನೀವು'ಇರದೇ ಈ ಲೇಖನ ಬರೆಯುವ ಮತ್ತು ಪರೋಪದೇಶದ ಗೊಡವೆಗೆ ಏಕೆ ಹೋದಿರಿ ಎಂದು ಯಾರಾದರೂ ಕೇಳಬಹುದು. ನಿಜ ಸಂಗತಿಯೆಂದರೆ ಮೇಲೆ ವ್ಯಕ್ತಪಡಿಸಿದ ಅನೇಕ ಅಂಶಗಳನ್ನು ಅನುಷ್ಠಾನದಲ್ಲಿ ನನಗೇ ತರಲಾಗಿಲ್ಲ. ಆದರೆ ನನ್ನ ಸುಖ-ಶಾಂತಿಗೆ ಇದೇ ಸರಿಯಾದ ಸೂತ್ರ ಎಂದು ಖಚಿತ ಮಾಡಿಕೊಂಡ ಮೇಲೆ, ಅದರ ಬಗ್ಗೆ ಸ್ಪಷ್ಟ ಕಲ್ಪನೆ ಇರಲೆಂದೂ ಆಚರಣೆಗೆ ತರಲು ಅನುಕೂಲವಾಗಲೆಂದೂ ಬರೆದು ತೆಗೆದೆ. ಹಾಗೆಯೇ ನಿಮಗೂ ಇದರಿಂದ ಪ್ರಯೋಜನ-'ತುಸುಮಟ್ಟಿಗೆ' ಆಗುತ್ತಿದ್ದರೆ ಆಗಲೆಂದು ಪ್ರಕಟಿಸಿದ್ದೇನೆ!

***

೧೦. ಮರಣ ಸಂಭ್ರಮ

ನಾಮಾಂಕಿತ ಸ್ವಾತಂತ್ರ್ಯಯೋಧರೂ, ಸುಪ್ರಸಿದ್ಧ ಗ್ರಾಮೀಣ ಕಾರ್ಯಕರ್ತರೂ ಆದ ರಾಜೇರಾವ ಇನಾಂದಾರ ಇವರ ಮರಣ ವಾರ್ತೆಯ ಬಗ್ಗೆ ವರದಿ ಮಾಡಲು, ನಮ್ಮ ಸಂಪಾದಕರು ಹೇಳಿದಾಗ ಒಲ್ಲದ ಮನಸ್ಸಿನಿಂದಲೇ ಹೂಂ ಅಂದೆ. ಪ್ರಸಿದ್ಧ ವ್ಯಕ್ತಿಗಳ ಬಗ್ಗೆ ಅಷ್ಟಿಷ್ಟು ಮಾಹಿತಿ ಇದ್ದೇ ಇರುತ್ತದೆ. ಫೋಟೋಗಳೂ ಸಹ. ಅಲ್ಲಿಯ ತನಕ ಹೋಗಿ, ಆ ಹಳಬರ ಬಗ್ಗೆ ವರದಿ ಮಾಡುವುದರ ಅಗತ್ಯವಾದರೂ ಏನು? ಅಂತಾಗಿ ಮುನ್ನಾದಿನ ಸಂಪಾದಕರು ಕೊಟ್ಟಿದ್ದ ಕಾಗದವನ್ನು ನೆಟ್ಟಗೆ ನೋಡಿರಲೂ ಇಲ್ಲ. ಅಂದು ಬೆಳಿಗ್ಗೆ 11 ಗಂಟೆಗೆ ಮನೆಯಿಂದ ಹೊರಡುವಾಗ ಅದನ್ನು ಬಿಡಿಸಿ ಓದಿದೆ-ಹೀಗಿತ್ತು ಅದರ ಒಕ್ಕಣಿಕೆ:

॥ಶ್ರೀ ಕುಲದೇವತಾ ಪ್ರಸನ್ನ॥

ಶ್ರೀ ಹರಿ-ಹರ-ಗುರು-ಹಿರಿಯರ ಕೃಪೆಯಿಂದ ನಾವೆಲ್ಲ ಕ್ಷೇಮ. ಸಾಂಪ್ರತ ನಮ್ಮ ತೀರ್ಥರೂಪರಾದ ಶ್ರೀ ರಾಜಣ್ಣ ಇನಾಂದಾರರು ಇದೇ ಬುಧವಾರ ದಿ. ೪ ಜನವರಿ ೧೯೯೮ ರಂದು ಅಭಿಜಿನ್ ಮುಹೂರ್ತದಲ್ಲಿ ಅಂದರೆ ೧ ಗಂಟೆ ೪ ಮಿನಿಟು ೯.೮ ಸೆಕೆಂಡಿಗೆ ಸರಿಯಾಗಿ ದಿ. ಎಸ್. ಸಾವಿತ್ರಮ್ಮ ಕಲ್ಯಾಣಮಂಟಪ-ಈ ಜಾಗದಲ್ಲಿ ಮರಣ ಹೊಂದುವವರಿದ್ದಾರೆ. ತಾವು ಆ ವೇಳೆಗೆ ಸಕಲ ಬಂಧು-ಮಿತ್ರರೊಡನೆ ಆಗಮಿಸಿ, ಅವರಿಗೆ ಅಂತಿಮ ವಿದಾಯವನ್ನು ಹೇಳಬೇಕಾಗಿ ಬಿನ್ನಹ.

ಇಂತು, ಸರ್ವೇಶ ರಾ. ಇನಾಂದಾರ

ವಿ.ಸೂ : ಅವರು ಶಾಂತಚಿತ್ತದಿಂದ ಸಾವನ್ನಪ್ಪಬೇಕೆಂದು ನಮ್ಮ ಅಪೇಕ್ಷೆ. ಆದ್ದರಿಂದ ಯಾರೂ ದುಃಖಾಶ್ರುಗಳನ್ನು ಸುರಿಸಬಾರದಾಗಿ ಪ್ರಾರ್ಥನೆ.

ಬೇಕಿದ್ದರೆ ಉಡುಗೊರೆ ಸಲ್ಲಿಸಬಹುದು.

ನಾನು ಅಲ್ಲಿಗೆ ಹೋದಾಗ ಬಾಗಿಲಲ್ಲಿ ಸಿದಿಗೆ! ಕಲ್ಯಾಣ ಮಂಟಪದಲ್ಲಿ ಸಿದಿಗೆಯನ್ನು ನಾನು ಇದೇ ಮೊದಲ ಬಾರಿ ಕಂಡದ್ದು. ಒಳಗೆ ಹೋದೆ.

ಆದಾಗಲೇ ತುಂಬಾ ಜನರು ನೆರೆದಿದ್ದರು. ರಾಜೇರಾಯರ ಬಳಗ ಬಹಳ ದೊಡ್ಡದು. ಮಗ ಒಬ್ಬನೇ ಆದರೂ ಏಳು ಜನ ಹೆಣ್ಣು ಮಕ್ಕಳು; ಅವರ ಗಂಡಂದಿರು ಮತ್ತು ಮಕ್ಕಳು. ಇತ್ತ ಸಮಾಂತರ ನಾತೆಯಲ್ಲಿ ರಾಜೇರಾಯರ ಅಕ್ಕ-ತಂಗಿಯರೂ ಸಾಕಷ್ಟು ಜನವೆಂದು ಕಾಣುತ್ತದೆ. ಅಲ್ಲದೆ ಅವರ ಪರಿಚಯಸ್ಥರ ಸಂಖ್ಯೆಯೂ ಸಣ್ಣದೇನಲ್ಲ. ಬಂದವರಲ್ಲಿ ಸೀನಿಯರ್ ಸಿಟಿಝನ್ಸ್ ಹಾಗೆಯೇ ಕೆಲವು ಕೆಂಪು ಸೀರೆಯವರೂ ಇದ್ದರು. ನಿಮಿತ್ತ ಏನೇ ಇರಲಿ. ಹೊಸ ಸೀರೆಯನ್ನುಟ್ಟು ಮೆರೆಯಬಯಸುವ ಮಹಿಳೆಯರಂತೂ ದೊಡ್ಡ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಒಟ್ಟಾರೆ ಸಂಭ್ರಮದ ವಾತಾವರಣವೇ ನನಗೆ ತೋರಿಬಂತು.

ಪತ್ರಕರ್ತನಾದ ನನಗೆ ರಾಜೇರಾಯರ ಜೀವನ ವಿಚಾರ ತಿಳಿಯುವುದಕ್ಕಿಂತ, "ಅವರ ಮರಣದ ದಿನ" ವೇಳೆಯನ್ನು ಇಷ್ಟೊಂದು ಖಚಿತವಾಗಿ (ಸೆಕೆಂಡಿನ ಭಾಗವನ್ನೂ) ಅದೆಂತು ಹೇಳಲಾಯಿತು? ಅಲ್ಲದೆ ಅವರ ಮರಣಾಮಂತ್ರಣ ಪತ್ರಿಕೆಯನ್ನು ಮುದ್ರಿಸಿ ಪ್ರಸಿದ್ಧಿ- ಪ್ರಚಾರ ಕೊಟ್ಟಿದ್ದರ ಉದ್ದೇಶವಾದರೂ ಏನು - ಎಂದೆಲ್ಲ ತಿಳಿದುಕೊಂಡು ಆ ರೀತಿಯ ವಿಶೇಷ ವರದಿ ಮಾಡಬೇಕಿತ್ತು.

ಅದಕ್ಕಾಗಿ ಅವರ ಮಗ ಸರ್ವೇಶನನ್ನೇ ಕೇಳಬೇಕೆಂದು ಹೊರಟೆ. ಬಾಗಿಲಲ್ಲೇ ಒಬ್ಬರು ಕವರುಗಳನ್ನು ಹಿಡಿದುಕೊಂಡು ನಿಂತಿದ್ದರಲ್ಲದೆ ಅವರವರಿಗೆ ಕೊಡುತ್ತ ಇದ್ದರು. ಮುಂಬಯಿಯಲ್ಲಿ ದ.ಕ. ಜಿಲ್ಲೆಯವರ ಮದುವೆಗಳ ರಿಸೆಪ್ಷನ್ನಿಗೆ ಹೋದಾಗ ನಾವು ಏನನ್ನಾದರೂ ಉಡುಗೊರೆ ಕೊಡಬೇಕೆನ್ನುವ ಇರಾದೆಯಿಂದ ಹೀಗೆ ಕವರ್ ಕೊಡುವರೆಂದು ಕೇಳಿದ್ದೆ. ಆವತ್ತಿನ ಸಂದರ್ಭದಲ್ಲಿ ಉಡುಗೊರೆ ಕೊಡಬಹುದೆಂಬ ಸೂಚನೆ ಆಮಂತ್ರಣ ಪತ್ರಿಕೆಯಲ್ಲೇ ಇತ್ತಲ್ಲ! ನಾನೇನು ಉಡುಗೊರೆ ಕೊಡಬೇಕೆಂದವನಲ್ಲ. ಆದ್ದರಿಂದ ಕವರನ್ನು ನಿರಾಕರಿಸಿದೆ. ಆದರೆ ಆತ ಒಂದು ಕವರನ್ನು ನನ್ನ ಜೇಬಿಗೆ ತುರುಕಿ "ನಿಮ್ಮ ಬಳಿ ಒಂದು ಇರಲಿ" ಎಂದನು. ನನ್ನ ಹೆಗಲಿಗೆ ಜೋತುಬಿದ್ದ ಮತ್ತು ಅದರಲ್ಲಿಯ ರದ್ದಿಯಂತಹ ವಾರ್ತಾ ಪತ್ರಿಕೆಗಳತ್ತ ನೋಡುತ್ತ"ನೀವು ರಿಪೋರ್ಟರ್ ಏನು?" ಎಂದು ಕೇಳಿದನು.

"ನೀವು ಊಹಿಸಿದ್ದು ಸರಿ. ನನಗೊಂದಿಷ್ಟು ಮಾಹಿತಿ ಬೇಕಿತ್ತು. "ಸರ್ವೇಶ ಅವರೆಲ್ಲಿ?" ಎಂದೆ.

"ಅವರು ಸಿಕ್ಕುವುದು ಕಷ್ಟ. ನಿನ್ನೆ ತಾನೇ ಅಮೇರಿಕೆಯಿಂದ ಬಂದಿದ್ದಾರೆ. ವಿಶೇಷ ಮಾಹಿತಿ ಬೇಕಿದ್ದರೆ ರಾಜೇರಾಯರ ಅಡಿಗೆಯ ಭಟ್ಟರನ್ನು ಕೇಳಿರಿ" ಎಂದನಾತ.

ಅಡಿಗೆಯ ಭಟ್ಟ? ಆ ಮಹಾಶಯನನ್ನು ಹೇಗೆ ಹುಡುಕುವುದು? ಅಂತೂ ಅತ್ತ

ಕಡೆ ಸಾಗಿದಾಗ ಗುರುತಿನವರೊಬ್ಬರು - ಡಾ. ಕುಕ್ಕೆ ಎಂದು ಅವರ ಹೆಸರು - ಭೆಟ್ಟಿಯಾದರು. ಅವರು ಪಿಎಚ್.ಡಿ. ಮುಗಿಸಿದ್ದಾಗ ನಾನೇ ಆ ನ್ಯೂಸ್ ಕವರ್ ಮಾಡಿದ್ದೆ. ಅವರೂ ನನ್ನ ಗುರುತು ಹಿಡಿದರು. "ಒಂದಿಷ್ಟು ಮಾಹಿತಿ ಬೇಕಿತ್ತು. ರಾಜಣ್ಣನವರ ಅಡಿಗೆಯ ಭಟ್ಟರನ್ನು ಕೇಳಬೇಕಂತೆ. ಎಲ್ಲಿದ್ದಾರೆ ಅವರು?"ಎಂದೆ. "ನಾನೇ ಆ ಅಡಿಗೆಯ ಭಟ್ಟ! ಯಾಕೆ ಆಶ್ಚರ್ಯವಾಯಿತೇನು? ನನ್ನ ಪಿಎಚ್.ಡಿ. ವಿಷಯ ಕನ್ನಡ! ನೌಕರಿಗಾಗಿ ಅಲ್ಲಿ ಇಲ್ಲಿ ಅಲೆದಾಡಿ ಬೇಸತ್ತಿದ್ದೆ. ರಾಜಣ್ಣ ಕರೆದರು. ಇಲ್ಲಿ ಇರತೊಡಗಿ ನಾಲ್ಕು ವರ್ಷ ಆಯಿತು. ಇರಲಿ. ಏನು ಮಾಹಿತಿ ಬೇಕಿತ್ತು?"

"ಇಷ್ಟರತನಕ ಯಾರೂ ಮರಣದ ದಿನಾಂಕವನ್ನು ಮತ್ತು ವೇಳೆಯ ಸೆಕೆಂಡುಗಳನ್ನು ಸಹ ಖಚಿತವಾಗಿ ಹೇಳಿದುದಿಲ್ಲ. ನನಗೆ ಗೊತ್ತು ಕಂಪ್ಯೂಟರ್ ಯಂತ್ರವು ಮದುವೆಯ ಜೋಡಣೆ, ಜ್ಯೋತಿಷ್ಯ ಇತ್ಯಾದಿ ಹೇಳುವ ಹಾಗೆ ಇದನ್ನೂ ಹೇಳಿದೆ-ಎಂದು. ಆದರೆ ಇಷ್ಟು ಖಚಿತವಾಗಿ ಹೇಳಿದ್ದು ಆಶ್ಚರ್ಯ. ಸರ್ವೇಶ ಅಂಥ ಕಂಪ್ಯೂಟರನ್ನು ಅಮೇರಿಕೆಯಿಂದ ತಂದಿದ್ದನೇ?"

"ಅಲ್ಲ.ಇದು ಜಪಾನದ ಸಾಫ್ಟ್‌ವೇರ್."

"ಓಹೋ! ಐದನೆಯ ಪೀಳಿಗೆಯ ಕಂಪ್ಯೂಟರ್ ಅಂತಿಂರ್ತಾರಲ್ಲ. ಅದರ ಪರಿಣಾಮವೆ?"

"ಎಲ್ಲಿದರೀ? ಅವರಿಗಿದು ಎರಡನೆಯದೇ ಅಂತೆ. ನಮ್ಮ ಸರ್ವೇಶನ ಜಪಾನೀ ಹೆಂಡತಿ ಮಾಡಿಕೊಟ್ಟದ್ದು. ನಮ್ಮ ರಾಜೇರಾಯರ ಪೂರ್ವಾಪರಗಳನ್ನು ಪೂರೈಸಿದಾಗ ಆಕೆ ಅವರ ಮರಣದ ತಾರೀಖನ್ನು ನಿಖರಗೊಳಿಸಿ ಕೊಟ್ಟು ಕಳಿಸಿದ್ದಾಳೆ."

"ನನಗೇನು ನಂಬಿಕೆಯಾಗಲೊಲ್ಲದು"ಎಂದು ಸ್ಪಷ್ಟವಾಗಿ ಅವರಿಗೆ ಹೇಳಿದೆ.

"ಅಲ್ರೀ, ನಾವು ನಮ್ಮ ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಯಾರೊಬ್ಬರ ಸಾವಿನ ವರ್ಷವನ್ನ ಹೇಳುವುದಿಲ್ಲೇನು? ಇದು ಕಂಪ್ಯೂಟರ್. ಅಂದಾಜಿನ ಮೇಲೆ ಎಂದೂ ಕೆಲಸ ಮಾಡೋದಿಲ್ಲ. ಈಗಾಗಲೇ ಕೆಲವರು - ತಮಗೆ ಕಂಪ್ಯೂಟರ್ ವಿಷಯ ತಿಳಿಯದೇ ಇದ್ದರೂ, ಅದರ ಸಾಫ್ಟ್‌ವೇರನ್ನು ಕಳ್ಳತನದಿಂದ ಸಂಪಾದಿಸಿ ಜನಕ್ಕೆ ಹೇಳ್ತಾ ಇದ್ದಾರೆ. "ನಿಮ್ಮ ಸಾವಿನ ದಿನ-ತಿಳಿಯಬೇಕೆ? ನಮ್ಮ ಅತ್ಯಾಧುನಿಕ ಯಮಾತಾಚಿ ಕಂಪ್ಯೂಟರ್ ನಿಖರವಾಗಿ ಹೇಳಬಲ್ಲುದು. ಬನ್ನಿರಿ. ತಿಳಿಯಿರಿ-ಮರಣ ದಿನವನ್ನು - ಮುಂದಿನ ಆಯುಷ್ಯ ಸುಖಕರವಾಗುವಂತೆ ಮುಂದಾಗಿ ಯೋಜಿಸಿರಿ' ಎಂದು ಬೋರ್ಡ್ ತಗುಲಿಸಿಕೊಂಡು ಭರಭರಾಟೆಯಿಂದ ಬಿಸನೆಸ್ ಮಾಡ್ತಿದ್ದಾರೆ" ಎಂದರು ಡಾ. ಕುಕ್ಕೆ.

ಅಷ್ಟರಲ್ಲಿ ೭೫% ಬೆನ್ನು ಬಾಗಿದ ಮುದುಕಿ ಅವರ ಕಣ್ಣಿಗೆ ಬಿದ್ದಳು. ಅವಳನ್ನು

ನಿಲ್ಲಿಸಿ "ಅಜ್ಜೀ, ಮಗಾ-ಸೊಸೀ ಕಾಲಾಗ ಜೀವ ಸಾಕಾಗೇದ. ದೇವರೇ ಲಗೂ ಕಣ್ಣು ಮುಚ್ಚಿಸೂ ಅಂತ ಸದಾ ಹೇಳತೀಯ. ನಿನ್ನ ಸಾವಿನ ಬಗ್ಗೆ ಕಂಪ್ಯೂಟರಿಗೆ ಹೇಳಲೇನು?" ಎಂದರು. ಮುದುಕಿ ಹೇಳಿತು. "ಅದಕ್ಕೆ ತುಸು ತಡೀ ಅಂತ ಹೇಳಪಾ. ಇನ್ನೊಂದು ನಾಲ್ಕು ತಿಂಗಳಿಗೆ ಮರಿ ಮಗ ಹುಟ್ಟುವವ ಇದ್ದಾನ"!

ಸ್ವತಃ ರಾಜೇರಾಯರನ್ನು ಕಂಡು "ಸಾವಿನ ದಿನ ಮುಂಚಿತ ತಿಳಿದದ್ದು ನಿಮ್ಮಲ್ಲಿ ಅದಾವ ಪರಿಣಾಮ ಮಾಡಿತು" ಎಂದು ನಾನು ಕೇಳಬೇಕೆಂದೆ. ಅವರನ್ನು, ಎದುರಿಗಿನ ಗೋಡೆಗೆ ತಾಗಿ ಇರಿಸಿದ್ದ ದೊಡ್ಡ ಹಳೆಯ ಮಂಚದ ಮೇಲೆ, ದಕ್ಷಿಣಾಭಿಮುಖವಾಗಿ ಕೂರಿಸಿದ್ದರು. ದಾರಿ ಬಿಡಿಸಿಕೊಂಡು ಅವರ ಹತ್ತಿರ ಹೋದಾಗ, ಅನತಿ-ಅಂತರದಲ್ಲಿ ಪುರೋಹಿತರು ನಿಂತಿದ್ದರು. ತಾಮ್ರದ ಪಾತ್ರೆಯೊಂದರಲ್ಲಿ ನೀರು ತುಂಬಿಸಿ ಅದರಲ್ಲಿ ಗಳಿಗೆಯ ಬಟ್ಟಲನ್ನು ಇರಿಸಿಕೊಂಡು. ಆ ಅಭಿಜಿನ್ ಮುಹೂರ್ತಕ್ಕಾಗಿ ಕಾಯುತ್ತಿದ್ದರು. ಅವರ ಪಾಲಿಗೆ ಮುಹೂರ್ತ ಮುಹೂರ್ತವೇ.

ಆದರೆ ಇದೇನು? ಇನ್ನೊಂದು ಬದಿಯ ಮೂಲೆಯಲ್ಲಿ ಎಣ್ಣೆಯ ದೀಪ ಹಚ್ಚಿ, ಅದರ ಮೇಲೆ ಬಿದಿರಿನ ಬುಟ್ಟಿಯನ್ನು ಇರಿಸಿದ್ದಾರೆ! "ಛೇ ಸಾಯುವ ಮುಂಚೇನೆ ಹೀಗೆ ಮಾಡಬಹುದೆ?" ಎಂದು ಅವರನ್ನು ಕೇಳಿದೆ.

"ಇಷ್ಟೇ ಯಾಕೆ? ಗರುಡ ಪುರಾಣ ಹೇಳುವುದನ್ನೂ ನಿನ್ನೆ ಸಂಜೆಗೆ ಮುಗಿಸಿಬಿಟ್ಟೇನಿ. ರಾಯರು ಸತ್ತ ಮೇಲೆ ಇಲ್ಲಿ ಒಂದು ನರಪಿಳ್ಳೆಯೂ ಉಳಿಯುವುದಿಲ್ಲ. ಇನ್ನು ಮೇಲೆ ಅಪರಕರ್ಮದ ವಿಧಿಗಳನ್ನು ಸಾಯುವ ಗಳಿಗೆಗೆ ಮುಂಚೆನೇ ಮುಗಿಸಿಬಿಡಬಹುದೆಂದು ನಮ್ಮ ಶ್ರೀಮಠದ ಪರವಾನಿಗೆ ಸಿಕ್ಕಿದೆ" ಎಂದರು.

ರಾಜೇರಾಯರ ಮಂಚದ ಹತ್ತಿರ ಹೋದೆ. ಅವರು ಗಂಭೀರವಾಗಿ ಪದ್ಮಾಸನದಲ್ಲಿ ಕುಳಿತಿದ್ದರು. ಅವರ ಅರೆ-ನಿಮೀಲಿತ ನೇತ್ರ ಪಾಟವವು. ಅರ್ಧ ಇಹದತ್ತ ಇನ್ನರ್ಧ ಪರದತ್ತ ಹರಿದಾಡುವ ಅವರ ಮನಸ್ಸನ್ನು ಸಂಕೇತಿಸುವಂತಿತ್ತು "ರಾಜೇರಾಯರೇ ನಾನು" - ಎಂದು ಹೇಳುವಷ್ಟರಲ್ಲಿ ಬದಿಯಲ್ಲಿ ನಿಂತಿದ್ದ ಓರ್ವ ಧಾಂಡಿಗನು - ಹಿಂದಿನ ಜನ್ಮದಲ್ಲಿ ಯಮದೂತನೇ ಆಗಿದ್ದವನು - ನನ್ನನ್ನು ತಡೆದು "ಊಂಹುಂ! ರಾಯರು ಮಾತಾಡಿ ದಣಿಯಲಾಗದು ಎಂದು ಸರ್ವೇಶರಾಯರು ನಿನ್ನೇ ಹುಕುಂ ಮಾಡಿದ್ದಾರೆ" ಎಂದನು. ನಾನು ಆ ರೀತಿಯಲ್ಲಿ 'ಮಾತಾಡಿಸ' ಬಂದವನಲ್ಲ - ಎಂದು ಹೇಳಬೇಕೆನ್ನುವಷ್ಟರಲ್ಲಿ ಅವನು ನನ್ನ ರಟ್ಟೆಯನ್ನು ಹಿಡಿದೆಳೆದು "ಅಕೋ ರಾಯರ ದರ್ಶನಕ್ಕೆ ತುಂಬಾ ಜನ ಕ್ಯೂನಲ್ಲಿ ಇದ್ದಾರೆ" ಎನ್ನುತ್ತ ನನ್ನನ್ನು ಮುಂದೆ ದೂಡಿಯೇ ಬಿಟ್ಟನು.

ಅಷ್ಟರಲ್ಲಿ 'ಢಣ್, ಢಣ್,ಢಣ್' ಎಂದು ಗಡಿಯಾರದ ಗಂಟೆ ದೊಡ್ಡದಾಗಿ

ಕೇಳಿಸಿತು. ಹಳೆಯ ಕಾಲದ ಪೆಂಡ್ಯುಲಮ್ ಗಡಿಯಾರ. ಅದನ್ನು ಮನೆಯಿಂದ ಮುದ್ದಾಂ ತಂದಿರಿಸಿದ್ದರೇನೋ. ನಿತ್ಯವೂ ಅದರ ಗಂಟೆಯನ್ನು ಕೇಳುವಲ್ಲಿ, ರಾಜೇರಾಯರಿಗೆ ಖುಶಿ ಆಗುತ್ತಿರಬೇಕು. ಅದರ ಬದಿಯಲ್ಲಿ ಕಂಪ್ಯೂಟರ್ ತೋರಿಸಿದ್ದ ಮರಣದ ಸಮಯವನ್ನು -ಕನ್ನಡದಲ್ಲಿಯೇ.

"ಮರಣ ಮುಹೂರ್ತ" ದಿ. ೪ - ೧ - ೧೯೯೪ ವೇಳೆ ೧ ಗಂಟೆ ೪ ನಿಮಿಷ ೯. ೮. ಸೆ.

ಎಂದು ದೊಡ್ಡ ಸೈಜಿನಲ್ಲಿ ಜೆರಾಕ್ಸ್ ಮಾಡಿಸಿ (ರೇಲ್ವೆ ರಿಸರ್ವೇಶನ್ ಚಾರ್ಟಿನ ತರಹ)ಗೋಡೆಗೆ ಅಂಟಿಸಿದ್ದರು. ಅದನ್ನು ನೋಡುತ್ತ "ಹಾಗಿದ್ದರೆ ರಾಜೇರಾಯರು ೧ ಗಂಟೆಯ ಮೇಲೆ ನಮಗೆ ನೋಡಸಿಗುವುದಿಲ್ಲ"ಎಂದೆ. ಅದನ್ನು ಕೇಳಿಸಿಕೊಂಡ ಒಬ್ಬರು- "ಆಮೇಲೆಯೂ ೪ ಮಿನಿಟು ೯. ೮. ಸೆಕೆಂಡುಗಳವರೆಗೆ ಇರ್ತಾರೆ" ಎನ್ನುತ್ತ ನಕ್ಕರು.

ಕಲ್ಯಾಣ ಮಂಟಪವೇನೂ ಸಾಕಷ್ಟು ದೊಡ್ಡದಿತ್ತು. ಆದರೆ ಜನ ಬರುತ್ತಲೇ ಇದ್ದುದರಿಂದ ದಟ್ಟಣೆ ಹೆಚ್ಚಾಗತೊಡಗಿತು. ಸೇರಿದ ಜನ ಗುಂಪುಗುಂಪಾಗಿ ತಮ್ಮ ತಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದರು. ಒಬ್ಬರು - ರಾಜೇರಾಯರ ನಿಕಟ ಪರಿಚಯದವರೆಂದು ಕಾಣುತ್ತದೆ- ಹೇಳಿದರು :

"ಮೂರು ತಿಂಗಳ ಹಿಂದೆಯೇ ನಮ್ಮ ರಾಯರಿಗೆ ಮರಣದ ದಿನ ತಿಳಿದಿತ್ತು. ತಮ್ಮ ಆಸೆ ಅಪೇಕ್ಷೆಗಳನ್ನೆಲ್ಲ ತೀರಿಸಿಕೊಂಡು ಬಿಟ್ಟರು. ಕಾಕಪಿಂಡ ಇಡೋದೇ ಬೇಡ ಅಂತ ಹೇಳಿದ್ದಾರೆ. ತಮ್ಮ ಆಸ್ತಿಯ ಇತರ ವ್ಯವಹಾರಗಳ ಮುಂದಿನ ವ್ಯವಸ್ಥೆಯನ್ನು ಚೊಕ್ಕಟವಾಗಿ ಮಾಡಿ ಇಟ್ಟಿದ್ದಾರೆ."

"ಇಲ್ಲೇ ಏನೊ ಗೊಂದಲವಾಗಿದೆ ಕಣ್ರೀ" ಎಂದು ಒಬ್ಬರು ದನಿ ಇಳಿಸಿ ಹೇಳತೊಡಗಿದರು. "ರಾಯರು ತಮ್ಮ ಸ್ವಂತದ ಗಳಿಕೆಯನ್ನು ಎಲ್ಲ ಮಕ್ಕಳಿಗೆ ಸಮನಾಗಿ ಹಂಚಿಲ್ಲವಂತೆ. ವಿಶೇಷತಃ ಆ ಅಡಿಗೆಯ ಭಟ್ಟನಿಗೇ ಬಹಳಷ್ಟು ಬಿಟ್ಟುಕೊಟ್ಟಿದ್ದಾರಂತೆ. ರಾಯರ ಒಬ್ಬ ಮಗಳು ನಮ್ಮ ಯಜಮಾನತಿಯ ಹತ್ತಿರ ಹೇಳಿದಳು."

ಇದೊಂದು ವೃದ್ಧವಾಣಿ ಕೇಳಿಬಂತು:

"ಈ ೧೫ ದಿನದಲ್ಲಿ ನಾನು ಅವರನ್ನು ಎರಡು ಬಾರಿ ಕಂಡುಬಂದೆ. ಅವರಿಗೆ ಸಾವಿನ ಹೆದರಿಕೇನೆ ಇಲ್ಲ. ಜಾತಸ್ಯ ಮರಣಂ ಧ್ರುವಂ- ತಾನೇ. ಸಾವಿನ ದಿನವೇ ತಿಳಿದ ಮೇಲೆ - ಅಂಜಿಕಿನ್ಯಾತಕಯ್ಯ. ದಾಸರು ಹೇಳಿಬಿಟ್ಟಿದ್ದಾರೆ. 'ಸಾವಿನ ಕೂಡ ಸರಸ' ಅಂತ ಅದಾರೊ ಕವಿಗಳು ಗ್ರಂಥವನ್ನೇ ಬರೆದಿದಾರೆ."

"ನನಗೊಂದು ಸಂಶಯ ಬರ್‍ತಿದೆ. ರಾಯರು ಈಗ ಸತ್ತ ಹಾಗೆ ಮಾಡಿ... "

"ಗೊತ್ತಿಲ್ಲವೆ ನಿಮಗೆ? ಉಸಿರಾಟವನ್ನು ಕಟ್ಟಿ ನಿಲ್ಲಿಸಿ ನೆಲದಲ್ಲಿ ಹೂಳಿಸಿಕೊಂಡು

15 - 20 ದಿನಗಳಲ್ಲಿ ಜೀವಂತ ಹೊರಬರುತ್ತಿದ್ದ ಯೋಗಿಗಳ ವಿಷಯ ನಿಮಗೆ ತಿಳಿಯದು. ನಮ್ಮ ರಾಯರು ದಿನವೂ ಯೋಗಾಸನ ಹಾಕುತ್ತಿದ್ದರು. ಹೂಂ!"

ಇನ್ನೊಂದು ಗುಂಪಿನಲ್ಲಿ ಇನ್ಸೂರನ್ಸ್ ಬಗ್ಗೆ ಮಾತು ನಡೆದಿತ್ತು:

"ಕಳೆದ ವರ್ಷ ಒಂದು ಲಕ್ಷ ರೂ.ಗೆ ಇನ್ಸೂರೆನ್ಸ್ ಇಳಿಸಿದೆನಲ್ರೀ. ನನ್ನ ಸಾವಿನ ದಿನ ಮೊನ್ನೆ ತಿಳೀತು.ಮೂವತ್ತು ವರ್ಷದ ನಂತರ ಇದೆ! ಅಲ್ಲಿಯವರೆಗೆ ಈ ದುಡ್ಡಿನ ಅಡಚಣೆಯಲ್ಲೇ ಪ್ರೀಮಿಯಮ್ ತುಂಬುತ್ತಾ ಹೋಗಬೇಕು. ಛೆ"

"ಅದಕ್ಯಾಕ ಚಿಂತೀ ಮಾಡ್ತಿಯೋ. ಇನ್ನು ಮುಂದೆ ತುಂಬಲಿಕ್ಕೆ ಹೋಗಬೇಡ. ಇಷ್ಟೇ ಯಾಕೆ. ಈಗಾಗಲೇ ತುಂಬಿದ ಹಣವನ್ನು ಕೆಲವರು ಪರತ ಕೇಳ್ತಾ ಇದ್ದಾರಂತೆ."

"ಹಾಗಿದ್ರೆ ಇನ್ನ ಸ್ವಲ್ಪ ದಿವಸಕ್ಕ ಈ ಲೈಫ್ ಇನ್ಸುರೆನ್ಸ್ ಕಂ." ಯನ್ನು ಸರ್ಕಾರ ಬಂದ್ ಮಾಡಿಬಿಡಬೇಕಾಗುತ್ತದ"

"ನಿಮಗೆ ಗೊತ್ತಿಲ್ಲ, ನಿಜವಾದ ಈ ಸಂಗತಿ. ಸರ್ಕಾರದವರು 'ಡೆತ್ ಇನ್ಸೂರೆನ್ಸ್ ಕಂ'ಅಂತ ಬದಲಿಸಿ ಆರ್ಡಿನನ್ಸ್ ಹೊರಡಿಸಲಿದ್ದಾರಂತೆ. ಆದರೆ ರಾಷ್ಟ್ರಾಧ್ಯಕ್ಷರು ಸಹಿ ಹಾಕಲಿಕ್ಕೆ ಒಪ್ಪುತಾ ಇಲ್ಲವಂತೆ. ಷಣ್ಮುಖಂ ಹೇಳ್ತಿದ್ದ"

ನಾನು ಬೇರೆಡೆಗೆ ಸಾಗಿ ಹೋದೆ.

"ಅಲ್ಲಾರೀ. ಮುಂದಾಗುವ ಸಾವಿನ ದಿನವನ್ನು ಹೇಳುವ ಕಂಪ್ಯೂಟರ್ ಮುಂದೆ ಬಂದೊದಗುವ ಬೇನೆಗಳ ಬಗ್ಗೆಯೂ ಹೇಳಬಹುದೇನು?"

"ಬಹುದೇನು? ಹೇಳೇ ಬಿಡ್ತದೆ. ಕಂಪ್ಯೂಟರ್ ಸಹಾಯದಿಂದ ಆ ಈ ಪರೀಕ್ಷೆ ಮಾಡಲಾಗುತ್ತದೆ- ಎಂದು ಬೋರ್ಡ್ ಹಾಕಿರೊ ಡಾಕ್ಟರುಗಳು, ಔಷಧಕ್ಕೆ ಬಂದಿದ್ದ ತಮ್ಮ ಗಿರಾಕಿಗಳಿಗೆ ಹೇಳ್ತಾರಂತೆ. "ನೋಡಿ, ನಿಮಗೆ ಅಲ್ಸರಿನ ಬಾಧೆ ಇದೆ. ಮುಂದಿನ ತಿಂಗಳು ೭ಕ್ಕೆ ಜ್ವರ ಬರಲಿಕ್ಕೆ ಸುರುವಾಗ್ತದೆ. ಆಗ ಮತ್ತೆ ಬರಬೇಕು."ಎಂದು. ಆ ಭಾವೀ ರೋಗಿಯು, ತನ್ನ ಡೈರಿಯ ಸೆಪ್ಟೆಂಬರ್ 6ರ ಪಾನಿನಲ್ಲಿ ಹಾಗೆ ಬರೆದುಕೊಂಡು ಬಿಡತಾನೆ"

"ವಾರ ಭವಿಷ್ಯದ ಕಾಲಂನಲ್ಲಿ ಈ ಜಡ್ಡು ಜಾಪತ್ತಿನ ವಿಷಯ ತಪ್ಪುತಪ್ಪಾಗಿ ಬರೋದರಕಿಂತ ಇದೇ ವಾಸಿ. ಅಲ್ಲವೆ"

" ನೀವು ಏನೇ ಹೇಳಿರಿ. ಸಾವಿನ ದಿನ ಒಮ್ಮೆ ತಿಳಿಯಿತು ಎಂದರೆ, ಅಷ್ಟರ ವರೆಗಿನ ನಮ್ಮ ಜೀವನದ ಕಾರ್ಯವನ್ನು ವ್ಯವಸ್ಥಿತವಾಗಿ ಜೋಡಿಸಿಕೊಳ್ಳಬಹುದು. ಅಚ್ಚುಕಟ್ಟಾಗಿ ಬದುಕನ್ನು ಸಾಗಿಸಬಹುದು. ನಾವು ಮಾಡುವ ಕೆಲಸದಲ್ಲಿ ಅದರಿಂದ ಒಂದು ಬಗೆಯ ಕೆಚ್ಚು, ಧೈರ್ಯ ಬರತದೆ":

"ಹೌದು, ಹೌದು. ತಾನು ಸಾಯುವ ದಿನಕ್ಕೆ ಕೆಲ ದಿನ ಮುಂಚೆ. ತಮಗಾಗದವರ

ಖೂನಿಯನ್ನೂ ಮಾಡಬಹುದು! ಮತ್ತು ಮುಂದಿನ ಕ್ರಿಮಿನಲ್ ಕೇಸ್ ವಿಚಾರಣೆ, ಜೈಲಿನ ಹೆದರಿಕೆಯನ್ನು ತಪ್ಪಿಸಬಹುದು."

"ಹಾಗೂ ಒಮ್ಮೆ ಆಯಿತಲ್ಲ, ಮಾರಾಯ್ರೇ. ಆದರೆ ತನಗಾಗದವರ ಖೂನಿ ಅಲ್ಲ. ತನ್ನ ಸ್ವಂತ ತಂದೆಯದು... ಏನಾಯ್ತೂಂದ್ರೆ (ಸಣ್ಣ ದನಿಯಲ್ಲಿ) ಅವರು, ಹೋದ ವರ್ಷ ತಮ್ಮ ಫ್ಯಾಮಿಲಿ ಡಾಕ್ಟರರಿಗೆ ಹೇಳಿದ್ರಂತೆ. 'ನೋಡಿ ನಮ್ಮ ತಂದೆಯವರ ಮರಣದ ದಿವಸ ಮುಂದಿನ ವಾರ ೧೮ನೇ ತಾ. ಗೆ ಅದೆ. ಆದರೆ ೧೫ನೇ ತಾರೀಖಿಗೆ ಅವರು ಸರ್ಕಾರೀ ನೌಕರಿಯಿಂದ ರಿಟೈರ್ ಆಗಲಿದ್ದಾರೆ. ಅವರು ಅದಕ್ಕೂ 2-3 ದಿವ್ಸ ಮುಂಚೆನೇ ಸಾಯುವ ಹಾಗೆ ಒಂದು ಇಂಜೆಕ್ಷನ್ ಕೊಟ್ಟಿದ್ದರಾಗಿತ್ತು. ಅಲ್ಲ . . . ತಪ್ಪು ತಿಳೀಬೇಡಿ. ಮಾರಾಯ್ರೆ. ನಮಗೆ ಅವರು ಪೂಜ್ಯರು. ಇಷ್ಟೇ. ನೌಕರಿಯಲ್ಲಿ ಇರುವಾಗ್ಲೇನೆ ಅವರು ತೀರಿಕೊಂಡರೆ ಸರ್ಕಾರದಿಂದ 80 ಸಾವಿರ ರೂ. ಸಿಗ್ತದೆ. ಹೇಗೂ ಅವರು ಕೆಲವು ದಿನಗಳಲ್ಲಿ ಸಾಯುವವರೇ. ಒಂದು ವಾರ ಮುಂಚೇನೇ ಸತ್ತು ಹೋಗೋದಾದ್ರೆ ತಪ್ಪೇನು?- ಅಂತ ವಿನಂತಿ ಮಾಡಿಕೊಂಡರಂತೆ."

"ಹೌದೆ?"

ಮುಂದೇನಾಯಿತೆಂದು ತಿಳಿಯಲು ಎಲ್ಲರ ಕಿವಿಗಳು ಚುರುಕಾದವು.

"ಡಾಕ್ಟರರು ಒಪ್ಪಲಿಲ್ಲ. ಬಂದ ಹಣದಲ್ಲಿ ಶೇ. 20 ಕೊಡ್ತೇನೆ ಅಂದ ಮೇಲೆ ಒಪ್ಪಿದರಂತೆ"

"ಮುಂದೆ? ಮುಂದೆ?"

"ಅದೇ ಮೋಜು. ಫ್ಯಾಮಿಲಿ ಡಾಕ್ಟರರೇ ಇದ್ದರೇನಾಯಿತು. ಸುಮ್ಮಸುಮ್ಮನೆ ಇಂಜೆಕ್ಷನ್ ಯಾರು ಮಾಡಿಸಿಕೊಳ್ತಾರೆ? ಇತ್ತ ಮಗ 80 ಸಾವಿರ ರೂ. ಪ್ರಸ್ತಾಪ ಮಾಡಿ, "ಹೇಗೂ ಸಾಯ್ತೀರಿ. ಒಂದು ವಾರ ಮೊದಲೇ. . . " ಅಂತ ಹೇಳುತ್ತಿರುವಾಗಲೇ ಅವರು "ನಿನ್ನಂಥ ಭಂಡ ಮಗನಿಗೆ ನಾನು ಏನೂ ಕೊಡೋಲ್ಲ. ಇಷ್ಟಕ್ಕೂ ಆ ಒಂದು ವಾರ ಬದುಕಿ -ಸುಖ ಪಡೆಯುವುದನ್ನು ಯಾಕೆ ಕಳೆದುಕೊಳ್ಳಲಿ?" ಎಂದ್ಹೇಳಿ ನಿರಾಕರಿಸಿದರಂತೆ.

ಗಂಡಸರ ಗುಂಪಿನಲ್ಲಿ ಹೀಗಾದರೆ ಹೆಂಗಸರ ಹಿಂಡಿನಲ್ಲಿ ಇನ್ನೂ ಏನೇನೊ. ಮೋಜಿನ, ಗಂಭೀರ ಸ್ವರೂಪದ, ವಿವಾದದ ಮಾತುಕತೆ ನಡೆದಿತ್ತು- ಆದರೆ ನನಗೆ ಅಲ್ಲಿ ಪ್ರವೇಶವಿರಲಿಲ್ಲ. ಇನ್ನೊಂದು ಕಡೆ ಪತ್ರಿಕೆಗಳ ಬಗ್ಗೆ 4-5 ಜನ ಗಂಡಸರು ಪ್ರಸ್ತಾಪ ಮಾಡ್ತಾ ಇದ್ದದ್ದರಿಂದ ಅವರಲ್ಲಿ ಸೇರಿಕೊಂಡೆ.

"ಪತ್ರಿಕೆಗಳಲ್ಲಿ ರಾಜೇರಾಯರ ಮರಣ ವಾರ್ತೆಯನ್ನು ಮುಂಚಿತ ಕೊಡಬಹುದಿತ್ತಲ್ಲವೆ?"

"ಕೊಟ್ಟಾಗಿದೆ"

"ಹೌದೆ ? ನನಗೆ ಕಾಣಲಿಲ್ಲವಲ್ಲ?"

"ಭಾವೀ ಮರಣಿಗರು ಅನ್ನುವ ಸ್ಥಿರಶೀರ್ಷಿಕೆಯ ಕೆಳಗೆ ನೀವು ನೋಡಬೇಕಿತ್ತು. ರಾಜೇರಾಯರ ಮರಣದ ಸುದ್ದಿ ಬರ್ತಾನೆ ಇದೆ. ಇಂದು ಬಂದದ್ದು ಮೂರನೆಯ ಕಂತು".

"ಮೂರನೆಯ ಕಂತು? ಅರ್ಥವಾಗಲಿಲ್ಲ"

"ಅದು ಹೀಗೆ. ಮರಣದ ದಿನ ಹೇಗೂ ಮುಂಚೇನೆ ತಿಳಿದಿರ್ತದೆ. ಅದಕ್ಕೆ ಒಂದು ತಿಂಗಳ ಹಿಂದೆ. ಅದೇ ತಾರೀಖಿಗೆ 'ಸಂಕ್ಷಿಪ್ತ ಜಾಹಿರಾತು' ಅಂತ ಕೊಡ್ತಾರೆ. ಇನ್ನು ಒಂದು ವಾರ ಉಳಿದಿದೆ ಅನ್ನುವಾಗ ಮತ್ತೆ ಮರಣದ ದಿನವನ್ನು ಕಾಣಿಸಿ, ಮೃತನ- ಅಲ್ಲ ಮೃತನಾಗಲಿರುವವನ ಅಲ್ಪ ಚರಿತ್ರೆಯನ್ನು ಕೊಡ್ತಾರೆ. ಆಗ ನೋಡಬೇಕು ನೀವು. ಆತ ಉದ್ಯೋಗಸ್ಥನಾಗಿದ್ದರೆ, ನೌಕರರ ಹೆಸರಿನಲ್ಲಿ, ಶ್ರೀಮಂತ ಗೃಹಸ್ಥನಾಗಿದ್ದರೆ, ಅವನ ಗೃಹಿಣಿ, ಮಕ್ಕಳು - ಇವರ ಹೆಸರಿನಲ್ಲಿ ನಾನಾ ಬಗೆಯ ಜಾಹೀರಾತುಗಳು ಬರತೊಡಗುತ್ತವೆ. ಆ ವ್ಯಕ್ತಿಯಿಂದ ಎಷ್ಟೆಷ್ಟು ಪ್ರಯೋಜನ ಪಡೆಯೋದಿರ್ತದೆಯೋ ಆ ಮಟ್ಟಿಗೆ ಜಾಹೀರಾತಿನ ಜಾಗ ದೊಡ್ಡದಾಗ್ತದೆ. ಅದರಲ್ಲಿ ಸಾಯೋ ವ್ಯಕ್ತಿಯ ಗುಣಗಾನ. ಯಮಕಪ್ರಾಸದ ಶೈಲಿಯಲ್ಲಿ ಸೊಗಸಾಗಿ ಬಂದಿರ್ತದೆ. ಆ ವ್ಯಕ್ತಿಗೂ ನಮಗೂ ಏನು ಸಂಬಂಧ ಇರದಿದ್ರೂ ಈ ಜಾಹೀರಾತು ಓದುವ ಹಾಗೆ ಇರ್ತದೆ."

"ನೀನು ಹೇಳೋದು ಸರಿ. ಅದಕ್ಕಾಗಿ ಕೆಲವು professional ಕವಿಗಳು ಕವಿತೆಯ ಸಾಲುಗಳನ್ನು ಬರೆದು ಕೊಡ್ತಾರಂತೆ".

"ಎಲ್ಲೀದರಿ! ಕೆಲವೊಂದು ಮಾದರಿಗಳನ್ನು ಪಡಿಯಚ್ಚಿನ ತರಹ ಮಾಡಿ ಇಟ್ಟಿರತಾರೆ. ಅದೇ ಶಬ್ದಗಳನ್ನ ಅಲ್ಲಿ ಇಲ್ಲಿ ತುಸು ಬದಲಿಸಿ ಮೃತನಾಗುವವನ ಹೆಸರನ್ನಷ್ಟು ಹಾಕಿ ಕೊಡತಾರೆ. ಚೆನ್ನಾಗಿ ದುಡ್ಡು ಮಾಡತಾರೆ ನಮ್ಮ ಕವಿಗಳು".

"ಇದರಲ್ಲಿ ನನಗಂತೂ ತಪ್ಪು ಕಾಣುವುದಿಲ್ಲ. ಸಾಯುವವನ ದೃಷ್ಟಿಯಿಂದ ತುಸು ವಿಚಾರ ಮಾಡಿರಿ. ಅಂವ ಜೀವಂತ ಇದ್ದಾಗನೇ ತನ್ನ ಹೊಗಳಿಕೆಯನ್ನೂ ದೊಡ್ಡ ಕರಿ ಬಣ್ಣದ ಬಾರ್ಡರಿನಲ್ಲಿ ಬಂದ ತನ್ನ ಫೋಟೋವನ್ನೂ ನೋಡಿದರೆ, ಒಂದು ಬಗೆಯ ಧನ್ಯತೆ ಮೂಡ್ತದೆ. ಅದೆಲ್ಲಾ ಸತ್ತ ಮೇಲೆ ಬಂದರೆ ಅವನಿಗೇನು ಪ್ರಯೋಜನ?"

"ಅಂತೂ ಜಾಹೀರಾತಿನ ಖರ್ಚು ಬಹಳ ಬರ್ತದೆ. ತಾನೇ"

"ಯಾರಿಗೆ? ಸ್ವಾಮೀ, ಅದೆಲ್ಲಾ ಸಾಯುವವನದೇ ಖರ್ಚು! ಅವನದೊಂದು ಬಿಸಿನೆಸ್ ಇದ್ರ. ಆ ಕಂಪನಿ ಲೆಕ್ಕಕ್ಕೇ ಹೋಗ್ತದೆ. ಅರ್ಥಾತ್ ಅವನು ಸತ್ತ ಮೇಲೆ! ಇನ್ನು ಅವನೊಬ್ಬ ಸರಕಾರೀ ಕಚೇರಿಯ ಅಧಿಕಾರಿ ಇದ್ದರೆ ತನ್ನ ಜನಪ್ರಿಯತೆಯನ್ನು ಪ್ರದರ್ಶಿಸಲು ತಾನೇ ಹಣ ಕೊಟ್ಟು ಹಾಕಿಸ್ತಾನೆ. ಒಂದು ಸಲ ಹೀಗಾಯ್ತು. ಮುದುಕಿಯೊಬ್ಬಳ ಸಾಯುವ ದಿನವನ್ನು ಕಂಪ್ಯೂಟರ್ ಮುಂಚೆ ಹೇಳಿತ್ತು. ಅವಳ ನಡುವಿನ ಮಗಳು ತನ್ನ ಗಂಡನ -ಅಂದರೆ ಅಳಿಯನ ಹೆಸರಿನಲ್ಲಿ 'ದುಃಖಾಶ್ರು'ವನ್ನು ಪ್ರಕಟಿಸಿದಳು.

ಪರಿಣಾಮ? ಆ ತಾಯಿ ತನ್ನ ಹೆಚ್ಚಿನ ಆಭರಣಗಳನ್ನೆಲ್ಲ ಈ ಮಗಳಿಗೆ ಕೊಟ್ಟು ಸತ್ತಳು."

ಆ ಸಮಯಕ್ಕೆ ಒಬ್ಬ ದೊಡ್ಡ ತಟ್ಟೆಯೊಂದರಲ್ಲಿ ಒಂದಷ್ಟು ಗಂಧದ ಚೂರುಗಳನ್ನು ತಂದು ನಮಗೆಲ್ಲ ಒಂದೊಂದು ಚೂರನ್ನು ಕೊಡತೊಡಗಿದರು. ಆ ಕಡೆ ಹೆಣ್ಣು ಮಕ್ಕಳು ನಿಂತಿದ್ದ ಜಾಗದಲ್ಲಿ ಓರ್ವ ಮಹಿಳೆ ಹೂವಿನ ಎಸಳನ್ನು ಕೊಡುತ್ತಾ ಇದ್ದಳು. ರಾಜೇರಾಯರ ಪ್ರಾಣ ಹೋದೊಡನೆ. ಅವರ ಪಾರ್ಥಿವ ದೇಹದ ಮೇಲೆ ಎರಚಬೇಕು - ಎಂದು ನಮಗೆ ಸೂಚನೆ ಕೊಡಲಾಯಿತು.

ಜನಸಂದಣಿ ಹೆಚ್ಚುತ್ತ ನಡೆದು ನನಗೆ ಟಿಪ್ಪಣಿ ಮಾಡಿಕೊಳ್ಳುವುದಕ್ಕೆ ಆಗ್ತಾನೇ ಇರಲಿಲ್ಲ. ಆಗ ಒಬ್ಬರು ನನ್ನನ್ನು ಕೇಳಿದರು.

"ರಾಯರೇ, ಅಮೇರಿಕೆಯಲ್ಲಿ ಹೆಣವನ್ನು ಹುಗಿಯುತ್ತಾರೆ. ಆ ಸಮಾಧಿಗಳಿಗೆಂದೇ ಎಸ್ಟೇಟ್ ಏಜೆಂಟರಿರ್ತಾರೆ. 'ನಿಮಗೆ ನಿಮ್ಮ ಶವವನ್ನು ಹೂಳಲು ಒಳ್ಳೆಯ ಜಾಗ ಬೇಕೆ? ಜೊತೆಗಿನ ಕಾಗದದಲ್ಲಿ ನಮ್ಮ ಸುಪರ್ದಿಯಲ್ಲಿರುವ ಅಂಥ ಜಾಗಗಳ ಯಾದಿ ಇದೆ. ಯಾವುದು ಬೇಕು ತಿಳಿಸಿರಿ. ಕಾಯ್ದಿರಿಸುತ್ತೇವೆ' ಎಂದು ಪತ್ರ ಬರೆದು ಕೇಳ್ತಾರಂತೆ. ಚೇಷ್ಟೆ ಅಲ್ಲಾರೀ, ನಿಜವೇ. ಯಾಕೆ ಈ ಮಾತು ಹೇಳಿದೇಂದ್ರೆ ನಮ್ಮಲ್ಲಿ ಸಾಯುವವರಿಗಾಗಿ ಸ್ವರ್ಗವಾಸಿ, ವೈಕುಂಠವಾಸಿ, ಕೈಲಾಸವಾಸಿ ಆಗುವವರಿದ್ದಾರೆ- ಅಂತ ಪತ್ರಿಕೆಗಳಲ್ಲಿ ಸಾರತಾರೆ. ಆ ಮೇಲಿನ ಲೋಕಗಳಲ್ಲಿ ಒಂದು ಒಳ್ಳೆಯ ಜಾಗವನ್ನು ಮೃತನಿಗಾಗಿ ರಿಸರ್ವೇಶನ್ ಮಾಡುವುದು ಕಂಪ್ಯೂಟರಿಗೆ ಸಾಧ್ಯವೆ? ಹೇಗೂ ಅದು ಅಂತರಿಕ್ಷದ ಮೇಲೆಯೂ ಸಂಚರಿಸುತ್ತದಂತೆ. ಏನಂತೀರಿ?"

ಏನು ಅನ್ನಬೇಕು- ಎಂದು ಯೋಚನೆಯಲ್ಲಿದ್ದಾಗ, ಅಲ್ಲಿಯ ಕಾಲ್‌ಬೆಲ್ ಜೋರಾಗಿ ಬಾರಿಸತೊಡಗಿತು. ಆಮೇಲೆ ಡಾ. ಕುಕ್ಕೆ ಅವರು ಧ್ವನಿವರ್ಧಕವನ್ನು ಹಿಡಿದುಕೊಂಡು ಹೇಳತೊಡಗಿದರು. "ಕೇಳಿರಿ! ಹೂಂ. ರಾಜೇರಾಯರು ಇನ್ನು ಸರಿಯಾಗಿ 10 ಮಿನಿಟಿಗೆ ಸ್ವರ್ಗಾರೋಹಣ ಮಾಡಲಿದ್ದಾರೆ. ನೀವೆಲ್ಲ ನಿಂತಲ್ಲಿಯೆ ಇರಿ. ಮಾತನಾಡಬೇಡಿರಿ... ಅವರು ಸ್ವಸ್ಥ ಮನದಿಂದ, ಏಕ ಚಿತ್ತದಿಂದ ಮೇಲೇರಲು ಅವಕಾಶ ಕೊಡಿರಿ" ಎಂದು ಘೋಷಿಸಿದರು.

ನಾವೆಲ್ಲ ನಿಂತಲ್ಲೇ ನಿಂತೆವು. ನಮ್ಮಲ್ಲಿಯ ಮಾತು ಬರಬರುತ್ತ ಕಡಿಮೆಯಾಗಿ ನಿಂತೇ ಹೋಯಿತು. ಆದರೆ ಆ ಹತ್ತು ನಿಮಿಷಗಳನ್ನು ಕಳೆಯುವುದು ಹತ್ತು ತಾಸು ಕಳೆಯುತ್ತಿರುವಂತೆ ಭಾಸವಾಯಿತು. ಗಡಿಯಾರದ ಕಡೆಗೇನೆ ಎಲ್ಲರೂ ನೋಡತೊಡಗಿದೆವು. ಕೌಂಟ್ ಡೌನ್! ಇದೇನು ನನ್ನದೇ ಪ್ರಾಣ ಹೋಗ್ತಿದೆ ಎನ್ನುವಷ್ಟು ಭೀತಿಯ ಭಾಸ! ಮೂರು. ಎರಡು. ಒಂದೇ ಮಿನಿಟು! ಆಗ ಎಲ್ಲರ ಕಣ್ಣು ರಾಜೇರಾಯರ ಕಡೆಗೇ ಇದ್ದಿತು. ಅವರು ಹೇಗೆ ಸಾಯುತ್ತಾರೆ! ಎಂಬ ಕುತೂಹಲ - ಎಲ್ಲರಿಗೂ .

ಅವರೋ ಕಣ್ಣನ್ನು ತುಸು ತೆರೆದೇ ಇದ್ದಾರೆ. ಆ ಗಳಿಗೆಗೆ ಬಾಕಿ ಉಳಿದಿದ್ದ 9.2 ಸೆಕೆಂಡುಗಳೂ ಸರಿದವು. ಅದಾಗಿ 5 ಮಿನಿಟು, 6ನೆಯ ಮಿನಿಟು, ಸರಿಯಿತು. ಆಗೂ ರಾಯರು ಕಣ್ಣು ತೆರೆದೇ ಇದ್ದಾರಲ್ಲ? ಏನು ಪ್ರಾಣ ಹೊರಟು ಹೋಗಲಿಲ್ಲವೆ? ಅಕೋ! ರಾಯರು ಕೈಯನ್ನು ತುಸು ಸರಿದಾಡಿಸಿದಂತೆ ಕಾಣುತ್ತದಲ್ಲ! ಆದಾಗ್ಯೂ ನೆರೆದವರಿಗೆ ಅನಿಸುತ್ತ ಇತ್ತು; ಇನ್ನು ಒಂದೆರಡು ಮಿನಿಟುಗಳಲ್ಲಾದರೂ ಅವರ ಪ್ರಾಣಪಕ್ಷಿ ಹಾರಿಹೋಗಿ ಅವರು ಹಾಸಿಗೆಯ ಮೇಲೆ ಕುಸಿಯಬಹುದು - ಎಂದು.

ಊಹುಂ ಹಾಗಾಗಲಿಲ್ಲ! ಗಡಿಯಾರ ೧ ಗಂಟೆ ೧೫ ಮಿನಿಟುಗಳನ್ನು ತೋರಿಸಿತು. ಕಂಪ್ಯೂಟರ್ ಹೇಳಿದ ಸಮಯ ಮುಗಿದು ಹೋಗಿತ್ತು. ನೆರೆದವರ ತಾಳ್ಮೆ ಮೀರಿತು. ಅಷ್ಟರಲ್ಲಿ ಅದಾರೊ ದೊಡ್ಡ ದನಿಯಿಂದ ಕೂಗಿದರು.

"ರಾಯರು ಸಾಯಲಿಲ್ಲ. ಇಲ್ಲೇನೋ ಮೋಸ ನಡೆದಿದೆ! ಕಂಪ್ಯೂಟರ್ ಸುಳ್ಳು ಹೇಳಿದೆ!"

ನೆರೆದ ಜನರ ಮೌನದ ಕಟ್ಟೆಯೊಡೆಯಿತು. ಮಾತು ಭೋರ್ಗರೆಯಿತು. ಸಂಬಂಧಿಕರೊಬ್ಬರು ಅರಚಿದರು-

"ಇಲ್ಲ. ಅವರು ಇಂದು ಸಾಯಲೇ ಬೇಕು. ತುಂಬಾ ದೂರದಿಂದ ಬಂದಿದ್ದೇವೆ. ಮತ್ತೆ ಬರಲಾಗುವುದಿಲ್ಲ."

"ಆ ಭಂಡ ಸರ್ವೇಶ ಎಲ್ಲಿ?"

"ಎಳೆದು ತನ್ನಿ- ಅವನನ್ನು!"

"ಇದೆಲ್ಲ, ಆ ಅಡಿಗೆಯ ಭಟ್ಟನದೇ ಕಿತಾಪತಿ-ಇರಬೇಕು."

"ಊಂಹುಂ ಅಕೋ. ಅಲ್ಲಿ ನಿಂತಾನಲ್ಲ. ಆ ಪುರೋಹಿತನದೇ ಇದು."

ಸ್ವಲ್ಪದರಲ್ಲಿ ಹೇಳುವುದಾದರೆ ಆ ವೇಳೆಗೆ mob psychology ಅನ್ನೋದು ಭೀಕರ ಭಯಾನಕವಾಗಿ ಕೆಲಸ ಮಾಡತೊಡಗಿತು. ಕೆಲವರು ಸರ್ವೇಶನ ಪರ-ವಿರೋಧಿಗಳ ವಾದದಲ್ಲಿ ತೊಡಗಿ, ಮುಂದೆ ವಾಗ್ಯುದ್ಧಕ್ಕೆ, ತದನಂತರ ಕೈಕಾಳಗಕ್ಕೇ ಸಿದ್ಧರಾದರು. ಈ ಘರ್ಷಣೆಯಲ್ಲಿ ಹೆಂಗಳೆಯರೂ ಹಿಂದುಳಿಯಲಿಲ್ಲ. ಅಷ್ಟೇ ಅಲ್ಲ, ಇನಾಂದಾರ ಮನೆತನದ ನಾದಿನಿ-ನೆಗಣ್ಣಿಯರು ಬಾಲ್ಯದಲ್ಲಿ ಕಲಿತು ಮರೆತಿದ್ದ ಬೈಗಳನ್ನು ವಾಚಿಸಿ ತೋರಿಸಿದರು. ಇನ್ನೊಂದೆಡೆ ಇಬ್ಬರು ಸ್ಥೂಲ ಕಾಯದ ಲಲನೆಯರು ಪರಸ್ಪರ ಕೇಶಯುದ್ಧಕ್ಕೇ ನಿಂತರು. ಅವರಾರೆಂಬುದು ನನಗೆ ಗೊತ್ತಿತ್ತು. ಆದರೆ ನನ್ನ ಹತ್ತಿರ ನಿಂತಿದ್ದ ಮಿದುಮನದ ಒಬ್ಬರು ಆ ಜಗಳ ಬಿಡಿಸಲೆಂದು ಧಡಪಡಿಸಿದಾಗ, ನಾನು ಅವರನ್ನು ತಡೆದು ಹೇಳಿದೆ: "ಇವರು ಇಲ್ಲಿಯ ಸ್ತ್ರೀಶಕ್ತಿ ಕೇಂದ್ರದವರು. ಒಬ್ಬಳು ಅಧ್ಯಕ್ಷಿಣಿ, ಇನ್ನೊಬ್ಬಳು ಕಾರ್ಯದರ್ಶಿನಿ.

ಅಲ್ಲಿಯ ಜಗಳವನ್ನು ಇಲ್ಲಿ ಬಗೆಹರಿಸಿಕೊಳ್ಳುತ್ತಿದ್ದಾರೆ"

ಅಷ್ಟರಲ್ಲಿ ಒಬ್ಬರು ಬುಟ್ಟಿಯ ಒಳಗಿದ್ದ ದೀಪವನ್ನು ಎತ್ತಿಕೊಂಡು ಹೋಗಿ ಸಿದಿಗೆಗೆ ಬೆಂಕಿ ಹಚ್ಚಬೇಕೆ?' ಅದರ ಧಗೆ ಮತ್ತು ಹೊಗೆ ಒಳಗೆ ಬರತೊಡಗಲು ಯಾರೋ ಆ ಕಲ್ಯಾಣಮಂಟಪದ ಮುಖ್ಯದ್ವಾರವನ್ನೇ ಮುಚ್ಚಿಬಿಟ್ಟರು.

ಕೇಳುವುದೇನಿದೆ? ನೂಕುನುಗ್ಗಲು ಸುರುವಾಯಿತು. ಮಕ್ಕಳ ಕಿರಿಚುವಿಕೆ. ಒಬ್ಬರು ಮೇಲೊಬ್ಬರ ತುಳಿದಾಟ. ಅಬ್ಬಾ! ಸಮೀಪದ ಯಾವ ದೊಂಬಿಯಲ್ಲಿ ಸಹ ನಾನಿದನ್ನು ಕಂಡಿರಲಿಲ್ಲ. ವರದಿ ಮಾಡಲು ಎಂಥಾ ರೋಚಕವಾದ ಘಟನೆ!

ಆವಾಗ ಜೋರಾಗಿ ಹಾಹಾಕಾರ ಕೇಳಿಸಿತು. "ಎಂಬುಲನ್ಸ್ ತನ್ನಿರಿ." "ಫೋನ್, ಫೋನ್!" "ಡಾಕ್ಟರ್! ಯಾರಾದರೂ ಇದ್ದಾರೆಯೆ? ಬೇಗ ಬನ್ನಿ". "ಸರಿಯಿರಿ. ಗಾಳಿ ಬಿಡಿರಿ.!" ಇತ್ಯಾದಿ.

ನಾನು ಜನರನ್ನು ದೂಡಿಕೊಂಡು ಅಲ್ಲಿಗೆ ಧಾವಿಸಿದೆ. ಹೋಗಿ ನೋಡುತ್ತೇನೆ. ಮರಿಮಗನನ್ನು ಕಂಡ ಮೇಲೆಯೇ ಸಾಯಬಯಸಿದ್ದ ಆ ಮುದುಕಿ, ಜನರ ತುಳಿದಾಟದಲ್ಲಿ ನೆಲಕ್ಕೊರಗಿತ್ತು. ಆ ತುಳಿದಾಟದಲ್ಲಿಯೇ ಅದರ ಪ್ರಾಣಹೋಗಿಬಿಟ್ಟಿತೆ? ಶಿವ ಶಿವಾ!

ನಾನು ಹೊರನುಗ್ಗಲು ಧಾವಿಸಿದಾಗ, ಒಬ್ಬರು ನನ್ನ ಅಂಗಿ ಹಿಡಿದು ನಿಲ್ಲಿಸಿ ಹೇಳಿದರು. "ಬನ್ನಿ, ನಿಮಗೆ ನಿಜ ಸಂಗತಿ ಹೇಳ್ತೀನಿ. ನೀವು ವರದಿಗಾರರಾಗಿ ಬಂದಿರುವಿರೆಂದು ತಿಳಿಯಿತು."

"ಮೊದಲು ನನಗೆ ಹೇಳಿರಿ. ಕಂಪ್ಯೂಟರ್ ಅದೆಂತು ತಪ್ಪು ಮಾಡಿತು? ರಾಜೇರಾಯರು ಇಂದೇಕೆ ಸಾಯಲಿಲ್ಲ?"

"ಕಂಪ್ಯೂಟರ್ ತಪ್ಪು ಮಾಡಿಯೇ ಇಲ್ಲ. ರಾಜೇರಾಯರು ಸಾಯಬೇಕಾದದ್ದು ಇಂದಲ್ಲ. ಇನ್ನೂ ಮೂರು ತಿಂಗಳಿಗೆ."

"ಮತ್ತೆ 4 - 1- 1998 ಎಂದು ಕಂಪ್ಯೂಟರ್ ಹೇಳಿತಲ್ಲವೆ".

"ಸ್ವಾಮಿ, 4 ಎಂದರೆ ಏಪ್ರಿಲ್ ತಿಂಗಳು. ಕಂಪ್ಯೂಟರ್ ಮೊದಲು ತಿಂಗಳನ್ನು, ಅನಂತರ ತಾರೀಖನ್ನು ಕೊಡ್ತದೆ! ಅಮೆರಿಕನ್ ಕ್ರಮ ಅದು"

"ಹೌದೆ! ಅಂದರೆ ಅವರು ಸಾಯಬೇಕಾದ್ದು 1-4-1998ರಂದು? ನೀವು ಯಾರು?"

"ನಾನೇ ಸರ್ವೇಶ!!"

ನಾನು ವಾರ್ತಾ ಸಂಭ್ರಮದಿಂದ ಭ್ರಾಂತನಾಗಿ ಹೊರಬಂದೆ. ಆಟೋದಲ್ಲಿ ಕುಳಿತು ಆಫೀಸಿನತ್ತ ಧಾವಿಸುತ್ತಿದ್ದಾಗ, ಓರ್ವರು ಸುರುವಿಗೆ ಒಂದು ಕವರ್ ಕೊಟ್ಟದ್ದು

ನೆನಪಾಯಿತು. ಅದರಲ್ಲೇನಿದೆ ಎಂದು ನೋಡಲು ತೆರೆದೆ. ಅದೊಂದು ಪ್ರಶ್ನಾವಳಿ. ಹೀಗಿತ್ತು ಅದರ ಒಕ್ಕಣಿಕೆ:

ಮರಣ ಕುಂಡಲಿ ಕ್ರಮವಿಧಿ

- ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಉತ್ತರಿಸಿರಿ. ಇಲ್ಲವಾದರೆ ನಿಮ್ಮ ಮರಣದ ದಿನಾಂಕವನ್ನು ಸರಿಯಾಗಿ ಗುಣಿಸಲಾಗುವುದಿಲ್ಲ.

- ನೀವು ಕೊಡುವ ಎಲ್ಲ ಮಾಹಿತಿಯನ್ನು ರಹಸ್ಯವಾಗಿ ಇಡಲಾಗುವುದು.

ನಿಮ್ಮ ಹೆಸರು :

ಜನ್ಮ ದಿನಾಂಕ ಮತ್ತು ವೇಳೆ :

ಹಿಂದಿನ ಏಳು ತಲೆಮಾರಿನ ತಂದೆತಾಯಿಗಳ ಸರಾಸರಿ ಆಯುಸ್ಸು :

ಸೋದರ ಸೋದರಿಯರ ಆಯುಸ್ಸು :
(ಈಗಾಗಲೇ ತೀರಿಕೊಂಡಿದ್ದರೆ ಮಾತ್ರ)

ಆನುವಂಶಿಕ ರೋಗಗಳು (ಇದ್ದರೆ) :

ಹೆಂಡತಿ/ಗಂಡನ ವಯಸ್ಸು :

ಹೆಂಡತಿ ಯಾ ಗಂಡನೊಡನೆ ಆಗುವ ಜಗಳ :
(ಅ) ಎಷ್ಟು ದಿನಕ್ಕೊಮ್ಮೆ :
(ಆ) ಸರಾಸರಿ ಎಷ್ಟು ಹೊತ್ತು :

ವಿವಾಹಾತೀತ ಸಂಬಂಧಗಳು :
(ಅ) ವಿವಾಹದ ಮೊದಲು
(ಆ) ವಿವಾಹದ ನಂತರ

ನಿಮ್ಮ ಸ್ವಂತದ ಕಾಯಿಲೆ/ಕಸಾಲೆಗಳು :
(ಅ) ದೀರ್ಘಾವಧಿಯವು
(ಆ) ಅಲ್ಪಾವಧಿಯವು / ಕಿರುಕುಳ

ಆಹಾರ ವಿಚಾರ - :
(ಅ) ಸಸ್ಯಾಹಾರವೆ? ಮಾಂಸಾಹಾರವೆ?
(ಆ) ಸಪ್ಪೆ/ಖಾರ/ ಅತಿ ಖಾರ
(ಇ) ಕಡಿಮೆ / ಮಧ್ಯಮ / ಜಾಸ್ತಿ -ಸಿಹಿ.
(ಈ) ಚಹಾ / ಕಾಫಿ (ದಿನಕ್ಕೆ ಎಷ್ಟು ಸಲ)

(ಉ) ಸಿಗರೇಟು (ದಿನಕ್ಕೆ ಎಷ್ಟು)

(ಊ)ಮಾದಕ ಪೇಯಗಳು (ದೇಶೀ)

(ಎ)ಮಾದಕ ಪೇಯಗಳು (ಪರದೇಶೀ)

(ಏ) ಬ್ರೌನ್ ಶುಗರ್ - ಇತ್ಯಾದಿ.

ನಿತ್ಯ ಪ್ರವಾಸ -

(ಅ) ಬೆಂಗಳೂರಿನಲ್ಲಿದ್ದರೆ ಬಿಟಿಎಸ್‌ನಲ್ಲಿ ದಿನಕ್ಕೆ ಎಷ್ಟು ಕಿ.ಮೀ.?

(ಆ) ಮುಂಬಯಿ ಆದರೆ ಲೋಕಲ್ ಗಾಡಿಯಲ್ಲಿ ದಿನಕ್ಕೆ ಎಷ್ಟು ಕಿ. ಮೀ?

ನೀವು ನಿಜಕ್ಕೂ ನಿಮ್ಮ ಮರಣ ದಿನಾಂಕವನ್ನು ತಿಳಿಯ ಬಯಸುತ್ತೀರಾ?

ಹಾಗಾದರೆ ಇದು ನಿಮ್ಮ-

ಮರಣದ ದಿನಾಂಕ :

ಮರಣದ ಸಮಯ :

ನಿಮ್ಮ ಸ್ವರ್ಗಯಾತ್ರೆ ಸುಖಕರವಾಗಲೆಂದು ಹಾರೈಸುವೆ.

***

೧೧. ಹಾಲಿನ ಮೇಲಿನ ಕೆನೆ

ಹಾಲಿನೊಳಗಿನ ಸ್ನಿಗ್ಧತೆಯೆಲ್ಲ ಘನೀಭೂತವಾಗಿ ತೇಲಿ ಬಂದಿರುವುದೇ ಕೆನೆ. ಮನುಷ್ಯನ ವಾತ್ಸಲ್ಯಭಾವವೆಲ್ಲ ಮೊಮ್ಮಕ್ಕಳ ಮೇಲೆ ಹೆಚ್ಚಾಗಿ ಹರಿಯುವುದರಿಂದ ಮರಾಠಿಯಲ್ಲಿ ಮೊಮ್ಮಕ್ಕಳಿಗೆ 'ದೂಧಾವರಚೇ ಸಾಯಿ' ಎಂದು ಹೆಸರು.

ಸರಿಯಾದದ್ದೇ. ಆದರೆ ಇದೇ ಪ್ರಮಾಣದ ವಾತ್ಸಲ್ಯ ಪ್ರೀತಿ ಸ್ವಂತ ಮಕ್ಕಳ ಮೇಲೆ ಯಾಕೆ ಇರುವುದಿಲ್ಲ? ವಯಸ್ಸಾದವರಿಗೆ ಮಕ್ಕಳಿಗಿಂತ ಮೊಮ್ಮಕ್ಕಳ ಮೇಲೆಯೇ ಮಮತೆ ಜಾಸ್ತಿ; ಏಕೆ?

ನಾನು ಮುಂಬಯಿಯಲ್ಲಿ ಇದ್ದಾಗ, ಒಮ್ಮೆ ಬೆಂಗಳೂರಲ್ಲಿಯ ನನ್ನ ಗೆಳೆಯರೊಬ್ಬರಿಂದ , ಟೆಲಿಗ್ರಾಮ್ ಬಂದಿತು. ಅಮೇರಿಕೆಯಲ್ಲಿದ್ದ ಅವರ ಮಗಳು ತನ್ನ ಹತ್ತು ತಿಂಗಳ ಮಗುವಿನೊಡನೆ ಬರುತ್ತಿರುವುದಾಗಿಯೂ, ಮುಂಬಯಿಯ ಸಹಾರ್ ವಿಮಾನ ನಿಲ್ದಾಣದಲ್ಲಿ ಅವರನ್ನು ರಿಸೀವ್ ಮಾಡಿ ನನ್ನ ಮನೆಗೆ ಕರೆದೊಯ್ಯಬೇಕೆಂದೂ, ಅವರು ಬಂದ ತಕ್ಷಣ ತನಗೆ ತಿಳಿಸಬೇಕೆಂದೂ ಒಕ್ಕಣಿಸಿದ್ದರು. ಅವರ ಮಗಳನ್ನು ನಾನು ಅವಳ ಬಾಲ್ಯದಿಂದಲೆ ಬಲ್ಲವನು. ಟ್ಯಾಕ್ಸಿಯಲ್ಲಿ ಕುಳಿತು ನಮ್ಮ ಮನೆಯತ್ತ ಸಾಗಿದಾಗ ಕೇಳಿದೆ;

"ಏನೇ, ಹೀಗೆ ಅಚಾನಕ ಬಂದು ಬಿಟ್ಟೆಯಲ್ಲ? ಮಗುವನ್ನು ಮಾತ್ರ ಕರೆತಂದೀಯ ? ಯಜಮಾನರೆಲ್ಲಿ ?"

ಆಕೆ ಕೂಸಿನ ಬೆನ್ನಿಗೆ ತುಸು ಜೋರಾಗಿಯೆ ಗುದ್ದಿ ಹೇಳಿದಳು" ಇದೆಲ್ಲಾ, ಇವನಿಂದಾಗಿ. ಹುಟ್ಟಿ ಮೂರು ತಿಂಗಳು ಸಹಿತ ಮುಗಿದಿರಲಿಲ್ಲ; ಇವನನ್ನು ನೋಡಬೇಕೆಂದು ನಮ್ಮ ತಂದೆಯಿಂದ ಒಂದೇ ಸಮನೆ ಪತ್ರಗಳು ಬರತೊಡಗಿದುವು. ಕೊನೆಗೆ ತಾನೇ ಇಂಡಿಯದಿಂದ ಟಿಕೆಟ್ ತೆಗೆಸಿ, ಕರತರಬೇಕೆಂದು ಹಟ ಹಿಡಿದ. ನೋಡಿ, ಅಂಕಲ್, ಲಗ್ನವಾಗಿ ಕಳೆದ ನಾಲ್ಕು ವರ್ಷದಿಂದ ಅಮೇರಿಕೆಯಲ್ಲಿ ಇದ್ದಾಗ, ಅಪರೂಪಕ್ಕೊಮ್ಮೆ ಪತ್ರ ಬರೀತಿದ್ದ; ಒಮ್ಮೆಯಾದರೂ ನನಗೆ ಊರ ಕಡೆಗೆ ಬಾ

ಅಂದದ್ದಿಲ್ಲ ನಿಮ್ಮ ಗೆಳೆಯ. ಈಗ ಮಾತ್ರ -" ಎಂದು ಅಪ್ಪನನ್ನು ಮನಸ್ವೀ ಬೈದಳು. ಮುಂದುವರಿದು -

"Tell me, uncle. ಮುದುಕರಿಗೆ ಮೊಮ್ಮಕ್ಕಳ ಮೇಲೇನೇ ಯಾಕೆ ಹೆಚ್ಚಿನ ಮೋಹ?" ಎಂದು ಕೇಳಿದಳು.

"ನನಗೆ ಅದರ ಅನುಭವ ಇನ್ನೂ ಆಗಿಲ್ಲ" ಎಂದು ಸಣ್ಣ ಸುಳ್ಳು ಹೇಳಿದೆ. ಆದರೂ ಆ ಬಗ್ಗೆ ಯೋಚಿಸುತ್ತ ಇದ್ದೆ.

ತಾನಾಗಿ ಸ್ಫುರಿಸುವ ಈ ಅತಿ ವಾತ್ಸಲ್ಯದ ತಳಪಾಯ ಯಾವುದಿರಬಹುದು? ನಮ್ಮ ತರುಣ ವಯದಲ್ಲಿ ಹುಟ್ಟಿದ ಮಕ್ಕಳ ಬಗ್ಗೆ ಏನೇನೊ ಆಸೆ-ಅಪೇಕ್ಷೆಗಳನ್ನು ಇಟ್ಟುಕೊಂಡಿರುತ್ತೇವೆ. ದೊಡ್ಡವರಾದ ಮೇಲೆ ಅವು ನಮ್ಮ ನಿರೀಕ್ಷೆಯಂತೆ ಫಲಿಸಿರುವುದಿಲ್ಲ. ಅಂತಾಗಿ ಸ್ವಂತದ ಮಕ್ಕಳ ಬಗ್ಗೆ ನಿರಾಶಾಜನಿತವಾದ ಬೇಸರ ಇದ್ದಿರಬಹುದೆ? ಅದರ ಕಾರಣದಿಂದಾಗಿ ವಾತ್ಸಲ್ಯಭಾವ ಮೊಟಕಾಗಿರಬಹುದೆ?

ಅಥವಾ ವಯಸ್ಸು ಆದ ಹಾಗೆಲ್ಲ ಮನಸ್ಸು ಮಾಗಿ ಮಿದುವಾಗಿರುತ್ತದೆಂಬ ಕಾರಣ ಕೊಡಬಹುದೆ? ಹಾಗೆ ಇದ್ದರೆ ಮರಿಮಕ್ಕಳ ಎಂದರೆ ಮೊಮ್ಮಕ್ಕಳ ಮಗುವಿನ ಮೇಲೆ ಇನ್ನೂ ಹೆಚ್ಚೆಚ್ಚಾಗಿ ತೋರಬೇಕು. ಹಾಗಿರುವುದಿಲ್ಲವಲ್ಲ? ಡಬ್ಲೂ. ಡಬ್ಲೂ. ಕುಲಕರ್ಣಿ ಪರಿಚಯ ನಿಮಗಿರಲಿಕ್ಕಿಲ್ಲ. ಅವರಿಗೀಗ ೯೦ ವರ್ಷ. ೫೫ ವರ್ಷಕ್ಕೆ ಸರಕಾರೀ ನೌಕರಿಯಿಂದ ನಿವೃತ್ತರಾದವರು. ಸರ್ವೀಸಿನಲ್ಲಿ ಇದ್ದಾಗಿನಕ್ಕಿಂತಲೂ ಹೆಚ್ಚು ವರ್ಷ ಪೆನ್ಷನ್ ಪಡೆದವರು. ಅವರ ಮರಿಮಗನ 'ಹೂ ಹಾರಿಸುವ' ಸಮಾರಂಭಕ್ಕೆ ನನ್ನನ್ನು ಕರೆದಿದ್ದರು. ಹೂ ಹಾರಿಸುವುದು ಎಂದರೆ ಮಗ, ಮೊಮ್ಮಗ, ಮರಿಮಗ - ಈ ನೇರವಾದ ನಾಲ್ಕನೆಯ ಸಂತತಿ ಹುಟ್ಟಿದರೆ ನಡೆಯಬೇಕಾದ ಸಮಾರಂಭ. ಅವರು ತಮ್ಮ ಮೊಮ್ಮಗನನ್ನು ಅತಿಯಾದ ಅಕ್ಕರೆಯಿಂದ ನೋಡುತ್ತಿದ್ದುದನ್ನು ನಾನು ಚೆನ್ನಾಗಿ ಬಲ್ಲೆ. ನಾನು ಹೋದಾಗ ಅವರ ಸಂಭ್ರಮ ಈ ತನ್ನ ಮೊಮ್ಮಗನು ಮಗುವನ್ನು ಹುಟ್ಟಿಸುವಷ್ಟು ದೊಡ್ಡವನಾಗಿದ್ದಾನಲ್ಲ- ಎಂಬುದೇ ಆಗಿತ್ತಲ್ಲದೆ, ಹೊಸದಾಗಿ ಹುಟ್ಟಿದ ಹಸುಳೆಯತ್ತ ಇರಲಿಲ್ಲ.

ಮೊಮ್ಮಕ್ಕಳ ಕುರಿತಾದ ಈ ವಾತ್ಸಲ್ಯವು ಕುಟುಂಬದ ನಿತ್ಯದ ವ್ಯವಹಾರದಲ್ಲಿ ಸಮಸ್ಯೆಯುಂಟಾಗಲೂ ಬಹುದು. ಮಕ್ಕಳನ್ನು ಸರಿದಾರಿಗೆ ತರಲೆಂದು ತಂದೆ ಅಥವಾ ತಾಯಿ ಅವನನ್ನು ಶಿಕ್ಷಿಸ ಹೋಗುತ್ತಾಳೆ. ಒಂದು ವೇಳೆ ಮನೆಯಲ್ಲಿ ಅಜ್ಜನೋ ಅಜ್ಜಿಯೋ ಇದ್ದರೆ? ಶಿಕ್ಷಿಸುವದಂತಿರಲಿ ಬೈಯ್ಯುವುದು ಕೂಡಾ ಸಾಧ್ಯವಾಗದು. ಮೊಮ್ಮಕ್ಕಳ ಎಂಥ ಗಂಭೀರ ಸ್ವರೂಪದ ಅಪರಾಧವೂ ಅವರಿಗೆ ಹಾಗೆ ಅನಿಸುವುದೇ ಇಲ್ಲ. ಇತ್ತ ಮೊಮ್ಮಕ್ಕಳು ಅದರ

ದುರುಪಯೋಗವನ್ನು ಮಾಡಿಕೊಳ್ಳುವುದೂ ಉಂಟು. ಮನೆಯಲ್ಲಿ ಏನಾದರೂ ಇಗ್ಗೆಲಸ ಮಾಡೋದು; ಅಮ್ಮ ಹೊಡೆಯ ಬಂದಾಗ ಅಜ್ಜಿಯ ಮಡಿಲಲ್ಲಿ ಹುದುಗಿಕೊಳ್ಳುವುದು.

ಮೊಮ್ಮಕ್ಕಳಲ್ಲಿ ಎರಡು ಪ್ರಕಾರಗಳಿವೆ; ಮಗಳಿಂದ ಹುಟ್ಟಿದವುಗಳು, ಮಗನಿಂದ ಹುಟ್ಟಿದವುಗಳು, ವಾತ್ಸಲ್ಯ ತೋರುವಾಗ ಅವುಗಳ ಅಜ್ಜ ಅಜ್ಜಿಯರು ತಾರತಮ್ಯವನ್ನೇಕೆ ತೋರುವರೊ! ನಮ್ಮ ನೆರೆಮನೆಯ ಮುದುಕಿ ಹೇಳಿದ್ದನ್ನು ಕೇಳಿದ್ದೇನೆ. 'ನಿಜವಾದ ಮೊಮ್ಮಕ್ಕಳು ಅಂದ್ರೆ ಮಗನಿಂದ ಹುಟ್ಟಿದವುಗಳೇ-' ಎಂದು. ಆದರೆ ಆಂತರ್ಯದಲ್ಲಿ ಮಾತ್ರ ವಾತ್ಸಲ್ಯ ಅನ್ನೋದು ಮಗಳ ಮಕ್ಕಳಿಗೆ ಮೀಸಲು. ಈ ಭೇದ ಭಾವದ ಕಾರಣವೇನೋ? ತಿಳಿಯದು.

ನನ್ನೊಬ್ಬ ತರುಣ ಮಿತ್ರನಿಗೆ ಈರ್ವರು ಹೆಣ್ಣು ಮಕ್ಕಳಿವೆ. ಒಬ್ಬಳ ವಯಸ್ಸು ೬, ಇನ್ನೊಬ್ಬಳದು ೪. ತಮ್ಮೆರಡೂ ಮಕ್ಕಳನ್ನು ಅವುಗಳ ಅಜ್ಜ - ಅಜ್ಜಿಯರ ಬಳಿಯಲ್ಲಿ ಬಿಟ್ಟು, ಆತ ಆರಾಮವಾಗಿದ್ದಾನೆ. ಒಂದು ದಿನ ಅವನಿಗೆ ಹೇಳಿದೆ "ಅಲ್ಲವೊ! ಎರಡೂ ಮಕ್ಕಳನ್ನೂ ಆ ಮುದುಕರಿಗೆ ಒಪ್ಪಿಸಿ ನೀವಿಬ್ಬರೂ ಚೈನಿ ಹೊಡೀತಿದ್ದೀರ. ಚಿಂತಿಲ್ಲ, ಆದರೆ ಅವರಿಗೆ ಏನಾದರೂ compensation ಕೊಡಬೇಕು."

"ಇಲ್ಲ, ಅವರೇ ನನಗೆ ಕೊಡಬೇಕು" ಎಂದನಾತ.

"ನೀನೊಬ್ಬ ಭಂಡ. ಅವರ್‍ಯಾಕೆ ಕೊಡಬೇಕು?" ಎಂದು ಕೇಳಿದೆ.

"ಇಳಿ ವಯಸ್ಸಿನವರಿಗೆ ಮೊಮ್ಮಕ್ಕಳ ಒಡನಾಟ ಕೊಡುವಷ್ಟು ಸುಖ ಇನ್ನಾವುದೂ ಇಲ್ಲ. ಈ ನನ್ನ in-lawಗಳಿಗೆ ಆ ಸುಖ ಒದಗಿಸುತ್ತಿದ್ದೇನೆ. ಆದ್ದರಿಂದ " - ಇಬ್ಬರೂ ನಕ್ಕೆವು. ಆ ಮುಂದೆ ಅವನು ವಿವರಿಸಿದ್ದು ಮಾತ್ರ ನನ್ನ ಮನಸ್ಸಿಗೆ ತಟ್ಟಿತು.:

"ಒಳಗಿನ ಸಂಗತಿ ಎಂದರೆ ನನ್ನ ಮಾವ ಹಾಗೂ ಅತ್ತೆಯವರಲ್ಲಿ ಹೊಂದಾಣಿಕೆ ಇರಲಿಲ್ಲ. ಏನೋ ಬಿಡಲಾರದ ಕರ್ಮ ಎಂಬಂತೆ ಸಂಸಾರ ಮಾಡಿದರು. ಮಗಳ ಮದುವೆ ಆದೊಡನೆ ನನ್ನ ಮಾವ ಹೈದರಾಬಾದಿಗೊ, ಎಲ್ಲಿಗೊ ಹೋಗಿ ಬಿಟ್ಟಿದ್ದರು. ಈಗ ಈ ಮೊಮ್ಮಕ್ಕಳ ಕಾರಣದಿಂದಾಗಿ ಅವರಿಬ್ಬರಲ್ಲೂ ಹೊಂದಾಣಿಕೆ ಉಂಟಾಗಿದೆ".

***

೧೨. ವಿದೇಶಗಳಲ್ಲಿ ನಾ ಕಂಡ ನಾರಿಯರು

ಅದು ೧೯೭೫ನೆಯ ಇಸವಿ ಎಂದು ಕಾಣುತ್ತದೆ. ಮೊದಲ ಬಾರಿ ನಾನು ಇಂಗ್ಲಂಡ್ ಮೊದಲಾದ ವಿದೇಶಗಳ ಯಾತ್ರೆಯನ್ನು ಕೈಕೊಂಡಿದ್ದೆ. ಮುಖ್ಯ ಉದ್ದೇಶ ಅಲ್ಲಿಯ ಲೈಬ್ರರಿಗಳ ಸಂದರ್ಶನ. ವಿದೇಶಕ್ಕೆ ಹೊರಟು ನಿಂತವರಿಗೆ ಮೊದಲ ಮಹಿಳಾ ಭೇಟಿ ಎಂದರೆ ಗಗನಸಖಿಯರದು. ಒಳನಾಡಿನಲ್ಲೇ ಅವರ ಪರಿಚಯ ನನಗೆ ಸಾಕಷ್ಟು ಇದ್ದಿತು. ಅವರನ್ನು ಕಂಡಾಗಲೆಲ್ಲ ನನಗೆ ಕಥಾಸರಿತ್ಸಾಗರದಲ್ಲಿಯ ಗೊಂಬೆಗಳ ನೆನಪಾಗುತ್ತದೆ. ಕರ್ಪೂರ ನಗರದ ರಾಜಧರನೆಂಬ ಅರಸನು ಅತಿಥಿಗಳ ಪರಿಚರ್ಯೆಗಾಗಿ ಚಂದದ ಗೊಂಬೆಗಳನ್ನು ನಿರ್ಮಿಸಿ, ಅವು ಯಂತ್ರಚಾಲಿತವಾಗಿ ಎಲ್ಲ ಬಗೆಯ ಸೇವೆಯನ್ನು ಜರುಗಿಸುವಂತೆ ಯೋಜಿಸಿದ್ದನಂತೆ: ವಿಮಾನ ಪರಿಚಾರಿಕೆಯರನ್ನು ಕಂಡಾಗೆಲ್ಲ ಇವರು ಕೀಲುಗೊಂಬೆಗಳೇ ಎಂದೆನಿಸುತ್ತದೆ. ಇವರಿಗಿಂತ ನಮ್ಮ ಕಡೆಯ ಬಸ್ ಕಂಡಕ್ಟರುಗಳೇ ವಾಸಿ.

ನಾನು ಸಂದರ್ಶಿಸಬೇಕಿದ್ದ ಲೈಬ್ರರಿಗಳಲ್ಲಿ ಹೆಚ್ಚಿನವರು ಮಹಿಳಾ ಸಿಬ್ಬಂದಿಗಳೇ. ಅದರಲ್ಲಿಯೂ Miss ಬಿರುದಾಂಕಿತರೇ ಜಾಸ್ತಿ. ಅದೆಷ್ಟು ಚಿಕ್ಕ ವಯಸ್ಸಿನಲ್ಲೇ ಇವರುಗಳು ಜವಾಬ್ದಾರಿಯ ಸ್ಥಾನವನ್ನು ಪಡೆದಿದ್ದಾರೆ - ಎಂದುಕೊಂಡಿದ್ದೆ. ಇಂಗ್ಲೆಂಡಿನಲ್ಲಿ ನನ್ನ ಕಾರ್ಯಕ್ರಮದ ರೂಪರೇಷೆಗಳನ್ನು ಗೊತ್ತುಪಡಿಸಿ, ವ್ಯವಸ್ಥೆ ಮಾಡಬೇಕಿದ್ದವಳ ಹೆಸರು ಮಿಸ್ ವಯಾಲೆಟ್. ಆಕೆ ಮುಂಚೆಯೇ ಕಳಿಸಿದ ಆ ಕಾರ್ಯಕ್ರಮ ಪಟ್ಟಿಯಲ್ಲಿ ಹಲವಾರು ಬೇರೆ 'ಕುಮಾರಿ'ಗಳ ಹೆಸರನ್ನು ಕಾಣಿಸಿದ್ದಳು. ಕಾಲೇಜಿನಲ್ಲಿ ಓದುತ್ತಿದ್ದ ನನ್ನ ಮಗಳು ಆ ಪಟ್ಟಿಯನ್ನು ನೋಡಿ 'ನಮ್ಮ ಅಪ್ಪ ಅದೆಷ್ಟು ಜನ ಮಿಸ್‌ಗಳೊಡನೆ ವ್ಯವಹರಿಸುತ್ತಿದ್ದಾನಲ್ಲ!' ಎಂದು ಯೋಚನೆಗೊಳಗಾಗಿದ್ದಳು. ವಿದೇಶಯಾತ್ರೆಯಿಂದ ಮರಳಿ ಬಂದ ಮೇಲೆ ಅವರೊಬ್ಬೊಬ್ಬರನ್ನು ವರ್ಣಿಸಿ, ಅವರುಗಳ ಕೌಮಾರ್ಯದ ಸರಾಸರಿ ೪೦ ವಯಸ್ಸೆಂದು ವಿವರಿಸಿದೆ.

ಲೈಬ್ರರಿಗಳಲ್ಲಿ ಎಲ್ಲೆಲ್ಲಿಯೂ ಸ್ತ್ರೀಯರೇ ಎಂದೆನಲ್ಲವೆ. ಸುಪ್ರಸಿದ್ಧ ಇಂಡಿಯಾ ಆಫೀಸ್ ಲೈಬ್ರರಿಯ ಮುಖ್ಯಸ್ಥೆ ಮಿಸ್ ಲ್ಯಾಂಕ್ಯಾಸ್ಟರ್ ಎಂಬವಳು. ಇನ್ನೆರಡು ವರ್ಷಕ್ಕೆ

ನಿವೃತ್ತಳಾಗಲಿದ್ದ ಆಕೆ ಭಾರತವನ್ನು ಸಂದರ್ಶಿಸಿದ್ದಳಂತೆ. ಆಸ್ಥೆಯಿಂದ ನಮ್ಮಲ್ಲಿಯ ಗ್ರಂಥ ಸಂಗ್ರಹಗಳ ಬಗ್ಗೆ ವಿಚಾರಿಸಿದಳು. ನಾನು ಅವರಲ್ಲಿಯ ಕನ್ನಡ ಗ್ರಂಥ ಸಂಗ್ರಹವನ್ನು ನೋಡಲಪೇಕ್ಷಿಸಿದಾಗ ನನ್ನನ್ನು ಮಿಸೆಸ್ ಡಾವ್‌ಸನ್ ಎಂಬವಳ ಬಳಿಗೆ ಕಳುಹಿಸಿದಳು. ದಕ್ಷಿಣ ಭಾರತದ ಭಾಷಾ ಗ್ರಂಥಗಳ ಮೇಲ್ವಿಚಾರಣೆ ಅವಳಿಗೆ ಸೇರಿದ್ದಂತೆ. ಆ ವಿಭಾಗಕ್ಕೆ ಹೋದಾಗ ಬಾಗಿಲ ಬಳಿಯಲ್ಲಿ, ಹಣೆಗೆ ಕುಂಕುಮವಿಟ್ಟು, ತಂಜಾವೂರು ಸೀರೆಯನ್ನು ಉಟ್ಟಿದ್ದ ತಮಿಳು ಮುತ್ತೈದೆ ಕಂಡಳು. "Where can I find Mrs. Dawson?"ಎಂದು ಕೇಳಿದಾಗ "ನಾನೇ" ಎಂದಳಾಕೆ! ಸಾಕಷ್ಟು ಆತ್ಮೀಯವಾಗಿ ಮಾತನಾಡಿದೆವು. ಉತ್ತಮ ಕನ್ನಡ ಪುಸ್ತಕಗಳನ್ನು ದೊರಕಿಸುವ ವಿಷಯದಲ್ಲಿ ತನ್ನ ತೊಂದರೆಯನ್ನು ವಿವರಿಸಿದಳು. ಅಲ್ಲಿ ಸುಮಾರು ೧೫ ಕನ್ನಡ ಹಸ್ತಪ್ರತಿಗಳಿದ್ದು, ಅವುಗಳನ್ನು ತೋರಿಸಿದಳು. ನೂರು ವರ್ಷಗಳ ಹಿಂದಿನ, ಹಳೆಯ ಮೈಸೂರಿನ, ಕರಾವಳಿಗಳ ಚಿತ್ರಗಳು ಅಲ್ಲಿ ಉಂಟೆಂದು ಕೇಳಿದ್ದೆ. ಅದನ್ನು ನೋಡುವ ಅಪೇಕ್ಷೆಯನ್ನು ವ್ಯಕ್ತಪಡಿಸಿದಾಗ, "ಶ್ರೀಮತಿ ರೋಹಟಗಿ ಎಂಬವಳ ಬಳಿ ಹೋಗೋಣ ಬನ್ನಿ"ಎಂದಳು. "ಪರ್ವಾ ಇಲ್ಲ. ಸಾಕಷ್ಟು ಭಾರತೀಯರು ಇಲ್ಲಿ ಇದ್ದಾರೆ" ಎಂದುಕೊಂಡೆ. ಆದರೆ ಶ್ರೀಮತಿ ರೋಹಟಗಿ ಉತ್ತರ ಹಿಂದುಸ್ಥಾನದ ಒಬ್ಬರನ್ನು ಮದುವೆಯಾಗಿದ್ದ ಬ್ರಿಟಿಶ್ ವನಿತೆ! ಸರಿ. ಅವಳು ತೋರಿಸಿದ ಚಿತ್ರಗಳನ್ನು ನೋಡಿಕೊಂಡು, ಸಂದರ್ಭ ಗ್ರಂಥಸಂಗ್ರಹಕ್ಕೆ ಬಂದೆ. ಅಲ್ಲಿಯ ಮಿಸೆಸ್ ವಾರ್ಡ್ ಎಂಬಾಕೆ ಕೇಳುತ್ತಿದ್ದ ಭಾರತೀಯರ ರಾಜಕಾರಣದ ಕುರಿತಾದ ಪ್ರಶ್ನೆಗಳಿಗೆ ಉತ್ತರ ಹೇಳುತಲಿದ್ದೆ. ಬಾಂಗ್ಲಾ ದೇಶದ ಮುಜೀಬರ ಕಗ್ಗೊಲೆಯ ಸುದ್ದಿ ಹಿಂದಿನ ದಿನವೇ ಬಂದಿದ್ದಿತು. ಅದರ ಪ್ರಸ್ತಾಪ ಬಂದಾಗ ಮಿಸೆಸ್ ವಾರ್ಡ್ ತುಂಬಾ ಉದ್ವೇಗಗೊಂಡಳು. ದೂರದ ಈ ಬ್ರಿಟನ್ ಮಹಿಳೆಗೆ ಅದೇಕೆ ಇಷ್ಟೊಂದು ಔತ್ಸುಕ್ಯವೊ? ಹಾಗೆಂದು ಕೇಳಿದಾಗ "Why? My Mother hails from Dacca" ಎಂದು ಉತ್ತರಿಸಿದಳು.

ಮರುದಿನ ಬೇರೊಬ್ಬ ಬ್ರಿಟಿಶ್ ಲೈಬ್ರರಿಯನ್ ಜೊತೆಗೆ 'ಲಂಚ್' ತೆಗೆದುಕೊಳ್ಳುತ್ತಿದ್ದಾಗ, ಬ್ರಿಟಿಶರು ಭಾರತೀಯ ವನಿತೆಯರನ್ನು ಮೆಚ್ಚಿ, ಮದುವೆಯಾಗಬಯಸುವ ಮನೋವೃತ್ತಿಯನ್ನು ಉಲ್ಲೇಖಿಸಿದೆ. ಆತ ನಸುನಕ್ಕು "I am also a victim of that trend" ಎಂದ! ಅರ್ಥಾತ್ ಓರ್ವ ಹಿಂದೂ ಕನ್ಯೆಯನ್ನು ಆತ ಮದುವೆಯಾಗಿದ್ದ. "ಭಾರತೀಯ ಮಹಿಳೆ ಜಾತ್ಯಾ ಪುರುಷರ ಯೋಗಕ್ಷೇಮಕ್ಕೆ ಹೆಚ್ಚು ಗಮನ ಕೊಡುತ್ತಾಳೆ. ಸಮಾನ ಹಕ್ಕಿನ ಪ್ರಶ್ನೆಯನ್ನೆತ್ತಿ ಜಗಳಾಡುವುದಿಲ್ಲ; ಡೈವೋರ್ಸಿನ ಭಯವಿಲ್ಲ. ದಣಿದು ಮನೆಗೆ ಬಂದ ಗಂಡನಿಗೆ ಅವಳ ಪ್ರೀತಿಪುರಸ್ಸರವಾದ ನಡವಳಿಕೆ ತುಂಬಾ ಹಿತಕಾರಿ" ಎಂದೆಲ್ಲ ಸ್ವಾನುಭವವನ್ನು ವಿವರಿಸಿದ!

ಚಿಲ್ವನ್ ಎಂಬ ಸ್ಥಳದಲ್ಲಿರುವ ಒಂದು ವಿಜ್ಞಾನ ಗ್ರಂಥಾಲಯಕ್ಕೆ ಹೋಗಿದ್ದೆ. ಅಲ್ಲಿಯ ಗ್ರಂಥಪಾಲಕಿಯು ಸ್ನೇಹಮಯಿ ಹಾಗೂ ಬಿಚ್ಚು ಮನದವಳು. ಆಕೆಯ

ಮದುವೆಯಾಗಿ 10 - 12 ವರ್ಷ ಆಗಿರಬೇಕು. ಗಂಡ ತನ್ನ ಒಳಿತು - ಸುಖಕ್ಕಾಗಿ ತುಂಬಾ ಪರಿತಾಪ ಪಡುವನೆಂಬುದನ್ನು ತಿಳಿಸಿದಳು. (ನಾನು ಅಲ್ಲಿ ಇದ್ದಾಗ ಅವಳಿಗೆ ಎರಡು ಬಾರಿ ಅವನ ಫೋನ್ ಬಂದಿತ್ತು). " ಮಕ್ಕಳೆಷ್ಟು? ಶಾಲೆಗೆ ಹೋಗುತ್ತಿದ್ದಾರೆಯೆ?" ಎಂದು ಕೇಳಿದೆ. ಅದಕ್ಕೆ ಉತ್ತರವಾಗಿ "ನಮಗೆ ಮಕ್ಕಳಿಲ್ಲ. ಮಕ್ಕಳನ್ನು ಯಾರು ನೋಡಿಕೊಳ್ಳಬೇಕು? A working woman cannot afford to have children" ಎಂದಳು. ನಗುತ್ತ ಹೇಳಿದಳಾದರೂ ಅದರ ಹಿಂದಿನ ವಿಷಣ್ಣಭಾವವನ್ನು ನಾನು ಗುರುತಿಸದೇ ಇರಲಿಲ್ಲ. "ನಿಮ್ಮ ಲೈಬ್ರರಿಯಲ್ಲಿ ಹೇಗಿದ್ದಾರೆ ಮಹಿಳೆಯರು?" ಎಂದು ಪ್ರಶ್ನಿಸಿದಳು. "ಅಯ್ಯೋ ಅದನ್ನೇನು ಕೇಳುತ್ತೀರಿ? ನಮ್ಮಲ್ಲಿರುವ ಮಹಿಳೆಯರೆಲ್ಲ ಮದುವೆಯಾದವರು; ಇಷ್ಟೇ ಅಲ್ಲ, ಹೆಚ್ಚಿನವರಿಗೆ ೨- ೩ ಮಕ್ಕಳಿವೆ. ಬಾಣಂತಿತನದ ರಜೆಯನ್ನು ಹಕ್ಕಿನಿಂದ ಪಡೆಯುತ್ತಾರೆ. ಮಗುವಿಗೆ ತುಸು ಕಾಹಿಲೆಯಾಗಿದ್ದರೂ ಅಷ್ಟೇ ಹಕ್ಕಿನಿಂದ ಆಫೀಸಿಗೆ ತಡವಾಗಿ ಬರುತ್ತಾರೆ. ಬೇಗ ಹೋಗುತ್ತಾರೆ" ಎಂದು ವಿವರಿಸಿದೆ. ಹಾಗೆಯೇ ನಮ್ಮ ಮಾತುಕತೆ ಮಧ್ಯಮ ವರ್ಗದ ಭಾರತೀಯ ಮಹಿಳೆಯ ಬಗ್ಗೆ ಮುಂದುವರಿಯಿತು. ನಮ್ಮಲ್ಲಿಯ ಕುಟುಂಬ ಜೀವನದ ನೆಮ್ಮದಿ. ಕೈಯಾಸರೆಗೆ ದೊರೆಯುವ ಕೆಲಸದವರು, ಅದಕ್ಕಿಂತ ಮುಖ್ಯವಾಗಿ ಮಕ್ಕಳು, ಮೊಮ್ಮಕ್ಕಳ ಮೇಲೆ ವಾತ್ಸಲ್ಯವನ್ನು ಧಾರೆಯೆರೆಯುವ ಹಿರಿಯರು ಇವನ್ನು ದೃಷ್ಟಾಂತ ಸಹಿತವಾಗಿ ವಿವರಿಸಿದೆ. "ನೌಕರಿಯಲ್ಲಿರುವ ಭಾರತೀಯ ಮಹಿಳೆ ನಮಗಿಂತ ಭಾಗ್ಯವಂತೆಯೇ ಸೈ" ಎಂದು ಉದ್ಗಾರವೆತ್ತಿದಳು.

ಬ್ರಿಟಿಶ್ ಲೈಬ್ರರಿಗಳ ಸಂದರ್ಶನ ಮುಗಿಸಿಕೊಂಡು ನಾನು ಬಾಸೆಲ್ ಮಿಶನ್ನಿನವರ ಆಮಂತ್ರಣದ ಮೇರೆಗೆ ಬಾಸೆಲ್‌ಗೆ ಹೊರಟೆ. ಹಡಗಿನ ಪ್ರಯಾಣ ಮುಗಿದ ಮೇಲೆ ಡೋವರ್‌ದಿಂದ ರೈಲಿನಲ್ಲಿ ರಾತ್ರಿಯ ಪಯಣ. ನಮ್ಮಲ್ಲಿಯ "ಸ್ಲೀಪರ್" ಕೋಚ್‌ಗಳಂತೆ. ಆ ಗಾಡಿಗಳಲ್ಲಿಯೂ ಅಂಥ ವ್ಯವಸ್ಥೆ ಇದೆ. ಅಲ್ಲಿಯ ಶಯನಾಸನಗಳಿಗೆ 'ಕ್ರೋಶ್' ಎನ್ನುತ್ತಾರೆ. ಪ್ರತ್ಯೇಕ ಕೋಣೆಯಂತಿರುವ ಒಂದೊಂದು ಬಂಕದಲ್ಲಿ ಆರು ಹಾಸಿಗೆಗಳಿಗೆ ವ್ಯವಸ್ಥೆ. ನನ್ನ ರಿಸರ್ವೇಶನ್ ಹೇಗೂ ಆಗಿದ್ದಿತು. ಹಡಗಿನಿಂದ ಇಳಿದು ನನ್ನ ಕಂಪಾರ್ಟ್‌ಮೆಂಟಿಗೆ ಬಂದಾಗ ರಾತ್ರಿ ಹತ್ತು ಗಂಟೆ. ಸಾಕಷ್ಟು ದಣಿವಾಗಿದ್ದಿತು. ಆಗ ನಾನು ಒಬ್ಬನೇ. ತುಸು ಹೊತ್ತಿನ ಮೇಲೆ ಒಬ್ಬ ಕನ್ಯೆ ಬಂದಳು. ತನ್ನ ನಂಬರನ್ನು ಕಂಡು, ಅದರ ಮೇಲೆ ತನ್ನ ಗಂಟು ಗದಡಿಯನ್ನು ಒಗೆದಳು. ಸಿಗರೇಟು ಹೊತ್ತಿಸಿದಳು. "No smoking" ಎಂಬ ಬೋರ್ಡ್ ಇದೆಯೇ ಎಂದು ನೋಡಿದೆ. ಕಾಣಿಸಲಿಲ್ಲ. ಐದು ಹತ್ತು ನಿಮಿಷ ಕಾಯ್ದೆ. ಮತ್ತೆ ಯಾರೂ ಬರಲಿಲ್ಲ. ಅಂದರೆ ಇಡೀ ರಾತ್ರಿ, ಇವಳೂ ನಾನೂ ಇಬ್ಬರೇ ಇರಬೇಕೆ? ಎಂದು ತುಸು ಗಾಬರಿ!(?)ಗೊಂಡೆ. ಸುದೈವಕ್ಕೆ ಇನ್ನಿಬ್ಬರು ಜರ್ಮನ್ ಭಾಷೆಯಲ್ಲಿ ದಡಬಡ ಮಾತನಾಡುತ್ತ ಪ್ರವೇಶಿಸಿದರು. ಅಡ್ಡಿಯಿಲ್ಲ-ಎಂದುಕೊಂಡೆ. ಆದರೆ ಅವರಾರೂ ಮಾತನಾಡಿಸಲಿಲ್ಲ."ಏನ್ರೆಪಾ, ಯಾವೂರಿಗೆ ಹೊರಟೀರಿ?" ಎಂದು ನಾನೇ ಕೇಳಬೇಕೆನ್ನಿಸಿತು! ಆದರೆ ಕೇಳಲಿಲ್ಲ. ಇನ್ನುಳಿದ ಎರಡು ಜಾಗಗಳಿಗೆ ಗಂಡಸರು

ಬಂದರೆ ನೆಟ್ಟಗಾಗುವುದು ಎಂದು ಯೋಚಿಸಿದೆ. ಯಾರೂ ಬರಲಿಲ್ಲ. ಇನ್ನೇನು ಗಾಡಿಬಿಡುವ ಸಮಯ ಓರ್ವ ಮಧ್ಯವಯಸ್ಸಿನ ಯುವತಿ- ಏರುತ್ತ ಬಂದಳು. ಎದುರಿಗೇ ಕಂಡ ನನ್ನನ್ನು ಕುರಿತು "ಹಲ್ಲೋ" ಎಂದಳು ಅಷ್ಟೇ. ಅಂತೂ ಗಾಡಿ ಬಿಟ್ಟಾಗ, ನಾಲ್ವರು ನಾರಿಯರ ಮಧ್ಯೆ ನಾನೊಬ್ಬನೇ. ಅವರಿಗೋ ನಾನೊಬ್ಬ ಗಂಡಸು ಎಂಬುದೇ ಲಕ್ಷ್ಯಕ್ಕೆ ಬಂದಂತಿರಲಿಲ್ಲ. ಬೇಸಗೆ ಕಾಲವಾದ್ದರಿಂದ ಮೈಮೇಲಿನ ಬಿಗಿಯಾದ ಬಟ್ಟೆಗಳನ್ನು ತೆಗೆದು ಸಡಿಲು ಮೇಲಂಗಿಯನ್ನು ಹಾಕತೊಡಗಿದರು. ಒಬ್ಬಳಂತೂ ನನ್ನೆದುರಿಗೇ ತನ್ನ ವಸ್ತ್ರಾಂತರದಲ್ಲಿ ನಿರತಳಾದಳು. ಈ ಪ್ರಮೀಳೆಯರ ದರ್ಬಾರಿನಲ್ಲಿ ನಾನೊಬ್ಬ ಗಂಡಸು ಎಂಬುದು ನನಗೂ ಮರೆತು ಹೋಗಿತ್ತು! ಅವರೇನೂ ತುಸು ಹೊತ್ತಿನಲ್ಲಿ ಸುಖವಾಗಿ ನಿದ್ದೆ ಹೋದರು. ನನಗೋ ಬರಿ ಮಂಪರು.

ಬೆಳಗಿನಲ್ಲಿ ಎದ್ದಾಗ ೬-೩೦ ಗಂಟೆ. ಬಾಸೆಲ್ ತಲುಪಲು ಇನ್ನೊಂದು ಗಂಟೆಯ ಅವಕಾಶವಿದ್ದಿತು. ಮುಖಮಾರ್ಜನವಾದ ಮೇಲೆ ಕೊನೆಗೆ ಬಂದ ಮಧ್ಯವಯದವಳೇ ಮಾತನಾಡಿಸಿದಳು - "ಚೆನ್ನಾಗಿ ನಿದ್ದೆ ಬರಲಿಲ್ಲವೆಂದು ಕಾಣುತ್ತದೆ?" ಎಂದಳು. 'ನನ್ನಂಥ ಇಳಿ ಮಧ್ಯ ವಯಸ್ಸಿನ ಭಾರತೀಯನಿಗೆ ಅದು ಸಹಜವೇ' ಎಂಬ ಭಾವನೆಯಿಂದ ಕೇಳಿದಳು. ಹೆಂಗಸರು ಒಂದೆಡೆ ಸೇರಿದರೆ, ನಮ್ಮಲ್ಲಿ ಏನೇನೆಲ್ಲ ಹರಟುತ್ತಾರೆ. ಇವರೋ ಒಂದೊಂದು ಪುಸ್ತಕ/ ಪತ್ರಿಕೆಯನ್ನು ಹಿಡಿದುಕೊಂಡು ಓದುವುದರಲ್ಲಿ ನಿಮಗ್ನರು!

ಬಾಸೆಲ್ ಸ್ಟೇಶನ್ನಿಗೆ, ಮಿಶನ್ನಿನ ಗ್ರಂಥಪಾಲ ಶ್ರೀ ಜೆಂಕಿನ್ಸ್ ಬಂದಿದ್ದರು. ಅಂದು ರಜೆಯ ದಿನವಾದ್ದರಿಂದ ಇಡೀ ದಿನದ ಊಟ, ತಿನಿಸಿಗೆ ಅವರು ನನ್ನನ್ನು ತಮ್ಮ ಮನೆಗೇ ಆಮಂತ್ರಿಸಿದ್ದರು. ಅವರ ಮನೆಯ ಅಂಗಳದಲ್ಲಿ ನನಗೆ ಕಂಡದ್ದು, ಮೂವರು ಮಹಾನಾರಿಯರು!(Three musketeers) ಒಬ್ಬಳ ವಯಸ್ಸು ೧೦ - ಹೆಸರು ಸೂಸಾನ್; ಇನ್ನೊಬ್ಬಳದು ರಾಶೆಲ್ (೭); ಮೂರನೆಯವಳು, ಮೂರು ವರ್ಷದ ಇಸಬೆಲ್. ಮೊದಲ ಭೆಟ್ಟಿಗೇ ನನ್ನ ಅವರಲ್ಲಿ ಆತ್ಮೀಯತೆ ಬೆಳೆಯಿತು. ಸಾಮಾನ್ಯವಾಗಿ ನಮ್ಮ ಕಡೆಗೆ ಹಿರಿಯ ಮಗುವಿಗೆ ಅದು ಹೆಣ್ಣಿದ್ದರೆ ಮೊದ್ದುತನ ಹೆಚ್ಚು. ಜೆಂಕಿನ್ಸರ ಜ್ಯೇಷ್ಠ ಕನ್ಯೆ ಸೂಸಾನ್ ಬಲು ಚುರುಕಿನವಳು. ಎಲ್ಲದರತ್ತ ಗಮನ. ಮಧ್ಯದವಳು ಹೆಚ್ಚು ವಿನೋದಿನಿ. ಕೊನೆಯ ಇಸಬೆಲ್ ನೋಡುವುದಕ್ಕೆ ಕಿತ್ತಳೆ ಹಣ್ಣು! ಮೂರು ವರ್ಷದ ಮಗುವಾದರೂ, ತನಗೆ ತನ್ನ ಅಕ್ಕಂದಿರಂತೆಯೇ ಸ್ಥಾನ-ಮಾನ ಬೇಕು, ಎನ್ನುವ ಮನೋವೃತ್ತಿ ಅವಳದು. ಎಂದರೆ ಶ್ರೀಮತಿ ಜೆಂಕಿನ್ಸ್. ಇತರ ಇಬ್ಬರಿಗೆ ಏನಾದರೂ ಕೆಲಸ ಹೇಳಿದರೆ, ತನಗೂ ಹಾಗೆಯೇ ಹೇಳಬೇಕೆಂದು ಹಟ. ಊಟಕ್ಕೆ ಕುಳಿತಿದ್ದಾಗ, ಒಮ್ಮೆ ಜೋರಾಗಿ ಅಳುವುದಕ್ಕೆ ತೊಡಗಿದಳು. ಅದರ ಕಾರಣವೇನೆಂಬುದು ತಿಳಿಯುವುದೇ ಕಷ್ಟವಾಯಿತು. ನಾನು ಅವಳ ಬದಿಯಲ್ಲಿಯೇ ಕುಳಿತಿದ್ದೆನಾದ್ದರಿಂದ ಅಳುವ ದನಿಯಲ್ಲಿಯೇ ಉತ್ತರ ಹೇಳಿದಳಾದರೂ ನನಗೆ ಅರ್ಥವಾಗಲಿಲ್ಲ. ಶ್ರೀ ಜೆಂಕಿನ್ಸ್ ಅರ್ಥಮಾಡಿಕೊಂಡರು - ಅವಳಿಗೆ ಯಾವುದೊ

ಒಂದು ಪದಾರ್ಥವನ್ನೇ ಬಡಿಸಿರಲಿಲ್ಲ. ಅನೇಕ ಮನೆಗಳಲ್ಲಿ ನಡೆಯುವಂತ ಸಂದರ್ಭವೇನೋ, ಹೌದು. ಆದರೆ ಅವಳ ಅಕ್ಕಂದಿರು ಮಾತ್ರ ಮುಸಿಮುಸಿ ನಗದೇ ತಮ್ಮ ಜಾಗ ಬಿಟ್ಟೆದ್ದು, ಇಸಬೆಲಳ ಬದಿಯಲ್ಲಿ ನಿಂತು ರಮಿಸಿಯೇ ರಮಿಸಿದರು.

ಬಾಸೆಲ್‌ನಲ್ಲಿ ನಾನು ನೆನೆಯಬೇಕಾದ ಇನ್ನೊಂದು ವ್ಯಕ್ತಿ ಶ್ರೀಮತಿ ಅಲ್ಲಲ್ಲ, ಕುಮಾರಿ ಡ್ಯೊಶ್(Miss Deutsch). ಅಲ್ಲಿಯ ಹಾಸ್ಟೆಲಿಗರ , ಅತಿಥಿಗಳ ಊಟ, ವಾಸ್ತವ್ಯದ ಮೇಲ್ವಿಚಾರಣೆ ಅವಳಿಗೆ ಸೇರಿದ್ದು. ಸುಮಾರು ೩೦ ವರ್ಷಗಳ ಕಾಲ, ಅದನ್ನೆ ಮಾಡಿಕೊಂಡು ಬಂದಿದ್ದಾಳೆ. ಆದರೆ ಒಂದಿನಿತೂ ಮಾಸದ ಹುಮ್ಮಸ್ಸು. ಸುಕ್ಕುಗಟ್ಟಿದ ಗೆರೆಗಳನ್ನು ಬಿಟ್ಟರೆ, ಅವಳನ್ನು ವಯಸ್ಸಾದವಳೆಂದು ಯಾರೂ ಕರೆಯುವಂತಿರಲಿಲ್ಲ. ಅಷ್ಟೊಂದು ಲವಲವಿಕೆಯಿಂದ ಕಾರ್ಯತತ್ಪರೆಯಾಗಿದ್ದಳು. Breakfast, Lunch, Supper ಇವು ಮೂರರ ಕ್ರಮವನ್ನು ಸಣ್ಣ ಹುಡುಗರಿಗೆ ತಿಳಿಹೇಳುವಂತೆ ನನಗೆ ವಿವರಿಸಿದಳು. ನಾನು ಸಸ್ಯಾಹಾರಿಯಾದ್ದರಿಂದ, ಬಗೆಬಗೆಯ ತರಕಾರಿಗಳನ್ನು ತರಿಸುತ್ತಿದ್ದಳು. ನನಗೆ ಸೇರಿತೆ, ಇಲ್ಲವೆ ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದಳು. ಒಂದು ದಿನ, ಬೆಳಗಿನ ಫಲಾಹಾರದಲ್ಲಿದ್ದಾಗ , "ಡಾ! ಹವಾನೂರ್, ನಿನ್ನೆ ನಿಮ್ಮ ಕೋಣೆಯಲ್ಲಿ ಮಧ್ಯರಾತ್ರಿ ದೀಪವನ್ನು ಕಂಡೆ. ಆರಿಸಲು ಮರೆತಿರೆಂದು ಕಾಣುತ್ತದೆ" ಎಂದು ಮೆಲ್ಲಗೆ ನುಡಿದಳು.

"ಇಲ್ಲ. ನಾನು ಓದುತ್ತ ಇದ್ದೆ."

"ಅಷ್ಟು ರಾತ್ರಿಗೆ?"

"ಹೌದು. ಮನೆಯಲ್ಲಿ ಸಹ ನನ್ನದು ಇದೇ ಕ್ರಮ" ಎಂದೆ. ಆಕೆ ಆಗೇನೂ ಹೇಳಲಿಲ್ಲ. ಅಂದು ರಾತ್ರಿಯ ಊಟ ಮುಗಿದ ಮೇಲೆ ಆಕೆ ನನ್ನ ಕೋಣೆಯ ಬದಿಯಲ್ಲಿಯೆ ಇದ್ದ ಆಫೀಸ್ ರೂಮಿಗೆ ಕರೆದೊಯ್ದು "ಇಕ್ಕೊಳ್ಳಿ, ಇಲ್ಲಿ ಹಾಲಿದೆ. ಇದು ಇಲೆಕ್ಟ್ರಿಕ್ ಒಲೆ, ಸಕ್ಕರೆ, ಚಹಾ ಪುಡಿ ಎಲ್ಲ ಈ ಕಪಾಟಿನಲ್ಲಿ ಇರಿಸಿದ್ದೇನೆ. ಚಹಾಮಾಡಿಕೊಳ್ಳಿ. ಚಳಿಯಲ್ಲಿ ಹಾಗೆಯೇ ಕೂಡಬೇಡಿರಿ. ನೀವು ನಮ್ಮ ಆದರಣೀಯ ಅತಿಥಿ. ನಿಮಗೇನಾದರೂ ಜಡ್ಡಾದರೆ ನನಗೆ ಕೆಟ್ಟ ಹೆಸರು ಬಂದೀತು!" ಎಂದಳು.

ಆ ವರ್ಷದ ಆಗಸ್ಟ್ ೧೫ ರಂದು ನಾನು ಬಾಸೆಲ್‌ನಲ್ಲಿಯೇ ಇದ್ದೆ. ಆ ಕಾಲಕ್ಕೆ ಮಿಶನ್ನಿನಲ್ಲಿ ಇದ್ದ ಇನ್ನೊಬ್ಬ ಭಾರತೀಯರೆಂದರೆ ವಸಂತ ಜತ್ತಣ್ಣ. ಡಾಕ್ಟರೇಟ್ ಮಟ್ಟದಲ್ಲಿ ತತ್ವಶಾಸ್ತ್ರವನ್ನು ಅಭ್ಯಸಿಸುತ್ತಿದ್ದ ಅವರು ಕನ್ನಡಿಗರೇ (ಮಂಗಳೂರಿನವರು) ಎಂದು ಬೇರೆ ಹೇಳಬೇಕಾಗಿಲ್ಲ. ಸ್ವಾತಂತ್ರ್ಯ ದಿನದ ಕುರಿತು, ಅವರು ಜರ್ಮನ್ ಭಾಷೆಯಲ್ಲಿ ಎರಡು ಮಾತು ಹೇಳಬೇಕು; ನಾನು ರಾಷ್ಟ್ರಗೀತೆಯನ್ನು ಅನ್ನಬೇಕು ಎಂದು ನಮ್ಮಲ್ಲಿಯೇ ಗೊತ್ತುಮಾಡಿಕೊಂಡಿದ್ದೆವು. ಲಂಚ್‌ಗೆ ಕೂಡ್ರುವ ಮುನ್ನ ಈ ಕಾರ್ಯಕ್ರಮವನ್ನು ನೆರವೇರಿಸಿದೆವು. ಎಲ್ಲರಿಗೂ ಸಂತೋಷ. ಮಿಶ್ ಡ್ಯೊಶ್ ಅತ್ಯಂತ ಸಂಭ್ರಮದಿಂದ

ಆಲಿಸಿದಳು. ಮುಗಿದೊಡನೆ, "ಮೊದಲೇ ಯಾಕೆ ಹೇಳಲಿಲ್ಲ? ವಿಶೇಷ ಅಡಿಗೆ ಮಾಡಿಸುತ್ತಿದ್ದೆ" ಎಂದು ಆಕ್ಷೇಪಿಸಿದಳು. ಅದಾಗಿ ಮೂರನೆಯ ದಿನವೆಂದು ಕಾಣುತ್ತದೆ. ಗಮಗಮಿಸುವ 'ಪುಲಾವ್ 'Lunch ವೇಳೆಗೆ ಸಿದ್ಧವಾಗಿತ್ತು! ಅನ್ನವನ್ನು ಸಾಮಾನ್ಯವಾಗಿ ಮಾಡುವುದಿಲ್ಲವಾದ್ದರಿಂದ, ಇತರ ಭೋಜಕರಿಗೆಲ್ಲ ಆಶ್ಚರ್ಯವಾಯಿತು. "ಏನು ವಿಶೇಷ?" ಎಂದು ಅವರು ಕೇಳಿದಾಗ ಆಕೆ "ಇವತ್ತು ನಮ್ಮ ಸನ್ಮಾನ್ಯ ಭಾರತೀಯ ಅತಿಥಿ ಊರಿಗೆ ಹೊರಡುತ್ತಾರೆ" ಎಂದು ಉತ್ತರಿಸಿದಳು.

ಅಂದು ರಾತ್ರಿ ನನಗೆ ಊಟದ ವಿಶೇಷ ಆಮಂತ್ರಣವಿದ್ದಿತು, ಶ್ರೀಮತಿ ರಾಸೆಲ್ ಅವರಿಂದ. ಡಾ॥ ರಾಸೆಲ್ ಬಾಸೆಲ್ ಮಿಶನ್ನಿನ ಪ್ರಧಾನ ಕೇಂದ್ರದ ವರಿಷ್ಠರು. ಅನೇಕ ಕರ್ನಾಟಕಸ್ಥರಿಗೆ ಅವರ ಪರಿಚಯ ಇದ್ದೇ ಇದೆ. ಮಂಗಳೂರು ಮಿಶನ್ನಿನ ಮುಖ್ಯಸ್ಥರಾಗಿ ಬಂದು, ಇಲ್ಲಿ ಕೆಲವು ವರ್ಷ ವಾಸವಾಗಿದ್ದರಂತೆ. ಆಮೇಲೆಯೂ ಒಮ್ಮೆ ಕರ್ನಾಟಕಕ್ಕೆ ಬಂದು ಹೋಗಿದ್ದಾರೆ. ಕನ್ನಡವನ್ನು ಓದಬಲ್ಲರಾದ್ದರಿಂದ, ಬಾಸೆಲ್‌ಗೆ ಹೋದ ಮೇಲೆಯೂ ಒಂದೆರಡು ಕನ್ನಡ ಪತ್ರಿಕೆಗಳನ್ನು ತರಿಸುತ್ತಿದ್ದರಂತೆ. ಇರಲಿ, ಅವರ ಮನೆಗೆ ಹೋದೊಡನೆ,"ನಾನು ಸಸ್ಯಾಹಾರಿ" ಎಂಬುದನ್ನು ಶ್ರೀಮತಿ ರಾಸೆಲ್ ಅವರಿಗೆ ಹೇಳಹೋದೆ. "ಅದು ನನಗೆ ಮುಂಚೆಯೇ ಗೊತ್ತು. ನಿಮ್ಮಿಬ್ಬರ ಮಾತು ಸಾಗಲಿ, ನಾನು ಅಡಿಗೆಯ ಮನೆಯಲ್ಲಿದ್ದೇನೆ" ಎಂದು ಒಳಗೆ ಹೋದರು. ರಾಸೆಲ್ ಅವರ ಸೂಕ್ಷ್ಮ ಬುದ್ಧಿಮತ್ತೆ. ಅಪಾರ ಲೋಕಾನುಭವ ಮತ್ತು ಔದಾರ್ಯದ ನಡವಳಿಕೆ ಇವುಗಳನ್ನು ಮನವಾರೆ ಮೆಚ್ಚಿಕೊಂಡಿದ್ದ ನನಗೆ, ಅವರೊಡನೆಯ ಮಾತುಕತೆಯಲ್ಲಿ ವೇಳೆ ಸರಿದದ್ದೇ ತಿಳಿಯಲಿಲ್ಲ. ಸರಿ, ಊಟಕ್ಕೆ ಕುಳಿತೆವು. ಮೇಜಿನ ಮೇಲೆ ವಿಶೇಷವಾಗಿ ಪಾತ್ರೆಗಳು ಕಾಣಲಿಲ್ಲ. ಅದಾವ ಅಡುಗೆ ಮಾಡಿರಬಹುದು ಎಂದು ಯೋಚಿಸುತ್ತಿದ್ದಾಗಲೇ ಬಿಸಿಬಿಸಿ ಚಪಾತಿಗಳು ಹೊರಬಂದವು. ಜೊತೆಗೆ ಬೇಳೆಯ ಕಾಳಿನ ಪಲ್ಯ ಮತ್ತು ಸ್ಯಾಲಡ್. ತಾವಿಬ್ಬರೂ ಸಹ ಅದೇ ಊಟವನ್ನು ಮಾಡಿದರು.

ಅಲ್ಲಿಂದ ನಾನು ಹಾಲೆಂಡಿಗೆ ಬಂದೆ. ಎರಡೇ ದಿನ ಇದ್ದೆನಾದ್ದರಿಂದ ಹೇಳುವಂತಹ ಮಹಿಳೆಯರಾರೂ ಭೆಟ್ಟಿಯಾಗಿರಲಿಲ್ಲ. ಆ್ಯಮ್‌ಸ್ಟರ್ಡ್ಯಾಮ್ ಸ್ಟೇಶನ್ನಿನಲ್ಲಿ ರೈಲಿಗಾಗಿ ಕಾಯುತ್ತಿದ್ದೆ. ಪ್ಲ್ಯಾಟ್‌ಫಾರ್ಮಿನ ಮೇಲೆ ಶೌಚಕ್ಕೆ ಹೋಗಬೇಕೆಂದು, ಆ ಜಾಗ ಹುಡುಕಿಕೊಂಡು ಹೋದೆ. ಪುರುಷರ ಹಾಗೂ ಸ್ತ್ರೀಯರ toilets ಜೊತೆ ಜೊತೆಗೇ ಇದ್ದುವು. ಒಳ ಹೊಕ್ಕೆ. ಆದರೆ ಬಾಗಿಲಲ್ಲಿಯೇ ಒಬ್ಬಳು ನಿಂತಿದ್ದಳು."ಅನರ್ಥ! ತಪ್ಪಿ ಸ್ತ್ರೀಯರ ಸ್ಥಳಕ್ಕೆ ಬಂದೆನಲ್ಲ" ಎಂದುಕೊಂಡು ಹೊರಬಂದೆ. ಇಲ್ಲ, ನಾನು ಪುರುಷರ ಸ್ಥಳಕ್ಕೇ ಹೋಗಿದ್ದೇನೆಂದು ಖಾತ್ರಿ ಮಾಡಿಕೊಂಡೆ. ಆ ಹೆಣ್ಣು ಮರೆಯಾಗಲಿ ಎಂದು ೩ ನಿಮಿಷ ಕಾಯ್ದೆ. ಮತ್ತೆ ಒಳ ಹೊಕ್ಕೆ."ಅರೇ ಅವಳು ಇನ್ನೂ ಅಲ್ಲಿಯೇ ಇದ್ದಾಳೆ!" ನನಗೆ ಏನು ಮಾಡಬೇಕೆಂದು ತೋಚಲಿಲ್ಲ. ಶೌಚ, ಮೂತ್ರಿ ಇವು ಪ್ರತ್ಯೇಕವಾಗಿ ಕಾಣಲಿಲ್ಲ. ಆಗ

ಆಕೆಯೇ "What do you want?" ಎಂದು ಗಡಸು ದನಿಯಲ್ಲಿ ಕೇಳಿದಳು. ಅವಳಿಗೆ ಹೇಗೆ ಹೇಳೋದು? ನಾನು ಉಗುಳು ನುಂಗುತ್ತ "ಇಲ್ಲಿ ನೋಡಿಕೊಳ್ಳುವವ ಎಲ್ಲಿದ್ದಾನೆ" ಎಂದು ತೊದಲುತ್ತ ಕೇಳಿದೆ. "ಯಾಕೆ , ಇಲ್ಲಿ ನಾನಿಲ್ಲವೆ? ಹಣ ಕೊಡು" ಎಂದಳು. ಅಂದಾಜಿನಿಂದ 25 ಪೆನ್ಸ್ ಅವಳ ಕೈಗಿತ್ತೆ. "That's it" ಎಂದು ಹೇಳಿ, ಒಂದು ಶೌಚದ ಬಾಗಿಲನ್ನು ನನಗಾಗಿ ತೆರೆದು ನಿಂತಳು!

ಯುರೋಪದ ಪ್ರವಾಸ ಮುಗಿಸಿಕೊಂಡು ನಾನು ಮರಳಿ ಲಂಡನ್ನಿಗೆ ಬಂದೆ. ಈ ಬಾರಿ ಅಲ್ಲಿಯ ಭಾರತೀಯ ವಿದ್ಯಾಭವನದಲ್ಲಿ ತಂಗಿದ್ದೆ. ಅದರ ನೇತಾರರಾದ ಮತ್ತೂರು ಕೃಷ್ಣಮೂರ್ತಿಯವರು ಕನ್ನಡಿಗರು. ಭಾರತೀಯ ಸಂಸ್ಕೃತಿಗೆ ಸಂಬಂಧಪಟ್ಟ ಹಲವಾರು ಬಗೆಯ ಕಾರ್ಯಗಳಲ್ಲಿ ಅವರು ಸದಾ ನಿರತರು. ಒಂದು ದಿನ 'ವ್ಯಾಸ ಪೂರ್ಣಿಮೆ'ಯ ಕಾರ್ಯಕ್ರಮ ಗೊತ್ತುಪಡಿಸಿದ್ದರು. ಭಾರತದಲ್ಲಿಯೇ 'ವ್ಯಾಸ ಪೂರ್ಣಿಮೆ'ಯನ್ನು ಸಾರ್ವಜನಿಕವಾಗಿ ಆಚರಿಸುವ ಕ್ರಮ ಇದೆಯೆಲ್ಲಿ? ಆದರೂ ವ್ಯಾಸರ ನಿಮಿತ್ತ ಮಾಡಿಕೊಂಡು ಗುರುವಿನ ಮಹತ್ವವನ್ನು ಕುರಿತು ಭಾಷಣ ಮಾಡಿದರು. ಅವರ ಚಿಕ್ಕ ಚಿಕ್ಕದಾದ ವಾಕ್ಸರಣಿ, ಮಧ್ಯೆ ಸಂಸ್ಕೃತ ಶ್ಲೋಕಗಳ ಸ್ಪಷ್ಟ ಉಚ್ಚಾರಣೆ; ಅಲ್ಲಿಂದ ಅವುಗಳ ಅರ್ಥ ವಿವರಣೆ-ಅಲ್ಲಿ ನೆರೆದಿದ್ದ ಶ್ರೋತೃವೃಂದ ಬಾಯ್ದೆರೆದು ಆಲಿಸುತ್ತಿದ್ದಿತು.

ಕಾರ್ಯಕ್ರಮದ ಆರಂಭಕ್ಕೆ ಕೃಷ್ಣಮೂರ್ತಿಯವರು "ಶಾಂತೀ, ಬನ್ನಿ, ಪ್ರಾರ್ಥನೆಯ ಪದ್ಯವನ್ನು ಹೇಳೋಣ"ಎಂದು ಕರೆದರು. ಅವಳೋ ಸೀರೆಯುಟ್ಟ ಬಿಳಿಯ ಮಹಿಳೆ. ಇಬ್ಬರೂ ಸೇರಿ "ಸಹನಾವವತು . . . " ಎಂಬ ಉಪನಿಷದ್ವಾಕ್ಯವನ್ನು ಪಠಿಸಿದರು. ಸಭೆ ಮುಗಿದ ಮೇಲೆ ಕೃಷ್ಣಮೂರ್ತಿಯವರು ಶಾಂತಿ-ಉರ್ಫ್‌ಮಿಸ್ ಜೇನಿನ್ ಮಿಲ್ಲರ್‌ರ ಪರಿಚಯ ಮಾಡಿಕೊಟ್ಟರು. ಶಾಂತಿ ಯಾನೆ ಮಿಲ್ಲರ್ ದಿನ ಬಿಟ್ಟು ದಿನ ತಪ್ಪದೇ ಭಾರತೀಯ ವಿದ್ಯಾಭವನಕ್ಕೆ ಹೋಗುತ್ತಾರೆ. ಅಲ್ಲಿ ನಡೆಯುವ ಯೋಗದ ಕ್ಲಾಸಿಗೆ ಸೇರಿದ್ದಾರೆ. ಆಕೆ ಮೂಲತಃ ಫ್ರೆಂಚ್ ದೇಶದವರು. ಇಂಗ್ಲಂಡಿನ ಬ್ರಿಟಿಶ್ ಮ್ಯೂಸಿಯಂ ಲೈಬ್ರರಿಯಲ್ಲಿ ಮಾಡುತ್ತಿದ್ದ ಕೆಲಸಕ್ಕೂ ವೈಯಕ್ತಿಕ ವ್ಯಾಸಂಗಕ್ಕೂ ಏನೂ ಸಂಬಂಧವಿಲ್ಲ. ಎಂದರೆ ಆಕೆಗೆ ಭಾರತೀಯ ತತ್ವಜ್ಞಾನದಲ್ಲಿ , ಆರ್ಷೇಯ ಗ್ರಂಥಗಳಲ್ಲಿ ಅಪಾರವಾದ ಆಸಕ್ತಿ, ಅವುಗಳ ಆಳವಾದ ಅಭ್ಯಾಸದ ಫಲವಾಗಿ ವೇದದ ಮೇಲೆ ಇಂಗ್ಲೀಷಿನಲ್ಲಿ ಗ್ರಂಥವನ್ನು ಬರೆದಿದ್ದಾರೆ. "ನನ್ನ ಆರಾಧ್ಯ ಭಾರತವನ್ನು ಸಂದರ್ಶಿಸಬೇಕೆಂದಿದ್ದೇನೆ. ನವೆಂಬರದಲ್ಲಿ ಬರುವೆ" ಎಂದು ನನ್ನೆದುರು ಆ ದಿನ ಹೇಳಿದ್ದರು.

ಕೆಲವು ದಿನಗಳ ಆನಂತರ ಆಕೆಯ ಭಾಷಣವಿದ್ದಿತು-ಭವನದಲ್ಲಿಯೇ. ವಿಷಯ-ಧ್ಯಾನದ ಮಹತ್ವ. ನಾನು ಹಾಜರಿದ್ದೆ. ಕೃಷ್ಣಮೂರ್ತಿಯವರು ತಮ್ಮ ಪ್ರಸ್ತಾವಿಕ ಭಾಷಣದಲ್ಲಿ ಶಾಂತಿಯ ಪರಿಚಯ ಮಾಡಿದರು. ಮುಂದುವರಿದು, "ಇವತ್ತಿನ ಸಭೆಯ

ಅಧ್ಯಕ್ಷತೆಯನ್ನು ವಹಿಸುವುದಕ್ಕೆ ನಮಗೆ ಮೇಧಾವಿಯೂ, ತತ್ವಶಾಸ್ತ್ರ ಪಾರಂಗತರೂ ದೊರೆತಿದ್ದಾರೆ. ಹತ್ತಾರು ಗ್ರಂಥಗಳನ್ನು ಬರೆದಿದ್ದಾರೆ. (ಯಾವ ಭಾಷೆಯಲ್ಲಿ ಎಂಬುದನ್ನು ಹೇಳಲಿಲ್ಲ!) ಭಾರತದ ಕೆಲವೇ ಗಣ್ಯ ಗ್ರಂಥಪಾಲಕರಲ್ಲಿ, ಒಬ್ಬರು. . . ಕರ್ನಾಟಕದವರು. ಬನ್ನಿ. ಡಾ। ಹಾವನೂರ, ವೇದಿಕೆಯ ಮೇಲೆ ಬನ್ನಿ" ಎಂದು ಕರೆದರು. ಅಧ್ಯಕ್ಷತೆ ವಹಿಸುವ ಬಗ್ಗೆ ಮೊದಲು ನನಗೆ ತಿಳಿಸಬೇಕೊ ಬೇಡವೋ? ಸಾಲದ್ದಕ್ಕೆ ನನ್ನನ್ನು ಕುರಿತು ಅಲ್ಲದ ಹಾಗೂ ಸಲ್ಲದ ವರ್ಣನೆ ಬೇರೆ."ಅತ್ಯುಕ್ತಿ ಅಲಂಕಾರದಲ್ಲಿ ನೀವು ಅನನ್ವಿತರು" ಎಂದು ಖಾಸಗಿಯಾಗಿ ಅವರನ್ನು ಬೈದೆ.

ಮಿಸ್ ಮಿಲರ್ ತಮ್ಮ ಅಪೇಕ್ಷೆಯಂತೆ ಭಾರತಕ್ಕೆ ಬಂದಿದ್ದರು. ಎರಡು ತಿಂಗಳ ಕಾಲ ಸಂಚರಿಸಿದರು. ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ಬಂದರು. "ಶೃಂಗೇರಿಯ ಯಾತ್ರೆಯನ್ನು ನನ್ನ ಜನ್ಮದಲ್ಲಿಯೇ ಮರೆಯಲಾರೆ" ಎನ್ನುತ್ತಿದ್ದರು. ಕೆಲವು ದೇವಸ್ಥಾನಗಳಲ್ಲಿ ಅವರಿಗೆ ಪ್ರವೇಶ ಸಿಕ್ಕದೆ ಹೋಯಿತಂತೆ. ಆಗ ಆ ಭಾರತ ಪ್ರೇಮಿಗಾದ ನೋವು ಅಷ್ಟಿಷ್ಟಲ್ಲ. ಮುಂಬಯಿಗೆ ಬಂದು, ನಮ್ಮ ಮನೆಯಲ್ಲಿಯೆ ಇಳಿದುಕೊಂಡಿದ್ದರಾದ್ದರಿಂದ ಅವರ ಪರಿಚಯ ಇನ್ನಷ್ಟು ನಿಕಟವಾಗಿ ಆಯಿತು - ನಾವೆಲ್ಲ ಅವರಿಗೆ 'ಶಾಂತಕ್ಕ' ಎಂದು ಕರೆಯುವಷ್ಟು. ನಮ್ಮ ಪ್ರಾಚೀನ ಪರಂಪರೆಯ ಬಗ್ಗೆ ಅವರಿಗಿದ್ದ ಆದರಾಭಿಮಾನವನ್ನೂ ನಾನು ನಮ್ಮವರಲ್ಲಿಯೇ ಕಂಡುದುದಿಲ್ಲ. ಆಕೆ ಇಂಗ್ಲಂಡಿಗೆ ಮರಳಿದ ಮೇಲೆ ನನಗೆ ಬರೆದ ಪತ್ರದಲ್ಲಿ ಹೀಗೆ ಬರೆದಿದ್ದರು:

I feel most bewildered at being back. It all seems so unreal, My six weeks in India have been just like another incarnation, full of varied, sometimes incredible, sometimes holy experiences. And now familiar surroundings here, appear strange.

ಈ ಒಕ್ಕಣಿಕೆಯನ್ನು ಗಮನಿಸಿದಾಗ ಶಾಂತಿ ಮಿಲ್ಲರ್ ಹಿಂದಿನ ಜನ್ಮದಲ್ಲಿ ಭಾರತದಲ್ಲಿಯೇ ಜನಿಸಿದವಳಾಗಿರಬೇಕು-ಎಂದುಕೊಂಡೆ.

ವಿದೇಶದಲ್ಲಿದ್ದಾಗ ನಾನು ಕಂಡಿದ್ದ ಆದರೆ ಹೆಸರು ಗೊತ್ತಿರದ ಓರ್ವಳ ಬಗ್ಗೆ ಹೇಳಲೇಬೇಕು. ಆಕೆ ೧೭-೧೮ರ ಕಿಶೋರಿ. ಅಂಗಡಿಯೊಂದರಲ್ಲಿ ಸೇಲ್ಸ್ ಗರ್ಲ್ ಆಗಿ ಕೆಲಸಕ್ಕೆ ಸೇರಿದ್ದಳು. ವಾರಗೂಲಿ! ಬಂದದ್ದರಲ್ಲಿ ಅರ್ಧ ಮನೆಯಲ್ಲಿ ತಂದೆಗೆ ಕೊಡುತ್ತಿದ್ದಳು. ಉಳಿದ ಅರ್ಧದಲ್ಲಿ, ಆಫೀಸ್‌ನಲ್ಲಿಯ ಮಧ್ಯಾಹ್ನದ ಲಂಚ್, ತನ್ನ ಬಟ್ಟೆ ಬರೆ, ಇತ್ಯಾದಿ ಪೂರೈಸಿಕೊಳ್ಳುತ್ತಿದ್ದಳು. ಬೆಳಿಗ್ಗೆ ಲಕ್ಕೆ ಹೋದರೆ ರಾತ್ರಿ ಲಕ್ಕೇನೆ ಬರೋದು. ಕುಟುಂಬದೊಡನೆ ಊಟ ಮುಗಿಸಿ ಒಂದಿಷ್ಟು ಸಮಯ ಟಿ.ವಿ. ನೋಡೋದು-ಹೀಗೇ ಕೆಲವು ಕಾಲ ಕಳೆದ ಮೇಲೆ ಅವಳ ತಂದೆ, ಮುಂದಿನ ವಾರದಿಂದ ಏಳು ತಿಂಗಳುಗಳ

ವರೆಗೆ ಒಂದು ಪೌಂಡು ಜಾಸ್ತಿ ಕೊಡುತ್ತ ಹೋಗಬೇಕು -ಎಂದು ಹೇಳಿದನಂತೆ ಕಾರಣ? ಮನೆಯಲ್ಲಿಯ ಸಾದಾ ಟಿ.ವಿ. ಬದಲಿಗೆ ಕಲರ್ ಟಿ. ವಿ.ಯನ್ನು ತಂದಿದ್ದನಂತೆ. ಅದರ ಹೆಚ್ಚಿನ ವೆಚ್ಚವನ್ನು ಇವಳು ಭರಿಸಬೇಕಂತೆ. ನನಗಿದು ಅನ್ಯಾಯವಾಗಿ ಕಂಡಿತು. ಅವಳ ಗಳಿಕೆ ಮೊದಲೇ ಕಡಿಮೆ. ಅದರಲ್ಲಿಯೂ ಹೀಗೆ ಲೆಕ್ಕಾಚಾರ ಹಾಕಿ ವಸೂಲು ಮಾಡುವುದು ನನಗೆ ವಿಚಿತ್ರವಾಗಿ ಕಂಡಿತು. ಅದನ್ನು ಅಲ್ಲಿಯ ನನ್ನೊಬ್ಬ ಬ್ರಿಟಿಷ್ ಮಿತ್ರನಿಗೆ ಹೇಳಿದಾಗ "ಅಲ್ಲಾರೀ, ಆ ಹುಡುಗೀನೆ ಈ ವಿಷಯದಲ್ಲಿ ತಪ್ಪು ತಿಳಿದಿಲ್ಲ. ನೀವೇಕೆ ಮನಸ್ಸಿಗೆ ಹಚ್ಚಿಕೊಂಡಿರಿ-ಇಲ್ಲಿಯ ನಡವಳಿಕೆಯೇ ಹಾಗೆ" ಎಂದು ವಿವರಣೆಯಿತ್ತರು.

ಅದಾಗಿ, ಮತ್ತೆ ಹಲವು ಬಾರಿಯ ನನ್ನ ವಿದೇಶ ಪ್ರವಾಸಗಳಲ್ಲಿ ನೆನಪಿನಲ್ಲಿಡುವಷ್ಟು ಸ್ತ್ರೀಯರ ಪರಿಚಯ ಆಗಿದೆಯಾದರೂ ಈಚಿನ ಪರಿಚಯದ ಇಬ್ಬರನ್ನು ಕುರಿತು ಹೇಳಲೇಬೇಕು. ಒಬ್ಬಳು ಶ್ರೀಮತಿ ಡೆಸ್ಮಂಡ್. ಆಕೆಯ ಪತಿ ರೇ ಡೆಸ್ಮಂಡ್ ನನ್ನ ಆಪ್ತ ಮಿತ್ರರು. ಒಮ್ಮೆ ಲೈಬ್ರರಿಯಲ್ಲಿ ಓದುತ್ತಿದ್ದಾಗ ನನ್ನ ಕನ್ನಡಕ ಮುರಿಯಿತು. ಹೊಸದನ್ನು ಮಾಡಿಸಲು ಅಲ್ಲಿಯ ಒಂದು ಅಂಗಡಿಗೆ ಹೋದರೆ, ಒಂದು ವಾರದ ಅವಧಿ ಕೇಳಿದರು. ಒಂದು ವಾರ! ಡೆಸ್ಮಂಡ್ ಹೇಳಿದರು. 'ನನ್ನ ಮನೆಯಲ್ಲಿ ಒಂದು ಹೆಚ್ಚಿನ ಕನ್ನಡಕ ಇದೆ. ಸೋಮವಾರ ಬರುವಾಗ ತರುತ್ತೇನೆ.' ಆ ದಿನ ಶುಕ್ರವಾರ. ಶನಿವಾರ- ರವಿವಾರ ಅವರಿಗೆ ರಜೆ. ಆ ಎರಡು ದಿನಗಳನ್ನಾದರೂ ನಾನು ಓದು ಇಲ್ಲದೆ ಕಳೆಯುವುದು ಹೇಗೆ? ಡೆಸ್ಮಂಡರಿಗೆ ಹೇಳಿದೆ: "If you don't mind, ಇಂದು ಸಂಜೆಗೆ ನಾನೇ ನಿಮ್ಮ ಮನೆಗೆ ಬರಲೆ? ಅನಾಯಾಸ ನಿಮ್ಮ ಶ್ರೀಮತಿಯ ಭೆಟ್ಟಿಯಾಗುವುದು. ಇಂದೇ ಹಿಂದಿರುಗುವೆ" ಎಂದೆ. ತುಸು ಯೋಚಿಸಿ "ಆಯ್ತು ಹಾವನೂರ್, ಆದರೆ ಅವಳು ಆಸ್ಪತ್ರೆಯಲ್ಲಿದ್ದಾಳೆ. ನಾನು ಹೋಗಿ ಮನೆಗೆ ಕರೆತರಬೇಕು." ಎಂದರು.

ಆಫೀಸ್ ಬಿಟ್ಟಮೇಲೆ ಲೋಕಲ್ ಗಾಡಿಯಲ್ಲಿ ಕುಳಿತು ಹೊರಟೆವು. ಅವರ ಮನೆ ಲಂಡನ್ನಿನ ಹೊರನಗರವಾದ ಕೀವ್ ಎಂಬಲ್ಲಿದೆ. ಪ್ರಶಾಂತ ವಾತಾವರಣ, ಡೆಸ್ಮಂಡ್ ಸ್ಟೇಶನ್ನಿನಲ್ಲಿ ಇರಿಸಿದ್ದ ತಮ್ಮ ಕಾರನ್ನು ಹೊರತೆಗೆದರು. ಮನೆಗೆ ಹೊರಟೆವು. ದಾರಿಯಲ್ಲಿ ಆ ಎರಡು ದಿನಕ್ಕೆ ಬೇಕಾಗುವ ಬ್ರೆಡ್, ಹಣ್ಣು, ತರಕಾರಿ, ಮುಂತಾದವುಗಳನ್ನು ಖರೀದಿಸಿದರು. ಅವರು ದವಾಖಾನೆಗೆ ಹೋದರು. ನಾನು ಮನೆಯಲ್ಲೇ ಉಳಿದೆ. ಮೇಜಿನ ಮೇಲೆ ಆಕೆಯ ಒಂದು ಭಾವಚಿತ್ರ ಇತ್ತು. ಹೊಳೆಯುವ ಕಣ್ಣಿನ, ದುಂಡು ಮುಖದ ಸುಂದರವಾದ ಆ ಫೋಟೋ. ಆದರೆ ಆಸ್ಪತ್ರೆಯಿಂದ ಅವಳನ್ನು ಕರೆತಂದು ಟ್ರಾಲಿ ಕುರ್ಚಿಯಲ್ಲಿ ಕೂಡಿಸಿ ಒಳ ಬಂದಾಗ ನಾನು ಹೌಹಾರಿದೆ. ಅತ್ಯಂತ ನಿಸ್ತೇಜವಾದ, ಬಿಳಿಚಿಕೊಂಡ ಮುಖ. ದೇಹವೆಲ್ಲ ಸೊರಗಿ ಸೊರಗಿ ಕ್ಷೀಣವಾಗಿ ಬಿಟ್ಟಿತ್ತು. ಡೆಸ್ಮಂಡ್ ನನ್ನ ಗುರುತು ಮಾಡಿಕೊಟ್ಟು, ನಾನು ಬಂದ ಉದ್ದೇಶ ಹೇಳಿದರು. ಆಕೆ ತಳ್ಳುಗಾಡಿಯಲ್ಲಿ ಕುಳಿತು ಮನೆಯಲ್ಲೆಲ್ಲ ಸಂಭ್ರಮದಿಂದ ಸುತ್ತಾಡತೊಡಗಿದರು.

ಅವರದು ಸ್ವಂತ ಮನೆ. ಪಡಸಾಲೆಯ ಗೋಡೆಯೆಲ್ಲ ಗಾಜಿನದು. ಅವಳಿಗೆ ಹೊರಗಿನ ಕೈತೋಟ ಕಾಣಿಸಲೆಂದು ಮುದ್ದಾಂ ಮಾಡಿಸಿದ್ದು. ಆಕೆ ಅಲ್ಲಿಯ ಒಂದೊಂದು ಗಿಡಗಳ, ಸಸಿಗಳ ಬಗ್ಗೆ ವಿಚಾರಿಸುತ್ತ ಇದ್ದಳು. ದೇಹವೆಲ್ಲ ಕೃಶವಾಗಿದ್ದರೂ ಜೀವನೋತ್ಸಾಹವೇನೂ ಕಡಿಮೆಯಾಗಿಲ್ಲವೆಂಬಂತೆ ಆಕೆ ತೋರಿಬಂದಳು. ತುಸು ಹೊತ್ತಿನ ಮೇಲೆ ಹೊರಟು ಬಂದೆ.

ಶ್ರೀಮತಿ ಡೆಸ್ಮಂಡರದು ಬ್ರೆಸ್ಟ್ ಕ್ಯಾನ್ಸರ್ ರೋಗ. ಹಿಂದಿನ ಎರಡು ವರ್ಷಗಳಿಂದ ಈ ಕ್ಯಾನ್ಸರ್ ಅವಳಿಗೆ ಅಂಟಿಕೊಂಡಿತ್ತು. ಆಪರೇಶನ್ ಮಾಡಿಸಿದ್ದರು. ಪ್ರಯೋಜನವಾಗಲಿಲ್ಲ. ಮನೆಯಲ್ಲಿ ಮಾಡುವವರಾರು? ಆದ್ದರಿಂದ ಸ್ಥಳೀಯ ನರ್ಸಿಂಗ್ ಹೋಮಿನಲ್ಲಿ ಅವಳ ವಾಸ. ಡೆಸ್ಮಂಡ್ ಸೋಮವಾರ ಬೆಳಿಗ್ಗೆ ಆಫೀಸಿಗೆ ಹೊರಡುವ ಮುನ್ನ ಅವಳನ್ನು ನರ್ಸಿಂಗ್‌ಹೋಮ್‌ನಲ್ಲಿ ಬಿಡಬೇಕು. ಶುಕ್ರವಾರ ಸಂಜೆ ಅವಳನ್ನು ಮನೆಗೆ ಕರೆತರಬೇಕು. ಶನಿವಾರ - ರವಿವಾರ ಆಕೆಗೆ ತನ್ನ ಕುಟುಂಬದವರ ಆತ್ಮೀಯ ಒಡನಾಟ. ಅವರಿಗೆ ಒಬ್ಬ ಮಗಳೂ ಇದ್ದು ಆಕೆ ಒಂದು ವಾರ ಬಿಟ್ಟು ಮರುವಾರ ಬಂದು ತಾಯಿಗೆ ಜೊತೆಗೂಡಬೇಕು. ಡಾಕ್ಟರರು ಅವಳ ಸಾವು ನಿಶ್ಚಿತವೆಂದೂ, ಕೆಲವೇ ತಿಂಗಳ ಬದುಕು- ಎಂದೂ ಹೇಳಿಬಿಟ್ಟಿದ್ದರು. ಹೆಂಡತಿ ನಿಷ್ಪ್ರಯೋಜಕಳಾದರೆ ಗಂಡನಾದವನು ಎಷ್ಟೊಂದು ಅಲಕ್ಷ್ಯಮಾಡುತ್ತಾನೆಂಬುದನ್ನು ಬಲ್ಲೆವು. ಇಲ್ಲಿ- ಅದೂ ಪಾಶ್ಚಿಮಾತ್ಯರ ವ್ಯಾವಹಾರಿಕ ಪರಿಸರದಲ್ಲಿ-ಅಂಥ ಅನ್ಯೋನ್ಯತೆಯನ್ನು ನಾನು ಬೇರೆಡೆ ಕಂಡಿರಲೇ ಇಲ್ಲ.

ಕೆಲವು ತಿಂಗಳಾದ ಮೇಲೆ ಡೆಸ್ಮಂಡರ ಪತ್ರ ಬಂದಿತ್ತು. "ತಮ್ಮ ಪತ್ನಿ ತೀರಿಕೊಂಡದ್ದಾಗಿಯೂ, ಪ್ರಾಣ ಹೋದ ಕೆಲವು ದಿನ ಮೊದಲು ಮನೆಯಲ್ಲೇ ಉಳಿದುಕೊಂಡದ್ದಾಗಿಯೂ, ನಸುಕಿನಲ್ಲಿ, ಅತ್ಯಂತ ಶಾಂತ ರೀತಿಯಲ್ಲಿ ಕೊನೆಯುಸಿರನ್ನೆಳೆದಳೆಂದೂ ತಿಳಿಸಿದ್ದರು. ನಾನು ಅವಳನ್ನು ಕಂಡದ್ದು ಕೇವಲ ಹತ್ತೇ ನಿಮಿಷವಾದರೂ, ಅವಳ ಆ ನಿಸ್ತೇಜವಾದ ಮುಖ, ಭಾವಪೂರ್ಣ ನೋಟ, ಅವಳ ಆ ದಿನದ ಚರ್ಯೆ ಇನ್ನೂ ಕಣ್ಣಿಗೆ ಕಟ್ಟಿದೆ.

ಇದು ಈಚೆಗೆ ಅಮೇರಿಕೆಯಲ್ಲಿ ನಾನು ಕಂಡದ್ದು. ಒಬ್ಬ ಮಗ ಅಲ್ಲಿ ಇದ್ದಾನಾದ್ದರಿಂದ ಹೋಗಿದ್ದೆ. ನನಗೆ "ಹಜಾಮತಿ" ಮಾಡಿಸಿಕೊಳ್ಳಬೇಕಾಗಿತ್ತು. ಪರದೇಶಗಳಲ್ಲಿ ಅದೊಂದು ತಲೆಬೇಸರದ, ದುಬಾರಿಯ ಕೆಲಸ. "ನಮ್ಮ ಗುರುತಿನ Sunny ಎಂಬವರು ಇದ್ದಾರೆ. ಅವರನ್ನ ಮನೆಗೇ ಕರೀತೇನೆ" ಎಂದು ನನ್ನ ಸೊಸೆ ಹೇಳಿದಾಗ "ಛೇ.. ಛೇ.. ಬೇಡ. ಸಿಕ್ಕಾಪಟ್ಟೆ ಹಣ ಕೇಳ್ತಾರೆ -ಮನೆಗೆ ಬಂದರೆ" ಎಂದೆ. "ಇಲ್ಲ, ಹಾಗೇನಿಲ್ಲ" ಎಂದಳು. Sunnyಗೆ ಫೋನ್ ಮಾಡಿದಳು.

Sunny ಎಂದಾಗ ಯಾರೋ ಪುರುಷ ವ್ಯಕ್ತಿ ಎಂದುಕೊಂಡಿದ್ದೆ. ಬಂದವಳು ನಲ್ವತ್ತು ವರ್ಷದ ಹೆಣ್ಣು ಮಗಳು. ಕೈಯಲ್ಲೊಂದು ಪೆಟ್ಟಿಗೆ. ಲೋಕಾಭಿರಾಮದ ಮಾತನ್ನಾಡಿದೆವು. ನನ್ನ ಮೊಮ್ಮಕ್ಕಳ ಕೇಶವಪನವು ಅವಳದ್ದೇ ಅಂತೆ. 'ಅದೊಂದು ಖುಶಿ ಕೆಲಸ' ಎಂದು ಬಣ್ಣಿಸಿದಳು. ಅವುಗಳನ್ನು ತುಸು ಮಾತನಾಡಿಸಿದಳು. ಕಾಫಿ ಕುಡಿದಳು. ಹಿತವಾದ, ಮಿದುವಾದ ಮಾತು. ಜೀವನಾನುಭವದಿಂದ ಮಾಗಿದ ಮನಸ್ಸಿನ ಪ್ರತೀಕವಾಗಿತ್ತು. ನನ್ನ ಕೈಕುಲುಕಿ, ಹಣ ಇಸಿದುಕೊಂಡು ಹೋದಳು. ಅಲ್ಲಿಯ ಸಲೂನಿನವರು ತೆಗೆದುಕೊಳ್ಳುವುದರ ಅರ್ಧ ದರ ಅವಳದು.

ಆಮೇಲೆ ನನ್ನ ಸೊಸೆ ಅವಳ ಬಗ್ಗೆ ಹೇಳಿದ ಕೆಲ ವಿವರಗಳು ಅಚ್ಚರಿಗೊಳಿಸುವಂತಹವು. ಆಕೆ ಮೂಲತಃ ಕೊರಿಯನ್ ದೇಶದವಳಂತೆ. ಗಂಡ ಅಮೇರಿಕನ್. ಹತ್ತಿರದ ಕಾಲೇಜಿನಲ್ಲಿ ಇಂಗ್ಲೀಷ್ ಲೆಕ್ಚರರ್. ತಡವಾಗಿ ಮದುವೆಯಾದದ್ದರಿಂದ ಎರಡು ಚಿಕ್ಕ ಮಕ್ಕಳಿವೆ. ಅವನ್ನು ನೋಡಿಕೊಳ್ಳಬೇಕು. ಮೇಲಾಗಿ ಹೆಚ್ಚು ಕಲಿತವಳಲ್ಲ. ಆದರೆ ಒಂದಿಲ್ಲೊಂದು ಚಾಕರಿ ಮಾಡಿ ಹಣ ಕೂಡಿಸಬೇಕು : ತನ್ನ ನೆರೆಮನೆಗಳಿಗೆ ಹೋಗಿ 'ಹಜಾಮತಿ', ಅವರ ಕೈದೋಟವನ್ನು ಸ್ವಚ್ಛವಾಗಿರಿಸುವುದು, 'Baby Sitting' ಮಾಡುವುದು - ಇಂಥವೇ.

ಯಾತಕ್ಕಾಗಿ ಹಣ? ತನಗಿದ್ದ ಬ್ರೆಸ್ಟ್ ಕ್ಯಾನ್ಸರ್‌ಗಾಗಿ !

ಕೆಲವೇ ತಿಂಗಳ ಹಿಂದೆ ಆಪರೇಶನ್ ಮಾಡಿಸಲಾಗಿತ್ತು. ಶ್ರೀಮತಿ ಡೆಸ್ಮಂಡರಿಗಿದ್ದಂತೆ ನಿರಾಶಾಜನಕ ಸ್ಥಿತಿ. ವರ್ಷೊಪ್ಪೊತ್ತು ಮಾತ್ರ ತನ್ನ ಆಯುರ್ಮಾನ ಎಂಬುದನ್ನು ಬಲ್ಲಳು. ಆದರೂ ಅದರ ಪರಿವೆ ಇಲ್ಲದಂತೆ ಶ್ರದ್ಧಾತ್ಮಕ ದುಡಿತ, ಅದರ ಮುಖ್ಯ ಕಾರಣ, ಆ ಮಕ್ಕಳಿಗಾಗಿ ತುಸುವಾದರೂ ಕೂಡಿ ಇಡಬೇಕು ಎಂಬುದು. ಗಂಡನೇನೊ ಒಳ್ಳೆಯವ. ತಾನು ಸತ್ತ ಮೇಲೆ ಆತ ಬೇರೆಯವಳನ್ನು ಮದುವೆಯಾಗುವವನೇ. ಆಗ ತನ್ನ ಎಳೆಯ ಮಕ್ಕಳ ಗತಿಯೇನು ಎಂಬ ಕಳವಳ ಮತ್ತು ಕಾಳಜಿ. ಅವಳ ಬಗ್ಗೆ ಸಹಾನುಭೂತಿಯನ್ನು ತೋರುವುದನ್ನು ಬಿಟ್ಟರೆ ನಾವು ಇನ್ನೇನು ಮಾಡಲಾದೀತು?

***

೧೩. ಪುಣೆ ಹಾಗೂ ಪುಣೇರಿ

ಪುಣೆ ನಗರವು ನಮ್ಮ ದೇಶವನ್ನು ಬಿಟ್ಟು ಹೊರಗೇನೂ ಇಲ್ಲ. ಕರ್ನಾಟಕದಿಂದ ದೂರವೂ ಇಲ್ಲ. ಮತ್ತೆ ಈ ನಗರದ ಜನರ ರೀತಿ - ನೀತಿಗಳು ಬೇರೆ ಊರಲ್ಲಿಯೂ ಕಂಡು ಬರುವಂತಹವೇ. ಆದರೆ ಪ್ರತಿಯೊಂದು ನಗರಕ್ಕೂ ತನ್ನದೇ ಆದ ವೈಶಿಷ್ಟ್ಯಗಳಿರುತ್ತವೆ. ಆ ದೃಷ್ಟಿಯಿಂದ ಪುಣೆಯ ಜೀವನವನ್ನು ಹಗುರು ಮನದಿಂದ (in a lighter vein) ಚಿತ್ರಿಸಬೇಕೆಂದಿದ್ದೇನೆ. ಕೆಲವು ವರ್ಷ ನಾನು ಪುಣೆಯಲ್ಲಿ ವಾಸವಾಗಿದ್ದದ್ದೂ ಇದಕ್ಕೆ ಕಾರಣ.

ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಯಾವುದು? ಬೆಂಗಳೂರಂತೂ ಅಲ್ಲ. ಅಲ್ಲಿ ಕನ್ನಡತನವೇ ಇಲ್ಲ, ಅಂದಾಗ ಅಲ್ಲಿ ಕನ್ನಡ ಸಂಸ್ಕೃತಿ ಎಲ್ಲಿಂದ ಬರಬೇಕು? ಮಹಾರಾಷ್ಟ್ರದಲ್ಲಿ ಮಾತ್ರ, ಮುಂಬಯಿ ರಾಜಧಾನಿಯಾಗಿದ್ದರೂ, ಸಾಂಸ್ಕೃತಿಕವಾಗಿ ಪುಣೆಯೇ ಅದರ ರಾಜಧಾನಿ. ಆ ಸ್ಥಾನಮಾನವು ಅಬಾಧಿತವಾದದ್ದು, ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲದ್ದು. ಸಾಂಸ್ಕೃತಿಕ ರಾಜಧಾನಿ ಎನ್ನಿಸಿಕೊಳ್ಳುವ ಸ್ಥಳವು ಆ ರಾಜ್ಯದ ಮತ್ತು ಪ್ರದೇಶದ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಜೊತೆಗೆ ಆ ರಾಜ್ಯದ ಬೇರೆ ಬೇರೆ ಕಡೆಗಳಲ್ಲಿಯ ಜನ, ಸಾಹಿತ್ಯ ಕಲೆ, ಶಿಕ್ಷಣ, ಜೀವನಮೌಲ್ಯಗಳ ವಿಚಾರವಾಗಿ ಮಾರ್ಗದರ್ಶನ ಪಡೆಯಬಹುದು.

ಪುಣೆಯು ಮಿಲಿಟರಿ ರಾಜಧಾನಿಯೂ ಹೌದು. ಪೇಶ್ವೆಯರ ಮಹಾನ್ ಸೈನ್ಯವು ದಿಲ್ಲಿಯ ತನಕ ಇಲ್ಲಿಂದಲೇ ದಂಡೆತ್ತಿ ಹೋದದ್ದು; ಅದರಂತೆ ಹೈದರ ಟೀಪೂ ಸುಲ್ತಾನರ ಮೇಲೆಯೂ. ಈಗ ಕೂಡಾ ಅದು ಭಾರತದ ದಕ್ಷಿಣ ವಲಯದ ಮಿಲಿಟರಿ ರಾಜಧಾನಿಯಾಗಿದೆ. ದೇಶದ ವರಿಷ್ಠ ಸೇನಾಧಿಕಾರಿಯ ಜಾಗ ತೆರವಿದ್ದಾಗ, ಈ ವಲಯದಲ್ಲಿದ್ದವನೇ ಆ ಸ್ಥಾನಕ್ಕೆ ಬಡತಿ ಹೊಂದುವ ಪರಿಪಾಠವಿದೆ.

ಪುಣೆಯು ಮುಂಬಯಿ ಪ್ರಾಂತದ ಹಳೆಯ ಗವರ್ನರುಗಳ ಬೇಸಗೆಯ ಕಾಲದ ವಾಸಸ್ಥಾನವೂ ಆಗಿದ್ದಿತು _ ಮುಂಬಯಿಯ ಉರಿ ಉರಿ ಬಿಸಿಲನ್ನು ತಪ್ಪಿಸಲು. ಇಲ್ಲಿಯ ಪ್ರಶಾಂತ ವಾತಾವರಣಕ್ಕೆ ಮಾರು ಹೋದ ಬ್ರಿಟಿಷರು ಇದನ್ನು 'ಕ್ವೀನ್ ಆಫ್ ದಿ ಡೆಕ್ಕನ್' ಎಂದು ಕರೆದರು. 'ಕಿಂಗ್' ಪದವಿ ಮಾತ್ರ ಮುಂಬಯಿಗೇ ಇರಿಸಿದರು! ಈ ರಾಜ-ರಾಣಿಯರ ಒಡನಾಟವನ್ನು 'ಡೆಕ್ಕನ್ ಕ್ವೀನ್' ರೈಲು ಗಾಡಿಯು ಇಂದಿಗೂ ಸಾಬೀತುಗೊಳಿಸುವಂತಿದೆ.

ಇವೆರಡೂ ನಗರಗಳ ಸಂಬಂಧವನ್ನು ಸೂರ್ಯ-ಚಂದ್ರರಿಗೆ ಹೋಲಿಸಬಹುದು. ಮುಂಬಯಿಯಲ್ಲಿ ಏನು ಜರುಗಿದರೂ ಪುಣೆಯಲ್ಲಿ ಅದರ ಪಡಿನೆಳಲು ಕಂಡು ಬರುತ್ತದೆ. ಮುಂಬಯಿಯಲ್ಲಿ ರಭಸದ ಮಳೆ ಬಿದ್ದರೆ, ಅದೇ ವೇಳೆಗೆ ಪುಣೆಯಲ್ಲಿಯೂ ಮಳೆ ಬೀಳ್ತದೆ- ಆದರೆ ಹೆಂಗಸರ ಮುಳುಮುಳು ಅಳುವಿನೋಪಾದಿಯಲ್ಲಿ . ಮುಂಬಯಿಯಲ್ಲಿ ಸ್ಥಾಯಿಯಾಗಿದ್ದವರು, ಪುಣೆಯಲ್ಲಿಯೂ ತಮ್ಮದೊಂದು ಬಿಡಾರವನ್ನು ಕಟ್ಟಿ ಇಡುತ್ತಾರೆ. ಅಲ್ಲಿ ಮರಾಟಿಗರು ನಡೆಸಿದ ಒಂದು ಉದ್ಯಮಕ್ಕೆ ಪುಣೆಯಲ್ಲಿಯೂ ಅದರ ಶಾಖೆ ಇರತಕ್ಕುದೇ. ಅಂತೂ ಮುಂಬಯಿಯ ಛಾಪು ಇಲ್ಲದ ಪುಣೆಯ ಅಸ್ತಿತ್ವ ಕಳಾಹೀನವಾದದ್ದೇ ಸೈ.

ಪುಣೆಯ ಒಂದಿಷ್ಟು ಇತಿಹಾಸವನ್ನು ಮೊದಲಿಗೆ ಹೇಳಬೇಕು. ಅದು ಪುರಾತನ ಪ್ರಸಿದ್ಧಿಯ ಸ್ಥಳವೇನೂ ಅಲ್ಲ. ಕ್ರಿ.ಶ. ೧೬೨೦ ಕ್ಕೆ ಮುಂಚೆ ಅದರ ಹೆಸರೇ ಚರಿತ್ರೆಯಲ್ಲಿ ಕಂಡುಬರದು. ಗಂಡನಿಂದ ವಿಮುಖಳಾಗಿದ್ದ ಜೀಜಾಬಾಯಿಯು ಬಾಲಕ ಶಿವಾಜಿಯೊಡನೆ ಪುಣೆಯ ಕಸಬಾ ಎಂಬಲ್ಲಿ ವಾಸವಾಗಿದ್ದದ್ದು, ಪುಣೆಯ ಇತಿಹಾಸದ ಮೊದಲ ರೂಹು. ಆಗಿನ ಅದರ ಹೆಸರು 'ಪುಣವಾಡಿ'. ಮುಂದೆ ಪೇಶ್ವೆಯ ಬಾಳಾಜಿ ವಿಶ್ವನಾಥನು ತನ್ನ ಆಡಳಿತದ ಕೇಂದ್ರವೆಂದು ಆಯ್ದುಕೊಂಡಂದಿನಿಂದ (೧೭೦೪) ಪುಣೆ ಭರದಿಂದ ಬೆಳೆಯಿತು. ಅವರ ಅರಮನೆ 'ಶನಿವಾರ ವಾಡಾ' ವೈಭವದಿಂದ ಮೆರೆಯಿತು. ಪ್ರವಾಸೋದ್ಯಮಿಗಳು ಪುಣೆಯನ್ನು ಸಾಂಕೇತಿಕವಾಗಿ ಚಿತ್ರಿಸುವುದಾದಲ್ಲಿ ಈ ವಾಡಾದ ಮುಂಭಾಗವನ್ನೇ ರೇಖಿಸುತ್ತಾರೆ. ಇತಿಹಾಸ ಕಾಲದಲ್ಲಿ ಈ ವಾಡೆಯೊಳಗೆ ರಾಜನೀತಿಯ ಧಾರ್ಮಿಕ ವಿಧಿಗಳ ಜೊತೆಗೆ ಕೊಲೆ, ಒಳಸಂಚುಗಳೂ ಲೆಕ್ಕವಿಲ್ಲದಷ್ಟು ನಡೆದು ಹೋದುವು. ಹದಿವಯದ ನಾರಾಯಣ ಪೇಶ್ವೆಯನ್ನು ಕೊಲೆಗೈಸುವಾಗ ಅವನು 'ಕಾಕಾ, ಮಲಾ ವಾಚವಾ' ಎಂದು ಆರ್ತನಾದದಿಂದ ಕೂಗುತ್ತಾನೆ-ಕೊಲೆ ಮಾಡಿಸಿದವನು ತನ್ನ ಕಾಕಾನೇ - ಎಂಬುದು ತಿಳಿಯದೇ! ಅದಿನ್ನೂ ಪ್ರತಿಧ್ವನಿಸುತ್ತಿದೆ- ಎಂದು ಪುಣೆಯವರು ತಿಳಿಯುತ್ತಾರೆ.

ಪುಣೆಯ ಗತಕಾಲದ ಸ್ಮಾರಕಗಳೆಂದು ವಿಶ್ರಾಮಬಾಗ (ಪೇಶ್ವೆಯವರ ಇನ್ನೊಂದು ವಾಡಾ) ಮಹದಾಜಿ ಶಿಂಧೇನ ಛತ್ರಿ ಅದರಂತೆ ಗಾಂಧೀಜಿಯನ್ನು ಸೆರೆಯಲ್ಲಿರಿಸಿದ್ದ ಆಗಾಖಾನ ಅರಮನೆ.

ಮುಂದೆ ಟಿಳಕರ ಉಚ್ಛ್ರಾಯ ಕಾಲದಲ್ಲಿ(೧೮೮೦ - ೧೯೨೦) ಪುಣೆಯಲ್ಲಿ ನಡೆದ ಬಹುಮುಖ ಪುನರುತ್ಥಾನವು ಬೆರಗುಗೊಳಿಸುವಂತಹದು. ರಾಜಕೀಯ ರಂಗದಲ್ಲಿ ಟಿಳಕ, ಗೋಖಲೆ, ರಾನಡೆ ಅವರು, ಶೈಕ್ಷಣಿಕ -ಸಾಮಾಜಿಕ ಕ್ಷೇತ್ರದಲ್ಲಿ ಆಗರಕರ, ಫುಲೆ, ಕರ್ವೆ ಮುಂತಾದವರು, ಕ್ರಾಂತಿರಂಗದಲ್ಲಿ ಚಾಫೇಕರ ಬಂಧುಗಳು, ವಾ. ಬ. ಫಡಕೆ, ರಾಜಗುರು ಇವರೆಲ್ಲರಿಗೆ ಪುಣೆಯೇ ಸ್ಫೂರ್ತಿಸೆಲೆಯಾಗಿದ್ದಿತು.

ಆಗಿನ ಪುಣೆಯ ಜೀವನಾಡಿಯು ಹಳೆಯ ಕಾಲದ ಕೆಲವು 'ಪೇಟ'ಗಳಿಗೆ

(ಸೋಮವಾರಪೇಟ, ಸದಾಶಿವಪೇಟ ಇತ್ಯಾದಿ) ಸೀಮಿತವಾಗಿತ್ತು. ಮಿಲಿಟರಿ ವಲಯದ 'ಕಂಟೋನ್‌ಮೆಂಟ್' ಪ್ರತ್ಯೇಕವಿದ್ದಿತು. ಇವೆರಡನ್ನು ಸುತ್ತುವರಿದು ಕಾತ್ರಜ, ಚಿಂಚವಡ, ಪಿಂಪರಿ, ನಿಗಡಿ ಈ ಊರುಗಳು ಬೇರೆಯೇ ಎಂಬಂತಿದ್ದವು. ಕಳೆದ 30-35 ವರ್ಷಗಳಿಂದ ನಡೆದ ಭರಭರಾಟೆಯ ಔದ್ಯೋಗಿಕರಣದಿಂದಾಗಿ ಇವೆಲ್ಲ ಪ್ರದೇಶಗಳು ಒಂದೇ ಎಂಬಂತಾಗಿವೆ. ಈ ಬದಲಾವಣೆ ಯಾವುದೇ ಸದ್ದು ಗದ್ದಲವಿಲ್ಲದೆ ನಡೆದದ್ದು ಒಂದು ವಿಶೇಷ.

ಪುಣೆ ನಗರದ ಸುಪ್ರಸಿದ್ಧ ದೈವತ 'ಪರ್ವತಿ'. ಅವಳನ್ನು ಪ್ರತಿನಿಧಿಸಲೆಂದೆಂಬಂತೆ ಊರಲ್ಲಿ ಹತ್ತಿಪ್ಪತ್ತು ದಿಬ್ಬ-ದಿನ್ನೆಗಳಿವೆ. ಮತ್ತೆ ನದಿ-ಒಂದಲ್ಲ, ಎರಡೆರಡು (ಮೂಳಾ ಹಾಗೂ ಮೂಠಾ). ಊರ ಒಳಗೇನೆ ಹರಿಯುವ ಈ ನದೀದ್ವಯದ ವೈಶಿಷ್ಟ್ಯವು ಭಾರತದ ಇನ್ನಾವುದೇ ದೊಡ್ಡ ನಗರಕ್ಕೆ ಇದ್ದಂತಿಲ್ಲ. ಮಧ್ಯದಲ್ಲೇ ಇರುವ ಮೂಠಾ ನದಿಗೆ ಹಲವಾರು ಸಂಕಗಳು -ಲಂಡನ್ನಿನ ಥೇಮ್ಸ್ ನದಿಗೆ ಇರುವಂತೆ. ಆದರೆ ಥೇಮ್ಸ್ ಸದಾ ತುಂಬಿಕೊಂಡು ಭೋರ್ಗರೆಯುತ್ತಿದ್ದರೆ, ಮೂಠಾ ನದಿಯು ಸೊರಗಿ ಸತ್ತು ನಾರುವ ಹೆಬ್ಬಾವಿನಂತಿದೆ. ಅದರ ಸೇತುವೆಗಳ ಮೇಲೆ ಅವ್ಯಾಹತವಾಗಿ ಓಡಾಡುವ ವಾಹನಗಳು ನದಿಯನ್ನು ತಾತ್ಸಾರದಿಂದ ತುಳಿದುಕೊಂಡು ಹೋಗುವಂತೆ ಕಾಣುತ್ತದೆ. ಮಧ್ಯರಾತ್ರಿಯ ನಿಃಶಬ್ದ ಹಾಗೂ ಕತ್ತಲೆಯ ವೇಳೆಯಲ್ಲಿ ಈ ನದಿಯ ದೃಶ್ಯ ಸ್ಮಶಾನಸದೃಶ.

ಪುಣೆಯ ಊರೊಳಗೆ ಮೊದಲ ಬಾರಿಗೆ ಕಾಲಿಟ್ಟವರಿಗೆ ಇಲ್ಲಿಯ ರಸ್ತೆಗಳು ಮತ್ತು ವಾಹನಗಳ ನಿರ್ಗಮನದ ರೀತಿಯು ಊರಿನ ಬಗ್ಗೆ ಅಸಡ್ಡೆಯನ್ನು ಮೂಡಿಸುತ್ತದೆ. ಕೆಂಪೇಗೌಡನಂಥ ಓರ್ವ ಪಾಳೆಯಗಾರ ಬೆಂಗಳೂರಿಗೆ ಅಗಲವಾದ ರಸ್ತೆಗಳು ಮತ್ತು ಎಡಬಲಕ್ಕೆ ಮರಗಳು -ಇರಬೇಕೆಂದು ಯೋಜಿಸಿದ. ಅವನಿಗಿಂತ ಎಷ್ಟೋ ಬಲಾಢ್ಯರಾಗಿದ್ದ ಪೇಶ್ವೆಯರು ನಗರಯೋಜನೆಯತ್ತ ಏನೇನೂ ಗಮನ ಕೊಡಲಿಲ್ಲ. ನಗರ ಮಧ್ಯದ ರಸ್ತೆಗಳು ಚಿಕ್ಕವು. ಅವಕ್ಕೆ ತಾಗಿಯೇ ಗೂಡಿನ ರೀತಿಯ ಮನೆಗಳು. ಈಗೇನೊ ಅವನ್ನು ಕೆಡವಿಸಿ ದೊಡ್ಡ ಕಟ್ಟಡಗಳನ್ನು ಕಟ್ಟುತ್ತ ಇದ್ದಾರೆ. ಆದರೆ ಇಕ್ಕಟ್ಟಾದ ರಸ್ತೆಗಳಲ್ಲಿ ಎಲ್ಲ ಬಗೆಯ ವಾಹನಗಳು ಚಕ್ಕಡಿಯಿಂದ ಟ್ರಕ್ಕುಗಳವರೆಗೆ, ಜೊತೆಗೆ ಎಮ್ಮೆ ಆಕಳುಗಳು ಸಹ ಮೆಲುಕಾಡಿಸುತ್ತ ಸಂಚರಿಸುತ್ತವೆ.

ನನಗಿದೇ ಆಶ್ಚರ್ಯ. ಉಳಿದೆಲ್ಲ ಚಟುವಟಿಕೆಗಳಲ್ಲಿ ನಿಧಾನವಾಗಿ ನಡೆಯುವ ಇಲ್ಲಿನ ಜನ ರಸ್ತೆಯ ಮೇಲೆ ವಾಹನ ನಡೆಸುವಾಗ ಏಕಿಷ್ಟು ಅವಸರ ಪಡುವರೋ! ಲಾರಿಯವರನ್ನು ಕಾರಿನವರು, ಕಾರಿನವರನ್ನು ಆಟೋದವರು, ಆಟೋದವರನ್ನು ಸ್ಕೂಟರಿನವರು, ಸ್ಕೂಟರಿನವರನ್ನು ಮೋಪೆಡ್‌ನವರು - ಹಿಂದೆ ಹಾಕುವುದಕ್ಕೆ ಧಡಪಡಿಸುವರು. ಸೈಕಲ್ಲಿನವರು? ಒಂದು ಕಾಲಕ್ಕೆ ಪುಣೆ ಸೈಕಲ್ ಊರೆಂದೇ ಪ್ರಸಿದ್ಧಿ

ಪಡೆದಿತ್ತು. ಈಗೂ ಸೈಕಲ್ ಸವಾರರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಉಳಿದ ವಾಹಕರು ಚಾಪೆಯ ಕೆಳಗಡೆಯಾದರೆ ಇವರು ರಂಗೋಲಿಯ ಒಳಗೆ ನುಸುಳುವವರು!

ಬೆಂಗಳೂರಿನ ಬಿ. ಟಿ. ಎಸ್.ಗಳು ಸಾಕಷ್ಟು ಪ್ರಸಿದ್ಧ. ಅದರ ನಿದರ್ಶನವೆಂದರೆ ಆ ನಗರದ ಪ್ರತಿಯೊಬ್ಬ ಸಾಹಿತಿಯು ಅದನ್ನು ಒಂದಿಲ್ಲೊಂದು ರೀತಿಯಲ್ಲಿ ತನ್ನ ಕತೆ/ಕಾದಂಬರಿಯಲ್ಲಿ ತಾರದೇ ಇಲ್ಲ. ಅದೇ ಪುಣೆಯ ನಗರ ಸಾರಿಗೆಯ (ಪಿ.ಎಮ್.ಟಿ.) ಬಸ್ಸುಗಳನ್ನು ಅಲ್ಲಿಯ ಸಾಹಿತಿಗಳು ವರ್ಣಿಸಿದ್ದೇ ಇಲ್ಲ! ಯಾಕೆಂದರೆ ಈ ಸಿಟಿ ಬಸ್ಸುಗಳಿಗೆ ಲಾರಿಗಳಿರುವಷ್ಟೇ ಮಹತ್ವ. ಇವುಗಳ ಬಣ್ಣವೂ, ಒಂದು ಕಾಲಕ್ಕೆ ನಮ್ಮಲ್ಲಿದ್ದ ಹಾಗೆ, ಕೆಂಪು. ಆದರೆ ಅದರ ಮೇಲೆಲ್ಲ ಮಾಡರ್ನ್ ಚಿತ್ರಕಲೆ ಎದ್ದು ಹೊಡೆಯುತ್ತದೆ. ಅದಕ್ಕಾಗಿ ಉಪಯೋಗಿಸಲಾದ ಉಪಕರಣಗಳೆಂದರೆ ರಾಡಿ ನೀರು ಹಾಗೂ ಧೂಳು ಮಣ್ಣು! ಈ ನಗರ ಸಾರಿಗೆಯ ಬಗೆಗಿನ ನಿಕೃಷ್ಟ ಭಾವನೆಯ ಇನ್ನೊಂದು ಕಾರಣವೆಂದರೆ ಇಲ್ಲಿಯ ಹೆಚ್ಚಿನ ಜನರು 'ದ್ವಿಚಾಕಿ'ಗಳನ್ನು ಬಳಸುತ್ತಾರೆ. ಪುಣೆಯಲ್ಲಿದ್ದಷ್ಟು ಈ ದ್ವಿಚಕ್ರವಾಹನಗಳು -ಇಲ್ಲಿಯ ಜನಸಂಖ್ಯೆಯ ಪ್ರಮಾಣದಿಂದ - ಬೇರಾವ ಊರಲ್ಲಿಯೂ ಕಂಡು ಬಾರವು.

ಒಂದು ಊರಿನ ಜನತೆಯ ಸಂಸ್ಕಾರವನ್ನು ತಿಳಿಯುವ ಮಾನದಂಡವೆಂದು ಆಟೊರಿಕ್ಷಾದವರ ನಡವಳಿಕೆಯನ್ನು ಪರಿಗಣಿಸತಕ್ಕುದು. ತಿಳಿಯದು, ಮುಂಬಯಿಯ(ಉಪನಗರಗಳ) ಆಟೊದವರಿಗೆ ಪ್ರಯಾಣಿಕರೆಂದರೆ ನಡೆದಾಡುವ, ಕಿಸೆಯಲ್ಲಿ ಹಣ ಇಟ್ಟುಕೊಂಡಿರುವ ಯಂತ್ರಗಳು. ಮಂಗಳೂರಿನ ಆಟೊದವರು ಒಗರಿನವರು. ಬೆಂಗಳೂರಿನವರಿಗೆ ಪ್ರಯಾಣಿಕರನ್ನು ಅವರವರ ಸ್ಥಳಕ್ಕೆ ಮುಟ್ಟಿಸುವುದಕ್ಕಿಂತ ತಮಗೆ ಹೋಗಬೇಕೆನಿಸಿದ ದಿಕ್ಕಿನಲ್ಲೇ ಪ್ರಯಾಣಿಕರು ಹೋಗುವವರಾಗಿರಬೇಕು. ಹುಬ್ಬಳ್ಳಿ-ಧಾರವಾಡದವರಂತೂ ಚೌಕಾಸಿ ಮಾಡಿ ಮಾಡಿ ಹಣ ಸೆಳೆಯುವಲ್ಲಿ ಖದೀಮರು. ಕರ್ನಾಟಕದ ಮೇಲಣ ಈ ಊರುಗಳಲ್ಲಿ ಒಳ್ಳೆಯ ಆಟೊ ಚಾಲಕರಿಲ್ಲವೆಂದಲ್ಲ. ಅವರ ಸಂಖ್ಯೆ ಶೇಕಡ ೨೦ ಎನ್ನುವ. ಅದೇ ಪುಣೆಯಲ್ಲಿ ಅವರು ಶೇಕಡಾ ೮೦ ರಷ್ಟು ಇದ್ದಾರೆ. ಮುಖ್ಯತಃ ಇಲ್ಲಿಯ ಆಟೊದವರು ಪ್ರಯಾಣಿಕರನ್ನು ಮನುಷ್ಯರೆಂದಾಗಿ ಗುರುತಿಸುತ್ತಾರೆ. ಸೌಜನ್ಯದಿಂದ ನಡೆದುಕೊಳ್ಳುತ್ತಾರೆ. ಅದಕ್ಕೂ ಮುಖ್ಯವೆಂದರೆ ರೂ. ಗಳ ಲೆಕ್ಕ ಆಗಿ ಮೇಲೆ ಎಷ್ಟು ಪೈಸೆ ಇರುತ್ತದೆಯೊ ಅಷ್ಟನ್ನೇ ತೆಗೆದುಕೊಳ್ಳುತ್ತಾರೆ. ಅದನ್ನು ಪೂರ್ಣ ರೂಪಾಯಿಗೆ ಹೊಂದಿಸುವುದಿಲ್ಲ - ಬೆಂಗಳೂರವರಂತೆ.

ಇನ್ನು 'ದ್ವಿಚಾಕಿ' ವಾಹಕರ ಗಮನವನ್ನು ತಮ್ಮತ್ತ ಸೆಳೆಯಲೆತ್ನಿಸುವ ಕುಮಾರಕರ ಬಗ್ಗೆ ಒಂದೆರಡು ಮಾತು ಹೇಳಬೇಕು. ಹತ್ತಿರ ಬಸ್‌ನಿಲ್ದಾಣ ಇಲ್ಲದಿದ್ದ ಕಡೆ ನಿಂತುಕೊಂಡು 'ನನಗೆ ಲಿಫ್ಟ್‌ಕೊಡ್ತೀರಾ' ಎಂದು ಕೇಳುವುದನ್ನು ಪುಣೆಯ ಬಾಲಕರು ಚೆನ್ನಾಗಿ ರೂಢಿಸಿಕೊಂಡಿದ್ದಾರೆ. 'ಕೇಳುವ ಹಾಗೆ ಕೇಳೋದು' ಎನ್ನುವ ಧೋರಣೆ ಅವರದು. ಅವರುಗಳ

ಇನ್ನೊಂದು ವೈಶಿಷ್ಟ್ಯವೆಂದರೆ, ಬೆಳಗಿನ ವೇಳೆ ನಿಮ್ಮ ವಾಹನದ ದೀಪ ಹಾಗೆ ಉರಿಯುತ್ತಿದ್ದರೆ 'ತಾರಮ್ಮಯ್ಯ' ರೀತಿಯಲ್ಲಿ ಕೈ ತಿರುವಿ ತಿಳಿಸುವುದಕ್ಕೆ ಖುಶಿ ಪಡುವರು. ಒಮ್ಮೆ ನಾನು ಬೇಕೆಂದೇ ದೀಪವಾರಿಸದೇ ಮುಂದೆ ಸಾಗಿದ್ದಾಗ ನಾಲ್ಕು ಜನ ಕುಮಾರಕರು ಹಾಗೆ ಕೈಸನ್ನೆ ಮಾಡಿದ್ದರು.

ಊರು ಎಂದ ಮೇಲೆ ಗುಡಿ ಗುಂಡಾರಗಳು ಇರಬೇಕು. ಬೆಂಗಳೂರಿನಂತೆ ಇಲ್ಲಿಯೂ ಬೀದಿಬೀದಿಗಳಲ್ಲಿ ಇವನ್ನು ಕಾಣುತ್ತೇವೆ. ದೇವತೆಗಳಲ್ಲಿ ಗಣಪತಿಗೇ ಅಗ್ರಪಟ್ಟ. ಈ ಊರಲ್ಲಿಯಂತೂ ಅವನು ಸರ್ವಾಂತರ್ಯಾಮಿ. ಮನೆಯೊಳಗೆ ಎಲ್ಲೆಲ್ಲಿಯೂ ವ್ಯಾಪಿಸಿದ್ದಾನೆ. 'ಬಾಗಿಲ ಮೇಲೆ, ಗೋಡೆಯ ಮೇಲೆ, ಕಪಾಟಿನೊಳಗೆ, ಎಲ್ಲೆಂದರಲ್ಲಿ. ಊರಲ್ಲಿ ಒಂದು ಸಾವಿರಕ್ಕೂ ಮಿಕ್ಕಿದ ಸಣ್ಣ ದೊಡ್ಡ ಗಣಪತಿ ದೇವಾಲಯಗಳಿದ್ದಿರಬೇಕು. ಎಷ್ಟೋ ಕಟ್ಟಡಗಳಿಗೆ ಗಣೇಶನ ವಿವಿಧ ಹೆಸರನ್ನಿಟ್ಟು '... ಭವನ' ಎಂದು ಕರೆದಿರುತ್ತಾರೆ. ಅದೂ ಒಂದು ಗಣಪತಿಯ ವಿಗ್ರಹವಿರುವ ದೇವಾಲಯವೇನೊ - ಎಂಬ ಸಂಶಯ ಮೂಡುತ್ತದೆ! ನನ್ನ ಗುರುತಿನವರೊಬ್ಬರು ಮನೆ ಕಟ್ಟಿಸಿದರು. ಅದಕ್ಕೆ ಗಣೇಶನ ನಾಮಾಂಕಿತವನ್ನೇ ಇಡಬೇಕು ತಾನೇ. ಆದರೆ ಅದು ಹೊಸತು ಇರಬೇಕು. ಆಗ ಅವರು, ಯಾವ ಪುರಾಣದಲ್ಲಿಯೂ ಇದ್ದಿರದ ಹೊಸ ಹೆಸರೊಂದನ್ನು ಸೃಷ್ಟಿಸಿದರು. ಗಣಂಜಯ!

ಇಲ್ಲಿಯ ಅವನ ಮಂದಿರಗಳಲ್ಲಿ ಅತಿ ಪ್ರಾಚೀನವಾದದ್ದು ಕಸಬಾ ಗಣಪತಿ. ೧೬/೧೭ ಶತಮಾನದಲ್ಲಿ ಇದರ ಸ್ಥಾಪನೆಯಾದಾಗ ಮೊದಲ ಪೂಜಾರಿಯ ಹೆಸರು ವಿನಾಯಕ ಭಟ್ಟ. ಅವನು ಮೂಲತಃ ನಮ್ಮ ವಿಜಾಪುರ ಜಿಲ್ಲೆಯ ಇಂಡಿ ಗ್ರಾಮದವ. ಈಗೂ ಅವನ ವಂಶಜರೇ ಪೂಜೆ ಮಾಡುತ್ತಿದ್ದಾರೆ.

ಪುಣೆಯ ಗಣೇಶನಿಗೆ ಹಲವಾರು ಲೌಕಿಕ ನಾಮಾಭಿಧಾನಗಳಿವೆ. ಹತ್ತೀಚಾ ಗಣಪತಿ.(ಆನೆ ಮುಖದವ). ಗುಳಾಚಾ ಗಣಪತಿ -(ಬೆಲ್ಲದವ), ದಶಭುಜಾ ಗಣಪತಿ-ಅಂತೂ ಭಕ್ತರ ಅಭಿಷ್ಟಕ್ಕೆ ತಕ್ಕಂತೆಯೇ ಅವನ ಇರವು. ಆತ ಬೇಕಿದ್ದರೆ ಕಡುಬಡವನಾಗಬಲ್ಲ. ಅಷ್ಟೇ ಸಿರಿವಂತನಾಗಿಯೂ ರಾರಾಜಿಸಬಲ್ಲ. ಆ ಲೆಕ್ಕದಲ್ಲಿ ಇಲ್ಲಿಯ ದಗಡೂ ಶೇಟ (ಕಲ್ಲರಸ!) ಗಣಪತಿಯು ಅತ್ಯಂತ ಶ್ರೀಮಂತನು. ಮೂರ್ತಿಯೂ ಅತಿ-ಸುಂದರ.

ಗಣೇಶ ಚತುರ್ಥಿ ಬಂತೆಂದರೆ ಇಲ್ಲಿಯ ಪ್ರತಿಯೊಂದು ಮನೆಯಲ್ಲಿ ಹಿಂದೂ, ಮುಸ್ಲಿಮ್ ಭೇದವಿಲ್ಲದೆ ಉತ್ಸವ ಬುದ್ಧಿ ಉದ್ದೀಪನಗೊಳ್ಳುವುದು-ಅಖಂಡ ಹದಿನೈದು ದಿನಗಳ ವರೆಗೆ. ಪರ ಊರುಗಳಲ್ಲಿದ್ದ ಪುಣೇ'ಕರ'ರು ರಜೆ ಪಡೆದು ಬರಬೇಕೆಂದಿದ್ದರೆ ಈ ದಿನಗಳನ್ನೇ ಆಯ್ದುಕೊಳ್ಳುತ್ತಾರೆ. ಅಮೇರಿಕೆಯಲ್ಲಿದ್ದ ಓರ್ವ ಡಾಕ್ಟರಿಣಿಯು ಹಾಗೆಂದು ಒಂದು ಟಿ. ವಿ. ಸಂದರ್ಶನದಲ್ಲಿ ಸ್ಪಷ್ಟವಾಗಿ ಹೇಳಿದುದುಂಟು.

ಇತ್ತ ಸಾರ್ವಜನಿಕ ಸ್ಥಳಗಳಲ್ಲಿ ಐನೂರಕ್ಕೂ ಮೇಲ್ಪಟ್ಟು ಗಣೇಶರು ಏಕ ಕಾಲಕ್ಕೆ ಅವತರಿಸುತ್ತಾರೆ. ಅವರೆಲ್ಲ ಜಲಸಮಾಧಿ ಹೊಂದುವುದು ಪೂರ್ಣ ೧೦ ದಿನಗಳ ಅನಂತರವೇ. ಅಷ್ಟು ದಿನಗಳ ವರೆಗೂ ಲೌಡ್ ಸ್ಪೀಕರಿನ ಕಿರುಚಾಟ; ಹುಚ್ಚುಚ್ಚಾರದ ಕುಣಿದಾಟ. ಹಾಗೆಂದು ಅವನ ಕಿವಿಗಳು ಗಡಚಿಕ್ಕುವುದಿಲ್ಲ. ಏಕೆಂದರೆ ಪ್ರತಿ ವರ್ಷ ಅದನ್ನು ಕೇಳಿ ಕೇಳಿ ಅದಾಗಲೇ ಕಿವುಡನಾಗಿ ಬಿಟ್ಟಿದ್ದಾನೆ! ಹಾಂ. ೧೦ನೆಯ ದಿನವಾದರೂ ನಿಶ್ಚಿತವಾಗಿ ತನ್ನ ವಿಸರ್ಜನೆಯಾಗುವುದೆಂಬ ಭರವಸೆ ಅವನಿಗಿರುವುದಿಲ್ಲ. ಯಾಕೆಂದರೆ ಐನೂರು ಮೇಳದವರು ಊದುತ್ತ ಕುಣಿಯುತ್ತ ರಸ್ತೆಯಲ್ಲಿ ಮೆಲ್ಲಗೆ ಸಾಗಿ ಪ್ರತಿಷ್ಠಿತವಾದ ವಿಸರ್ಜನ ಸ್ಥಳಕ್ಕೆ ಬಂದು ಮುಟ್ಟಲು ಅವನು ಕ್ಯೂ ಹಚ್ಚಬೇಕಾಗುವುದು!. ಎಷ್ಟೋ ಮೇಳಗಳು ಅಪರಾತ್ರಿಯಲ್ಲಿ ನಡುಬೀದಿಯಲ್ಲಿಯೆ ಬಿದ್ದುಕೊಂಡಿರುತ್ತವೆ. ಆಗ ಅವರ ಗಣೇಶನೂ ಕುಳಿತಲ್ಲಿಯೇ ತೂಕಡಿಸುವನು. ಅಂತೂ ಕಟ್ಟ ಕಡೆಯ ಗಣೇಶನ ವಿಸರ್ಜನೆಯಾಗುವುದು, ೧೧ನೆಯ ದಿನ ಅಂದರೆ ಮರುದಿನ ಮುಸ್ಸಂಜೆಗೇನೆ!.

ಅನಂತರದ ಪ್ರಸಿದ್ಧ ದೇವತೆ -ಮಾರುತಿ. ಅವನ ಹೆಸರಿನ ನೂರಿಪ್ಪತ್ತು ಗುಡಿಗಳಾದರೂ ಇರಬೇಕು. ಒಬ್ಬನ ಹೆಸರು ಬನಾನ್ಯಾ ಮಾರುತಿ. (ಬನಾನಿಗೂ ಅವನಿಗೂ ಏನೂ ಸಂಬಂಧವಿಲ್ಲ).ಇನ್ನೊಬ್ಬ ಊಟ್ಯಾ (ಒಂಟೆ)ಮಾರುತಿ. ಪೇಶ್ವೆಯು ರಾಜಸ್ತಾನದ ಮೇಲೆ ದಾಳಿ ಮಾಡ ಹೋಗುವಾಗ ಈ ಮಾರುತಿಗೆ ಪೂಜೆ ಸಲ್ಲಿಸಿದರಂತೆ. ಆಗ ಒಂಟೆಗಳ ಚಿಕ್ಕ ಪಡೆಯೂ ಅವರ ಜೊತೆಗೆ ಇತ್ತು.

ಶ್ರೀ ದೇವತೆಗಳಲ್ಲಿ ತಾಂಬಡಿ ಜೋಗೇಶ್ವರಿಯನ್ನೂ ಮೊದಲಿಗೆ ಹೆಸರಿಸಬೇಕು. ಇವಳೇ ಪುಣೆಯ 'ಗ್ರಾಮದೇವತೆ'. ಇತ್ತ ಗುಡ್ಡದ ಮೇಲೆ ಎದ್ದು ತೋರುವ 'ಚತುಶೃಂಗಿ' ಮನೆಮಾತಾಗಿದೆ. ಭವಾನೀ ದೇವಾಲಯವೊಂದಿದ್ದು, ಅಲ್ಲಿಯ ಪಂಚಾಮೃತ ಅಭಿಷೇಕಕ್ಕೆ ಮರಾಟಿಗರ ಒಲವಿನ ಶ್ರೀಖಂಡವನ್ನು ಬಳಸುತ್ತಾರೆ!

ನವಗ್ರಹ ದೇವಸ್ಥಾನವನ್ನು ನೀವು ಬೇರೆಡೆ ಕಂಡಿರದಿದ್ದರೆ ಪುಣೆಗೆ ಬಂದು ಬಿಡಿರಿ. ಅಲ್ಲಿ ಶನೀಶ್ವರನಿಗೆ ವಿಶೇಷ ಪ್ರಾಶಸ್ತ್ಯ. ಒಂದೊಂದು ನವಗ್ರಹಕ್ಕೆ ಇಷ್ಟಿಷ್ಟೂ ಜಪಸಂಖ್ಯೆ ನಿಯುಕ್ತವಾಗಿರುತ್ತದೆ. ಶನೀಶ್ವರನಿಗೆ maximum, ಅಂದರೆ ೨೩ ಸಾವಿರ!

ಪುಣೆಯಲ್ಲಿ ಅನ್ಯಮತೀಯರಿಗಾಗಿ, ಅನ್ಯ ಪ್ರದೇಶಗಳವರಿಗಾಗಿ ಪ್ರತ್ಯೇಕ ದೇವಾಲಯಗಳಿವೆ. ತಮಿಳರ ಶೀತಲದೇವಿ ಮಂದಿರವು ೧೫೦ ವರ್ಷಗಳಷ್ಟು ಹಿಂದಿನದು. ಅಲ್ಲಿ ಕೇವಲ ಒಂದು ಅಡಿ ಮಾತ್ರ ಎತ್ತರವುಳ್ಳ ಮೂರ್ತಿಗಾಗಿ ೩೪ ಅಡಿ ಎತ್ತರದ ಗೋಪುರದ್ವಯವನ್ನು ನಿರ್ಮಿಸಿದ್ದಾರೆ. ಕೇರಳದವರಿಗಾಗಿ ನಿಗಡಿಯಲ್ಲಿ ಹರೇಕೃಷ್ಣ ಮಂದಿರವಿದೆ. 'ದೇಹೂ ರೋಡ್'ಪ್ರದೇಶದಲ್ಲಿ ಅಯ್ಯಪ್ಪ ಹಾಗೂ ಸುಬ್ರಹ್ಮಣ್ಯರ ದೇವಸ್ಥಾನಗಳಿವೆ. ಇತ್ತ ಬಂಗಾಲಿಗಳು ಮಹಾಕಾಳಿ ದೇವಸ್ಥಾನವನ್ನು ನಿರ್ಮಿಸಿಕೊಂಡಿದ್ದಾರೆ.

ಹೀಗೆ ಇವರೆಲ್ಲ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾರೆ. ಆದರೆ ಖಾಸ ಕನ್ನಡಿಗರದ್ದೆಂದು ಹೇಳಬೇಕಾದ್ದು ಒಂದೂ ಇಲ್ಲ. ಈ ರೀತಿಯ ದೇವಾಲಯಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಿಸಿದವರು ಗುಜರಾತಿಗಳು. ಈಚೆಗೆ ಕಟ್ಟಲಾದ ಅವರ ಮಹಾಲಕ್ಷ್ಮೀ ದೇವಾಲಯವು ಮೌಂಟ್ ಅಬೂದಲ್ಲಿರುವ ದಿಲ್‌ವಾರಾ ಶಿಲ್ಪಕಲೆಯ ಮಾದರಿಯದು. ಪಿಂಪರಿಯಲ್ಲಿರುವ ವೈಷ್ಣೋ ದೇವಾಲಯವು ಜಮ್ಮೂದಲ್ಲಿರುವ ಅದೇ ದೇವತೆಯ ಪ್ರತಿರೂಪವಾಗಿದೆ.

ಜೈನೀಯ ದೇವಾಲಯಗಳನ್ನು ಪ್ರತ್ಯೇಕ ಹೆಸರಿಸಬೇಕು. ಪುಣೆಯಲ್ಲಿ ಅವರ ಪ್ರಮುಖ ಮಂದಿರ ಪಾರ್ಶ್ವನಾಥನದು. ಇನ್ನೊಂದು 'ಜನಕುಶಲ ಸುರೀಶ್ವರ-ಮಹಾರಾಜರ' ಹೆಸರಿನದು. ಮೂರನೆಯ ತೀರ್ಥಂಕರನಿಗಾಗಿ ನಿರ್ಮಿತವಾದ ದೇವಸ್ಥಾನವನ್ನು ನೀವು ನೋಡಲೇಬೇಕು. ಇಡೀ ಕಟ್ಟಡವೇ ರಥಾಕಾರದಲ್ಲಿದ್ದು ಅದಕ್ಕೆ ಆರು ಗಾಲಿಗಳನ್ನು ಕೂಡ್ರಿಸಲಾಗಿದೆ. ಎರಡು ಬಿಳಿಯ ಕುದುರೆಗಳು ರಥವನ್ನು ಎಳೆಯುವಂತೆ ನಿರ್ಮಾಣಗೊಂಡಿವೆ. ಕೊನೆಯ ತೀರ್ಥಂಕರ ವರ್ಧಮಾನ ಮಹಾವೀರನ ದೇವಾಲಯವೂ ಇದ್ದು ಆ ಮಹಾವೀರನ ಮೂರ್ತಿಯ ತೂಕ ೫ ಸಾವಿರ ಕೆ. ಜಿ.ಯಷ್ಟು ಇದೆಯಂತೆ. ನಿಜಕ್ಕೂ ಪ್ರೇಕ್ಷಣೀಯವಾದದ್ದು.

"ವಸ್ತುಸಂಗ್ರಹಾಲಯಗಳೂ (ಮ್ಯೂಸಿಯಮ್)ಪ್ರೇಕ್ಷಣೀಯವಾದವುಗಳೇ. ಇವು ಒಂದೊಂದೂ ವಿಶಿಷ್ಟ ಸ್ವರೂಪದವು. ಉದಾಹರಣೆಗೆ ಆದಿವಾಸೀ ಜನಜೀವನವನ್ನು ಚಿತ್ರಿಸುವ ಮ್ಯೂಸಿಯಮ್. ಮಾನವ ಶಾಸ್ತ್ರಕ್ಕೆ (Anthropology) ಸಂಬಂಧಪಟ್ಟ ಮ್ಯೂಸಿಯಮ್ಮಿಗೆ ಇರಾವತಿ ಕರ್ವೆಯವರ ಹೆಸರನ್ನು ಕೊಟ್ಟಿದ್ದಾರೆ. ಕಾರಣವೆಂದರೆ ೧೯೪೫ರಷ್ಟು ಹಿಂದೆ ಆಕೆ ಈ ವಿಷಯವನ್ನೆತ್ತಿಕೊಂಡು ಜರ್ಮನಿಯಲ್ಲಿ ಪಡೆದುಕೊಂಡ ಪದವಿಯೇ ನಮ್ಮಲ್ಲಿ ಮೊದಲಿನದು. ಯುದ್ಧೋಪಕರಣಗಳದ್ದೇ ಒಂದು ಮ್ಯೂಸಿಯಂ ದೇಹೂರೋಡ್‌ನಲ್ಲಿದೆ. ವೈದಿಕ ಸಂಶೋಧನ ಮಂಡಲದವರು ಒಂದು ವಿಶಿಷ್ಟ 'ವಸ್ತುಸಂಗ್ರಾಹಾಲಯ'ವನ್ನು ನಿರ್ಮಿಸಿದ್ದಾರೆ. ಅದರಲ್ಲಿ ಪುರಾತನ ಕಾಲದಲ್ಲಿ ಯಜ್ಞ, ಯಾಗ, ವ್ರತ, ಪೂಜೆ, ಸಂಸ್ಕಾರಗಳು-ಇವುಗಳಿಗೆಂದು ಬಳಸಲಾಗುತ್ತಿದ್ದ ಪರಿಕರಗಳಿವೆ.

ಜೀವಂತ ಪ್ರಾಣಿ, ಪಕ್ಷಿಗಳ ಕೆಲವು ಧಾಮಗಳು ನೋಡಲೇಬೇಕಾದವುಗಳು. ಸಮುದ್ರ ಹತ್ತಿರ ಇರದಿದ್ದರೂ ಮೀನುಗಳಿಗಾಗಿ ಅಕ್ವೇರಿಯಮ್ ಇದೆ. ಕಾತ್ರಜದ ಸರ್ಪೋದ್ಯಾನವಂತೂ ತುಂಬಾ ಹೆಸರುವಾಸಿಯಾದದ್ದು. ಪಕ್ಷಿಧಾಮ! ಹೌದು. ಒಂದು ನೂರು ಬಗೆಯ ಬೆರಗುಗೊಳಿಸುವ ಪಕ್ಷಿಸಂಕುಲ ಅಲ್ಲಿದೆ. ಪಂಚರಂಗಿ ಗಿಳಿ ನಮಗೆ ಗೊತ್ತು. ನವರಂಗಿ ಗಿಳಿ (ಕಪ್ಪು ಚುಂಚಿನದು) ಅಪೂರ್ವವಲ್ಲವೆ. ಇದನ್ನು ಸ್ಥಾಪಿಸಿದವರು 'ಜೋಗ ಕ್ಲಾಸಿಸ್' ನಡೆಸುವ ಜೋಗ ಕುಟುಂಬದವರು. ಮಕ್ಕಳಿಗಾಗಿ ಡಿಸ್ನಿ ಲ್ಯಾಂಡ್ ಮಾದರಿಯ 'ಅಪ್ಪೂ ಘರ 'ಇದೆ. ಅಲ್ಲಿಗೆ ಹೋಗಿದ್ದ ಒಂದು ವಿದ್ಯಾರ್ಥಿ ತಂಡ 'ಅಪ್ಪೂ ಘರ ಜಾಯೇಂಗೆ. ವಾಪಸ್ ಘರ ನ ಆಯೇಂಗೇ' ಎಂದು ಹೇಳುವಷ್ಟು ಜನಪ್ರಿಯವಾಗಿದೆ.

ಯಾವೊಂದು ನಗರದ ವರ್ಣನೆಯಲ್ಲಿ ಹೋಟೆಲುಗಳ ಪ್ರಸ್ತಾಪ ಇರಬೇಕಾದದ್ದು ನ್ಯಾಯ. ಇತರ ಕಡೆಗಳಲ್ಲಿ ಇದ್ದಿರದ ಕೆಲವು ವೈಶಿಷ್ಟ್ಯಪೂರ್ಣ 'ಹೋಟೆಲುಗಳು' ಇವೆ. ಪಲ್ಯ, ಸಾರು, ಸಾಂಬಾರ, ಚಟ್ನಿ, ಚಪಾತಿ-ಇವನ್ನು ಎದುರಿಗೇ ಇರಿಸಿಕೊಂಡು ನಮಗೆ ಬೇಕಾದದ್ದೊಂದನ್ನೇ ಆಯ್ದು ಪಡೆಯಬಹುದಾದವುಗಳು. ಕೆಲವು ಹೋಟೆಲುಗಳವರು ರವಿವಾರದ ದಿನಪತ್ರಿಕೆಯಲ್ಲಿ "ಇವತ್ತಿನ ಸ್ಪೆಶಲ್; ಹೆಸರು ಬೇಳೆಯ ಖಿಚಡಿ, ಶಿಂಗದಾಣಾ ಥಾಲಿಪೇಟ, ಅಜವಾನದ ಭಜಿ' ಎಂಬುದಾಗಿ ವರ್ಗೀಕೃತ ಜಾಹೀರಾತನ್ನು ಕೊಟ್ಟಿರುತ್ತಾರೆ. ಪುಣೆಯ ಅತಿ ಪ್ರಸಿದ್ಧ ತಿನಿಸು 'ಭಾಕರವಡಾ'. ಅದೂ ಚಿತಳೆ ಬಂಧುಗಳದ್ದೇ ಆಗಬೇಕು. ಅದಕ್ಕೆ ಮಾತ್ರ ಯಾವದೇ ಜಾಹೀರಾತು, ಪ್ರಚಾರದ ಅಗತ್ಯವಿಲ್ಲ!

ಪುಣೆಯ ಜನರು ರುಚಿ ರುಚಿಯಾದ ಖಾದ್ಯಗಳನ್ನು ತಿನ್ನುವುದರಲ್ಲಿ ಆಸಕ್ತರು; ನಿಸ್ಸೀಮರು! ಎಷ್ಟೋ ಬಾರಿ ಹುಡುಕಿ ಹುಡುಕಿಕೊಂಡು ಹೋಗುತ್ತಾರೆ-ಶುಚಿ-ರುಚಿಯಾದ ಊಟಕ್ಕಾಗಿ. ಸುವರ್ಣರೇಖಾ, ಶ್ರೇಯಸ್, ಶಬರಿ ಹೋಟೆಲುಗಳಿಗೆ ಹೋಗುತ್ತಾರೆ. ಅವರುಗಳ ಊಟದಲ್ಲಿ ಶಾವಿಸೊಪ್ಪಿನ ಪಾತಳ ಭಾಜಿ ಮತ್ತು 'ಕೋಶಂಬೀರ'(ಕೊಸಂಬರಿ) ತಪ್ಪದೇ ಇರುತ್ತದೆ. ಕೆಲಕೆಲವು ರೆಸ್ಟೊರಾಗಳು ನಿರ್ದಿಷ್ಟ ಖಾದ್ಯಗಳಿಗಾಗಿ ಪ್ರಸಿದ್ಧವಾಗಿವೆ. 'ಚೇತನ'ದಲ್ಲಿ ಗುಜರಾತೀ ಊಟ, ಗೋಮಾಂತಕದಲ್ಲಿ ಮೀನಿನ ಸಾರು, 'ಕಿನಾರಾ'ದಲ್ಲಿ ಕೊಂಕಣದವರ ಬೇಡಿಕೆಯ ಊಟ, ಬಂಡ್ ಗಾರ್ಡನ್ಸ್‌ನಲ್ಲಿರುವ 'ಸಾಗರ ಪ್ಲಾಜಾ'ದಲ್ಲಿ ರಾಣೇ-ಅಂಗಾರ್ (ಕುರಿಮರಿಯ ಪಾದಗಳ 'ಕರ್‍ರೀ')! ಪುಣೆ ನಿವಾಸಿಗಳು ಗುರುತಿಟ್ಟುಕೊಂಡ ಇಂಥ ಹಲವಾರು ಹೋಟೆಲ್‌ಗಳಿವೆ. ಕಬಾಬ್ ಎಲ್ಲ ಮಾಂಸಾಹಾರದ ಹೋಟೆಲ್‌ಗಳಲ್ಲಿ ಸಿಗುತ್ತಿದ್ದರೂ ಹೋಟೆಲ್ ಅಮೀರ್ ಮಾತ್ರ ಆ ಖಾದ್ಯಪ್ರಿಯರ ನೆನಪಿನಲ್ಲಿ ಉಳಿದಿದೆ. ಹಾಂ, ಬದಲಾವಣೆಯೆಂದು ಒಮ್ಮೆ ನನಗೆ ಪಾರ್ಸಿಗಳ ಊಟದ ರುಚಿ ನೋಡಬೇಕೆಂದೆನಿಸಿತು. ಡೋಳೆ - ಪಾಟೀಲ ರಸ್ತೆಯಲ್ಲಿರುವ ರಘಾಮಾ ಪ್ಯಾಲೇಸ್‌ಗೆ ಹೋಗಿ ಬಂದೆ.

ಏನೂ ಸದ್ದಿಲ್ಲದೆ ಮರಾಠಿಗರ ನಾಲಿಗೆಯನ್ನು ತೃಪ್ತಗೊಳಿಸುವ ನಮ್ಮವರ 'ಶೆಟ್ಟಿ' ಹೋಟೆಲುಗಳು ಗ್ಗ೩೦ರಿಂದ ಇಲ್ಲಿ ತಳವೂರಿವೆ. ರೂಪಾಲಿ, ವೈಶಾಲಿ, ಆಮ್ರಪಾಲಿ - ಈ 'ಲೀ'ಗಳಿಗೆ ಒಬ್ಬರೇ ಶೆಟ್ಟರು ಮಾಲೀಕರು. 'ಪೂರಬ್'-ಶೆಟ್ಟರೂ ಸಾಕಷ್ಟು ಜನಪ್ರಿಯರಾಗಿದ್ದಾರೆ. 'ಮಾಡರ್ನ್ ಕೆಫೆ'ಯ ಗುಂಡೂ ಶೆಟ್ಟರನ್ನು ಮಾತ್ರ ಹೆಸರುಗೊಂಡು ಹೇಳಬೇಕು. ಕನ್ನಡದ ಬಗ್ಗೆ, ಕನ್ನಡ ಮಕ್ಕಳ ಶಿಕ್ಷಣದ ಬಗ್ಗೆ ಅವರಿಗಿರುವ ನಿರ್ವ್ಯಾಜವಾದ ಕಾಳಜಿಯನ್ನು ನಾನು ಬೇರೆ ಊರುಗಳಲ್ಲಿ ಸಹ ಕಡಿಮೆಯಾಗಿ ಕಂಡಿದ್ದೇನೆ.

ಒಟ್ಟಿನಲ್ಲಿ ನೋಡಿದಾಗ ಪುಣೆಯವರು ತಿನಿಸಿನ ಪ್ಲೇಟಿಗಿಂತ ಊಟದ ತಾಟಿಗೇ ಹೆಚ್ಚು ಒಲಿದವರು. ಆದಾಗ್ಯೂ ಪುಣೆಯಲ್ಲಿ ಅವರ ಮೆಚ್ಚಿನ ತಿನಿಸುಗಳ ಅಂಗಡಿಗಳಿವೆ. ಲಕ್ಷ್ಮೀನಾರಾಯಣ ಚಿವಡಾ, ಕಯಾನಿ ಬಿಸ್ಕಿಟ್, ಚಿತಳೇಯವರ ಭಾಕರವಾಡಾ - ಇಂಥ ಕೆಲವು ಹೆಸರು ಕೇಳಿದರೇನೆ ಸಾಕು, ಬಾಯಿ ನೀರೂರುವುದು.

ಕರ್ನಾಟಕದಲ್ಲಿ ಇಡ್ಲಿ ದೋಸೆಗಳು ಇಲ್ಲದ ಹೋಟೆಲುಗಳೇ ಇಲ್ಲ. ಚಹಾ, ಕಾಫಿಯಷ್ಟೇ ಅವು ಅಂತರ್ಗತವಾದವುಗಳು. ಪುಣೆಯಲ್ಲಿ ಮಾತ್ರ 'ಇಲ್ಲಿ ಇಡ್ಲಿ, ದೋಸೆ ಸಿಗುತ್ತವೆ' ಎಂಬ ಮರಾಠಿ ಬೋರ್ಡುಗಳು ತೂಗುತ್ತಿರುವುದೊಂದು ವಿಶೇಷ. ಆದರೆ ಬೆಳಿಗ್ಗೆ ಹೋಗಿ ದೋಸೆಯನ್ನೂ ಸಂಜೆ ಇಡ್ಲಿಯನ್ನೂ ಆರ್ಡರ್ ಮಾಡಹೋದರೆ ಸಿಗುವುದಿಲ್ಲ! ಬೆಳಿಗ್ಗೆ ಇಡ್ಲಿ ಮಾತ್ರ. ಸಂಜೆಗೆ ದೋಸೆಯೊಂದೇ. ಅಂಥ ವೈಚಿತ್ರವೂ ಇರುವಷ್ಟು ಈ ಖಾದ್ಯಗಳು ಪುಣೆಯಲ್ಲಿ ಅಪರೂಪದವುಗಳು.

ಹೋಟೆಲ್ ಉದ್ಯಮದ ಸ್ಥಿತಿಗತಿ ಇಷ್ಟೇನೆ. ಆದರೆ ಪುಣೆಯಂಥ ಸಾಂಪ್ರದಾಯಕ, ಸಾಂಸ್ಕೃತಿಕ ಊರಿನಲ್ಲಿ , ಈಚೆಗಿನ ದಶಕಗಳಲ್ಲಿ ಇಂಜನಿಯರಿಂಗ್ ವೃತ್ತಿ ಭರಭರಾಟೆಯಿಂದ ಪ್ರವರ್ಧಮಾನವಾಗುತ್ತ ಸಾಗಿದೆ. ಈ ಉದ್ಯಮಗಳು ಆಧುನಿಕ ಮ್ಯಾನೇಜ್‌ಮೆಂಟಿನ ಸೂತ್ರಗಳನ್ನು ಅನುಷ್ಠಾನದಲ್ಲಿ ತಂದಿವೆ. ಒಟ್ಟಿನ ಈ ಕ್ಷೇತ್ರದಲ್ಲಿ ಕಿರ್ಲೋಸ್ಕರ್, ಟೆಲ್ಕೋ ಮತ್ತು ಬಜಾಜರದೇ ಸಿಂಹಪಾಲು. ಹಾಂ, ಇವರು ಮೂವರ ಜೊತೆಗೆ ಕನ್ನಡಿಗರಾದ 'ಕಲ್ಯಾಣಿ' ಅವರನ್ನೂ ಸೇರಿಸಬೇಕೆನ್ನುವಷ್ಟು ಬೆಳೆದಿದೆ - ಅವರ 'ಭಾರತ ಫೋರ್ಜ್'. ಪುಣೆಯಲ್ಲಿ ಸಿದ್ಧವಾಗುವ ಬಜಾಜರ ಆಟೊಮೋಬೈಲ್ ವಾಹನಗಳು ದೇಶಾದ್ಯಂತ ಪಸರಿಸಿದ್ದು ತಿಳಿದ ವಿಷಯವೇ ಆಗಿದೆ. ತುಂಬಾ ವರ್ಷಗಳ ಹಿಂದೆ (೧೮೯೪) 'ಮೋದಿ ಸೈಕಲ್ ಮಾರ್ಟ್' ಎಂಬುದು ಆರಂಭವಾಗಿ ಮೊದಲ ಬಾರಿಗೆ ಸೈಕಲ್ ಮಾರಾಟ ನಡೆಯುತ್ತಿತ್ತು. ಮುಂದೆ ೧೯೦೦ರಲ್ಲಿ ಮಾಲಕ ಮೋದಿಯವರು ಪೆಟ್ರೋಲಿನ ಮೋಟರ್ ಸೈಕಲ್ ತರಿಸಿ ಮೊದಲ ಬಾರಿಗೆ ಊರಲ್ಲಿ ತಿರುಗಾಡಿದಾಗ ಇಡೀ ಊರವರೇ ನಿಂತು ನೋಡಿ ಅಚ್ಚರಿಪಟ್ಟರಂತೆ.

ಪುಣೆಯ ಸಾಂಸ್ಕೃತಿಕ ಹಿರಿಮೆಯನ್ನು ಸಮರ್ಥಿಸುವ ಅಂಶಗಳನ್ನು ತುಸು ಗಮನಿಸೋಣ. ಮರಾಠೀ ಸಾಹಿತ್ಯ ವರ್ಧನೆಯಲ್ಲಿ ಪುಣೆಯ ಪಾತ್ರವೇ ಹಿರಿದಾದದ್ದು. ಈ ಬಾಬತ್ತಿನಲ್ಲಿ ಪುಣೆಯ ಕೊಡುಗೆಯನ್ನು ಬದಿಗಿರಿಸಿ ಮರಾಠೀ ಸಾಹಿತ್ಯ ಚರಿತ್ರೆಯನ್ನು ರೂಪಿಸಹೊರಟರೆ 'ಹ್ಯಾಮ್ಲೆಟ್ ಪಾತ್ರವನ್ನು ಕೈಬಿಟ್ಟು ಹ್ಯಾಮ್ಲೆಟ್ ನಾಟಕವನ್ನು ಅಭಿನಯಿಸಿದಂತಾಗುವುದು' ಎಂಬುದಾಗಿ ಒಬ್ಬ ಪುಣೇ ಪ್ರೊಫೆಸರರ ಅಂಬೋಣ. ಅವರು ಹಾಗೆ ಹೇಳಿಕೊಳ್ಳಲಿ. ಅದರಿಂದ ಕೊಲ್ಹಾಪುರ, ನಾಗಪುರ, ಅಷ್ಟೇ ಏಕೆ, ಮುಂಬಯಿಗಳತ್ತ.... ಸಾಹಿತ್ಯಿಕರ ಕೊಡುಗೆಯನ್ನು ಪೂರ್ಣ ಕಡೆಗಣಿಸಿದಂತಾದೀತು. ಹಾಗೆ ನೋಡಿದರೆ ಪ್ರಥಮ ದರ್ಜೆಯ ಕವಿ, ನಾಟಕಕಾರ, ಕತೆಗಾರರನೇಕರು ಮೇಲ್ಕಂಡ ಊರುಗಳಲ್ಲಿ ಇದ್ದಾರೆ. ಒಂದು ಮಾತು ನಿಜ; ಪುಣೆಯಲ್ಲಿದ್ದಷ್ಟು ಮರಾಠೀ ಸಾಹಿತ್ಯ ಪ್ರೇಮಿಗಳು, ಉತ್ತಮ ಸಾಹಿತ್ಯದ ಆರಾಧಕರು ಬೇರೆ ಊರುಗಳಲ್ಲಿ ಸಿಕ್ಕಲಾರರು.

ಇನ್ನು ಪುಣೆಯ ಮರಾಠೀ ಲೇಖಕರಲ್ಲೆಲ್ಲ ಅತ್ಯಂತ ಜಾಜ್ವಲ್ಯಮಾನವಾದ ಹೆಸರು

ಪು.ಲ. ದೇಶಪಾಂಡೆಯವರದು. ಇಡೀ ಮಹಾರಾಷ್ಟ್ರದಲ್ಲೇ ಅವರ ಯಶೋದುಂದುಭಿ ಮೊಳಗುತ್ತಿರುವುದು ಪುಣೆಯವರ ಭಾಗ್ಯ.

ಇತ್ತ ಮರಾಠೀ ರಂಗಭೂಮಿ ಹುಟ್ಟಿದ್ದೇ ಪುಣೆಯಲ್ಲಿ. ಅಣ್ಣಾಸಾಹೇಬ ಕಿರ್ಲೋಸ್ಕರರು ೧೮೭೭ರಲ್ಲಿ ಸಂಗೀತ ಶಾಕುಂತಲವನ್ನು ರಂಗದ ಮೇಲೆ ತಂದಂದಿನಿಂದ ರಂಗಭೂಮಿಯ ಏರಿಕೆಗೆ ಚ್ಯುತಿ ಬಂದಿಲ್ಲ. ಬಾಲಗಂಧರ್ವ ಮೊದಲಾದವರು ರೂಢಿಸಿದ ನಾಟ್ಯಸಂಗೀತ ಇಂದಿಗೂ ಇಲ್ಲಿಯವರನ್ನು ರಂಜಿಸುವ ಪರಮೋಚ್ಚ ಸಾಧನವಾಗಿದೆ. ಕರ್ನಾಟಕದಲ್ಲಿಯೂ ನಮ್ಮ ವೃತ್ತಿನಾಟಕ ರಂಗಭೂಮಿಯು ಸಂಗೀತಮಯವಾಗಿದ್ದಿತು. ಆದರೆ ಮರಾಠಿಯಲ್ಲಿದ್ದಂತೆ ಬೆಳೆದು ಬರಲಿಲ್ಲ.

ಮಹಾರಾಷ್ಟ್ರದಲ್ಲಿ ವಿಶೇಷತಃ ಪುಣೆಯಲ್ಲಿ ಇಂದಿಗೂ ರಂಗಭೂಮಿಯು ಜೀವಂತ ಇರುವುದಕ್ಕೆ ಕೆಲವು ವಿಶಿಷ್ಟ ವಿಧಾನಗಳು ಕಾರಣವಾಗಿವೆ. ಹದಿವಯದ ಕಾಲದಿಂದ ನಾಟಕ ಸ್ಪರ್ಧೆಗಳು ಏರ್ಪಡುತ್ತವೆ. ಈ ಮಟ್ಟದಲ್ಲಿ ಹೆಚ್ಚಿನ ಶ್ರೇಯಸ್ಸು ಪುರುಷೋತ್ತಮ ಕರಂಡಕಕ್ಕೆ ಸಲ್ಲಬೇಕು. ನಗರದ ಬ್ಯಾಂಕುಗಳವರೂ ನಾಟಕ ಸ್ಪರ್ಧೆ ನಡೆಸುತ್ತಾರೆ. ಕಿವುಡ-ಮೂಕರಿಗಾಗಿಯೂ ನಾಟಕ ಸ್ಪರ್ಧೆಗಳಿವೆಯೆಂದರೆ ನಂಬಿರಿ. ವೃತ್ತಿಯಲ್ಲಿ ಮೂಲತಃ ಡಾಕ್ಟರರಾಗಿರುವ ಮೋಹನ ಅಘಾಸೆಯವರು ಮಕ್ಕಳ ಥಿಯೇಟರನ್ನು ಸೃಷ್ಟಿಸಿ ಬೆಳೆಸುವಲ್ಲಿ ಸದಾ ನಿರತರು.

ಮುಖ್ಯವೆಂದರೆ ಹಿರಿಯ ತಲೆಮಾರಿನ ಮರಾಠಿ ಪ್ರೇಕ್ಷಕವೃಂದ ಅಭಿನಯದ ರಸಗ್ರಹಣವನ್ನು ಕರಗತವಾಗಿ ಮಾಡಿಕೊಂಡಿದ್ದುದು ಅವರ ಮುಂದಿನ ಪೀಳಿಗೆಯವರಲ್ಲಿಯೂ ರಕ್ತಗತವಾಗಿಬಿಟ್ಟಿದೆ. ಅಂತೆಯೇ ಬಾಲಗಂಧರ್ವ ನಾಟ್ಯ ಮಂದಿರದಲ್ಲಿ ಮಧ್ಯಾಹ್ನ ೧೨-೩ರಿಂದ ಬೇರೆ ಬೇರೆ ನಾಲ್ಕು ನಾಟಕಗಳು, ರವಿವಾರದ ಸೂಟಿಯಲ್ಲಿ ಮಾತ್ರವಲ್ಲ, ಉಳಿದ ದಿನಗಳಲ್ಲಿಯೂ, ನಿಯಮಿತವಾಗಿ ಪ್ರಯೋಗವಾಗುತ್ತಿರುವಂಥ ಸನ್ನಿವೇಶ ಪುಣೆಯಲ್ಲಿ ಮಾತ್ರ ಇದೆ. ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ನಾಟಕ ಹಾಗೂ ರಂಗಭೂಮಿಯನ್ನು ಕುರಿತು ನಡೆಯುವ ನವೀನ ಪ್ರಯೋಗಗಳು. ಅದರಲ್ಲಿ ತರುಣರೇ ಹೆಚ್ಚಾಗಿ ತೊಡಗಿರುವುದು ಸರಿಯೇ. ಆದರೆ ಅವರಾಡುವ ಭಾಷೆ ಮರಾಠಿ ಜಾಯಮಾನವನ್ನು ಸತ್ವಯುತವಾಗಿ ಮೂಡಿಸುವಂತಹದಲ್ಲ ಎಂಬ ಕೊರಗು ದಿಗ್ದರ್ಶಕರಿಗಿದೆ. ಅದಕ್ಕೆ ಅವರು ಕೊಡುವ ಕಾರಣ, ಇಂಥ ಯುವಕ - ಯುವತಿಯರ ಇಂಗ್ಲಿಷ್ ಮಾಧ್ಯಮದ ಶಿಕ್ಷಣ!

ಪುಣೆಯಲ್ಲಿಯ ಸಂಗೀತ ಸಂಭ್ರಮವನ್ನು ಎಷ್ಟು ಹೊಗಳಿದರೂ ಕಡಿಮೆಯೇ. ಪಶ್ಚಿಮ ಹಿಂದುಸ್ಥಾನದಲ್ಲಿ ಅದರ ಹಬ್ಬುಗೆಗೆ ಪುಣೆಯೇ ನರ್ಸರಿಯಾಗಿದ್ದಿತು. ೧೮೮೦ರ ದಶಕದಲ್ಲಿ ಭಾಸ್ಕರಬುವಾ ಬಖಲೆಯವರಿಂದ ಪುಣೆಯಲ್ಲಿ ಹಿಂದುಸ್ತಾನಿ ಸಂಗೀತದ

ಬೀಜವನ್ನು ನೆಡಲಾಯಿತೆನ್ನಬಹುದು. ಅಬ್ದುಲ್ ಕರೀಮಖಾನರ ಆರ್ಯ ಸಂಗೀತ ವಿದ್ಯಾಲಯ, ಪುಣೆ ಭಾರತ ಗಾಯನ ಸಮಾಜ- ಇವೇ ಮೊದಲಾದ ಹಳೆಯ ಸಂಸ್ಥೆಗಳೂ, ಈಚೆಗೆ ಆರಂಭವಾದವುಗಳೂ ಏಕಪ್ರಕಾರವಾಗಿ ಶಾಸ್ತ್ರೀಯ ಸಂಗೀತದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಲೇ ಇರುತ್ತವೆ. ಅಂಥಲ್ಲಿ ಕುಳಿತು ಕೇಳುವುದೇ ಒಂದು ಸುಯೋಗದ ಅನುಭವ. ಗರವಾರೆ ಕಾಲೇಜಿನ ಸಭಾಗೃಹದಲ್ಲಿ ಎರಡು ಸಾವಿರದಷ್ಟು ಜನ ಕುಳಿತು ಕೇಳುತ್ತಾರೆ. ಅವರೆಲ್ಲರಲ್ಲಿ ಏಕಪ್ರಕಾರವಾದ ಗಾಯನ ರಸಾಸ್ವಾದದ ಮಟ್ಟ ಇರುವಂತೆ ತೋರುತ್ತದೆ. ತಲೆದೂಗುವುದನ್ನು ಬಿಟ್ಟರೆ ಹಾಡಿನ ಮಧ್ಯೆ ವಾಹವ್ಾ ಅನ್ನುವುದು, ಚಪ್ಪಾಳೆ ಬಾರಿಸುವುದು- ಇದಾವುದನ್ನೂ ತಪ್ಪಿ ಸಹಿತ ಮಾಡುವುದಿಲ್ಲ. ಬಂದವರಲ್ಲಿ ವಯೋಮಾನದ, ಹೆಣ್ಣು-ಗಂಡಿನ ಭೇದವೂ ಇರುವುದಿಲ್ಲ.

ಪುಣೆಯ ಸಂಗೀತ ಕಾರ್ಯಕ್ರಮಗಳಿಗೆ ಕಲಶಪ್ರಾಯವಾದದ್ದು ಸವಾಯಿ ಗಂಧರ್ವ ಪುಣ್ಯತಿಥಿ. ಐದು ಸಾವಿರ ಜನರು ಅಖಂಡ ಮೂರು ದಿನಗಳ ರಾತ್ರಿ ಕುಳಿತು ಆಲಿಸುತ್ತಾರೆ. ದೇಶದ ಬೇರೆ ಬೇರೆ ಕಡೆಗಳಿಂದ ಗಾಯಕರಿಗೆ ಆಮಂತ್ರಣ ಹೋಗಿರುತ್ತದೆ. ಅವರಾರೂ regrets ಪತ್ರ ಕಳಿಸುವುದಿಲ್ಲ. ಪುಣೆಯ ಶ್ರೋತೃಗಳು ಮೆಚ್ಚಿದರೆಂದರೆ ಅದೊಂದು ಧನ್ಯತೆಯ ಭಾಗವೆಂದು ಅತ್ಯುಚ್ಚ ಶ್ರೇಣಿಯ ಕಲಾವಿದರೂ ತಿಳಿಯುತ್ತಾರೆ. ಶ್ರೋತೃಗಳಾದರೂ ಆ ಎಪ್ಪತ್ತು-ಎಂಭತ್ತು ಗಾಯಕರ, ನೃತ್ಯಕಾರರ ಕಾರ್ಯಕ್ರಮಕ್ಕಾಗಿ ಹೊರ ಊರುಗಳಿಂದಲೂ ಬರುತ್ತಾರೆ. ಕಳೆದ ಮೂವತ್ತೈದು ವರ್ಷಗಳಿಂದ ನಡೆದುಕೊಂಡು ಬಂದ ಈ ಕಾರ್ಯಕ್ರಮದ ಸೂತ್ರಧಾರರು ಇನ್ನಾರು ಅಲ್ಲ ನಮ್ಮ ಭೀಮಸೇನ ಜೋಶಿಯವರು. ಕೊನೆಯ ರಾತ್ರಿ, ಅಂದರೆ ರವಿವಾರದ ಬೆಳಗಿನಲ್ಲಿ ಅವರಿಂದಲೇ ಕಾರ್ಯಕ್ರಮದ ಮುಕ್ತಾಯವಾಗಬೇಕು. ಇವತ್ತು ಪುಣೆಯಲ್ಲಿರುವ ಅತ್ಯಂತ ೆತ್ತರ ಸ್ಥಾನದಲ್ಲಿರುವ ಗಾಯಕರು ಅವರೇ. ಇದನ್ನು ಪುಣೆಯವರೇ ಒಪ್ಪಿಕೊಳ್ಳುತ್ತಾರೆ. ಪುಣೆಯಲ್ಲಿ ಗಣ್ಯರಿಗೆ ಸಲ್ಲಬೇಕೆಂದಿರುವ ಎಲ್ಲ ಪುರಸ್ಕಾರಗಳೂ ಅವರಿಗೆ ಸಂದಿವೆ.

ಗೆಳೆಯ ಕೀರ್ತಿನಾಥ ಕುರ್ತಕೋಟಿಯವರು, ಒಮ್ಮೆ ಧಾರವಾಡದ ಜಿ.ಬಿ. ಜೋಶಿಯವರ ಅಟ್ಟದ ಮೇಲೆ ನಾವೆಲ್ಲ ಕುಳಿತಾಗ "ಈ ಹಾವನೂರರಿಗೆ ಮತ್ತು ಭೀಮಸೇನ ಜೋಶಿಗೆ ಪುಣೆಯ ಮೇಲಿನ ಮೋಹ ಅದೆಂತಹದೋ!" ಎಂದು ಚೇಷ್ಟೆಯಲ್ಲಿ ಹೇಳಿದ್ದರು. ಹೌದೇ, ಹೌದು. ಭೀಮಸೇನರಿಗೆ ಪುಣೆಯಂತಹ ನೆಚ್ಚಿನ ಮೆಚ್ಚಿನ ಶ್ರೋತೃಗಳು ಬೇರೆ ಕಡೆಗೆ ಸಿಗಲಾರರು. ಹಾವನೂರರಿಗೆ ಪುಣೆಯಲ್ಲಿ ಜರುಗುವಂತಹ ಸಂಗೀತದ ಶ್ರವಣಾನಂದ ಬೇರೆಲ್ಲಿಯೂ ಸಿಗದು.

ಎಷ್ಟೊಂದು ಸಾಮಾಜಿಕ ಸೇವಾ ನಿರತ ಸಂಘ -ಸಂಸ್ಥೆಗಳು ಇಲ್ಲಿವೆ! 'ನಮ್ಮ ಊರಲ್ಲಿಯೂ ಬೇಕಾದಷ್ಟು ಇವೆ' ಎನ್ನದಿರಿ. ಜೀವನದಲ್ಲಿ ಮಾತಪಿತೃ ಋಣ, ಗುರು

ಋಣ ಇವನ್ನು ತೀರಿಸಿ ಮುಗಿಸುವುದು ಸಾಧ್ಯವಿಲ್ಲ -ಎಂಬ ಉಪನಿಷತ್ ಹೇಳಿಕೆಯಿದೆ. ಅದರಂತೆಯೆ ಸಮಾಜ ಋಣ, ಈ ಋಣವನ್ನು ತುಸುವಾದರೂ ತೀರಿಸುವೆಂಬಂತೆ ಇಲ್ಲಿ ಸ್ಥಾಪಿತವಾಗಿರುವ 'ಸಾಮಾಜಿಕ ಕೃತಜ್ಞತಾ ನಿಧಿ' ಸಂಸ್ಥೆ ನಿಮ್ಮ ಊರಲ್ಲಿದೆಯೆ? ಗಣೇಶೋತ್ಸವ, ನವರಾತ್ರಿ ಮುಂತಾದ ಸಂದರ್ಭಗಳಲ್ಲಿ ಸಮಾಜಕ್ಕೆ ವಿವಿಧ ರೀತಿಯಿಂದ ಸೇವೆ ಸಲ್ಲಿಸಿದ ಹಣ್ಣು ಮುದುಕರನ್ನು (೮೦ ವರ್ಷ ದಾಟಿದವರನ್ನು) ಅಕ್ಷರಶಃ ಹುಡುಕಿಕೊಂಡು ಹೋಗಿ, ಕರತಂದು ಸಾರ್ವಜನಿಕವಾಗಿ ಸತ್ಕರಿಸುವ ಪರಿಪಾಠವನ್ನು ನಾನು ಪುಣೆಯಲ್ಲಿ ಮಾತ್ರ ಕಂಡಿದ್ದೇನೆ. 'ಸೇವಾಶ್ರಮ ಟ್ರಸ್ಟ್' ಎಬೊಂದು ಸಂಸ್ಥೆಯಿದೆ. ಸಾದಾ ಹೆಸರು, ಆದರೆ ಅದು ಗ್ರಾಮೀಣ ಸ್ವಾಸ್ಥ್ಯಕ್ಕಾಗಿ ಮೀಸಲಾದ ಸಂಸ್ಥೆ.

ಪುಣೆಯವರ ಜಾಗೃತ ಪ್ರಜ್ಞೆಗೆ ಇದೊಂದು ಉದಾಹರಣೆಯನ್ನು ಕೊಡುವೆ. ನಾನಿಲ್ಲಿ ಪ್ರಸ್ತಾಪಿಸಿದ ಘಟನೆ ಯಾವುದೇ ನಗರದಲ್ಲಿ ಸಂಭವಿಸಬಹುದು. ಪುಣೆಯಲ್ಲಾದ ಅದರ ಪ್ರತಿಸ್ಪಂದನ ವಿಶಿಷ್ಟ ರೀತಿಯದು. ಕಾಲೇಜ್ ವಿದ್ಯಾರ್ಥಿ- ವಿದ್ಯಾರ್ಥಿನಿಯರ ಹಂಡಬಂಡ ಪ್ರೇಮ-ಕಾಮದ ಪರ್ಯವಸಾನವು ದುರಂತರೂಪದ್ದಾಗಿರುವ ಸಾಧ್ಯತೆ ಇದೆಯಷ್ಟೆ. ಪುಣೆಯಲ್ಲಿ ಹಾಡೇಹಗಲೇ, ಕಾಲೇಜಿನ ಆವರಣದಲ್ಲಿಯೇ ಓರ್ವ ವಿದ್ಯಾರ್ಥಿನಿಯ ಕೊಲೆಯಾಯಿತು. ಓರ್ವ ಸಿರಿವಂತ ಪುಂಡ ಯುವಕನು ಅಮಾಯಕ ವಿದ್ಯಾರ್ಥಿನಿಯನ್ನು ದೈಹಿಕ ಸುಖಕ್ಕೆ ಎಳೆದಾಗ ಅವಳು ಒಪ್ಪಿರಲಿಲ್ಲ. ಪರಿಣಾಮವಾಗಿ ಕಗ್ಗೊಲೆ. ಇದರ ಹಿನ್ನೆಲೆ ಹಾಗೂ ಮುಂದಿನ ಕ್ರಮಗಳನ್ನು ಆಮೂಲಾಗ್ರವಾಗಿ ಚರ್ಚಿಸಲು ಒಂದು ಪರಿಸಂವಾದ ಏರ್ಪಟ್ಟಿದ್ದಿತು. ಅದರಲ್ಲಿ ಶಿಕ್ಷಣ ಸಂಸ್ಥೆಯವರು, ಪಾಲಕರು, ಪೋಲಿಸ್ ಅಧಿಕಾರಿಗಳು ಭಾಗವಹಿಸಿದ್ದರು. ಪ್ರೇಮದುರಂತಕ್ಕೆ ಬಲಿಯಾದ ಆ ಕನ್ಯೆಯ ಬಗ್ಗೆ ಸಾಮಾನ್ಯವಾಗಿ ಹೊರಗಿನವರ ನಿಲುವು ಏನಿರುತ್ತದೆ? 'ಅಯ್ಯೋ, ಪಾಪ' ಎಂಬ ಸಾದಾ ರೀತಿಯ ಸಹಾನುಭೂತಿಯ ಜೊತೆಗೆ ಅವಳು ಹಲ್‌ಚಲ್ ಸ್ವಭಾವದವಳಿದ್ದು ಅವನ ಸಂಗಡ ಮೆರೆದಾಡಿರಲಿಕ್ಕೂ ಸಾಕು' ಎಂದೂ ಜನ ಭಾವಿಸುತ್ತಾರೆ. ಆದರೆ ಹುಡುಗನ ಬಗ್ಗೆ? 'ಅವನು ಮಾಡಿದ್ದು ತಪ್ಪು' ಎಂದಷ್ಟು ನುಡಿದು 'ಹೆಣ್ಣು ಒಂದು ಸುಖವಸ್ತು. ಗಂಡು ತನ್ನ ಪೌರುಷ ಪ್ರದರ್ಶನ ಮಾಡೋದು ನಡೆದುಕೊಂಡು ಬಂದುದೇ' ಎಂಬ ವಿಚಾರವೂ ನಮಗೆ ಬಂದು ಹೋಗುತ್ತದೆ. ಆ ಮುಂದೆ ಅವನ ಮೇಲೆ ಕ್ರಿಮಿನಲ್ ವಿಚಾರಣೆ ನಡೆದು ಶಿಕ್ಷೆಯಾಗಬಹುದು. ಅದು ಬೇರೆ ವಿಷಯ. ಆದರೆ ಸಾಮಾಜಿಕ ನೆಲೆಯಲ್ಲಿ ನಾವು ಎಷ್ಟರ ಮಟ್ಟಿಗೆ ಅವನ, ಅವನಂಥವರ ವಿರುದ್ಧ ಅದಾವ ರೀತಿಯಲ್ಲಿ ಬಹಿರಂಗವಾಗಿ ಖಂಡಿಸುತ್ತೇವೆ; ಕ್ರಮ ಕೈಕೊಳ್ಳುತ್ತೇವೆ? ಆ ದಿನದ ಚರ್ಚೆಯಲ್ಲಿ ಇಂಥ ಕೃತ್ಯ ನಡೆಯುವಲ್ಲಿ ಸಾಮಾಜಿಕವಾಗಿ ನಾವೆಲ್ಲರೂ ಹೊಣೆಗಾರರು ಎಂಬ ಅಭಿಪ್ರಾಯ ಎದ್ದುಕಾಣುವಂತೆ ವ್ಯಕ್ತವಾಯಿತು.

ಪುಣೆಯಂತಹ ಪ್ರತಿಷ್ಠಿತ ನಗರದಲ್ಲಿ ಮಧ್ಯಮ ವರ್ಗದವರೇ ಎದ್ದು ಕಾಣುತ್ತಾರೆ.

ಸರಿಯೇ, ಇಂಥವರ ಬದುಕು, ನಡತೆ, ಯಾವ ರೀತಿಯದು? ನನ್ನ ಅನುಭವಕ್ಕೆ ಬಂದಷ್ಟನ್ನು ಇಲ್ಲಿ ಕಾಣಿಸಲೇಬೇಕು.

ಅಬ್ಬಾಸಭಾಯಿ ಎಂಬ ರಿಕ್ಷಾವಾಲನ ಹೆಚ್ಚಿನ ಸಮಯ ಲಾ ಕಾಲೇಜ್ ರಸ್ತೆಯಲ್ಲಿ ಫಿಲ್ಮ್ ಇನ್‌ಸ್ಟಿಟ್ಯೂಟ್ ಬಳಿಯ ಗಿರಾಕಿಗಳನ್ನು ಒಯ್ಯುವುದರಲ್ಲಿ ಕಳೆಯುತ್ತದೆ. ಅಲ್ಲಿ ತೋರಿಸುವ ಸಿನೆಮಾಗಳ ಪೂರ್ವ ನಿರೀಕ್ಷಣೆಗೆ ಅವನನ್ನು ಕರೆಯುತ್ತಾರೆ ಎಂದರೆ ನಂಬಿರಿ. ಅನಾಯಾಸವಾಗಿ ಪುಕ್ಕಟೆ ಸಿಕ್ಕುವುದೆಂದೇನೂ ಅಲ್ಲ. ಚಿತ್ರಗಳ ಉತ್ತಮಿಕೆಯನ್ನು ಆತ ಗುರುತಿಸಬಲ್ಲ. ಒಮ್ಮೆ 'ಉಸ್ ಕೀ ರೋಟಿ' ಚಿತ್ರದ ಪ್ರಿವ್ಯೂ ನಡೆದಿತ್ತು. ಅವನಿಗೆ ಅದರ ಕತೆ ನಿಧಾನವಾಗಿ ಸಾಗುತ್ತಿದೆಯೆಂದು ಅನಿಸಿ ಅರ್ಧಕ್ಕೇ ಎದ್ದು ತನ್ನ ವಾಹನದತ್ತ ಬಂದ. ಆ ವೇಳೆಗೆ ಬಂದ ಓರ್ವ 'ಗಿರಾಕಿ'ಯನ್ನು ರೈಲ್ವೆ ಸ್ಟೇಷನ್ನಿಗೆ ಬಿಟ್ಟು ಮರಳಿ ಬಂದ. ಆಗೂ ಕತೆ ಬಹಳವೇನೂ ಮುಂದುವರಿಯಲಿಲ್ಲವಂತೆ. ಒಟ್ಟಿನಲ್ಲಿ ಆ ಚಿತ್ರಕ್ಕೆ ಅವನು ಕೊಟ್ಟ ಸರ್ಟಿಫಿಕೇಟ್ 'ಬುರುಸಾಸ್'!

ಒಮ್ಮೆ ಲಕ್ಷ್ಮೀ ರೋಡಿನಲ್ಲಿ ಹೋಗಿದ್ದಾಗ ನನ್ನ ಚಪ್ಪಲಿಯ ಬಾರು ಕಿತ್ತಿತು. ಹತ್ತಿರದ ಮೋಚಿಯಲ್ಲಿ ರಿಪೇರಿ ಮಾಡಿಸಿದೆ. ಆದರೆ ಪರ್ಸನ್ನೇ ತಂದಿರಲಿಲ್ಲ . ಅವನ ಗುರುತು ಏನೂ ಇಲ್ಲ. ಆದರೂ ಸಂಕೋಚಪಟ್ಟುಕೊಂಡು "ಪರ್ಸ್ ಮರೆತು ಬಂದೆ" ಎಂದಾಗ 'ಪರವಾ ಇಲ್ಲ. ನಾಳೆ ಕೊಡಿರಿ" ಎಂದ ನನ್ನ ಕಡೆ ನೋಡದೇ. " ನಾನು ದೂರದಲ್ಲಿ ಇದ್ದೇನೆ. ಮತ್ತೆ ಎಂದು ಈ ಕಡೆ ಬರ್ತೇನೆಯೋ, ಗೊತ್ತಿಲ್ಲ"ಎಂದೆ. 'ಚಿಂತಿಲ್ಲ. ಬಂದಾಗ ಕೊಡಿರಿ' ಎಂಬುದು ಅವನ ನಿರ್ಲಿಪ್ತ ಉತ್ತರ. ೧೦-೧೫ ದಿನಗಳು ಕಳೆದ ಮೇಲೆ ಹಣ ಕೊಡುವಾಗ ಹಿಂದಿನ ಸಂದರ್ಭವನ್ನು ಪ್ರಸ್ತಾವಿಸಿ ಕೊಟ್ಟೆ. ಹೌದೋ ಅಲ್ಲೋ ಅನ್ನುವಷ್ಟು ಮುಗುಳು ನಗೆ ನಕ್ಕನಲ್ಲದೆ " ಹಾಂ ಇವರು ಇಲ್ಲೀ ತನಕ ಬಂದು ಹಣ ಕೊಟ್ಟರಲ್ಲಾ" ಎಂಬ ಕೃತಜ್ಞತೆ ತೋರಲಿಲ್ಲ. ತೌಲನಿಕವಾಗಿ ಹೇಳುವುದಾದರೆ ಪುಣೆಯ ಶ್ರೀ ಸಾಮಾನ್ಯರು ನೇರ ನಡತೆಯವರು ಎಂದೇ ನನ್ನ ಅನುಭವ ಒಟ್ಟಿನಲ್ಲಿ.

ಇಲ್ಲಿನ ಜನರ ಹೆಸರಿನ ಬಗ್ಗೆ ತುಸು ಮೋಜು ಮಾಡಬೇಕೆನಿಸುವುದು. ಮೊದಲಿಗೆ ಅವರ ಹೆಸರುಗಳು 'ಆಲಿ' ಪ್ರತ್ಯಯ ಹಚ್ಚಿ ಎಲ್ಲವನ್ನು ಸ್ತ್ರೀ ಲಿಂಗಕ್ಕೆ ತಿರುಗಿಸುವುದು - ಪುಣೆಯದೇ ವೈಶಿಷ್ಟ್ಯ. ರೂಪಾಲಿ, ಶೇಫಾಲಿ, ಸೋನಾಲಿ, ಗ್ರಂಥಾಲಿ ಏನೆಲ್ಲ. ಅದರಂತೆ 'ಜಾಬಾಲಿ' ಎನ್ನಬಹುದಲ್ಲ! ಹಾಂ ಎರಡು ಮನೆಗಳ ಹೆಸರುಗಳು ದೂರದಿಂದ ನನಗೆ ' ಚಂಡಾಲಿ' , 'ಮವಾಲಿ' ಎಂಬುದಾಗಿ ಕಂಡವು ಯಾಕಿರಬಾರದು? ಆದರೆ ಹತ್ತಿರ ಹೋದಾಗ ಗೊತ್ತಾಯಿತು - ಅವು 'ಚಂದಾಲಿ', 'ಮಂದಾಲಿ'ಗಳೆಂದು. ಇನ್ನೂ ಕೆಲವಕ್ಕೆ ಅರ್ಥವೇ ಆಗುವುದಿಲ್ಲ. 'ಅ-ಮನ' ಎಂಬುದು ಒಂದು ಕಟ್ಟಡದ ಹೆಸರು. ಮನವಿಲ್ಲದ್ದು ಏಕಾಗಬೇಕು ಆ ಮನೆ? ಹೋಗಲಿ. 'ಅನೀವ' ಎಂಬ ಹೆಸರಿಗೆ ಏನು ಅರ್ಥ?.

ಮನೆಗಳ ಹೆಸರುಗಳೆಲ್ಲ ಹೆಚ್ಚಾಗಿ ಇಕಾರಾಂತ ಸ್ತ್ರೀಲಿಂಗ ಪದಗಳು. ಆದರೆ ಮನೆತನಗಳ ಹೆಸರುಗಳು 'ಎ' ಕಾರಂತಗಳು. 'ಭೋಸಲೆ', 'ಜಾಗಲೆ', 'ಲೇಲೆ', 'ಗರವಾರಿರೆ', 'ಮರಾಠೆ'-ಇಂಥವುಗಳು ಲೆಕ್ಕವಿಲ್ಲದಷ್ಟು. ಈ 'ಎ' ಬಹುವಚನ ಸೂಚಕ. ಮಜ್ಜಿಗೆ - ಮಜ್ಜಿಗೆಯವರು, ಎಂಬುದೇ ಟಾಕವಾಲೆ. ಸವಿಸವಿ ಮಾತನಾಡುವ ಜನರು -ಗೋಡಬೋಲೆ. ಆದರೆ ರಾಣೆ? 'ರಾಣೆಯರು' ಅಲ್ಲ, ಮತ್ತೆ! ಇತ್ತ(ವಸಂತ)ಸಾಠೆ, (ವಿಜಯ) ಹಜಾರೆ- ಇವರ ಪ್ರಸ್ತಾಪ ಬಂದಾಗ ನಮಗೆ ಅವುಗಳಲ್ಲಿಯ ೬೦, ೧೦೦೦ದ ಸಂಖ್ಯೆ ಗಮನಕ್ಕೆ ಬರುವುದಿಲ್ಲ ಅಲ್ಲವೆ? ಈ 'ಎ'ಕಾರದ ಪ್ರಭಾವ ನಮ್ಮವರ ಮೇಲೂ ಆಗ್ತಾ ಇದೆ. ಪುಣೆಯಲ್ಲಿ ವಾಸವಾಗಿರುವ ಗಲಗಲಿ ಅವರು ತಮ್ಮ ಮನೆಯ ಮುಂದಿನ ಫಲಕದ ಮೇಲೆ 'ಗಲಗಲೆ' ಎಂದು ಬರೆಯಿಸಿದ್ದಾರೆ.

ಇಲ್ಲಿಯ ಜನ ಇತರ ನಗರವಾಸಿಗಳಿಗೆ ಹೋಲಿಸಿದಾಗ ಒಟ್ಟಿನಲ್ಲಿ ಹೆಚ್ಚು ಸೌಮ್ಯರು. ಬೆಂಗಳೂರಲ್ಲಿ ಅದರ ಸುತ್ತಮುತ್ತ ನಡೆಯುವಂತೆ ದರೋಡೆಗಳು ಇಲ್ಲಿ ನಡೆಯುವುದಿಲ್ಲ.(ಜ. ವೈದ್ಯರ ಕೊಲೆ ಮಾಡಿದವರು ಸ್ಥಳೀಕರಲ್ಲ) ಸೌಮ್ಯರು ಎಂದಾಕ್ಷಣ ಸಿಟ್ಟಿಗೇಳುವುದಿಲ್ಲ ಎಂದಲ್ಲ; ಅದನ್ನು ತೋರ್ಪಡಿಸುವುದಿಲ್ಲ. ಅರ್ಥಾತ್ ಉತ್ತರ ಕರ್ನಾಟಕದವರಂತೆ ಘುಟ್ಟನೆ ಒದರಾಡ ಹೋಗುವುದಿಲ್ಲ. ಆಗ ಏನು ಮಾಡ್ತಾರೆ ಗೊತ್ತೆ? ಒಂದು, ಎರಡು, ಮೂರು ಎಂದು ಹತ್ತರ ವರೆಗೆ ಅಂಕಿಯನ್ನು ಮಟಮಟಿಸುತ್ತಾರೆ. ಒದರಾಡುವ ಹೆಂಡತಿಗೆ ಎದುರುತ್ತರ ಕೊಡಲಾಗದ ನಮ್ಮ ಕಡೆಯ ಗಂಡಸರು - ಅಲ್ಲ ಗಂಡಂದಿರು - ಈ ವಿಧಾನವನ್ನು ಅನುಸರಿಸಬಹುದು.

ಇಲ್ಲಿಯ ತರುಣರು ಇತರ ಕಡೆಗಳಲ್ಲಿ ಇರುವ ತರುಣರ ರೀತಿಯಲ್ಲಿಯೇ ಇದ್ದಾರೆ. ಅವರನ್ನು ಬಿಡೋಣ. ಆದರೆ 40 ದಾಟಿದವರು ಏನಾದರೂ ಚಟುವಟಿಕೆಯಲ್ಲಿ ತೊಡಗಿಕೊಂಡೇ ಇರುತ್ತಾರೆ. ಲಘು ಉದ್ಯೋಗ ಮಾಡಿಕೊಂಡು ಹಣ ಗಳಿಸುವುದಕ್ಕೆ ಹಾತೊರೆಯುತ್ತಾರೆ. ಇಲ್ಲವೆ ಧಾರ್ಮಿಕ, ಶೈಕ್ಷಣಿಕ ಅಥವಾ ರಂಗ ಸಂಬಂಧಿಯಾದ ಹವ್ಯಾಸವನ್ನು ಬೆಳೆಸಿಕೊಂಡಿರುತ್ತಾರೆ. ಪರಿಣಾಮವಾಗಿ ಸಣ್ಣ - ದೊಡ್ಡ ಸಂಘಗಳು, ಸಂಸ್ಥೆಗಳು ಈ ಊರಲ್ಲಿ ಬಹು ದೊಡ್ಡ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಎಷ್ಟೊಂದು ಶಿಕ್ಷಣ ಸಂಸ್ಥೆಗಳು! ಇಲ್ಲಿಯ ಶಿಕ್ಷಣ ಮಾತ್ರ ದ.ಕ. ಜಿಲ್ಲೆಯಲ್ಲಿದ್ದಂತೆ ಮೇಲಿನ ಮಟ್ಟದ್ದು.

ವಿದ್ಯಾಭಿಸರಣದ ಇನ್ನೊಂದು ಬಗೆ ಎಂದರೆ ಉಪನ್ಯಾಸ ಕಾರ್ಯಕ್ರಮಗಳು. ಭಾಷಣವನ್ನು ಆಲಿಸುವುದರಲ್ಲಿ ಇಲ್ಲಿಯ ಜನರ ಕಿವಿಗಳು ಬಲು ಚುರುಕು! ಅದಕ್ಕೆ ತಕ್ಕಂತೆ ಉತ್ತಮ ವಕ್ತಾರರಿದ್ದಾರೆ. ಆದರೆ ತನ್ನ ದನಿಗೆ ತಾನೇ ಮರುಳಾಗಿ, ಕೇಳುಗರ ಪರಿವೆ ಇಲ್ಲದೆ ತಾಸುಗಟ್ಟಲೆ ಗುಂಯ್‌ಗುಡುವ ಭ್ರಮರ ಭಾಷಣಕಾರರು ಇಲ್ಲಿ ನಮ್ಮ ಬೆಂಗಳೂರಿಗಿಂತ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಅಂತೂ 'ನನ್ನ ಭಾಷಣಕ್ಕೆ ಜನರೇ ಬರಲಿಲ್ಲ' ಎಂದು

ಗೋಗರೆಯುವ ಸಾಹಿತಿಗಳು ಇಲ್ಲಿ ಕಾಣಸಿಗರು. ಈ ನನ್ನ ಮಾತಿನಲ್ಲಿ ನಿಮಗೆ ಸಂಶಯವಿದ್ದರೆ ಇಲ್ಲಿ ನಡೆಯುವ ವಾರ್ಷಿಕ 'ವಸಂತ ವ್ಯಾಖ್ಯಾನ ಮಾಲೆ'ಗೆ ಒಮ್ಮೆ ಬಂದು ನೋಡಿರಿ. ಕೆಲ ವರ್ಷಗಳ ಹಿಂದೆ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಪುಣೆಯಲ್ಲಿ ಪು.ಲ. ದೇಶಪಾಂಡೆಯವರನ್ನು ಸತ್ಕರಿಸುವ ಕಾರ್ಯಕ್ರಮವಿಟ್ಟುಕೊಂಡಾಗ, ಸಾವಿರ ಕುರ್ಚಿಗಳ ಸಭಾಂಗಣ ತುಂಬಿಹೋಗಿ ಜನ ಮೆಟ್ಟಿಲುಗಳುದ್ದಕ್ಕೂ ಕುಳಿತಿದ್ದ ದೃಶ್ಯ ಮರೆಯಲಾಗದ್ದು. ಹಾಂ. ಅಂದಿನ ಎರಡು ತಾಸಿನ ಕಾರ್ಯಕ್ರಮದಲ್ಲಿ ಒಂಬತ್ತು ಜನ ವಕ್ತಾರರು ಭಾಷಣ ಮಾಡಿದರು. ಭಾಷಣಗಳ ವಿಷಯದಲ್ಲಿಯ ಒಂದು ಮೋಜೆಂದರೆ ಇಲ್ಲಿಯ ಪತ್ರಿಕೆಗಳವರು ಪ್ರತಿ ಶುಕ್ರವಾರ 'ಚುಕೂ ನಕಾ' (ತಪ್ಪಿಸದಿರಿ) ಎಂಬ ಸದರಿನಲ್ಲಿ ಶನಿ-ರವಿವಾರಗಳ ರಜಾ ದಿನದ ವಿಶೇಷ ಕಾರ್ಯಕ್ರಮಗಳ ವಿವರಗಳನ್ನು ಕೊಡುತ್ತಾರೆ! ಅನೇಕ ಬಾರಿ , ವಿಷಯದ ವಕ್ತಾರರ ಗರಿಮೆಯನ್ನು ಗಮನಿಸಿ ಉಪನ್ಯಾಸಗಳಿಗೆ ಟಿಕೆಟ್ ಇಡುತ್ತಾರೆ. (ಕರ್ನಾಟಕದಲ್ಲಿ ಒಬ್ಬ ಬನ್ನಂಜೆ ಗೋವಿಂದಾಚಾರ್ಯರಿಗೆ ಮಾತ್ರ ಈ ಹೆಚ್ಚುಗಾರಿಕೆ ಇದೆ.)

ಪುಣೆಯವರು ಪ್ರತ್ಯುತ್ಪನ್ನಮತಿಗಳು. ಅನೇಕ ಹೊಸ ಹೊಸ ವಿಚಾರಗಳನ್ನು ಹೊರಹೊಮ್ಮಿಸುತ್ತಾರೆ. ಕಲ್ಪಕತೆಯನ್ನು ತೋರ್ಪಡಿಸುತ್ತಾರೆ. ಒಂದು ಜೆರಾಕ್ಸ್ ಅಂಗಡಿಯಲ್ಲಿ 'Even God pays Cash here' ಎಂಬ ಫಲಕವನ್ನು ಕಂಡೆ. ಇದರ ಹಿಂದಿನ ಪ್ರೇರಣೆ? ಬದಿಯಲ್ಲಿಯೇ ಇರುವ ಒಂದು ದೇವಸ್ಥಾನ! ನಾನಿದ್ದ 'ಕಾಲೊನಿ'ಗೆ ತುಸುವೆ ಅಂತರದಲ್ಲಿ 'ಸ್ಮೃತಿ-ವನ' ಎಂಬುದಿದೆ. ಅಲ್ಲಿ ಅನೇಕಾನೇಕ ಗಿಡಗಳು ಒಂದೊಂದೂ ಒಬ್ಬೊಬ್ಬರ ಸ್ಮೃತ್ಯರ್ಥ ಇವೆ. ತಮಗೆ ಪ್ರೀತ್ಯಾಸ್ಪದರಾದ ಒಬ್ಬರು ತೀರಿಕೊಂಡರೆ ಅವರ ಸ್ನೇಹಿತರೊ, ಸಂಬಂಧಿಕರೊ ಅಲ್ಲಿ ಒಂದು ಸಸಿಯನ್ನು ನೆಡಿಸುತ್ತಾರೆ. (ತಮಗೆ ಬೇಕಾದ ಸಸ್ಯವನ್ನು ಆಯ್ದುಕೊಳ್ಳಬಹುದು). ಸುರುವಾತಿನ ಅದರ ಪಾಲನೆಗಾಗಿ ಒಂದಿಷ್ಟು ಹಣ ಕೊಟ್ಟರಾಯಿತು. ಆ ಬೆಳೆಯುವ ಗಿಡಕ್ಕೆ ಮೃತರ ಹೆಸರು ನೆಡಿಸಿದವರ ಹೆಸರು ಇರುವ ಫಲಕವನ್ನು ಕಟ್ಟುತ್ತಾರೆ. ದಿವಂಗತರ ಆಪ್ತರು, ಇಷ್ಟಮಿತ್ರರು ಅಲ್ಲಿಗೆ ಆಗಾಗ ಬಂದು, ಇಲ್ಲವೇ ವಾರ್ಷಿಕ ಶ್ರಾದ್ಧದ ದಿನ ಬಂದು ಭೆಟ್ಟಿ ಕೊಡುತ್ತಾರೆ. ಈ ವೃಕ್ಷಾರೋಪಣದ ಮನ್ನಣೆ ಪಡೆದ ವ್ಯಕ್ತಿಗಳಲ್ಲಿ ಹಿರಿಯ ಸಾಹಿತಿ, ಕಲಾವಿದರೂ ಇದ್ದಾರೆ. ಚಪ್ಪಲಿಗಾರನ ಅಪ್ಪನೂ ಇದ್ದಾನೆ. Death the leveller.

ಇಲ್ಲಿಯ ಜನರ ಕಲ್ಪಕತೆಗೆ ಇನ್ನೊಂದು ಉದಾಹರಣೆ - ಕೆಲವು ವರ್ಷಗಳ ಹಿಂದಿನ ಮಾತು. ಬೆಳಗಿನ ಒಂಬತ್ತು ಗಂಟೆಗೆ ಒಂದು ಚಿಕ್ಕ ಶವಯಾತ್ರೆ ಹೊರಟಿತು. ಆಮೇಲೆ ನೂರಾರು ಜನರು ಸೇರಿಕೊಂಡರು. ಅದಕ್ಕೆ ಹೆಗಲು ಕೊಡಲು ಭಾರೀ ನೂಕುನುಗ್ಗಲು. ಅದಾವ ಗಣ್ಯ ವ್ಯಕ್ತಿ ಸತ್ತಿದ್ದನೆಂದು ಯೋಚಿಸುವಿರಾ? ಗಳದಿಂದ ಮಾಡಿದ ಒಂದು ಮಾಮೂಲಿ ಸಿದಿಗೆಯ ಮೇಲೆ ಒಂದು ಸ್ಕೂಟರನ್ನು ಇರಿಸಿ, ಸ್ವಚ್ಛ ಬಿಳಿ ಅರಿವೆ

ಹಾಸಿ, ಅದರ ಮೇಲೆ ಒಂದು ಟೆಲಿಫೋನ್ ರಿಸೀವರನ್ನು ಇರಿಸಲಾಗಿತ್ತು. 'ಟೆಲಿಫೋನ್ ಡೆಡ್' ಎಂಬ ಉಕ್ತಿಗೆ ಹೀಗೆ ರೆಕ್ಕೆ ಮೂಡಿತಲ್ಲವೆ? ಮುಂದೆ ಪ್ರಮುಖ ಬೀದಿಗಳಲ್ಲೆಲ್ಲ ಆ ಮೆರವಣಿಗೆ ಸಾಗಿ, ದೂರವಾಣಿಯ ಕೇಂದ್ರ ಕಚೇರಿಯನ್ನು ತಲುಪಿ, ಅಹವಾಲನ್ನು ನಿವೇದಿಸಲಾಯಿತು. ಇದರಿಂದ ದೂರವಾಣಿ ಸಂಪೂರ್ಣ ಸೇವೆ ಸುಧಾರಿಸದಿದ್ದರೂ 'ನಮ್ಮ ಟೆಲಿಫೋನ್ ಹಾಳಾಗಿದೆ' ಎಂದು ಯಾರಾದರೂ ದೂರನ್ನಿತ್ತರೆ ಅನತಿ ಸಮಯದಲ್ಲಿಯೇ ರಿಪೆರಿಯವರು ಬಂದುಬಿಡುವಂತಾಗಿದೆ.

ಕೆಲ ಕಾಲ ನಾನು ಪುಣೆಯ ವಾಸಸ್ಥನಾಗಿದ್ದರೂ 'ಪುಣೇರಿ' ಅಲ್ಲ. ಆ ಪದಕ್ಕೆ ಬೇರೆಯೇ ವಿಶಿಷ್ಟವಾದ ಅರ್ಥವಿದೆ. ಪುಣೇರಿ ಎಂದರೆ ಅತಿ-ಶಿಷ್ಟರು. ಅತಿ-ಲೆಕ್ಕಾಚಾರದವರು ಎಂಬುದಾಗಿ ಹೊರಗಿನವರ ನಿರ್ಭಿಡೆಯ ಅಭಿಪ್ರಾಯವಾಗಿದೆ. ಅದರ ಹಿಂದೆ 'ಪುಣೇರಿ' ಅವರಲ್ಲಿ ನಾನೊಬ್ಬನೇ ಕೆಂಪು. ನಾನೇ ಶಹಾಣೆ' ಎಂಬ ಮನೋಭಾವ ಇದ್ದು, ಸ್ವಚ್ಛತೆಯ ವಿಚಾರದಲ್ಲಿ, ಮಾತಿನಲ್ಲಿ, ಇನ್ನೊಬ್ಬರೊಡನೆಯ ಲೆಕ್ಕಾಚಾರದಲ್ಲಿ ಅದು ಒಡೆದು ತೋರುವುದು.

ಹೋಟೇಲಿನಲ್ಲಿ ಚಹ ಕುಡಿಯುವಾಗ, ಬಸಿಯನ್ನು ಉಪಯೋಗಿಸದಿದ್ದರೂ ಅದಕ್ಕೆ ತುಸು ನೀರು ಹಾಕಿ ತೊಳೆಯಲು ಕೈ ತಾನಾಗಿ ಮುಂದೆ ಹೋಗುವುದು. ಆಟೋರಿಕ್ಷಾದಲ್ಲಿ ಕೂಡುವ ಮುಂಚೆ ಕರವಸ್ತ್ರದಿಂದ ಧೂಳು ಜಾಡಿಸಿ ಇಲ್ಲವೆ ಅದನ್ನು ಹಾಸಿಕೊಂಡೇ ಕೂಡಲು ಪುಣೇರಿಗಳು ಧಢಪಡಿಸುವರು. ಪುಣೆ-ಮುಂಬಯಿಗಳ ನಡುವಣ ನೇರ ರೈಲುಗಳಾದ 'ಡೆಕ್ಕನ್ ಕ್ವೀನ್', 'ಇಂದ್ರಾಯಣಿ' ಎಕ್ಸ್‌ಪ್ರೆಸ್‌ಗಳ ಎರಡನೆಯ ವರ್ಗದ ಡಬ್ಬಿಗಳಲ್ಲಿ 'ಪುಣೇರಿ'ತನ ಎದ್ದು ಹೊಡೀತದೆ. ಬಟ್ಟೆಗಳ ಇಸ್ತ್ರಿ ಕೆಡದಂತೆ, ಮಾತಿನಲ್ಲಿ ಗಾಂಭೀರ್ಯ ಉಳಿಯುವಂತೆ 'ಪೋಕ್ತ'ತನದಿಂದ ಕುಳಿತಿರುವುದನ್ನು ಯಾರೂ ಗಮನಿಸಿಯಾರು. ಅಂದ ಹಾಗೆ ಅವೆಲ್ಲ 'ರಿಸರ್ವ್'ಸೀಟುಗಳು. ಮೂವರು ಕುಳಿತಿರುವ ಆ ಆಸನದಲ್ಲಿ ನೀವು ಕುಳಿತಿರಲು ತುಸು ಜಾಗ ಕೇಳಿದಿರೋ, ಮುಗಿದೇ ಹೋಯಿತು. ಸ್ಥಳ ಕೊಡುವುದಿಲ್ಲ; ಇಷ್ಟೇ ಅಲ್ಲ. ಹಾಗೆ ಕೇಳುವುದೇ ತಪ್ಪು ಎಂದು ಬೈಸಿಕೊಳ್ಳುವಿರಿ.

ಅಂಥದೇ ವೃತ್ತಿ ಸಾದಾ ಮಾತುಕತೆಯಲ್ಲಿ ವ್ಯಕ್ತವಾಗುವುದು . ದಾರಿಯಲ್ಲಿ ಹೊರಟ ಒಬ್ಬ ಪುಣೇರಿಯನ್ನು 'ವೇಳೆ ಎಷ್ಟಾಗಿದೆ?' ಎಂದು ಕೇಳಿ ನೋಡಿರಿ. "ಯಾಕ? ಗಡಿಯಾರ ಇಲ್ಲೇನು?" ಎಂದು ಕಮೆಂಟ್ ಮಾಡಿದ ಮೇಲೆಯೇ ವೇಳೆಯನ್ನು ಹೇಳಿಯಾನು!

ಧಾರವಾಡದ ನನ್ನ ಒಬ್ಬ ಮಿತ್ರನ ಮಗ-ಅಳಿಯತನಕ್ಕೆಂದು ಮೊನ್ನಿನ ದೀಪಾವಳಿಗೆ ಪುಣೆಯಲ್ಲಿಯ ಮಾವನ ಮನೆಗೆ ಬಂದ. ನನಗೂ ಆಮಂತ್ರಣವಿತ್ತು. ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಅಳಿಯನಿಗೆ ಏನು ಸೇರುತ್ತದೆ? ಎಂದು ಅತ್ತೆ ಮಾವರು ಮಗಳನ್ನು ಕೇಳಿದ್ದೇ ಕೇಳಿದ್ದು. ಹಾಗೆ ನಿರ್ಧಾರವಾದದ್ದು ಬಾಸುಂದಿ. ಹೆಚ್ಚಿನ ಹಾಲಿಗೆ ಆರ್ಡರ್

ಹೋಯಿತು. ಆದರೆ ದೀಪಾವಳಿ ಮುಗಿದ ಮುಂದಿನ ವಾರ, ನಿತ್ಯದ ಹಾಲಿಗೆ ಅರ್ಧ ಕಡಿತ! ತಿಂಗಳ ಹಾಲಿನ ವೆಚ್ಚ ನೇಮಕ್ಕಿಂತ ಹೆಚ್ಚಾಗಬಾರದಲ್ಲ! ಅಳಿಯನಿಗೆಂದು ಸಾಕಷ್ಟು ಬೆಲೆಬಾಳುವ ಸೂಟಿನ ಬಟ್ಟೆಯನ್ನು ಉಡುಗೊರೆಯಾಗಿ ಕೊಟ್ಟಿದ್ದರಲ್ಲವೆ? ಆಮೇಲೆ ಅವರು ಪ್ರಾಯಶಃ ಆ ಇಡೀ ವರುಷ ಮನೆಯಲ್ಲಿಯ ಮಕ್ಕಳಿಗೆ ಒಂದೂ ಹೊಸ ಬಟ್ಟೆಯನ್ನು ಹೊಲಿಸಿರಲಿಕ್ಕಿಲ್ಲ. ಯಾಕಾದರೂ ಅಳಿಯತನಕ್ಕೆ ಬಂದೆನೋ" ಎಂಬುದಾಗಿ ನನ್ನೆದುರು ಹಳಹಳಿಸಿದ. "ಡೋಂಟ್ ವರಿ. ಹೇಗೂ ದೀಪಾವಳಿ ಅಳಿಯತನ ಒಮ್ಮೆಯೇ ಇರ್ತದೆ!" ಎಂದು ಸಮಾಧಾನ ಹೇಳಿದೆ.

ಇದೇನೂ ಜಿಪುಣತನವಲ್ಲ. ಅದೊಂದು ಬಗೆಯ ಲೆಕ್ಕಾಚಾರ ಅಷ್ಟೇ. ಉಡುಗೊರೆಯ ಪ್ರಸಂಗ ಬಂದರಂತೂ ಇದು ಅತ್ಯಂತ ನಿಖರ ರೂಪವನ್ನು ತಾಳುತ್ತದೆ. ಬೇರೊಬ್ಬರಿಂದ ಉಡುಗೊರೆ ಬಂದರೆ ಅದನ್ನು ಅಷ್ಟೇ ಮೊತ್ತದಲ್ಲಿ ಮುಟ್ಟಿಸತಕ್ಕದ್ದು. ಅದಕ್ಕಾಗಿ ಅಂಗಡಿಗೆ ಹೋಗಿ ಅಂಥದೇ ವಸ್ತುವಿನ ಬೆಲೆ ಎಷ್ಟಿರಬಹುದೆಂದು ಕೇಳಿಕೊಂಡು ಬರಲೂ ಬಹುದು. ಇತ್ತ ತಾವೇ ಉಡುಗೊರೆ ಕೊಡುವ ಪ್ರಸಂಗ ಬಂದಿತೆನ್ನುವ, ಅದನ್ನು ಪಡೆಯುವವರ ಮನೆಯಲ್ಲಿ ಬೇರೊಂದು ಶುಭ ಸಮಾರಂಭ ಮುಂದೊಮ್ಮೆ ಆಗಲಿದ್ದರೆ ಉಡುಗೊರೆಯ ಲೆಕ್ಕಾಚಾರ ಒಂದು ರೀತಿಯದು. ಅಂಥ ಪ್ರಸಂಗ ಇಲ್ಲವೆಂದಾದರೆ ಉಡುಗೊರೆಯ ಮೌಲ್ಯ ಥಟ್ಟನೆ ಇಳಿಯುವುದು. ನನ್ನ ದೂರದ ಸಂಬಂಧಿಯ ಸೊಸೆಯೊಬ್ಬಳು (ಮುಂಬಯಿ ವಾಸಿನಿ) ತನ್ನ ಮುದ್ದು ಮಗುವಿನೊಂದಿಗೆ ಪುಣೆಗೆ ಬಂದಳು. (ಇಲ್ಲಿ ಆಕೆಯ ಗಂಡನ ಬಳಗದವರು ನಾಲ್ಕೈದು ಜನ ಇದ್ದಾರೆ.) ಆ ಮನೆಗಳಿಗೆ ಕರೆದೊಯ್ಯುವ ಕೆಲಸ ನನ್ನದಾಗಿತ್ತು. ಹೋದಲ್ಲೆಲ್ಲ ಮಗುವನ್ನು ಮುದ್ದಿಸುವವರೇ. ಅದರ ಕೈಯಲ್ಲಿ ಒಂದೆರಡು ನೋಟನ್ನು ಇಡುವವರೇ. ಎಲ್ಲಾ ಮುಗಿಸಿಕೊಂಡು ಮನೆಗೆ ಬಂದ ಮೇಲೆ, ಅವಳನ್ನು ಕುರಿತು "ಏನೇ, ಮಗುವಿನ ನೆಪದಲ್ಲಿ ತುಂಬಾ ಹಣ ಸಂಪಾದಿಸಿದೆಯಲ್ಲ?" ಎಂದು ನುಡಿದೆ. "ಎಲ್ಲೀದ್ರಿ ಮಾಮಾ, ಈ ಮನೆಯಲ್ಲಿ ಕೊಟ್ಟಿದ್ದನ್ನು ಆ ಮನೆಗೆ; ಆ ಮನೆಯಲ್ಲಿ ಕೊಟ್ಟಿದ್ದನ್ನು ಮತ್ತೊಂದು ಮನೆಗೆ ಕೊಟ್ಟುಬಿಟ್ಟೆ. ಇದು ಪುಣೇ ವ್ಯವಹಾರ. ಬಾಕಿ ಇಟ್ಟುಕೊಳ್ಳುವಂತಿಲ್ಲ" ಎಂದಳು.

ಪುಣೆಯಲ್ಲಿ ಗಂಡಸರಿಗಿಂತ ಹೆಣ್ಣುಮಕ್ಕಳೇ ಹೆಚ್ಚಿನ ಮಟ್ಟಿಗೆ ಪುಣೇರಿಗಳಾಗಿರುತ್ತಾರೆ. ವಿಶೇಷತಃ ಲೆಕ್ಕಾಚಾರದಲ್ಲಿ. ಒಂದು ರವಿವಾರದ ಸಂಜೆ ನನ್ನ ನೆರಮನೆಯವರ ಮನೆಯಲ್ಲಿ ನಾನು ಅವರೂ ಮಾತನಾಡುತ್ತ ಕುಳಿತಿದ್ದೆವು. ಆಗ ಅವರ ೧೦-೧೧ ವರ್ಷದ ಮಗಳು ಬಂದು, "ಬಾಬಾ, ನನಗೆ ಪೆನ್ಸಿಲ್ ಕೊಳ್ಳೋದಿದೆ, ೫೦ ಪೈಸೆ ಬೇಕು" ಎಂದು ಕೇಳಿದಳು. ಅದಕ್ಕೆ ಅವರು" ಇವತ್ತು ಬೆಳಿಗ್ಗೆಯಿನ್ನೂ ೫ ರೂ ಕೊಟ್ಟಿರುವೆನಲ್ಲ?" ಎಂದು ನುಡಿದಾಗ ಅವಳು ಹೇಳಿದ್ದೇನು ಗೊತ್ತೆ? "ಬಾಬಾ, ಅದು ನನ್ನ ವಾರದ ನೇಹಮಿಯ ಪಾಕೆಟ್ ಮನಿ. ಪೆನ್ಸಿಲ್ಲು ಕಲಿಯೋದಕ್ಕೆ ಸಂಬಂಧಿಸಿದ್ದು.

ನಿನ್ನಿಂದ ಬೇರೇನೆ ಬರಬೇಕಾದದ್ದು."

ಅವಳೇನೋ ಕುಮಾರಿ; ದೊಡ್ಡವರು ಇದಕ್ಕೂ ದೊಡ್ಡ ಪ್ರಮಾಣದ ಲೆಕ್ಕಾಚಾರ ಹಾಕುತ್ತಾರೆ. ಪುಣೆಯಲ್ಲಿ ನನ್ನ ಪರಿಚಯದ ಸೌ. ಅನುಪಮಾ ಅಶೋಕ ಡಂಬಳ ಎನ್ನುವ ಕನ್ನಡಿತಿ ಇದ್ದಾರೆ. ಅವರು ತಮ್ಮ ನೆರೆಯಲ್ಲಿಯ ಮಹಿಳಾ ಮಂಡಳದ ಸದಸ್ಯೆ. ಆ ಮಹಿಳೆಯರೆಲ್ಲ ಸೇರಿ (ಸು. ೧೫ ಜನ) ಹೊರಗೆ ಹೋಗಿ ಒಂದು ಹೋಟೆಲ್‌ನಲ್ಲಿ ರಾತ್ರಿಯೂಟ ಮಾಡಬೇಕೆಂದು ನಿರ್ಧರಿಸಿದರಂತೆ. ಒಟ್ಟಿನ ವೆಚ್ಚವನ್ನು ಸಮಾನವಾಗಿ ಹಂಚಿಕೊಳ್ಳಬೇಕೆಂದು ಮೊದಲೇ ನಿರ್ಣಯಿಸಿದ್ದರು. ಊಟ ಮುಗಿದು, ತನ್ನ ವಂತಿಗೆಯನ್ನು ಕೊಡುವ ಪ್ರಸಂಗ ಬಂದಾಗ ಒಬ್ಬಳು ಮೆತ್ತನೆಯ ದನಿಯಲ್ಲಿ " ನಾನು ಸೂಪ್ ತಗೊಳ್ಳಲಿಲ್ಲ. ಆದಾಗ್ಯೂ ನಾನೂ ಅದರ ಮೂರು ರೂ. ಕೊಡಬೇಕೋ ಏನೋ" ಎಂದಳು. ಆಕೆ ಅಷ್ಟು ಅನ್ನುವುದೇ ತಡ, ಇನ್ನೊಬ್ಬಳು " ನಾನು ಆ ಬಳ್ಳೊಳ್ಳಿಯ ಸೂಪ್ ತಗೊಳ್ಳಲಿಲ್ಲ. ಅದರ ಹಣ ನನ್ನ ಲೆಕ್ಕದಿಂದ ವಜಾ ಮಾಡಿಬಿಡಿರಿ."ಎನ್ನಬೇಕೆ? ಮತ್ತೊಬ್ಬಳು "ಸೂಪ್ ಇರೂ. ದ್ದು ಮಾತ್ರ. ಅದಕ್ಕೂ ಹೆಚ್ಚಿನ ರಕಮಿನ ಐಸ್‌ಕ್ರೀಮ್ ನಾ ತಗೊಳ್ಳಲಿಲ್ಲ- ಕೆಮ್ಮು ಬಂದಿದೆಯೆಂದು. ಬೇಕಾದರೆ ವೇಟರ್‌ನನ್ನು ಕೇಳಿರಿ! ನಾನು ಅದರ ರಕಮನ್ನು ಕೊಡುವುದು ಅನ್ಯಾಯದ್ದಾಗುತ್ತದೆ.".

ಇಂಥ ಲೆಕ್ಕಾಚಾರಾದ ಸಂದರ್ಭಗಳು ಲೆಕ್ಕವಿಲ್ಲದಷ್ಟು.

ಮಹಾರಾಷ್ಟ್ರದ ಬೇರೆ ಊರಲ್ಲಿಯೂ ಈ ಲೆಕ್ಕಾಚಾರದವರು ಬೇಕಾದಷ್ಟು ಜನ ಇರುವರು. ಆದರೆ ಅದರ ತಲಕಾವೇರಿ ಪುಣೆಯೇ. ಹಾಂ , ಇದೊಂದು ಘಟನೆಯನ್ನು ಹೇಳಿಯೇ ಬಿಡುವೆ. ಓರ್ವ ಕನ್ನಡಿತಿಯು ತನ್ನ ನೆರೆಮನೆಗೆ ಹೋಗಿ ಎರಡು ನೀರುಳ್ಳಿಯನ್ನು ಕೇಳಿದಳಂತೆ. ನೆರೆಮನೆಯಾಕೆ ಮುಕ್ತ ಮನದಿಂದ ಕೊಟ್ಟಳು. ಎರಡೇ ನೀರುಳ್ಳಿಯನ್ನು ಪರತ ಕೊಡುವುದಕ್ಕೆ ಇವಳಿಗೆ ಸಂಕೋಚವಾಯಿತು. ಸುಮ್ಮನಿದ್ದಳು. ಮರೆತೂ ಬಿಟ್ಟಳು. ಒಂದು ವಾರದ ಮೇಲೆ ನೆರೆಮನೆಯಾಕೆ ಎರಡು ಬಟಾಟೆ ಕೇಳಿದಳಂತೆ. ಇವಳು ಎರಡನ್ನೇ ಏನು ಕೊಡವುದೆಂದು ನಾಲ್ಕೈದನ್ನು ಹೊರ ತಂದಳು. ಅವಳು ಮಾತ್ರ ಎರಡನ್ನೇ ಪಡೆದಾಗಲೇ ಈ ಕನ್ನಡಮ್ಮನಿಗೆ ಅದರ ಅರ್ಥ ಹೊಳೆದದ್ದು.

ಇಲ್ಲಿಯ ಫರ್ಗ್ಯೂಸನ್ ಕಾಲೇಜ್ ರಸ್ತೆಯಲ್ಲಿ ಓರ್ವ ಮೋಚಿ ಕುಳ್ಳಿರುತ್ತಿದ್ದ. ಮಧ್ಯವಯಸ್ಸಿನಲ್ಲಿ ತೀರಿಕೊಂಡ, ಹೆಂಡತಿ ಹಾಗೂ ಎರಡು ಮಕ್ಕಳನ್ನು ಬಿಟ್ಟು. ಆಕೆ ಏನು ಮಾಡಬೇಕು? ಗಂಡನ ವೃತ್ತಿಯ ಅನುಭವ ಏನೇನೂ ಇಲ್ಲದ ರುಕ್ಮಿಣಿ, ಅವನ ಸಲಕರಣೆಗಳನ್ನು ತೆಗೆದುಕೊಂಡು , ಕಾಲೇಜಿನ ಬದಿಯ ಲೇಡಿಸ್ ಹಾಸ್ಟೆಲ್ ಕಂಪೌಂಡಿನಲ್ಲಿ ರಿಪೇರಿ ಕೆಲಸ ನಡೆಸತೊಡಗಿದಳು. ಧೈರ್ಯ ಮೂಡಿತು. ಪುರುಷರ ಪಾದರಕ್ಷೆಗಳನ್ನು ಮಾಡಬಲ್ಲೆನೆಂದು. ಅಲ್ಲಿಂದ ರಸ್ತೆಯ ಫುಟ್‌ಪಾತ್‌ಗೆ ಸ್ಥಳಾಂತರಿಸಿದಳು. ಶ್ರದ್ಧೆಯಿಂದ

ಆ ಕಾಯಕದಲ್ಲಿ ನಿರತಳಾಗಿರುವ ಅವಳನ್ನು ಈಗಲೂ ಕಾಣಬಹುದು.

ನನ್ನ ಸ್ಕೂಟರ್ ಕೆಟ್ಟು ನಿಂತಾಗ ಅದನ್ನು ಒಂದು ರಿಪೇರಿ ಅಂಗಡಿಗೆ ಒಯ್ದೆ. ಅಲ್ಲೊಬ್ಬ ಸಲವಾರ್ ಕಮೀಜಿನ ತಕ್ಕಮಟ್ಟಿಗೆ ಸುಂದರಳಾದ ಯುವತಿ ಕುಳಿತಿದ್ದಳು. ನನ್ನ ಹಾಗೇ ಅವಳ ವಾಹನವೂ ರಿಪೇರಿಯದಿರಬೇಕೆಂದು ತಿಳಿದಿದ್ದೆ. ಆಕೆ ನನ್ನನ್ನು ಕುರಿತು 'ಗಾಡಿಗೆ ಏನಾಗಿದೆ?' ಎಂದು ಕೇಳಿದಾಗ, ಸುಮ್ಮನೆ ವಿಚಾರಿಸಿರಬೇಕು ಎಂದು ಬಗೆದು ಉತ್ತರ ಕೊಡಲಿಲ್ಲ. ಮತ್ತೊಮ್ಮೆ ಅವಳು ಕೇಳಿದಾಗ ಗೊತ್ತಾಯಿತು. ಅವಳು ಸ್ವತಃ ಮೆಕಾನಿಕ್ ಇದ್ದು, ತನ್ನ ಕೈಕೆಳಗಿನವರಿಗೆ ಸೂಕ್ತ ಸಲಹೆ ಕೊಡುತ್ತಿದ್ದಳು. 'ಸರಿ ಈ ಅಂಗಡಿಯ ಒಡತಿ ಇರಬೇಕೆಂದು ತಿಳಿದಿದ್ದೆ. ಅದೂ ನಿಜವಲ್ಲ! ಮಾಲೀಕನಾದವ ಬೇರೇನೆ ಇದ್ದು, ಇವಳು ಒಬ್ಬ ಸಂಬಳ ಪಡೆಯುವ ಮೆಕ್ಯಾನಿಕ್ ಎಂದೇ ಕೆಲಸ ಮಾಡುತ್ತಿದ್ದಳು.

ಇದಕ್ಕಿಂತ ಹೆಚ್ಚು ಮನನೀಯವಾದ ಉದಾಹರಣೆ ಇದೆ. ಅವಳ ಹೆಸರು ಗೀತಾ ಗಾಯಕವಾಡ. ಜೈದೀಪ್ ಟೈರ್ ಸರ್ವೀಸ್‌ನ ಒಡತಿ. ಹೆಚ್ಚು ಕಲಿತವಳಲ್ಲ. ತನ್ನ ೧೦x೧೦ ಮನೆಯ ಮುಂದಿನ ಭಾಗಕ್ಕೆ ತಗಡನ್ನು ಹಾಕಿ, ಟಯರ್ ಪಂಕ್ಚರ್ ತಿದ್ದಿಕೊಡುವ ವೃತ್ತಿಯಲ್ಲಿದ್ದಾಳೆ. ಆ ವೃತ್ತಿಯಲ್ಲಿ ಅಂಗಡಿಯನ್ನು ಸದಾ ತೆರೆದಿಡಬೇಕು. ಗಂಡನೋ ಜಾಗದಲ್ಲಿ ಇರುವವನಲ್ಲ. ಅಂತೆಂದು ತಾನೇ ಕಲಿತಳು. ಅವಳ ಚಾಕಚಕ್ಯತೆಯಿಂದಾಗಿ ಜೈದೀಪ್ ಸರ್ವೀಸ್ ಚೆನ್ನಾಗಿ ನಡೆಯುತ್ತಿದೆ.

ಪುಣೆಯ ಮಹಿಳೆಯರ ಕೆಲವು ನಡವಳಿಕೆಯ ಬಗ್ಗೆ ನನಗೆ ಮೆಚ್ಚುಗೆ ಇದೆ. ಸಾಮಾನ್ಯವಾಗಿ ನಮ್ಮ ಕಡೆಯ ಹೆಂಗಸರು ಬಲು ಬೇಗ ಭಾವನಾವಶರಾಗುತ್ತಾರೆ. ಇಲ್ಲಿಯ ವನಿತೆಯರು ಹೆಚ್ಚಾಗಿ ಸಾರಸಾರ ವಿಚಾರ ಮಾಡುವ ಸ್ವಭಾವದವರು. ಗಂಡ, ಅತ್ತೆ, ಮಾವ ಈ ವ್ಯವಸ್ಥೆಯಲ್ಲಿದ್ದುಕೊಂಡೂ, ತನ್ನ ಅಸ್ತಿತ್ವ ಹಾಗೂ ಅಸ್ಮಿತೆಯನ್ನು (identity) ಕಾಯ್ದುಕೊಳ್ಳುವವರು. ಅದಕ್ಕೇನಾದರೂ ಧಕ್ಕೆ ಬಂದರೆ ಬಲವಾಗಿ ಪ್ರತಿಭಟಿಸುವ ಧೈರ್ಯಶಾಲಿನಿಯರು. ಅವರ ಮುಂದೆ ಗಂಡಸಿನ ದರ್ಪ ಅಳುಕಿನಿಂದಲೇ ಕೆಲಸ ಮಾಡುತ್ತದೆ.

ಇಲ್ಲಿಯ ಮಧ್ಯಮ ವರ್ಗದ ನಾರಿಯರು ದ್ವಿಚಕ್ರವಾಹನ ಪ್ರಿಯೆಯರು. ಹೈಸ್ಕೂಲಿಗೆ ಹೋಗುವವರು ಸೈಕಲ್ ಬಳಸುತ್ತಾರೆ. ಕಾಲೇಜಿನ ಕನ್ಯೆಯರಿಗೆ ಲೂನಾ ಮೊಪೆಡ್ ಹೆಚ್ಚು ಅಪೇಕ್ಷಣೀಯ. ತರುಣಿಯರು, ಗೃಹಿಣಿಯರು ಹೆಚ್ಚಾಗಿ ಬಳಸುವುದು ಸ್ಕೂಟರ್‌ಗಳನ್ನು. ನಡೆದಾಡುವ ನಾರಿಯರೆ ಇಲ್ಲವೆಂದಲ್ಲ; ಇದ್ದಾರೆ. ನಡೆದುಕೊಂಡು ಬರುವವರು ದಾರಿಯಲ್ಲಿ ಕಂಡರೆ ಅವರು ೪೦ ವಯಸ್ಸಿನ ಗಡುವನ್ನು ದಾಟಿದವರೆಂದು ಥಟ್ಟನೆ ಗುರುತಿಸಬಲ್ಲಿರಿ!

ಅಂತೂ ಬೀದಿಗಳಲ್ಲಿ ಸಂಚರಿಸುವ ದ್ವಿಚಕ್ರ ವಾಹಕರಲ್ಲಿ ಹೆಂಗೆಳೆಯರೇ ಗಣನೀಯರು. ಆ ವಾಹನವು ಅವರಿಗೆ ಆತ್ಮವಿಶ್ವಾಸದ, ಸುಖಜೀವನದ ಪ್ರತೀಕ. ಅಂತೆಯೇ ಬಿಂಕದಿಂದ , ನಿರ್ಭೀತಿಯಿಂದ ಅದನ್ನು ನಡೆಸುತ್ತಾರೆ. ವಾಹನದ ಮೇಲಿನ ಸವಾರಿಯೆಂದರೆ, ಗಂಡನ ಮೇಲೆ ಅಧಿಕಾರ ನಡೆಸುವ ಮನೋಭಾವ. ಇನ್ನು ಆ ಗಂಡನೆಂಬ ಪ್ರಾಣಿಯನ್ನು ಹಿಂದೆ ಕೂರಿಸಿಕೊಂಡು ಹೋಗುವ ದೃಶ್ಯವೂ ಧಾರಾಳವಾದುದು. ಅಂದ ಹಾಗೆ ಈ ಮಹಿಳಾ ಚಾಲಿಕೆಯರಿಂದ ಅಪಘಾತಗಳಾಗುವುದು ತೀರಾ ಕಮ್ಮಿ ಅಂತೆ. ಪ್ರಾಯಶಃ ಇವರ ಕೆಚ್ಚೆದೆಗೆ ಬೆಚ್ಚಿ ಜನ ದಾರಿ ಬಿಟ್ಟುಕೊಡುತ್ತಿರಬೇಕು: ಅಂತೂ ದಿಟ್ಟೆಯರು.

ಈ ದಿಟ್ಟತನ ಇಲ್ಲಿಯ ಪ್ರಣಯ ಪ್ರಸಂಗಗಳಿಗೂ ಅನ್ವಯಿಸುವುದು. ಪ್ರಣಯಿಗಳು ಎಲ್ಲ ಕಡೆಗೂ ಇರುತ್ತಾರೆ. ಅದಲ್ಲ, ನಾನು ಹೇಳುವುದು ಆದರೆ ಅಲ್ಪಾವಧಿ ಪ್ರಣಯ ಪ್ರಕರಣಗಳ ಬಾಹುಳ್ಯವು ಪುಣೆಯ ವೈಶಿಷ್ಟ್ಯವಂತೆ. ಹಾಗೆಂದು ಬಲ್ಲವರು ಹೇಳುತ್ತಾರೆ(!) ಇದರ ಪರಿಣಾಮವೆಂಬಂತೆ, ಕನ್ಯೆಯ ತಂದೆ- ತಾಯಿಗಳು ವಿಶೇಷತಃ ತಂದೆಯಾದವ ಮಗಳ ಮದುವೆಯೆಂಬುದನ್ನು ಒಂದು ದೊಡ್ಡ ಜವಾಬ್ದಾರಿಯೆಂದು ಬಗೆಯುವುದಿಲ್ಲ. "ಮಗಳೇ, ನಿನಗೆ ಶಿಕ್ಷಣ ಕೊಡಿಸಿದ್ದೇನೆ. ಓಡಾಡಲು ವಾಹನವನ್ನು ಕೊಡಿಸಿದ್ದೇನೆ. ನಿನ್ನ ಬಾಯ್ ಫ್ರೆಂಡ್ಸ್‌ರೊಡನೆ ಬೆರೆಯುವ ಮುಕ್ತತೆಯನ್ನೂ ಪಡೆದಿದ್ದೀಯ. ನಿನ್ನ ಗಂಡನಾಗುವವನನ್ನು ನೀನೇ ನೋಡಿಕೊಳ್ಳು. ಮದುವೆಗೆಂದು ಇಂತಿಷ್ಟು ಹಣವನ್ನು ತೆಗೆದಿರಿಸಿದ್ದೇನೆ. ಆಯ್ತಲ್ಲ!" ಎಂದು ಅಪ್ರತ್ಯಕ್ಷವಾಗಿ ಅವಳಿಗೆ ಮನವರಿಕೆ ಮಾಡಿಕೊಡುತ್ತಾನೆ. ದೊಡ್ಡ ಸಂಸಾರದ ಹೊಣೆ ಹೊತ್ತು 'ಉಸ್ಸಪ್ಪ' ಎನ್ನುವ ನಮ್ಮ ಹಿಂದಿನ ತಲೆಮಾರಿನವರ ಪರಿಸ್ಥಿತಿ ಈಗಿನವರದಲ್ಲವಲ್ಲ!. ಎರಡೇ ಮಕ್ಕಳನ್ನು ಹುಟ್ಟಿಸಿ, ಆ ಮೂಲಕ ಸಂಸಾರದ ಹೊಣೆಯನ್ನೂ ಮಿತಗೊಳಿಸಿದ ಮೇಲೆ, ಮಧ್ಯೋತ್ತರ ವಯಸ್ಸಿನಲ್ಲಿ ಸುಖಪಡಬೇಕೆನ್ನುವ ದೃಷ್ಟಿಯೂ ಅದರ ಹಿಂದೆ ಇರುತ್ತದೆ !

ಇಲ್ಲಿಯ ಮಹಿಳೆಯರು ತಾವು ಮದುವೆಯಾದದ್ದರ ಗುರುತಿಗಾಗಿ ಚಿಕ್ಕ ಅತಿ ಚಿಕ್ಕ ಜೋಕಾಲಿಯನ್ನು ತಮ್ಮ ಕುತ್ತಿಗೆಗೆ ಜೋತುಬಿಟ್ಟಿರುತ್ತಾರೆ. ನೀವು ಅದನ್ನು ಬೇಕಿದ್ದರೆ 'ಮಂಗಳಸೂತ್ರ' ವೆಂದು ಕರೆಯಬಹುದು. ' ನನಗೊಬ್ಬ ಗಂಡನಿದ್ದಾನೆ. ಇದನ್ನು ನೀವು ತಿಳಿದಿರಿ" ಎಂಬುದನ್ನು ಸಾರುವವರಂತೆ ಎದೆಯ ಸೆರಗಿನ ಮೇಲೆಯೇ ಅದನ್ನು ತೊನೆದಾಡಿಸುತ್ತಾರೆ. ಇದೇ ಕಾರಣದಿಂದ 'ಸೌ' ಎಂಬ ಉಪಾಧಿಯನ್ನು ತಮ್ಮ ಹೆಸರಿನ ಮೊದಲಿಗೆ ಸೇರಿಸುವುದರಲ್ಲಿ ವಿಶೇಷ ಹೆಮ್ಮೆ ಪಟ್ಟುಕೊಳ್ಳುತ್ತಾರೆ.

ಆದರೆ 'ಸೌ' ಅಲ್ಲದವರೂ ಇರ್ತಾರಲ್ಲವೆ! ಕೆಲವು ವರ್ಷಗಳ ಹಿಂದೆ ಈ 'ಸೌ', 'ಅಸೌ' ಗಳ ನಡುವೆ ತಾತ್ವಿಕ ಚರ್ಚೆ ನಡೆಯಿತು - ಪತ್ರಿಕೆಗಳ ಮೂಲಕ 'ಅಸೌ'ದವರಲ್ಲಿ ಅ-ಧವೆಯರು, (ಕುಮಾರಿ!) ವಿಧವೆಯರು ಎಂದು ಎರಡು ವಿಧ." ಹೀಗೆ ಅಧವೆ, ಸಧವೆ,

ವಿಧವೆ ಇವು ಮೂರನ್ನೂ ನಿದರ್ಶಿಸುವ ರೀತಿಯಲ್ಲಿ ಉಪಾಧಿಗಳು ನಮಗೆ ಬೇಕೆ? ಗಂಡಸರು ಹಾಗೆ ಮಾಡುತ್ತಾರೆಯೇ? ನಮ್ಮ ಖಾಸಗಿ ಬದುಕನ್ನು ಹೊರಗೆ ಏಕೆ ಹಾಕಬೇಕು?" ಎಂದು ಒಂದು ಪಕ್ಷದ ಬಲವತ್ತರ ಮಂಡನೆ. ಆದರೇನು? ಸೌವತಿಯರು ಮಂಗಳಸೂತ್ರದ ಪ್ರತಿಷ್ಠೆಯನ್ನು ಬಿಟ್ಟುಕೊಡಲು ಸುತರಾಂ ಸಿದ್ಧರಾಗಲಿಲ್ಲ! ಇಂಥದೇ ಚರ್ಚೆ, ಸ್ತ್ರೀಯರು ಕಚ್ಚೆ ಹಾಕಿಕೊಳ್ಳಬೇಕೆ? ಬೇಡವೆ? ಎಂಬ ಬಗ್ಗೆಯೂ ಕೆಲದಶಕಗಳ ಹಿಂದೆ ಪುಣೆಯಲ್ಲಿ ನಡೆಯಿತಂತೆ.

ಪುಣೇರಿತನವು ಮಹಿಳೆಯರಲ್ಲಿ ಓತಪ್ರೋತ ಎಂದೆನಲ್ಲವೆ, ಸ್ವಚ್ಛತೆಯ ವಿಷಯಕವಾದ ಅವರ ಛಾನಸತನದಲ್ಲಿ ಅದು ಎದ್ದು ಹೊಡೆಯುವಂತಿದೆ. ಚಾಕರಿಬಾಯಿಯು(ಒಕ್ಕಲಗಿತ್ತಿ) ತನ್ನ ತೊಳೆ-ಬಳಿಯುವ ಕೆಲಸ ಮುಗಿಸಿ ಹೋದ ಮೇಲೆ, ಅದನ್ನೇ ಇವರು ಮತ್ತೊಮ್ಮೆ ಮಾಡಿಯಾರು. ಅಡುಗೆಯ ಮನೆಯಂತೂ... ಅಂದ ಹಾಗೆ, ಇಲ್ಲಿಯ ಪ್ರತಿಯೊಂದು ಅಡುಗೆಯ ಮನೆಯು ಸ್ಟೇನ್‌ಲೆಸ್ ಸ್ಟೀಲ್ ಪಾತ್ರಗಳ ಒಂದು ಅಂಗಡಿಯಂತಿರುತ್ತದೆ. ವಿಧವಿಧ ಆಕಾರಗಳ ಲಕ ಲಕ ಹೊಳೆಯುವ ಮತ್ತು ವ್ಯವಸ್ಥಿತವಾಗಿ ಪೇರಿಸಿದ ಪಾತ್ರೆಗಳು. ಮತ್ತೆ ಇವುಗಳ ಪೀಳಿಗೆಯು ಹುಟ್ಟಿದ ಹಬ್ಬ. ಮದುವೆ ಮುಂತಾದ ಸಂದರ್ಭಗಳಿಂದಾಗಿ ಬೆಳೆಯುತ್ತಲೇ ಹೋಗುವುದು.

ಇದೆಲ್ಲ ಸರಿ. ಅಡುಗೆ ಮನೆಯ ಈ ಒಡತಿಯರು ಎಷ್ಟರ ಮಟ್ಟಿಗೆ ಪಾಕ ಪ್ರವೀಣೆಯರು? ನಿಜ ಹೇಳಬೇಕೆಂದರೆ ... ನನಗೆ ಗೊತ್ತಿಲ್ಲ. ಆದರೆ ಇಲ್ಲಿಯ ಗೃಹಿಣಿಯರಲ್ಲಿ ಒಂದನ್ನು ಮಾತ್ರ ಗಮನಿಸಿದ್ದೇನೆ. ಮುಂಬಯಿ ಮಹಿಳೆಯರು ವಾರಕ್ಕೆ ಒಂದು ದಿನ ಎಲ್.ಪಿ.ಜಿ.(ಗ್ಯಾಸ್)ಗೆ ವಿಶ್ರಾಂತಿ ಕೊಡಲೆಂದು ಹೊಟೇಲಿಗೆ ಹೋದರೆ ಇವರು ವಾರದಲ್ಲಿ ಎರಡು ದಿನ ಹಾಗೆ ಮಾಡಬಯಸುವವರು. ನಾಲ್ಕು ತಿಂಗಳ ಕಂದನನ್ನು ಹೆಗಲಿಗೇರಿಸಿಕೊಂಡು ಇನ್ನೊಂದರ ಕೈ ಹಿಡಿದುಕೊಂಡು ತಮ್ಮ ೨+೨ರ ಮಿತ ಪರಿವಾರವನ್ನು ಪ್ರದರ್ಶಿಸಲೆಂಬಂತೆ ಊಟದ ಹೊಟೇಲಿಗೆ ಬರ್‍ತಾ ಇರುವುದನ್ನು ನಾನು ತುಂಬಾ ಸಲ ಕಂಡಿದ್ದೇನೆ.

ಇಲ್ಲಿಯ ಮಹಿಳೆಯರು ಒಂದಿಲ್ಲೊಂದು ವೃತ್ತಿ ಇಲ್ಲವೇ ಹವ್ಯಾಸದಲ್ಲಿ ತೊಡಗುವ ತವಕವುಳ್ಳವರು. ಗಂಡನ ಖಾಸಗಿ ಉದ್ಯೋಗವಿದ್ದರೆ ಅದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ಐವತ್ತರ ಆಚೆಯವರು 'ಬೇಬಿ ಸಿಟಿಂಗ್' ಮಾಡುವಲ್ಲಿ, ಪ್ರಾಥಮಿಕ ಶಾಲಾ ಮಕ್ಕಳಿಗೆ ಪಾಠ ಹೇಳುವಲ್ಲಿ, ಹಬ್ಬಗಳ ಕಾಲದ ತಿನಿಸು ತಯಾರಿಸುವಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವರು. ಸಾಧ್ಯವಿದ್ದ ಮಟ್ಟಿಗೆ ಸ್ವಾವಲಂಬಿಯಾಗಿರಬೇಕಲ್ಲವೆ?

ಇದೊಂದು ವಿಶೇಷತೆಯನ್ನು ಪ್ರಸ್ತಾಪಿಸತಕ್ಕದ್ದು. ಕೆಲ ಸಮಯದ ಹಿಂದೆ ಪುಣೆಯಲ್ಲಿಯ ಸೀನಿಯರ್ ಸ್ತ್ರೀಯರು ಒಮ್ಮೆ ಸಭೆ ಸೇರಿದರು. ಅವರೆಲ್ಲ ಸೊಸೆಯಿಂದ

ಪೀಡಿತರು! ಆ ಪೀಡನೆಯನ್ನು ಹೇಗೆ ಎದುರಿಸಬೇಕು. ಆರ್ಥಿಕ ಬಲವನ್ನೂ, ದೈಹಿಕ ನೆಮ್ಮದಿಯನ್ನೂ ಹೇಗೆ ಕಾಯ್ದುಕೊಳ್ಳಬೇಕು ಎಂಬುದರ ಕುರಿತ ಸಮ್ಮೇಳನದಲ್ಲಿ ಸುದೀರ್ಘ ಚರ್ಚೆ ನಡೆಯಿತು. ಠರಾವುಗಳನ್ನೂ ಅಂಗೀಕರಿಸಲಾಯಿತಂತೆ.

ಮಹಿಳೆಯರು ಜಗಳಾಡದೇ ಹೊಟ್ಟೆಕಿಚ್ಚುಪಡದೇ ಒಗ್ಗಟ್ಟಿನಿಂದ ಕೆಲಸ ಮಾಡಬಲ್ಲರು-ಎಂಬುದನ್ನು ಇಲ್ಲಿಯ ನೂರಾರು ಮಹಿಳಾ ಸಂಘಗಳು ಸಣ್ಣವು, ದೊಡ್ಡವು, ವಿವಿಧೋದ್ದೇಶವುಳ್ಳವು ಸಾಬೀತುಗೊಳಿಸುವಂತಿವೆ. ಮದುವೆ ಮಾಡಿಸುವ ಪುರೋಹಿತೆಯರ ಸಂಘವೂ ಇದೆ. ಪುರೋಹಿತೆಯರು! "ಪೌರೋಹಿತ್ಯವು ಪುರುಷರದಷ್ಟೇ ಹಕ್ಕು- ಎಂದು ಯಾವ ಧರ್ಮ ಗ್ರಂಥದಲ್ಲಿ ಹೇಳಿದೆ?" ಎಂದವರು ಕೇಳುತ್ತಾರೆ. ಆರ್ಷೇಯ ಕಾಲದ ಒಬ್ಬಿಬ್ಬ ಪುರೋಹಿತೆಯರ ಹೆಸರನ್ನೂ ಮುಂದೆ ಮಾಡ್ತಾರೆ. ನಿಮಗೊಂದು ಗುಟ್ಟಿನ ವಿಷಯ ಹೇಳುವೆ. ಅವರು ಪೌರೋಹಿತ್ಯದ ದಕ್ಷಿಣೆಯ ಬಾಬನ್ನು ಬೇಕಿದ್ದರೆ ಅರ್ಧದಷ್ಟನ್ನು ಇಳಿಸಲು ಒಪ್ಪಿಯಾರು. ಒಮ್ಮೆ ಕರೆದು ನೋಡಿರಿ. ಕುರ್ಯಾತ್ ಸದಾ ಮಂಗಲಮ್.

ಪುಣೆಯವರ ಮರಾಠೀ ಉಚ್ಚಾರದ ಬಗ್ಗೆ ನನ್ನ ಕೆಲವು ಆಕ್ಷೇಪಗಳಿವೆ. ಯಾವುದೇ ಆಡುನುಡಿಗೆ ತುಸು ಓರೆ ಕೋರೆಗಳು ಇದ್ದೇ ಇರುತ್ತವೆ. ಅದಲ್ಲ ನಮ್ಮ ಕಡೆಯ ಅಂಕಿತನಾಮಗಳು ಅದರಿಂದ ಅಂದಗೆಟ್ಟಿವೆ ಎಂಬುದಕ್ಕಾಗಿ. ಇಲ್ಲಿಯ ಪತ್ರಿಕೆಗಳಲ್ಲಿ ನಮ್ಮ ಮೈಸೂರು- 'ಮ್ಹೈಸೂರು' ಎಂದಾಗುತ್ತದೆ. ನಮ್ಮಹಿಂದಿನ ರಾಷ್ಟ್ರಪತಿಗಳ ಹೆಸರು ವೆಂಕಟರಾಮನ್ ತಾನೇ? ಮರಾಠೀ ಪತ್ರಿಕೆಗಳು, ರೇಡಿಯೋ, ಟಿವಿಯವರು ಆ ಹೆಸರನ್ನು ವೆಂಕಟರಮಣ ಎಂದೇ ಕರೆಯುತ್ತಿದ್ದರು. ತಪ್ಪದೇ ಈ ತಪ್ಪು ಮಾಡುತ್ತಿದ್ದರು. ಅಂತೂ ತನ್ನ ಜೊತೆಗಾರನಾದ 'ರಾಮ' ನನ್ನು ಹೊಡೆದೋಡಿಸಿ , ತಿರುಪತಿಯ ವೆಂಕಟಪತಿಯು ತಾನೊಬ್ಬನೇ ವಿರಾಜಿಸುವುದು ಸರಿಯೆ?

ಇನ್ನು ಇಲ್ಲಿಯ ಕನ್ನಡಿಗರ ಬಗ್ಗೆ ಕೆಲ ಅಂಶಗಳನ್ನು ನಿವೇದಿಸಿ ಪುಣೆಯ ಈ ಪುರಾಣವನ್ನು ಮುಗಿಸಬೇಕೆನ್ನಿಸುತ್ತದೆ. ತಮಿಳು, ತೆಲುಗರು ವಲಸೆ ಹೋಗಲು ಬೆಂಗಳೂರಿಗೆ ಹೇಗೆ ಧಾವಿಸುವರೋ ಹಾಗೆಯೇ ಉತ್ತರ ಕರ್ನಾಟಕಸ್ಥರು ಅಷ್ಟೇ ದೊಡ್ಡ ನಗರವಾದ ಪುಣೆಗೆ ಬಂದು ನೆಲೆಸಿದ್ದಾರೆ. ಈಗಲೂ ಬರುತ್ತಾ ಇದ್ದಾರೆ.

ಪುಣೆಯಲ್ಲಿ ಕನ್ನಡಿಗರ ಸಂಖ್ಯೆ ಎಷ್ಟಿರಬಹುದು? ಇನ್ನಾವುದೇ ಹೊರನಾಡಿನ ಊರಿನ ವಿಚಾರದಲ್ಲಿ ಕನ್ನಡಿಗರ ಅಂದಾಜಿನ ಸಂಖ್ಯೆಯನ್ನು ಹೇಳಬಹುದು. ಪುಣೆಯವರ ಮಟ್ಟಿಗೆ ಹೇಳುವುದೇ ಶಕ್ಯವಿಲ್ಲ. ಮಜ್ಜಿಗೆಯಲ್ಲಿ ಉಪ್ಪು ಬೆರೆಸಿದ್ದನ್ನು ನಾಲಗೆ ಗ್ರಹಿಸಬಲ್ಲುದೇ ವಿನಾ ಅದರ ಪ್ರಮಾಣ ಎಷ್ಟು ಎಂದು ಹೇಳಲು ಸಾಧ್ಯವೇ? ಮೇಲಾಗಿ ಇಲ್ಲಿಯ ಕನ್ನಡಿಗರು ತಮ್ಮ ಅಸ್ಮಿತೆಯನ್ನೇ ಬಿಟ್ಟುಕೊಟ್ಟು, ಇಲ್ಲವೆ ಬದಿಗಿರಿಸಿ ಮರಾಠೀ ವಾತಾವರಣದಲ್ಲಿ ಲೀನರಾಗಿ ಬಿಟ್ಟಿದ್ದಾರೆ. ಬೇರೆ ಭಾಷಿಕರನ್ನು ನೀವು ಪುಣೆಯಲ್ಲಿ ಗುರುತು ಹಿಡಿಯಬಲ್ಲಿರಿ.

ಕನ್ನಡಿಗರನ್ನು ಗುರುತಿಸುವುದೆಂದರೆ ಉಸುಕಿನಲ್ಲಿ ಕಾಜಿನ ಕಣಗಳನ್ನು ಹುಡುಕುವಷ್ಟೇ ಕಷ್ಟದ್ದು. ಆದಾಗ್ಯೂ ಅಲ್ಲಿಯ ಕನ್ನಡಿಗರನ್ನು ಕರ್ನಾಟಕದಿಂದ ಬಂದು ಇಲ್ಲಿ ನೆಲೆಸಿದವರನ್ನು ಈ ರೀತಿ ವರ್ಗೀಕರಿಸಬಹುದು.

೧.ಮನೆತನ, ಹುಟ್ಟೂರು ಕರ್ನಾಟಕದ್ದು. ಈಗ ಮಾತ್ರ ತಾಯ್ನಾಡಿನ ನುಡಿಯ ಜನಗಳ ಸಂಪರ್ಕ ಏನೇನೂ ಇರದವರು. ಮರಾಠಿಗರಾಗಿ, ಪೂರ್ಣತಃ ಪರಿವರ್ತನೆಗೊಂಡವರು.

೨.ಕುಟುಂಬದ ಹಿರಿಯರು ಮಾತ್ರ ಕನ್ನಡವನ್ನು ಬಲ್ಲವರು. ಊರ ಕಡೆಯ ಸಂಪರ್ಕವು ಕಿಂಚಿತ್ ಇರುವುದು. ಪ್ರಕೃತ ಮರಾಠೀ ವಾತಾವರಣಕ್ಕೆ ಪೂರ್ಣವಾಗಿ ಹೊಂದಿಕೊಂಡವರು.

೩. ಮನೆಯಲ್ಲಿ ಕನ್ನಡದ್ದೇ ವಾತಾವರಣ. ಮಕ್ಕಳಿಗೆ ಕನ್ನಡ ಬರಿ ಅರ್ಥವಾಗುತ್ತದೆ. ಹೊರಗಿನ ಒಡನಾಟ ಹಾಗೂ ಮಕ್ಕಳ ಶಿಕ್ಷಣ ಪೂರ್ಣವಾಗಿ ಮರಾಠಿಯದು.

ಇಷ್ಟು ಮಾತ್ರ ನಿಜ. ಪುಣೆಯಲ್ಲಿಯ ಇತರ ಭಾಷಾ ವರ್ಗದವರಾದ ತೆಲುಗು, ತಮಿಳು, ಗುಜರಾತಿಗಳಿಗಿಂತ ಇಲ್ಲಿ ಕರ್ನಾಟಕದಿಂದ ಬಂದವರ ಸಂಖ್ಯೆಯೇ ದೊಡ್ಡದು. ಇಂಥ 'ಕನ್ನಡಿಗ'ರಲ್ಲಿ ರಾಜಕಾರಣಿಗಳಿದ್ದಾರೆ. ಎಂ.ಎಲ್.ಸಿ.ಗಳಿದ್ದಾರೆ. ಕಿರ್ಲೋಸ್ಕರ್, ಗರ್ವಾರೆಯವರ ಸಾಲಿಗೆ ನಿಲ್ಲುವ ಉದ್ಯಮಪತಿಗಳಿದ್ದಾರೆ. ತಜ್ಞರಾದ ಎಂಜಿನಿಯರರು, ಡಾಕ್ಟರರೂ ಇದ್ದಾರೆ. ಸಂಗೀತ ತಜ್ಞರಿದ್ದಾರೆ. ಕೆಲವರು ಶಿವಸೇನೆಯಲ್ಲಿ ಪ್ರಮುಖ ಕಾರ್ಯಕರ್ತರೆಂದು ಕೆಲಸ ಮಾಡುತ್ತಿದ್ದಾರೆ. ಆದರೆ ಅವರೆಲ್ಲ ಮೇಲ್ಕಾಣಿಸಿದರಲ್ಲಿ ಮೊದಲಿನ ವರ್ಗದ ಕನ್ನಡಿಗರು. ಹಾಗಿದ್ದರೂ ಅವರಿಗೆ ತಾಯ್ನೆಲದ ಬಗ್ಗೆ ಆ ಸಂಬಂಧದ ಬಗ್ಗೆ 'ಮೃದು ಮೂಲೆ'ಯೊಂದು ಮನದಲ್ಲಿ ಹುದುಗಿರುತ್ತದೆ. ನಾನು ನನ್ನ ಹೆಸರನ್ನು ಹೇಳುವ ಅಥವಾ ಬೇರೆಯವರು ತಿಳಿದುಕೊಳ್ಳುವ ಪ್ರಸಂಗ ಬಂದಾಗ," ನೀವು ಕರ್ನಾಟಕದವರೇ? ನಮ್ಮ ತಾಯಿ ಬಾಗಲಕೋಟೆಯವಳು. ನನಗೆ ಕನ್ನಡ ಸ್ವಲ್ಪ ಸ್ವಲ್ಪ ತಿಳೀತದೆ. ಮಾತಾಡಲಿಕ್ಕೆ ಬರೋದಿಲ್ಲ" ಎಂದು ಒಬ್ಬರು ಮರಾಠಿಯಲ್ಲಿ ಹೇಳುತ್ತಾರೆ. ಇನ್ನೊಬ್ಬರು, "ನನ್ನ ಹೆಂಡತಿ ಬೀದರ ಕಡೆಯವಳು. ಅವಳಿಗೆ ಓದಲಿಕ್ಕೆ ಕನ್ನಡ ಪುಸ್ತಕ ಬೇಕಂತೆ. ನಿಮ್ಮಲ್ಲಿದ್ರೆ ಕೊಡ್ತೀರಾ?" ಅಂತ ಕೇಳಿದ್ದಿದೆ. "ನಮ್ಮ ಕಾಕೂ ಕುಮಟೆಯವಳು. ಅವಳಿಂದಲೇ ನಾವು ಈ ಉತ್ತಮ ಸ್ಥಿತಿಗೆ ಬಂದದ್ದು" ಎನ್ನುವವರೂ ನನಗೆ ಸಿಕ್ಕಿದ್ದಾರೆ. "ನಮ್ಮ ಮನೆ ಮಾತು ಮರಾಠಿಯೇ. ಆದರೆ ನಮ್ಮ ಅಜ್ಜ ಹರಿಹರದಲ್ಲಿ ನೌಕರಿ ಮಾಡ್ತಿದ್ರು. ನನ್ನ ಪ್ರಾಥಮಿಕ ಶಿಕ್ಷಣ ಕನ್ನಡದಲ್ಲೇ ಆಗಿದೆ. ನಾಲ್ವತ್ತು ವರ್ಷ ಆತು ನೋಡಿರಿ - ಆ ಮಾತಿಗೆ. ಮರೆತು ಬಿಟ್ಟೇನಿ. ಕನ್ನಡ ಬರಿಯುವ, ಓದುವ ರೂಢಿ ಮಾಡಿಕೋಬೇಕಂತೇನಿ. ಸಾಧ್ಯ ಆಗಿಲ್ಲ" ಎಂದು ಈಚೆಗೆ ಒಬ್ಬರು ಹೇಳಿದ್ದುಂಟು. ಹೀಗೆ ಆತ್ಮೀಯವಾಗಿ ಮೃದು ಭಾವನೆಯಿಂದ ಕನ್ನಡದ ಸಂಬಂಧದ ಬಗ್ಗೆ ನಾನು ಕೇಳಿದಾಗ ಆಕೆ ವಿವರಿಸಿದರು.

"ನನಗೆ ಎಳ್ಳಷ್ಟೂ ಕನ್ನಡ ಬರುವುದಿಲ್ಲ. ನಮ್ಮ ತಂದೆ ಮೂಲತಃ ನಂಜನಗೂಡಿನವರಂತೆ. ಆದರೆ ಕಲಿಯಲೆಂದು ಬಂದ ಅವರು ಪುಣೆಯಲ್ಲಿಯೇ ಉಳಿದರು. ಅಲ್ಲಿಗೆ ಹೋದದ್ದೇ ಇಲ್ಲ. ನಾನೂ ಕಂಡಿಲ್ಲ-ಆ ಊರನ್ನು . ನಮ್ಮ ಮನೆಯಲ್ಲಿ ಪೂರ್ಣ ಮರಾಠೀ ವಾತಾವರಣ. ನನ್ನ ಮದುವೆಯೂ ಪುಣೆಯಲ್ಲಿಯೇ ಆಯಿತು. ಆದರೆ ನಾನು ಸೊಸೆಯಾಗಿ ಹೋದಾಗ ನನ್ನ ಅತ್ತೆ ಅಮಚೀ ಸೂನ ಬಾಯಿ ಕಾನಡೀ ಮರಾಠೀ ಬೋಲತೀ ಬರಕಾ?" ಎಂದು ಹಂಗಿಸಿ ನುಡಿಯುತ್ತಿದ್ದದ್ದು ನೆನಪಿಗೆ ಬರ್‍ತ್ತದೆ. ನೀವು ಇಲ್ಲಿ ಕನ್ನಡ-ಮರಾಠೀ ಸ್ನೇಹವನ್ನು ಬೆಳೆಸಲು ಯತ್ನಿಸುತ್ತಿದ್ದೀರಿ. ಹಾಗೆಂದು ನನ್ನ ಮಗನಿಗೆ ಹೇಳಿದೆ. ಅವನು ಒಂದು ಖಾಸಗಿ ಇಂಜಿನಿಯರಿಂಗ್ ಧಂಧೆ ನಡೆಸುತ್ತಿದ್ದಾನೆ. ಇಕೋ ತನ್ನ ಅಂಗಡಿಯ ಜಾಹೀರಾತನ್ನು ಕೊಟ್ಟಿದ್ದಾನೆ.

ಅಂತೂ ಕನ್ನಡಿಗರು ನೂರಿನ್ನೂರು ವರ್ಷಗಳಿಂದ ನೆಲಸಿದವರಲ್ಲದೆ ಈಚಿನವರು ಸಹ ಕನ್ನಡಿಗರಾಗಿ ಉಳಿದಿಲ್ಲ. ಇದು ಕಠೋರ ವಾಸ್ತವ್ಯ ಸತ್ಯ. ಪುಣೆಯ ಒಟ್ಟಿನ ವಾತಾವರಣ ಸ್ಪಂಜಿನಂತೆ. ಯಾವ ದ್ರವ ಪದಾರ್ಥವನ್ನೂ ಹೀರಿಕೊಳ್ಳುವಂತೆ, ಹೊರಗಿನಿಂದ ಬಂದ ಯಾರನ್ನೂ ಒಳಗಾಗಿಸುವುದು. ಈ ಮೊದಲು ಪ್ರಸ್ತಾಪಿಸಿದ ಕಲ್ಯಾಣಿಯವರು, ಭೀಮಸೇನ ಜೋಶಿಯವರು, ಸುಪ್ರಸಿದ್ಧ ಡಾಕ್ಟರ್ ಬಂಧುಗಳಾದ ಹಿರೇಮಠರು, ಇನ್ನೂ ಅನೇಕರು ತಾವು 'ಪುಣೇಕರ'ರಾಗಿದ್ದುದನ್ನು ಹೆಮ್ಮೆಯ ವಿಷಯವಾಗಿ ತಿಳಿಯುತ್ತಾರೆ.

ಕನ್ನಡತನವನ್ನು ತಮ್ಮ ಮಾತುಕೃತಿಗಳಲ್ಲಿ ಉಳಿಸಿಕೊಂಡ, ಮರಾಠಿಗೆ ಶರಣಾಗದ ಗಣ್ಯ ವ್ಯಕ್ತಿ ಎಂದರೆ ಯೋಗ ಶಾಸ್ತ್ರ ಪ್ರವೀಣರಾದ ಬಿ.ಕೆ.ಎಸ್. ಅಯ್ಯಂಗಾರರು. ಅಂತಾರಾಷ್ಟ್ರೀಯ ಖ್ಯಾತಿಯುಳ್ಳ ಅವರು ಯಾವ ಒಳ-ಹೊರ ದೇಶದಲ್ಲಿ ನೆಲಸಿದ್ದರೂ ವೈಭವದಿಂದ ಬಾಳಬಹುದಿತ್ತು. ಆದರೆ ಪುಣೆಯನ್ನು ಆಯ್ದುಕೊಂಡರು, ಕನ್ನಡಿಗನೆಂಬ ನಾತೆಯಿಂದ ಸುರುವಿಗೆ ತುಂಬಾ ಕಿರುಕುಳ ಕೊಟ್ಟರಂತೆ. ಇಲ್ಲಿ ತಮ್ಮ ದಿವಂಗತ ಪತ್ನಿಯ ಹೆಸರಲ್ಲಿ 'ರಮಾಮಣಿ ಯೋಗ ವಿಜ್ಞಾನ ಕೇಂದ್ರ' ವನ್ನು ಸ್ಥಾಪಿಸಿದ್ದಾರೆ. ಆರೇಳು ನೂರು ಜನ ನಿಯಮಿತವಾಗಿ ಯೋಗ ಶಿಕ್ಷಣ ಹೊಂದುತ್ತ ಇದ್ದಾರಂತೆ. ಒಬ್ಬರೇ ಹೇಗೆ ಕಲಿಸಲು ಸಾಧ್ಯ? ತುಂಬಾ ಜನ ಯೋಗ ಶಿಕ್ಷಕರನ್ನು ತಯಾರು ಮಾಡಿದ್ದಾರೆ. ೮೫-೯೦ ಅಂಚಿನಲ್ಲಿರುವ ಅವರು ಪುಣೆಯ ಪ್ರತಿಷ್ಠಿತರಲ್ಲಿ ಪ್ರತಿಷ್ಠಿತರು.

ಕಲ್ಮಾಡಿ ಎಂಬುದು ಉಡುಪಿಯ ಹತ್ತಿರದ ಒಂದು ಗ್ರಾಮ. ಅಲ್ಲಿಂದ ಐದು ದಶಕಗಳ ಹಿಂದೆ ಬಂದ ಡಾ. ಶಾಮರಾಯರು ವೈದ್ಯಕೀಯ ವೃತ್ತಿಯನ್ನಾರಂಭಿಸಿ ಗಣ್ಯ ಸ್ಥಾನ ಗಳಿಸಿದರು. ಕನ್ನಡ ಸಂಘವನ್ನು ಹುಟ್ಟು ಹಾಕಿ ಅದರ ಮೂಲಕ ಕರ್ನಾಟಕ ಹೈಸ್ಕೂಲನ್ನು ಸ್ಥಾಪಿಸಿದರು. ಆದರೆ ಪುಣೆಯಲ್ಲಿ ಅದೊಂದು ಕನ್ನಡ ಶಾಲೆ - ಎಂದು ತಿಳಿಯದಷ್ಟು ಅಲ್ಲಿ ಕನ್ನಡ ವಾತಾವರಣವು ಮಸಕಾಗಿದೆ. ಮುಂಬಯಿಯಲ್ಲಿರುವ ಕನ್ನಡ

ಹೈಸ್ಕೂಲುಗಳದ್ದೂ ಇದೇ ಹಣೆಬರಹ.

ಕನ್ನಡ ಸಾಹಿತ್ಯಿಕರು ಪುಣೆಯಲ್ಲಿದ್ದಾರೇನು? ತೀರ ಕಡಿಮೆ. ಈರ್ವರು ಮಹಿಳೆಯರು ಮಾತ್ರ ಕನ್ನಡ-ಮರಾಠೀ ಸಾಹಿತ್ಯದ ವಿನಿಮಯ ಕಾರ್ಯವನ್ನು ಒಂದು ವ್ರತವೆಂಬಂತೆ ಅವ್ಯಾಹತವಾಗಿ ಕೈಕೊಂಡಿದ್ದಾರೆ. ಅವರೇ ಮೀನಾ ವಾಂಗೀಕರ ಹಾಗೂ ಉಮಾ ಕುಲಕರ್ಣಿಯವರು. ಈ ಉಮಾ-ಪತಿ ವಿರೂಪಾಕ್ಷ ಕುಲಕರ್ಣಿಯವರನ್ನೂ ಈ ಸದರಿನಲ್ಲಿ ಸೇರಿಸಬೇಕು.

ಬೇಕೆಂದೇ ಕೊನೆಯಲ್ಲಿ ಹೇಳಬೇಕೆಂದಿದ್ದ ಹೆಸರು ಕೃ. ಶಿ. ಹೆಗಡೆಯವರದು. ಪ್ರಾಥಮಿಕ ಹಂತದ ಕನ್ನಡ ಪಠ್ಯಗಳನ್ನು ರಚಿಸುವ ಮಹಾರಾಷ್ಟ್ರ ಸರಕಾರದ 'ಬಾಲಭಾರತೀ' ಕಚೇರಿಯಲ್ಲಿ ಉನ್ನತ ಅಧಿಕಾರಿಯಾಗಿರುವ ಅವರ ಆಫೀಸು ಕೋಣೆಯಲ್ಲಿ ಕನ್ನಡವು ಸದಾ ಧ್ವನಿಸುತ್ತಿರುವುದು. ಆ ಮಟ್ಟಿಗೆ ಪುಣೆಯಲ್ಲಿರುವ 'ಕನ್ನಡ' ಸ್ಥಳ ಅದೊಂದೇ. ಅವರು ಮರಾಠೀ-ಕನ್ನಡ ಸ್ನೇಹ ವರ್ಧನ ಕೇಂದ್ರದ ಪ್ರಧಾನ ಕಾರ್ಯದರ್ಶಿಗಳೂ ಹೌದು. ಹಾಂ. ತೀರ ಹಳೆಯದಾದ ಕರ್ನಾಟಕ ಸಂಘವೊಂದಿದೆ. 'ಬುಧವಾರ ಚೌಕ' ಎಂಬಲ್ಲಿ. (ಕಲ್ಮಾಡಿಯವರದು 'ಕನ್ನಡ ಸಂಘ')

ಈಚಿನ ಒಂದು ವಿಶೇಷ ಬೆಳವಣಿಗೆಯೆಂದರೆ ಟಿಳಕ ಮಹಾರಾಷ್ಟ್ರ ವಿದ್ಯಾಪೀಠವೆಂಬ ಪದನಿಮಿತ್ತ (deemed) ವಿಶ್ವವಿದ್ಯಾಲಯದ ಆಶ್ರಯದಲ್ಲಿ ಮರಾಟಿಗರಿಗೆ ಕನ್ನಡ ಕಲಿಸುವ ವ್ಯವಸ್ಥೆಯಿದೆ. ಕೆಲ ವರ್ಷಗಳ ಹಿಂದೆ ಅದನ್ನು ಆರಂಭಿಸಿಯಾದ ಮೇಲೆ ನಾನು ಬೆಂಗಳೂರಿಗೆ ಬಂದೆನಷ್ಟೇ. ಈಗ ಶ್ರೀಮತಿ ವೀಣಾ ನೀವರಗಿ ಹಾಗೂ ಡಾ. ಶ್ರೀಪಾದ ಭಟ್ಟ ನಡೆಸಿಕೊಂಡು ಹೋಗಿದ್ದಾರೆ.

ಇದಿಷ್ಟು ಪುಣೆಯ ಕನ್ನಡ ಪುರಾಣ!

***

೧೪. ವಿಮಾನದಲ್ಲಿ ಜಲಬಾಧೆ

ಎಲ್ಲ ವಿಮಾನಗಳಲ್ಲಿ ಜಲಬಾಧಾ ನಿವಾರಣೆಗೆ ಅಚ್ಚುಕಟ್ಟಾದ ವ್ಯವಸ್ಥೆ ಇರುತ್ತದೆ. ಒಮ್ಮೊಮ್ಮೆ 'engaged' ಆಗಿರುತ್ತದೆ. ಇಂಥ ಸ್ಥಿತಿಯಲ್ಲಿ ಮಾಜೀ ಮಂತ್ರಿಯೋರ್ವರು, ತಮ್ಮ ಜಲಬಾಧೆಯನ್ನು, ವಿಮಾನದ ಹೊರಬಾಗಿಲಿನ ಮೂಲೆಯಲ್ಲಿ ತೀರಿಸಿಕೊಂಡರಂತೆ.

ಆ ದಿನದ ಇಂಗ್ಲೀಶ್ ಪತ್ರಿಕೆಯಲ್ಲಿ Ex-Minister eases out ಎಂಬ ಶೀರ್ಷಿಕೆಯಡಿ ಈ ಸುದ್ದಿ ಪ್ರಕಟವಾದಾಗ ಆ ಕ್ರಿಯಾಪದದ ಅರ್ಥ ಸರಿಯಾಗಿ ತಿಳಿಯದೇ ಬರೆದಿದ್ದಾರೇನೊ ಎಂಬ ಸಂಶಯ ಮೂಡಿತ್ತು. ಮುಂದೆ ಓದಿದಾಗ ಮೂತ್ರ ವಿಸರ್ಜನೆಗೇ ಸಂಬಂಧಿಸಿದ್ದೆಂಬುದು ಸ್ಪಷ್ಟವಾಯ್ತು.

ನನ್ನ ಹಾಗೇ ಬೆಳಗಿನಲ್ಲಿ ಕಟಾಂಜನಕ್ಕೆ ಆತು ಪೇಪರ್ ಓದುತ್ತಿದ್ದ ನೆರೆಮನೆಯಾತ "ಪೇಪರಿನವರು ಇಂಥ ಸುದ್ದಿಯನ್ನು ಪ್ರಕಟಿಸುವುದೆ?" ಎಂದು ಪ್ರತಿಕ್ರಿಯಿಸಿದಾಗ, ನಾನು ಅವನಿಗೆ ಸುಪ್ರಸಿದ್ಧ ಗೋಕರ್ಣದಲ್ಲಿ ರಾವಣನಿಗೆ ಇದೇ ಪರಿಸ್ಥಿತಿ ಒದಗಿದ್ದನ್ನು, ಅದು ನಮ್ಮ ಪರಮ ಪವಿತ್ರ ಪುರಾಣದಲ್ಲಿ ಅಧಿಕೃತವಾಗಿ ದಾಖಲಾದದ್ದನ್ನು ನೆನಪಿಗೆ ತಂದುಕೊಟ್ಟೆ. ಮತ್ತು "ಆಗೇನಾದರೂ 'ಹಿಂದೂ' ಪತ್ರಿಕೆ ಅಸ್ತಿತ್ವದಲ್ಲಿ ಇರ್‍ತಿದ್ದರೆ, ಅವರು ದೊಡ್ಡ ಹೆಡ್‌ಲೈನ್ ಹಾಕಿ ಪ್ರಕಟಿಸುತ್ತಿದ್ದರು" ಎಂದೆ.

ಹೌದು. ತಪಸ್ಸಿನ ಭಂಗಿಯಲ್ಲಿ ಸದಾ ಕುಳಿತೇ ಇದ್ದು ಅಪಾರ ಪರಿಶ್ರಮದಿಂದ ಶಿವಲಿಂಗವನ್ನು ಸಂಪಾದಿಸಿದ ರಾವಣನಿಗೆ ಜಲಬಾಧೆ ಒದಗಿದ್ದು ಸಹಜವೇ. ಆದರೇನು ಶಿವಲಿಂಗವನ್ನು ಕೆಳಗಿರಿಸಬಾರದೆಂಬ ಕರಾರು ಇತ್ತಲ್ಲ! ಅದಕ್ಕಾಗಿ ಅಲ್ಲಿಯೆ ಇದ್ದ ಗಣೇಶನಿಗೆ ಒಪ್ಪಿಸಿ easing out ಕಾಯಕದಲ್ಲಿ ಅಷ್ಟೇ ಶ್ರದ್ಧೆಯಿಂದ ನಿರತನಾದಾಗ, ಆ ವಿಘ್ನಹರನು ವಿಘ್ನಸಂತೋಷಿಯಾಗಿ ನೆಲದ ಮೇಲೆ ಇಟ್ಟು ಕಿಡಿಗೇಡಿತನದಿಂದ ನಗುತ್ತ ಓಡಿದನಲ್ಲವೆ? ರಾವಣನಿಗೆ ಅದೆಷ್ಟು ಸಿಟ್ಟು ಬಂದಿರಬೇಕು!

ಹಾಗೆಂದು ಪುರಾಣಗಳಲ್ಲಿ ಉಲ್ಲೇಖವಾಗಿಲ್ಲವಲ್ಲ? ಅಂದಮೇಲೆ ರಾವಣನಿಗೆ ಸಿಟ್ಟು ಬಂದಿರಲಿಕ್ಕೂ ಇಲ್ಲ. ಜಲಬಾಧೆಯನ್ನು ತಡೆದೂ ತಡೆದೂ ಅನಿವಾರ್ಯದ ಹಂತವನ್ನು ತಲುಪಿ ತೀರಿಸಿಕೊಂಡಾಗ ಆದ ಸಂತೃಪ್ತಿ ಆ ಕ್ಷಣಕ್ಕೆ ಅವನ ಮನದಲ್ಲಿ

ಮೂಡಿರಲು ಸಾಕು. ಈ ಬಗೆಯ ಸಂತೃಪ್ತಿ ನಮ್ಮ ನಿಮ್ಮೆಲ್ಲರ ಅನುಭವದ್ದೇ ತಾನೇ. ನನ್ನೊಬ್ಬ ಪರಿಚಯದವ ಹೇಳುತ್ತಿದ್ದ" ನಮ್ಮ ಜೀವನದಲ್ಲಿ ಆತ್ಯಂತಿಕ ಸುಖವನ್ನು ಪಡೆಯುವ ಸಾಧನವೊಂದಿದೆ - ಏನೂ ವೆಚ್ಚ ಮಾಡಬೇಕಾಗಿಲ್ಲ . ಅದುವೆ ಈ ವಿಸರ್ಜನೆ. ಮೊದಲಿಗೆ ಅದು ಬಂದಾಗ ತಡೆದುಕೊಳ್ಳಬೇಕು. ಒತ್ತಡ ಬರುತ್ತದೆ. ಆಗೂ ತಡೆದುಕೊಳ್ಳಬೇಕು. ಇದಕ್ಕೂ ಹೆಚ್ಚು ಹೊತ್ತು ಕಾಯುವುದು ಶಕ್ಯವಿಲ್ಲ- ಎನ್ನಿಸುತ್ತದೆ. ಆಗೂ ಹೋಗುವುದಿಲ್ಲ ಎಂದು ಪಟ್ಟು ಹಿಡಿಯಬೇಕು! ಮರುಕ್ಷಣದಲ್ಲಿ ಮೊದಲಿಗಿಂತ ಹೆಚ್ಚಿನ ಒತ್ತಡ. ಆಗೂ ... ! ಅದಿನ್ನು ನಿಮ್ಮ ಛಲವನ್ನು ಮೀರಿ ಹೊರಬಂದೇ ತೀರುವೆ ಎನ್ನುತ್ತದೆ. ಅಂಥ ಸ್ಥಿತಿಯಲ್ಲಿ E A S E O U T ! ಅದರಂಥ ಸುಖ ಸಂತೃಪ್ತಿ ಇನ್ನಾವುದರಲ್ಲಾದರೂ ಇದ್ದರೆ ಹೇಳಿರಿ" ಎನ್ನುತ್ತಾನೆ ಆತ.

ರಾವಣನು ಇಂಥದೇ ಮನಸ್ಥಿತಿಯನ್ನು ಹೊಂದಿರಬೇಕು - ಆಗ ಮತ್ತು ಶ್ರೀಲಂಕೆಗೆ ಶಿವಲಿಂಗವನ್ನು ಒಯ್ಯಲಾಗದಿದ್ದರೆ ಏನಂತೆ. ಗೋಕರ್ಣಕ್ಕೇ ಬಂದು ದರ್ಶನ ತೆಗೆದುಕೊಂಡರಾಯಿತು. ಹೇಗೂ ಪುಷ್ಪಕ ವಿಮಾನವಿದೆ. ತೀರ್ಥಯಾತ್ರೆಯ ಪುಣ್ಯವೂ ಲಭಿಸೀತು. ಅಂದ ಹಾಗೆ ಪುಷ್ಪಕ ವಿಮಾನದಲ್ಲಿ TOILET ಎಂಬ ಫಲಕವಿಲ್ಲ. ಅದರ ವ್ಯವಸ್ಥೆಯೂ ಇಲ್ಲ. ಆದರೆ ಗೋಕರ್ಣದ ವರೆಗಿನ ಪ್ರಯಾಣದಲ್ಲಿ ಇಲ್ಲದಿದ್ದರೆ ನಡೀತದೆ, ಹೇಗೂ ಇಲ್ಲಿಗೆ ಬಂದಾಗ... ಎಂದೆಲ್ಲ ಆತ ಯೋಚಿಸಿರಬೇಕು.

ನಮ್ಮ ಮಂತ್ರಿಗಳ ಪರಿಸ್ಥಿತಿಯಾದರೂ ಅಷ್ಟೇ ಗಂಭೀರ ಸ್ವರೂಪದ್ದಾಗಿರಬೇಕು. ಅರವತ್ತರ ಅರುಳುಮರುಳಿನ ವಯಸ್ಸಿನಲ್ಲಿದ್ದಿರಬಹುದಾದ ಅವರು ಹವಾನಿಯಂತ್ರಿತ ತಂಪಿನಿಂದ ಉದ್ಭೂತವಾದ ಆ ಬಾಧೆಯ ನಿವಾರಣೆಗಾಗಿ ವಿಮಾನದೊಳಗಿನ Toilet ಬಳಿ ತುಸು ಸಮಯ ಕಾಯುವ ಸಭ್ಯತೆಯನ್ನು ತೋರಿಯೆ ಇದ್ದರು. ಪೇಪರಿನಲ್ಲಿ ಅದೇನು ವರದಿಯಾಗಿಲ್ಲ. ಆದರೆ ನಾನು ಹೇಳುತ್ತೇನೆ - ನಿಶ್ಚಿತವಾಗಿ ಕಾಯ್ದಿರಬೇಕೆಂದು ತಡೆದು ನಿಲ್ಲಿಸಿ ease out ಮಾಡುವ ಸುಖದ ಆ ಪ್ರಸಂಗವನ್ನು ಅವರು ಅದೆಂತು ಕಳೆದುಕೊಂಡಾರು. ಆಗಿರಬಹುದಾದ ಸಂಗತಿಯೆಂದರೆ ಒಳಗಡೆ ಅಂಗನೆಯೋರ್ವಳು ಅಲಂಕಾರ ಮಾಡಿಕೊಳ್ಳುತ್ತಿದ್ದಿರಬಹುದು - ಆವಾಗ ಎಷ್ಟು ಹೊತ್ತು ಕಾಯುತ್ತಿದ್ದಿರಬಹುದು - ಎಂಬುದರ ಲೆಕ್ಕ ಹತ್ತದು. ಅದರಿಂದ ಮಂತ್ರಿಗಳಿಗೆ ಒಳ್ಳೆಯದೇ ಆಯಿತೆನ್ನಬೇಕು. ಅಂತೂ ಉಟ್ಟ ಖಾದಿ ಧೋತರವನ್ನು ಮೇಲೆತ್ತಿ ಹಿಡಿದು ಹಳ್ಳಿಗಳಲ್ಲಿ ತುದಿಗಾಲ ಮೇಲೆ ಕೂಡ್ರುವವರಂತೆ ಸನ್ನದ್ಧರಾದರು.

ಮಂತ್ರಿಗಳು ತಮ್ಮ ತಪ್ಪಿಗಾಗಿ Sorry ಅನ್ನಲಿಲ್ಲವಂತೆ. ಕ್ಷಮೆ ಕೇಳಲಿಲ್ಲವಂತೆ. ಹಲವು ಕಾರಣಗಳಿಂದ ಅವರು ಹಾಗೆ ಮಾಡಿರಲಿಕ್ಕಿಲ್ಲ. ಒಂದು, ಬಾಗಿಲಿಗೆ ಸಮೀಪವಿದ್ದವರ ಸಮಕ್ಷಮವೇ, ಮಾಡಿದ್ದಾಗ ಕ್ಷಮೆ ಕೇಳುವ ಅಗತ್ಯವೆಲ್ಲಿದೆ? ಎರಡನೆಯದಾಗಿ ಮಂತ್ರಿಪದ

ವಂಚಿತರಾಗಿದ್ದ ಅವರು ಏನಕೇನ ಪ್ರಕಾರೇಣ ಪಕ್ಷದ ವರಿಷ್ಠರ ನಜರಿಗೆ ಬೀಳಬೇಕೆಂದು ಯೋಚಿಸಿರಬೇಕು. ಮೂರನೆಯದಾಗಿ ಜಲಬಾಧೆ ಎನ್ನುವುದು ಎಲ್ಲರ ಅನುಭವದ ವಿಷಯ. ಬಸ್ಸಿನ ಪ್ರಯಾಣದಲ್ಲಿದ್ದಾಗ , ವೇದಿಕೆಯೊಂದರ ಮೇಲೆ ವಿಚಾರಗೋಷ್ಠಿಯ ಅಧ್ಯಕ್ಷರಾಗಿ, 'ತಮ್ಮ ಸಮಾರೋಪ ಭಾಷಣದ ಸರದಿ ಯಾವಾಗ ಬಂದೀತೋ, ಯಾವಾಗ ಅದನ್ನು ಮುಗಿಸಿದೊಡನೆಯೇ, ಆಭಾರ ಮನ್ನಣೆಯ ಭಾಷಣ ನಡೆದಿರುವಾಗಲೇ ಹೇಗೆ ಎದ್ದು ಹೋದೇನೊ ಎಂಬಂತಹ ಸಂಕಟ ಬಂದಾಗ, ಅಷ್ಟೇ ಏಕೆ, ಮನೆಯಲ್ಲಿ - ಹುಡುಗರು, ಹೆಣ್ಣು ಮಕ್ಕಳು, ಮುದುಕರು, ತದಕರು - ಹೀಗೆಲ್ಲ ಜನ ಇದ್ದು 'ಸಂಡಾಸ್' ಎನ್ನುವುದು ತೆರವಿಲ್ಲದಾಗ - ಈ ಸಮಸ್ಯೆ ಇದ್ದೇ ಇರುತ್ತದೆ. ಮಹತ್ವದ್ದೆಂದರೆ ಆಗೆಲ್ಲ ಇತರರು ಸಹಾನುಭೂತಿಪರರಾಗಿ ಇರುತ್ತಾರೆ. ಆದ್ದರಿಂದ ಮಂತ್ರಿವರ್ಯರ ಈ ಧೈರ್ಯವನ್ನೂ, ಜೊತೆಗೆ ಒಂದಷ್ಟು ಸಹಾನುಭೂತಿಯನ್ನೂ ಸೇರಿಸಿ, ಕೊಂಡಾಡಬೇಕು.

ಮೂತ್ರ ವಿಸರ್ಜನೆ - ಎನ್ನುವುದು ಒಂದು ಮಾಮೂಲಿಯ ಕೆಲಸ ಎಂದು ಯಾರೂ ಭಾವಿಸಲಾಗದು. ಅದರ ಉಪಯೋಗವನ್ನು ಅನ್ಯ ಸಂದರ್ಭಗಳಲ್ಲಿ ಮಾಡಿಕೊಳ್ಳಬಹುದು. ಉದಾಹರಣೆಗೆ ಹೆಂಡತಿ - ಬೈಯತೊಡಗಿದರೆ ಅದಕ್ಕೆ ಕಡಿವಾಣ ಹಾಕಲು "ಈಗ ಬರ್ತೇನೆ, ತಡಿ. ಬಂದ ಮ್ಯಾಲೆ ಬೈವೀಯಂತೆ" ಎಂದು ಹೇಳಿ ಕಕ್ಕಸಿಗೆ ಹೋಗಿ ಬಿಡಬಹುದು. ಯಾರದೇ ಸಿಟ್ಟಿನ ಮಾತಿಗೆ ತುಸು ಅಡೆತಡೆಯಾದರೆ ಪುನಹ ಅದೇ ಧರತಿಯಲ್ಲಿ ಅದು ಮುಂದುವರಿಯುವುದಿಲ್ಲ.

ಮೂತ್ರ ವಿಮೋಚನೆಯ ಒಂದು ಅನರ್ಥ ಪ್ರಸಂಗವನ್ನು ಹೇಳುವೆ. ವಿಜ್ಞಾನೇತಿಹಾಸದಲ್ಲಿ ದಾಖಲಾದದ್ದು. ಕೆಪ್ಲರ - ಎಂಬ ಖಗೋಲ ವಿಜ್ಞಾನಿಯ ಹೆಸರನ್ನು ನೀವು ಕೇಳಿರುವಿರಿ. ಆದರೆ ಅವನ ಗುರು ಬ್ರಾಹೇನ ವಿಷಯ ನಿಮಗೆ ಗೊತ್ತಿರಲಿಕ್ಕಿಲ್ಲ. ಒಮ್ಮೆ ಅವನು ಒಂದು Cocktail partyಗೆ ಹೋದ. ಕುಡಿದ;ಕುಡಿದೇ ಕುಡಿದ. ಮೂತ್ರದ ಚೀಲ ಉಬ್ಬಿಕೊಂಡಿತು. ಇನ್ನದರ ವಿಸರ್ಜನೆ ಮಾಡಬೇಕು ಎನ್ನುವುದರ ಪ್ರಜ್ಞೆಯೇ ಇಲ್ಲದಷ್ಟು ಮದ್ಯಸೇವನೆ ಮಾಡಿದ್ದ. ತುಸುವೇ ಸಮಯದಲ್ಲಿ ಆ ಚೀಲ burst ಆಯಿತಂತೆ. ಸತ್ತೇ ಹೋದ.

ಚೇಷ್ಟೆಯಲ್ಲಿ ಮೂತ್ರ-ವಿಮೋಚನೆ ಎಂದೆನಲ್ಲವೆ. ಈಗ ಬಳಕೆಯಲ್ಲಿರುವ 'ವಿಸರ್ಜನೆ'ಯನ್ನು ಕನ್ನಡದಲ್ಲಿಯೂ ಉಪಯೋಗಿಸುತ್ತಿದ್ದೇವೆ. ಆದರೆ ಇನ್ನೊಂದಿದೆಯಲ್ಲ- ಉಚ್ಚೆ ಹೊಯ್ಯುವುದು-ಶುದ್ಧ ದೇಶೀ ಶಬ್ದ. ಹೊಯ್ಯು? ಛೀ. ಹೊಯ್-ಸಳ ಎಂದ ಹಾಗೆ 'ಹೊಯ್ ಮೂತ್ರ' ಎಂಬ ಅರಿಸಮಾಸ ದೋಷ ಪೂರಿತ ಶಬ್ದವನ್ನೇನೊ ಸೃಷ್ಟಿಸಬಹುದು. ಆದರೆ ಇಂಗ್ಲೀಷಿನ easing out = ಬಿಡುಗಡೆ ಮಾಡಿಕೊಳ್ಳುವುದು, ಇದರ ಅನ್ವರ್ಥಕತೆ ಈ ಹೊಯ್ಯುವುದಕ್ಕೆ ಇಲ್ಲ. ಆದ್ದರಿಂದ ಆ ಅರ್ಥವನ್ನು ಪರೋಕ್ಷವಾಗಿ ಸೂಚಿಸಬಲ್ಲ

ಮೂತ್ರ ವಿಮೋಚನೆ ಎಂಬುದನ್ನು, ಶಿಷ್ಟ ಸಾಹಿತ್ಯಕಾರರು ಬಳಸಬಹುದು. ಸಾಮಾನ್ಯ ಜನರು ಮಾತ್ರ 'ಹೊಯ್ಯು'ವವರೇ.

ಇನ್ನೀಗ ನಮ್ಮ ಮಂತ್ರಿಗಳತ್ತ ಮತ್ತೆ ಬರೋಣ. ಸರಕಾರೀ ಸ್ವಾಮಿತ್ವದ ಆ ವಿಮಾನ ಸಾರಿಗೆಯವರು, ನಮ್ಮ ಮಂತ್ರಿಗಳಿಗೆ ಮುಂದಿನ ಆರು ವರ್ಷಗಳವರೆಗೆ ಅಂದರೆ ೨೧ನೆಯ ನವೀನ ಶತಮಾನದ ಕೆಲವು ವರ್ಷ ಸಹ ಅವರಿಗೆ ತಮ್ಮಲ್ಲಿ ಯಾನಾನುಮತಿ - ಇಲ್ಲವೆಂದು ಹೇಳಿದ್ದಾರಂತೆ. ಹಾಗೆ ಮಾಡಬಾರದಿತ್ತು. ವಿಮಾನಗಳು ಅವರ ಹತೋಟಿಯಲ್ಲಿವೆ; ನಾವೇನು ಮಾಡಲಿಕ್ಕಾಗುತ್ತದೆ? ಆದರೆ ಇದೇ ಸಂಕಟ ಪರಿಸ್ಥಿತಿಯು - ಬೇರೆಯವರಿಗೆ ಇನ್ನು ಮುಂದೆ ಬರುವುದಿಲ್ಲವೆಂದು ಏನು ಗ್ಯಾರಂಟಿ? ಆದಕಾರಣ ವಿಮಾನದವರು ಈ ಕೆಳಗಿನ ಪೂರ್ವಭಾವೀ ಎಚ್ಚರಿಕೆ ವಹಿಸಬೇಕು.

ಅ) ವಿಮಾನವನ್ನು ಏರುವ ಸಮಯದಲ್ಲಿ ಕೊಡುವ ಬೋರ್ಡಿಂಗ್ ಪಾಸ್‌ನ ಹಿಂದಿನ ಬದಿಗೆ Better ease out before you board the plane ಎಂದು ಮುದ್ರಿಸಬೇಕು.

ಆ) ವಿಮಾನದಲ್ಲಿ toiletನ ಒಳಗೆ "ಬೇಗ ಮುಗಿಸಿರಿ. ಬೇರೆಯವರಿಗೆ ಅವಕಾಶ ಕೊಡಿರಿ" - ಎಂಬರ್ಥದ ಸೂಚನೆ ಇರಬೇಕು.

ಇ) ವಿಮಾನದ ಒಂದು ಮೂಲೆಯಲ್ಲಿ ರಂಧ್ರವನ್ನು ಕೊರೆದು (ಬಚ್ಚಲು ಮನೆಗಳಲ್ಲಿ ಇರುವ ಹಾಗೆ ಅದರ ಮೇಲೆ ಜಾಳಿಗೆಯ ಪಟ್ಟಿಯನ್ನು ಹಾಕಿ(For Emergency Ease - out ' ಎಂಬುದಾಗಿ ಬರೆಸಬೇಕು!

***

೧೫. ಈ ಮರಾಠೀ ಮಹಿಳೆ

ಮಧ್ಯಮ ವರ್ಗದ ಮರಾಠೀ ಮಹಿಳೆಯರನ್ನು ಮೂರು ಸ್ತರಗಳಲ್ಲಿ ಗಣಿಸಬಹುದು. ಒಂದು ವರ್ಗದವರು ಮದುವೆಯಾಗಿ ಎರಡು ಮಕ್ಕಳನ್ನು ಹಡೆದು ನೆಮ್ಮದಿಯಿಂದ ಸಂಸಾರ ಸಾಗಿಸುತ್ತಿರುವ 'ಆಧುನಿಕ ಸಂಪ್ರದಾಯ'ದವರು. ಕರ್ನಾಟಕದಲ್ಲಿಯೂ ಇಂಥವರು ಅಸಂಖ್ಯ ಗಣನೆಯಲ್ಲಿದ್ದಾರೆ. ಇನ್ನೊಂದು ವರ್ಗ ಸ್ತ್ರೀಮುಕ್ತಿ ಚಳವಳಿಯಲ್ಲಿದ್ದುಕೊಂಡು ಸ್ತ್ರೀಸ್ವಾತಂತ್ರ್ಯ ಸಮಾನತೆಗಳಿಗಾಗಿ ಹೋರಾಡುವವರು. ಇವರ ಸಂಖ್ಯೆ ಕಡಿಮೆಯಾದರೂ ಮಹಾರಾಷ್ಟ್ರದಲ್ಲಿ ಇವರ ಕೆಲಸ ಎದ್ದು ಕಾಣುವಂತಹದು.

ಇವರ ಮಧ್ಯೆ ಇನ್ನೊಂದು ವರ್ಗವಿದೆ. ಈ ಮಹಿಳೆ ಸುಶಿಕ್ಷಿತೆ; ಸಿರಿವಂತಳೇನೂ ಇದ್ದಿರಲಿಕ್ಕಿಲ್ಲ. ಆದರೆ ಪ್ರಜ್ಞಾವಂತೆ. ಸಾರಾಸಾರ ವಿಚಾರ ಮಾಡಬಲ್ಲವಳು. ಸಂಸಾರದಲ್ಲಿ ಸ್ವಂತದ ಅಸ್ತಿತ್ವವನ್ನು ಕಾಯ್ದುಕೊಳ್ಳಬೇಕೆನ್ನುವವಳು. ಜೀವನದಲ್ಲಿ ಏನನ್ನಾದರೂ ಸಾಧಿಸ ಬಯಕೆಯುಳ್ಳವಳು.

ಈ ಮಹಿಳೆಯನ್ನು 'ಮರಾಠೀ' ಎಂದು ವಿಶೇಷಿಸಿದರೂ ಈಕೆ -ಭಾರತೀಯ ಸ್ತ್ರೀಯೇ. ಎಂದರೆ ದೇಶದ ಇತರ ಕಡೆಗಳಲ್ಲಿಯ ಸ್ತ್ರೀಯ ಶಾಲೀನತೆ, ಭಾವನಾವಶತೆ, ಸಹನೆ ಮುಂತಾದ ಗುಣಗಳೂ, ಕ್ಷುದ್ರತನ, ಮೈಗಳ್ಳತನ, ಇವೂ ಈ ಮರಾಠೀ ಮಹಿಳೆಯರನೇಕರಲ್ಲಿ ಕಾಣಬಹುದು. ನಾನಿಲ್ಲಿ ಹೇಳಬಯಸಿದುದು ಇಂಥ ಮಹಿಳೆಯರ ವಿಚಾರಸರಣಿ ಮತ್ತು ಅವರ ಬದುಕಿನ ಬಗೆಗಿನ ವಿಶಿಷ್ಟ ದೃಷ್ಟಿಕೋಣ.

ಮದುವೆಗೆ ಮುಂಚೆ

ಕಾಲೇಜಿನ ಮೊದಲ ವರ್ಷದಲ್ಲಿ ಕಲಿಯುತ್ತಿದ್ದ ಅನಿತಾಳಿಗೆ ಹಿಂದುಸ್ತಾನೀ ಸಂಗೀತದ ಹುಚ್ಚು. ಅದರಲ್ಲಿಯೂ ಭೀಮಸೇನ ಜೋಶಿಯವರ ಹಾಡುಗಾರಿಕೆ ಇದ್ದರೆ ತಪ್ಪಿಸುವವಳೇ ಅಲ್ಲ. ಒಮ್ಮೆ ಅಂಥ ಕಾರ್ಯಕ್ರಮ ನಡೆದಾಗ ನನ್ನ ಬದಿಯಲ್ಲಿ ಕುಳಿತಿದ್ದಳು. ಅವರು ಹಾಡಿದ ರಾಗದ ಹೆಸರು ಕೇಳುವುದರ ನಿಮಿತ್ತದಿಂದ ಪರಿಚಯವಾಯಿತು. ಸಲಿಗೆಯ ಮಾತುಕತೆ ಮುಂದುವರಿಯಿತು. ಒಮ್ಮೆ ಅವರ ಮನೆಗೆ, ನಾನು ಕೊಟ್ಟಿದ್ದ ಹಾಡಿನ ಕಸೆಟ್ ತರಲೆಂದು ಹೋದಾಗ, ಅವಳ ತಂದೆ - ತಾಯಿಗಳ ನಡುವೆ ಹಣಾಹಣಿ ವಾಗ್ಯುದ್ಧ

ನಡೆದಿತ್ತು. 'ಯಾಕಾದರೂ ಈಗ ಬಂದೆನೊ' ಎಂದು ಹಿಂತಿರುಗುತ್ತಿದ್ದಾಗ, ಅಲ್ಲಿಯೆ ಸೋಫಾದ ಮೇಲೆ ಕುಳಿತಿದ್ದ ಅನಿತಾ ಕೈಮಾಡಿ ಕರೆದು ಕೂಡ್ರಿಸಿದಳು. ಅಪ್ಪ ಅವ್ವರ ಜಗಳದ ಮೋಜು ನೋಡುತ್ತಿದ್ದ ಭಂಗಿಯಲ್ಲಿದ್ದಳು! ತಾನೇ ಆ ಜಗಳಕ್ಕೆ ಕಾರಣವಾಗಿದ್ದಾಗಲೂ. ಜಗಳದ ಕಾರಣವೆಂದರೆ, ಅನಿತಾ ಕಾಲೇಜು ಬಿಟ್ಟೊಡನೆ ಸಂಜೆ ಮನೆಗೆ ಬರದೇ, ತಡಮಾಡಿ ಬರುತ್ತಿದ್ದಳು. ಒಮ್ಮೆಯಾದರೆ ಅಡ್ಡಿಯಿಲ್ಲ ಹೀಗೆ ಮೇಲಿಂದ ಮೇಲೆ ಮಾಡೋದೆ? ಅದೆಲ್ಲಿ ಮೆರೆಯಲಿಕ್ಕೆ ಹೋಗುತ್ತಾಳೆ? ಇದನ್ನು ನಿಲ್ಲಿಸಲೇಬೇಕು' ಇದು ತಂದೆಯ ಹಟ. ಕೆಲವು ವರ್ಷಗಳ ಹಿಂದೆ ನನ್ನ ಮಗಳು ಹೀಗೇ ತಡಮಾಡಿ ಬರುತ್ತಿದ್ದಾಗ ನನ್ನ ಶ್ರೀಮತಿ ಆಕ್ಷೇಪಿಸುತ್ತಿದ್ದಳು., ಆಗ ನಾನು 'ಇರ್ಲಿ ಬಿಡು. ಅಂಥದ್ದೇನು ತಪ್ಪು?' ಎಂದು ಸಮಾಧಾನ ಹೇಳಿದ್ದು ನೆನಪಿಗೆ ಬಂತು. ಆದರೆ ಇಲ್ಲಿ? 'ಅದರಲ್ಲೇನು ತಪ್ಪು? ಹುಡಿಗೆಯರು ಅಷ್ಟು ಸಲೀಸಾಗಿ ದಾರೀ ತಪ್ಪುವರೆಂದು ಯಾಕೆ ತಿಳೀತೀರಿ?" ಎಂದು ತಾಯಿಯೇ ಮಗಳನ್ನು ಸಮರ್ಥಿಸಿಕೊಳ್ಳುತ್ತಿದ್ದಳು! ಅವರ ಜಗಳ ತಾರಕಸ್ವರದಲ್ಲಿದ್ದಾಗೇ ಅನಿತಾ ನನ್ನ ಕಿವಿಯಲ್ಲಿ ಉಸುರಿದಳು. 'ಅಂಕಲ್, ನಮ್ಮ ಆಯಿಗೆ ತನ್ನ ಕಾಲೇಜ ದಿನಗಳಲ್ಲಿ ಏನೊಂದೂ ಸ್ವಾತಂತ್ರ್ಯವಿರಲಿಲ್ಲ. ಹೆಣ್ಣಾದ ತಪ್ಪಿಗೆ ನಿರ್ಬಂಧಗಳು ಬಹಳ ಇದ್ದುವಂತೆ. ಅದನ್ನು ನೆನೆದು ಹೀಗೆ ನನ್ನ defend ಮಾಡ್ತಿದ್ದಾಳೆ."

ಬಾಳಸಂಗಾತಿಯ ಆಯ್ಕೆ

ತನ್ನ ಬಾಳಸಂಗಾತಿಯ ಆಯ್ಕೆಯನ್ನು ಹಿರಿಯರೇ ಮಾಡಿದ್ದಾಗ, ತಾನು ಒಪ್ಪಿಬಿಡಬೇಕು. - ಎನ್ನುವ ಪ್ರಣಾಲಿ ಈಚಿನ ಮರಾಠೀ ಮಹಿಳೆಯರಲ್ಲಿ ಇಲ್ಲವೇ ಇಲ್ಲ ಎನ್ನಬಹುದು. ತನಗೆ ಎಂಥ ಗಂಡ ಬೇಕು ಎನ್ನುವುದನ್ನು, ಹೆಚ್ಚು ಕಲಿಯದವಳೂ ಯೋಚಿಸಿರುತ್ತಾಳೆ - ಕೂಲಂಕಷವಾಗಿ. ಇದು ಅವರ ಸ್ವಭಾವಾನುಸಾರ ನಡೆಯುತ್ತದೆ. ಈ ಕುರಿತು ನಾನು,(ನನ್ನನ್ನು ಸದಾ ಅಂಕಲ್, ಅಂಕಲ್ ಎಂದು ಕರೆಯುವ) ಒಬ್ಬಳನ್ನು ಪ್ರಶ್ನಿಸಿದ್ದೆ. ಆಗ ಅವಳು 'ನನಗೆ ಮುಕ್ತತೆ ಇರಬೇಕು. ಹೀಗೇಕೆ, ಅದೇಕೆ ಎಂದು ಕೇಳುವ ಗಂಡ,ಇಲ್ಲವೆ ಅತ್ತೆ ಮಾವ ಇರಬಾರದು. ಹಾಗೆಂದು ನಾನು ಸ್ವೇಚ್ಛಾ ಪ್ರವೃತ್ತಿಯವಳೇನಲ್ಲ, ನಾನು ಭಾವನೆಗಳ ತೀವ್ರತೆಯಿಂದ ತಪ್ಪು ಮಾಡುವೆ. ಆಗ ಮಾತ್ರ ನನ್ನನ್ನು ನಿಗ್ರಹಿಸಲು ಆತ ಶಕ್ತನಿರಬೇಕು" ಎಂದಿದ್ದಳು.

'ರೋಹಿಣಿ' ಎಂಬ ಪತ್ರಿಕಾ ಸಂಸ್ಥೆಯವರು ವಿವಾಹ ಜೋಡಣೆಯ ಕಾರ್ಯ ನಿರ್ವಹಿಸುತ್ತಾರೆ. ಅದರಲ್ಲಿ ವಿವಾಹೇಚ್ಛುಗಳ ಪರಿಚಯ ಹಾಗೂ ಬೇಕು-ಬೇಡಗಳನ್ನು ವ್ಯಕ್ತಿಚಿತ್ರಣದ ರೀತಿಯಲ್ಲಿ ಸಂಕ್ಷಿಪ್ತವಾಗಿ ಕೊಡುತ್ತಾರೆ. 'ರೋಹಿಣಿ'ಯ ಒಂದು ಸಂಚಿಕೆಯಲ್ಲಿ ವಧುಗಳ ಬಗ್ಗೆ ಬರೆದು ಬಂದದ್ದನ್ನು ಇಲ್ಲಿ ಉದ್ಧರಿಸುವೆ.

೧.'ಕನ್ಯೆಯ ಜನ್ಮ ದಿನ ೧೦-೮-೧೯೬೮ ಎತ್ತರ ೧೫೭ ಸೆ. ಮೀ. ಗೋದಿ ಬಣ್ಣ. ಪ್ರಸನ್ನ

ಮುಖ ಮುದ್ರೆ. ವ್ಯಾಸಂಗ ಪ್ರಿಯೆ. ಫೋಟೋಗ್ರಾಫಿಯಲ್ಲಿ ಒಲವು. ಎಂ.ಎಸ್.(ಜನರಲ್ ಸರ್ಜರಿ) ಮಾಡಿದ್ದಾಳೆ. ಆಸ್ಪತ್ರೆಯೊಂದರಲ್ಲಿ ನಿವಾಸೀ ಡಾಕ್ಟರ್. ಕನ್ನಡಕ ಇದೆ. ರಕ್ತಗುಂಪು ಓ-ಪೊಸಿಟಿವ್. ತಾಯಿ-ತಂದೆ ಇದ್ದಾರೆ. ಒಬ್ಬಳೇ ಮಗಳು...

ಅಪೇಕ್ಷಿತ ವರನು ಎಂ. ಎಸ್. ಆಗಿದ್ದರೆ ನೆಟ್ಟಗೆ . ಆದರೆ ಆರ್ಥೋಪಿಡಿಕ್ಸ್ ಸರ್ಜನ್ ಇರಬಾರದು. (ಅದೇಕೋ). ಸ್ವತಂತ್ರ ವ್ಯವಸಾಯಿ ಇದ್ದರೂ ನಡೀತದೆ. ಮುಂಬಯಿ ವಾಸಿ ಇರಬೇಕು. ತಪ್ಪಿದರೆ ಪುಣೆ. ಬೇರೆ ಊರುಗಳ ವರ ಬೇಡ. ಚಷ್ಮಾ ಧರಿಸಿದ್ದರೆ ಅಡ್ಡಿಯಿಲ್ಲ. ಕುಂಡಲಿ ಕೇಳುವವರು ಬೇಡ'.

೨. 'ಸೌಂದರ್ಯ ಪ್ರಜ್ಞೆ ಇರುವ ಈ ಕನ್ಯೆಯು ವಿವಿಧ ಕಲೆಗಳನ್ನು ಕರಗತ ಮಾಡಿಕೊಳ್ಳುವ ಪ್ರವೃತ್ತಿಯುಳ್ಳವಳು. ಹೆಣಿಕೆ, ಚಿತ್ರಕಲೆಗಳಲ್ಲಿ ಅಭಿರುಚಿ. ಚಿತ್ರಕಲೆಯ ಎರಡು ಪರೀಕ್ಷೆಗಳಲ್ಲಿ ಉತ್ತೀರ್ಣಳಾಗಿದ್ದಾಳೆ. ಸಂಗೀತದಲ್ಲಿಯೂ ಅಪಾರ ಒಲವು. ಸಿತಾರ ನುಡಿಸಬಲ್ಲಳು. ಉತ್ಕೃಷ್ಟ ಹಸ್ತಾಕ್ಷರ. ಅಡುಗೆ ಬಲ್ಲವಳು: ಮಾತ್ರವಲ್ಲ, ಹೊಸ ಹೊಸ ಖಾದ್ಯಗಳನ್ನು ತಯಾರಿಸುವ ಉಮೇದು. ಮಾತುಕತೆ ಬೇಕು. ಒಂದಷ್ಟು ಸ್ಥೂಲಶರೀರ. ಆದರೂ ಆಕರ್ಷಕ ರೂಪ. ಎತ್ತರ ೧೫೦ ಸೆ. ಮೀ. ವಯಸ್ಸು ೨೭. ಪ್ರವಾಸಪ್ರಿಯೆ. ನೇಪಾಳದವರೆಗೂ ಸುತ್ತಾಡಿ ಬಂದಿದ್ದಾಳೆ. ಈಸುವುದನ್ನು ಬಲ್ಲಳು. ಕರಿಯರ್‌ನ ಉದ್ದಕ್ಕೂ ಹುಶಾರ್ ಹುಡುಗಿ. ಸ್ಕಾಲರ್‌ಶಿಪ್ ಪಡೆದವಳು. ಪ್ರಥಮ ದರ್ಜೆ.

ಸಣ್ಣವಳಿದ್ದಾಗ ಕಾಮಣಿಯಾಗಿತ್ತು. ಆಗ ತಪ್ಪು ಔಷಧ ಕೊಟ್ಟಿದ್ದರ ಪರಿಣಾಮವಾಗಿ ಮಧುಮೇಹ ತಾಗಿದೆ. ಪ್ರತಿದಿನ ಇನ್‌ಸ್ಯುಲಿನ್ ಇಂಜೆಕ್ಷನ್ ತಗೊಳ್ಳುತ್ತಾಳೆ. ಹಾಗೆಂದು ಮನೆಯಲ್ಲಿ ಯಾರಿಗೂ ಡೈಬೆಟಿಸ್ ಇಲ್ಲ. ಕನ್ಯೆಯಲ್ಲಿ ಇನ್ನಾವ ದೋಷವೂ ಇಲ್ಲ. ಅಂತೂ ಸುಧಾರಿಸಿಕೊಂಡು, ಪ್ರೀತಿಯಿಂದ ನೋಡಿಕೊಳ್ಳುವ ಪತಿ ಬೇಕು. ವರನಲ್ಲಿ ತುಸು ಅಂಗವೈಕಲ್ಯ ನಡೆದೀತು. ತಂದೆ-ತಾಯಿ ಬಳಗ ಇರಲಿ'.

ವಿವಾಹಿತೆಯಾಗಿ

ಹೆಣ್ಣು ಮದುವೆಯಾದ ಮೇಲೆ, ತಾಯಿಯ / ತವರಿನ ಮನೆಬಿಟ್ಟು 'ಅತ್ತೆಯ ಮನೆ' ಸೇರುವುದು ಹಳೆಯ ಸಂಪ್ರದಾಯ. ಈ ಕಾಲದಲ್ಲಿ ಆಕೆ 'ಗಂಡನ ಮನೆ 'ಸೇರುತ್ತಾಳೆ. ಪರಿಮಿತ ಸಂಸಾರದ ಪರಿಣಾಮವದು. ಮದುವೆಯ ದಿನ ಅವಳನ್ನು 'ಕಳಿಸುವಾಗ' 'ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು ನಿಮ್ಮ ಮುಡಿಯೊಳಗಿರಿಸುವೆನು' ಎಂಬ ಹಾಡನ್ನು ಹೇಳಿ, ನೆರೆದ ಹೆಂಗಸರೂ ವಧುವೂ ಸೇರಿದಂತೆ ಅಳುವುದು ಇಂದಿಗೂ ಇದೆ. ಮದುವೆಯಾದ ಈ ಮರಾಠೀ ವಧುಗಳು ಹಾಗೆ ಅಳುವುದು ಕಂಡು ಬರುವುದಿಲ್ಲ. (ಬಹಳವಾದರೆ ತಾಯಿ ತುಸು ಕಣ್ಣೀರು ಹಾಕಿಯಾಳು.) ಕಾರಣವೆಂದರೆ 'ತಾನು ಅತ್ತೆಯದೂ ಅಲ್ಲ. ಗಂಡನದೂ ಅಲ್ಲ- ತನ್ನದೇ ಮನೆಗೆ ಹೋಗುತ್ತಿದ್ದೇನೆ' ಎಂಬ ಮನೋವೃತ್ತಿ ಅವಳದಾಗಿರುತ್ತದೆ.!

ನಮ್ಮಲ್ಲಿಯ ಸಂಪ್ರದಾಯಸ್ಥ ಮನೆಗಳಲ್ಲಿ ಒಂದು ಮಗು (ಅದೂ ಗಂಡು ಮಗು) ಹುಟ್ಟಿದ ಮೇಲೆಯೇ ಅವಳಿಗೆ ಆ ಹಕ್ಕು ಪ್ರಾಪ್ತವಾಗುತ್ತದೆ. ಇವಳೋ ತಾನು ಆ ಮನೆಗೆ ಕಾಲಿಟ್ಟ ಗಳಿಗೆಯಿಂದಲೇ ತನ್ನ ಹಕ್ಕನ್ನು ಸ್ಥಾಪಿಸುತ್ತಾಳೆ. ಇದಕ್ಕೆ ಪುರಾವೆ ಬೇಕಿದ್ದರೆ ಶಹರಗಳಲ್ಲಿ ಈಚೆಗೆ ಕಟ್ಟಿಸಲಾದ ಯಾವುದೊಂದು ಕಟ್ಟಡಕ್ಕೆ ಹೋಗಿ ನೋಡಿರಿ. ಅಲ್ಲಿಯ ವಾಸಸ್ಥರ ಹೆಸರುಗಳ ಫಲಕವು ಕಟ್ಟಡದ ಹೊರಗೆ ಇರುತ್ತದಷ್ಟೇ. ಆ ಹೆಸರುಗಳೆಲ್ಲ ಸ್ತ್ರೀಮಯ: ಸೌ. ಜ್ಯೋತ್ಸ್ನಾ ದಾತಾರ. ಸೌ. ಮಂಗಲ ಕುಡತರಕರ ಇತ್ಯಾದಿ.

ಮನೆಗೆ ಬಂದ ಸೊಸೆಯ ಮೇಲೆ ತಮ್ಮ ಮುದ್ರೆಯನ್ನು ಮೂಡಿಸುವವರಂತೆ ಅವಳಿಗೆ ಬೇರೊಂದು ಹೆಸರನ್ನು ಇಡುವ ಕಾಲ ಹಿಂದುಳಿಯಿತು.. ನಮ್ಮಲ್ಲಿಯೂ ಸಹ ತೊಟ್ಟಿಲ ಹೆಸರೇ ಗಂಡನ ಮನೆಯಲ್ಲಿ ಉಳಿಯುತ್ತದೆ. ಅಡ್ಡ ಹೆಸರೊಂದೇ ಬದಲಾಗುತ್ತದೆ. ಅಲ್ಲಿಗೆ ಸರಿ, ಆದರೆ 'ಜೋಶಿ-ಸರಾಫ' 'ಭಾವೆ - ದೇಶಪಾಂಡೆ', 'ಬರ್ವೆ-ಇನಾಂದಾರ' - ಮರಾಠೀ ಮಹಿಳೆಯರ ಇಂಥ ಅಡ್ಡಹೆಸರುಗಳ ವೈಚಿತ್ರ್ಯವನ್ನು ಗಮನಿಸಿದಿರಾ? ಒಂದು, ಮದುವೆಗೆ ಮುಂಚಿನದು; ಇನ್ನೊಂದು ಆಮೇಲಿನದು. 'ಅರ್ಧಾಂಗಿ' ಎಂದು ಅನ್ವರ್ಥವಾಗಿರುವಂತೆ ಅರ್ಥಾತ್ ಆ ಸುಮಂಗಲೆ ತನ್ನ ಜೊತೆಗೆ ತನ್ನ ಮೊದಲಿನ ಅಡ್ಡ ಹೆಸರನ್ನೂ ತರುತ್ತಾಳೆ. ನಮ್ಮ ದೇಶದ ಯಾವ ಪ್ರದೇಶದಲ್ಲಿ ಇದು ಪ್ರಚಲಿತವಾಗಿ ಬಳಕೆಯಲ್ಲಿದೆ ಹೇಳಿರಿ. ಲತಾ ಸಾಠೆ ಎಂಬವಳು ಓರ್ವ ತಮಿಳಿನವರನ್ನು ಪ್ರೇಮಿಸಿ ಮದುವೆಯಾದಳು. ಅವರಿಗೆ ಅಡ್ಡ ಹೆಸರಿರಲಿಲ್ಲ. ಈ ಸಾಠೆ ಬಾಯಿ ಕೊನೆಗೆ ಲತಾ - ಮುಕುಂದ ಎಂದು ಕರೆಯಿಸಿಕೊಳ್ಳ ಬಯಸಿದಳು! ಪಾಶ್ಚಾತ್ಯ ಹೆಂಗಸರಲ್ಲಿಯೂ ಈ ಪರಂಪರೆ ಕಂಡು ಬಾರದು. ಅಲ್ಲಿ ಮದುವೆಯಾದ ಮೇಲೆ ಒಂದೋ, ತಮ್ಮ ಮೊದಲ ಪರಿಚಿತ ಹೆಸರನ್ನೆ ಉಳಿಸಿಕೊಳ್ಳಬಹುದು. ಇಲ್ಲವೆ 'ಮಿಸೆಸ್' ಉಪಪದವಿಯೊಂದಿಗೆ ಗಂಡನದನ್ನು ಅಳವಡಿಸಿಕೊಳ್ಳಬಹುದು. ಸುಶಿಕ್ಷಿತ ಮರಾಠೀ ಮಹಿಳೆಯರಲ್ಲಿ, ಕೇವಲ 20 - 25 ವರ್ಷಗಳ ಹಿಂದೆ ಆರಂಭವಾದ ಈ ಉಪಕ್ರಮವು ಈಗ ಸಾರ್ವತ್ರಿಕವಾಗತೊಡಗಿದೆ.

ಇದೇ ರೀತಿ - ಕೆಲವೇ ವರ್ಷಗಳ ಹಿಂದೆ ಆರಂಭಗೊಂಡು ಈಗ ಭರದಿಂದ ಹಬ್ಬುತ್ತಲಿರುವ ಇನ್ನೊಂದು ಪರಿಪಾಠವೆಂದರೆ, ಗಂಡನನ್ನು ಏಕವಚನದಿಂದ ಸಂಬೋಧಿಸುವುದು. ಎಷ್ಟೊಂದು ಸಲೀಸಾಗಿ ಈ ಮರಾಠೀ ವನಿತೆಯರು ಅದನ್ನು ರೂಢಿಸಿಕೊಂಡು ಬಿಟ್ಟಿದ್ದಾರೆ! ಇನ್ನೊಬ್ಬರೆದುರೂ ಹಾಗೇ ಪ್ರಸ್ತಾಪಿಸುತ್ತಾರೆ. "ದೀಪಕ ಹೊರಗೆ ಹೋಗಿದ್ದಾನೆ."

ಧಾರವಾಡದಲ್ಲಿಯ ನನ್ನ ಬಳಗದವರಲ್ಲಿ ಒಬ್ಬನಿಗೆ ಅವನ ಅಕ್ಕನ ಮಗಳನ್ನು ಮದುವೆ ಮಾಡಿಕೊಟ್ಟಿದೆ. ಬಾಲ್ಯಕಾಲದಿಂದ ಅವನನ್ನು ಬಲ್ಲ ಆಕೆ ಆಗೆಲ್ಲ 'ಅನಂತ

ಮಾಮಾ' ಎಂದು ಒಂಟಿ ಹೆಸರಿನಿಂದಲೇ ಕರೆಯುತ್ತಿದ್ದಳು. ಅವನಿಂದ ಮಂಗಳ ಸೂತ್ರವನ್ನು ಕಟ್ಟಿಸಿಕೊಂಡ ಮರುಗಳಿಗೆಯಿಂದ - ಎಂದರೆ, ಒಗಟು ಹಾಕಿ ಹೆಸರನ್ನು ಹೇಳತೊಡಗಿದಾಗಿನಿಂದ , ಏಕದಂ ಬಹುವಚನ! ಆಮೇಲೆ ಅವಳು ಹೆಸರುಗೊಂಡು ಅವನನ್ನು ಕರೆದದ್ದೂ ಇಲ್ಲ; ಮೊದಲಿನ ಏಕವಚನವೂ ಇಲ್ಲ. ಮರಾಠೀ ಮಹಿಳೆಯರಲ್ಲಿ ಮಾತ್ರ ತದ್ವಿರುದ್ಧ. ಅದಾವ ಒತ್ತಡ ಹಾಗೆ ಮಾಡಿಸುತ್ತದೆಯೊ!

ನಾನು ಮುಂಬಯಿಯಲ್ಲಿ ಅಭ್ಯಾಸಕ್ಕೆಂದು ಹೋಗುತ್ತಿದ್ದ ಗ್ರಂಥಾಲಯವೊಂದರಲ್ಲಿ ಮಾನಿನಿ ಕೋಲ್ಹಟಕರ ಎಂಬ ಅಸಿಸ್ಟೆಂಟ್ ಇದ್ದಾಳೆ. ನಾನೂ ಆ ವೃತ್ತಿಯವನೇ. ಆದ್ದರಿಂದ ಸಾಕಷ್ಟು ಆತ್ಮೀಯತೆ ಬೆಳೆದಿತ್ತು. ಆಕೆಯ ಪತಿರಾಯ ಸ್ಥಳೀಯ ಕಾಲೇಜಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕ. ಮದುವೆಗೆ ಮುಂಚೆ ಅವಳಿಗೂ ಪಾಠ ಹೇಳಿದವರು. ವಿದ್ಯಾರ್ಥಿ-ವಿದ್ಯಾರ್ಥಿನಿಯರೊಂದಿಗೆ ಬಹಳ ಫ್ರೀ ಆಗಿ ವರ್ತಿಸುತ್ತಿದ್ದರು. ಒಮ್ಮೆ ನಾನು ಈ ಏಕವಚನದ ಪ್ರಸ್ತಾಪವೆತ್ತಿ "ಮಾನೀ, ಅವರು ನಿನಗಿಂತ ಹೆಚ್ಚು ಓದಿಕೊಂಡವರು . ವಯಸ್ಸಿನ ಅಂತರವೂ ಸಾಕಷ್ಟು ಇದೆ. ಅಂದಾಗ ಅವರನ್ನು ನೀನು ಏಕವಚನದಿಂದ ಕರೆಯುವುದಕ್ಕೆ ಸಂಕೋಚವೆನಿಸುವುದಿಲ್ಲವೆ" ಎಂದೆ.

"ನೀವು ಅನ್ನುವುದು ಸರಿಯೆ. ಅವರು ಮತ್ತು ನನ್ನ ಕ್ಲಾಸ್‌ಮೇಟ್ಸ್ ಜೊತೆಗಿದ್ದಾಗ, ಇಲ್ಲವೆ ಅವರ ತಾಯಿ, ಇತರ ಬಳಗದವರಿದ್ದಾಗ ತಂತಾನೆ ಏಕವಚನ ಬಂದು ಬಿಡ್ತದೆ. ಆದರೆ; ಆದರೆ, ಇದನ್ನು ನಾನು ಹೇಳಬೇಕೊ ಬೇಡವೊ. ನಾವು ಇಬ್ಬರೇ ಮನೆಯಲ್ಲಿದ್ದಾಗ ಅವರೊಂದಿಗೆ ನಾನು ಬಹುವಚನದಿಂದಲೇ ಸಂಭಾಷಿಸಬೇಕೆನಿಸುವುದು. ಹಾಂ. ಇನ್ನೊಂದು ಪ್ರಸಂಗವಿದೆ. ಅದೆಂದರೆ ನಮ್ಮ ಮಾವನವರು ಎದುರಿಗಿದ್ದಾಗ, ಆ ಭವ್ಯ ವ್ಯಕ್ತಿತ್ವದ ಮುಂದೆ, ಅವರ ಮಗನನ್ನು ಏಕವಚನದಿಂದ ಕರೆಯುವುದಕ್ಕೆ ನಾಲಗೆ ಹೊರಳುವುದಿಲ್ಲ.

- ಇದಲ್ಲವೆ ವೈಚಿತ್ರ್ಯ?

ನನ್ನ ಅಪ್ಪ ಮಿತ್ರ ವಿಜ್ಞಾನಿ. ಡಾ. ಘಾಣೇಕರ ಅವರ ಮಗಳು ಮುಂಬಯಿಯ ಸಿನೆಮಾ ಥಿಯೇಟರಿನಲ್ಲಿ. ಮಧ್ಯಂತರ ಸಮಯದಲ್ಲಿ ಆಕಸ್ಮಾತ್ ಕಣ್ಣಿಗೆ ಬಿದ್ದಳು. ನನಗೆ ಸಂತೋಷವೆನಿಸಿತು. ಅವಳೂ ಆತ್ಮೀಯತೆಯಿಂದಲೇ ಮಾತನಾಡಿಸಿದಳು. ಅವಳದು ಎಂದಿನಂತೆ ನಿರಾಡಂಬರದ ವೇಷ. ಮುದ್ದು ಮುಖ. ಮದುವೆಯಾದ ಹಾಗೆ ಕಾಣಲಿಲ್ಲ. ಏನೇ ನಿನಗೊಂದು ಒಳ್ಳೆಯ ಗಂಡನನ್ನು ಹುಡುಕಿ ಕೊಡಲೆ?" ಎಂದು ಚೇಷ್ಟೆಯಲ್ಲಿ ಕೇಳಿದೆ. "ನಾನೇ ಹುಡುಕಿಕೊಂಡಿದ್ದೇನೆ, ಅಂಕಲ್- ನಿಮಗೆ ಆ ಶ್ರಮ ಬೇಡವೆಂದು"- ಎಂದಳಾಕೆ. "ಹೀಗೊ? ಎಂದು ಲಗ್ನ?"

"ಲಗ್ನವೂ ಆಗಿದೆ! ಇವನೇ ಆತ - ಸುಬೋಧ" ಎಂದು ಬದಿಯಲ್ಲಿಯೆ ಇದ್ದ

ಯುವಕನನ್ನು ಭುಜ ಹಿಡಿದು ಹೇಳಿದಳು. ಲಗ್ನದ ಆಮಂತ್ರಣ ಪತ್ರಿಕೆಯಿಲ್ಲ! ಕೊರಳಲ್ಲಿ ಮಂಗಳಸೂತ್ರವಿಲ್ಲ. ವಿವಾಹದ ಯಾವ ಕುರುಹೂ ಕಾಣಲಿಲ್ಲ. ನಾನು ಆ ವಿಸ್ಮಯದಿಂದ ಮೌನವಾಗಿರುವುದನ್ನು ಗುರುತಿಸಿದಳು.

'ಲಗ್ನ ರಿಜಿಸ್ಟ್ರಾರರ ಕಛೇರಿಯಲ್ಲಿ ನಡೆಯಿತು. ಎರಡೂ ಕಡೆಯಿಂದ ಕೇವಲ 5-6 ಜನರ ಹಾಜರಿ. ಶನಿವಾರ ದಿನ ಲಗ್ನ. ಸೋಮವಾರ ನಮ್ಮ ನಮ್ಮ ಕೆಲಸಕ್ಕೆ ಹೋದೆವು. You see. uncle, marriage is purely a personal affair. ಮನುಷ್ಯನ ಜೀವನದಲ್ಲಿ ನಡೆಯಬೇಕಾದ ಒಂದು ಅಗತ್ಯದ - ಹಾಗನ್ನುವುದಕ್ಕಿಂತ ಅನಿವಾರ್ಯದ ಘಟನೆ. ನಮಗಿಬ್ಬರಿಗೂ ಜೀವನದ ಗುರಿಯತ್ತ ಹೆಚ್ಚಿನ ಗಮನ.'

"ಅಲ್ಲಾ ಕೊರಳಲ್ಲಿ ಮಂಗಳ ಸೂತ್ರವಾದರೂ ಇದ್ದಿದ್ದರೆ ನೆಟ್ಟಗಿತ್ತು" ಎಂದೆ .

"ಯಾಕೆ ನನ್ನ ಮದುವೆಯಾಗಿದೆ ಎಂದು ನಾಲ್ಕು ಜನಕ್ಕೆ ಗೊತ್ತಾಗಬೇಕೆಂದು ತಾನೆ? ಮದುವೆಯಾದ ಗಂಡಸಿಗೆ ಅದಾವ ಚಿಹ್ನೆ ಇರ್ತದೆ. ಹೇಳಿರಿ. ನಾನು 'ಅವಿವಾಹಿತೆ' ಎಂದು ಇತರರು ತಿಳಿದರೂ ಏನಾಗಬೇಕಿದೆ?"

ತಾಯಿಯಾಗಿ

ಆಧುನಿಕ ಮರಾಠೀ ಮಹಿಳೆ ಮದುವೆಯಾಗುವುದನ್ನು ಮುಂದೂಡಬಹುದು. ಮಕ್ಕಳನ್ನು ಹೆರುವಲ್ಲಿ ಅಲ್ಲ. ಸಂಸಾರದ ನಿರ್ವಹಣೆ ಎನ್ನುವುದು ಬೇಗ ಮುಗಿದು ಬಿಡಬೇಕು! ಇದರ ಹಿಂದಿನ ಉದ್ದೇಶ ಒಂದೇ: 'ಹುಟ್ಟಿದ ಮಕ್ಕಳ ಲಾಲನೆ -ಪಾಲನೆ, ಶಿಕ್ಷಣ ಇವುಗಳಿಗೆ ಗಮನ ಕೊಡುವುದಾದ ಮೇಲೆ , ಜೀವನದಲ್ಲಿ ಮನವೊಪ್ಪಿದ ಅನ್ಯ ಕಾರ್ಯ ಕೈಗೊಳ್ಳಬೇಕು;ಏನಾದರೂ ಸಾಧಿಸಬೇಕು; ತಮ್ಮ ಕರಿಯರ್ ಮುಂದುವರಿಸಬೇಕು' ಈ 'ಕರಿಯರ್' ಎನ್ನುವುದು ತಾಂತ್ರಿಕ ವಿಷಯವಿರಬಹುದು. ಕಲಾಂಶ ಇದ್ದಿರಬಹುದು. ದುಡ್ಡು ತರುವ ಒಂದು ಉದ್ಯಮ. ಇಲ್ಲವೆ ವಿಶಿಷ್ಟ ವೃತ್ತಿಯಾಗಿರಬಹುದು. ಇದಾವುದಲ್ಲವಾದರೂ ನಿರ್ದಿಷ್ಟ ಕ್ಷೇತ್ರದ ಸಾಮಾಜಿಕ ಸೇವೆಯಾಗಿರಬಹುದು.

ಮಗುವಿನ ಶಿಕ್ಷಣ ವಿಚಾರದಲ್ಲಿ ಮಾತ್ರ ಅವರಲ್ಲಿಯೂ, ಬೆಂಗಳೂರವರಲ್ಲಿಯೂ ಬೇಕಾದಷ್ಟು ಸಾಮ್ಯ. ಆಡಿಕೊಂಡು ಮಜವಾಗಿ ಇರಬೇಕಾದ-ಮೂರೇ ವರ್ಷದ ಮಗುವಿಗೆ ಕಾನ್ವೆಂಟ್ ಸ್ಕೂಲಿನಲ್ಲಿ ಪ್ರವೇಶ ದೊರೆಯಬೇಕು. ಎ, ಬಿ, ಸಿ, ಡಿ, ಅಕ್ಷರ ಬರೆಯುವುದಕ್ಕೂ 'ಎ ಫಾರ್ ಆ್ಯಪಲ್' ಉರು ಹೊಡೆಯುವುದಕ್ಕೂ ಬರಲೇಬೇಕು. ಆ ಕಟ್ಟುನಿಟ್ಟನ್ನು ಪಾಲಿಸುವಲ್ಲಿ ತಾಯಿಯ ಕಕ್ಕುಲಾತಿ - ಎನ್ನುವುದು ಕಮರಿ ಹೋಗಿರುತ್ತದೆ.

ಅದಿರಲಿ, ಈಗ ಬೇರೆಯೆ ಒಂದು ವಿಶಿಷ್ಟ ಪ್ರಸಂಗವನ್ನು ಹೇಳಬೇಕು. ಪುಣೆಯಲ್ಲಿಯ 'ಜ್ಞಾನ ಪ್ರಬೋಧಿನೀ' ಎಂಬ ಸಂಸ್ಥೆಯವರು ಹೊರಗಿನ ತಜ್ಞರನ್ನು

ಕರೆಯಿಸಿ, ಕಂಪ್ಯೂಟರ್ ತರಗತಿಗಳನ್ನು ನಡೆಸುತ್ತಾರೆ. ಆ ಶಾಸ್ತ್ರದ ಒಂದು ವಿಶಿಷ್ಟ ವಿಷಯವನ್ನು ಕಲಿಸಲು ಓರ್ವ ಪ್ರಮದೆಯು ವಾರಕ್ಕೊಮ್ಮೆ ಬರುತ್ತಿದ್ದಳು. ನನಗೆ ಆ ವಿಷಯ ಕಲಿಯುವುದಿತ್ತು; ಹೆಸರನ್ನು ನೊಂದಾಯಿಸಿದೆ. ಅಲ್ಲಿ ಇದ್ದ 15-20 ವಿದ್ಯಾರ್ಥಿಗಳೆಲ್ಲ ತರುಣರು. ನಾನೊಬ್ಬನೇ ವಯಸ್ಕ. 'ತನಗೆ ಮುಜುಗರವಾಗುತ್ತದೆ' ಎಂದು ನನಗೆ ಸುರುವಿಗೆ ಹೇಳಿ ಪಾಠವನ್ನು ಆರಂಭಿಸಿದಳು. ನಿರರ್ಗಳವಾದ ಆದರೂ ಸರಳ ನಿರೂಪಣೆ.

ಒಂದು ಸಲ ಅವಳು ತನ್ನ ಸಂಗಡ ಮಗುವನ್ನು ಕರೆತಂದಳು. ೬ - ೭ ತಿಂಗಳಿನ ಮುದ್ದು ಮಗು, ಮುಂಭಾಗಕ್ಕೆ ತೂಗು ಬಿಡುವಂಥ ಬೇಬಿ ಕ್ಯಾರಿಯರ್ ಬ್ಯಾಗ್‌ನಲ್ಲಿ ಕಾಲನ್ನು ಇಳಿಬಿಡಿಸಿ ಕಟ್ಟಿಕೊಂಡಿದ್ದಳು. ಅದರ ಮುಖ ತಾಯಿಗೆ ಎದುರಾಗಿ, ಬೆನ್ನು ನಮ್ಮ ಕಡೆ ಇದ್ದಿತು. ಮಗು ತಾಯಿಯ ಮುಖ ನೋಡುತ್ತ, ಅವಳ ಮಂಗಳಸೂತ್ರದೊಡನೆ ಆಟವಾಡುತ್ತ, ಇಲ್ಲವೆ ಅವಳ ಭುಜವನ್ನು ಅಪ್ಪಿ ಹಿಡಿದು ಮೇಲೇಳಲು ಹವಣಿಸುತ್ತ, ಆಗೀಗ ನಮ್ಮತ್ತ ಹೊರಳಿ ಪಿಳಿಪಿಳಿ ನೋಡುತ್ತ ಮಜವಾಗಿ ಇದ್ದಿತು. ಲೆಕ್ಚರ್ ಮುಗಿಯುವ ವೇಳೆಗೆ ತುಸು ಕಿರಿಕಿರಿ ಮಾಡತೊಡಗಿತು. ಒದ್ದೆ ಮಾಡಿಕೊಂಡಿರಬೇಕು. "Excuse me" ಎಂದವಳೇ ಒಂದೆರಡು ಮಿನಿಟು ಮಾತ್ರ ಹೊರಗೆ ಹೋಗಿ ಬಂದಳು.

ಪಾಠ ಮುಗಿದ ಮೇಲೆ , ಮಗುವಿನ ಲಾಲನೆ; ಪಾಠದತ್ತ ಗಮನ- ಇವೆರಡನ್ನೂ ನಿರಾಯಾಸವಾಗಿ ನಿಭಾಯಿಸಿದ್ದರ ಬಗ್ಗೆ ನನ್ನ ಮೆಚ್ಚುಗೆ ಸೂಚಿಸಿದೆ. "ಹಿಂದಿನ ಬ್ಯಾಚ್‌ನವರಿಗೆ ಪಾಠ ಮಾಡುವಾಗ ಹೀಗೇ ಕರೆತಂದಿದ್ದೆ. ಆದರೆ ಇನ್ನು ಮುಂದೆ ಕರೆತರುವುದಿಲ್ಲ"ಎಂದಳು. ಏಕೆ? ಎಂದು ಕೇಳಿದ್ದಕ್ಕೆ ನಗುತ್ತ ಉತ್ತರಿಸಿದಳು. "ನಿಮ್ಮ ಲಕ್ಷ್ಯವೆಲ್ಲ ಮಗುವಿನತ್ತಲೇ ಇತ್ತು. ಪಾಠದಲ್ಲಿ ಅಲ್ಲ".

ಸಂಸಾರ - ರಹಿತೆ

ಸಂಸಾರದ ರಥವೆನ್ನುವುದು ಸುರುವಿಗೆ ಸುಸೂತ್ರ ಸಾಗುತ್ತದೆ. ಆಮೇಲಲ್ಲ. ದಾರಿಯಲ್ಲಿ ಕಲ್ಲು-ಮುಳ್ಳು, ಏರು - ಇಳಿವು, ಮಣ್ಣಿನ ಹುದಲು - ಏನೆಲ್ಲ. ಒಂದೊಮ್ಮೆ ತಪ್ಪು ಯಾರದೇ ಇರಲಿ, ಗಂಡ, ಅತ್ತೆ, ಮತ್ತಾರೊ ಒಬ್ಬರೊಡನೆ ಜಗಳಾಡಿದ ಮೇಲೆ ತವರು ಮನೆಗೆ ಮರಳಬೇಕಾದ ಸಂದರ್ಭ ಬರುತ್ತದೆ. ಹಾಗೇನಾದರೂ ಆದರೆ ನಮ್ಮಲ್ಲಿಯ ಜನ ಕನ್ಯೆಯಲ್ಲೇ ದೋಷವನ್ನು ಕಾಣುತ್ತಾರೆ. 'ಗಂಡನ ಮನಿ ಅಂದ ಮ್ಯಾಲೆ ಸುಧಾರಿಸಿಕೊಂಡು ಹೋಗಬೇಕ್ರೆವಾ. ಆ ಹುಡುಗಿ ಹಂಗೇ. ಭಾಳ ದಿಮಾಕಿನದು.' ಇದು ತವರಿನ ನೆರೆ ಹೊರೆಯವರು ಆಡುವ ಮಾತು. 'ಗಂಡ ಬಿಟ್ಟವಳು' ಎಂಬ ಕೊಂಕು ನುಡಿಯನ್ನು ಸಾಹಜಿಕವಾಗಿ ಆಡುತ್ತಾರೆ. ಹೊರಗಿನವರೇಕೆ. ಹಡೆದ ತಾಯಿಯೇ ಮಗಳು ಬಹಳ ಕಾಲ ತವರಿನಲ್ಲಿ ನಿಂತರೆ ಅಸಮಾಧಾನ ತೋರಿಸುವಳು. ಅತ್ತೆಯ, ಗಂಡನ ಮನೆಗೆ ಹಿಂತಿರುಗಲು ಪರ್ಯಾಯವಾಗಿ ಬೋಧಿಸಬಹುದು.

ಜ್ಯೋತಿ ಮ್ಹಾಪೇಸೇಕರ ಎಂಬವರು 'ಮುಲಗೀ ಝಾಲೀ ಹೋ' (ಹುಡುಗಿ ಹುಟ್ಟಿದಾಳ್ರಿ) ಎಂಬ ಬೀದಿ ನಾಟಕ ಬರೆದಿದ್ದಾರೆ. ಹುಟ್ಟಿದ ಮಗು ಗಂಡಾಗದೇ ಹೆಣ್ಣು ಮಗು ಆದರೆ ಜನ ಹೇಗೆ ಕೆಳ ದೃಷ್ಟಿಯಿಂದ ನೋಡುವರೆಂಬುದರ ಚಿತ್ರಣ ಅದರಲ್ಲಿದೆ. ಮುಂದೆ ಮಗಳ ಮದುವೆ ಮಾಡಿ "ಮನೆ ತುಂಬಿಸುವ" (ಎಂದರೆ ಮಗಳನ್ನು ಒಪ್ಪಿಸುವಾಗ) ನಾಟಕದಲ್ಲಿ ತಾಯಿ ತನ್ನ ಬೀಗಿತ್ತಿಗೆ ಆಗ 'ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು ನಿಮ್ಮ ಮಡಿಲೊಳಗಿರಿಸುವೆನು' ಎಂಬ ಧಾಟಿಯಲ್ಲಿಯೇ ಹೇಳುತ್ತಾಳೆ. ಅದರಲ್ಲಿ ವಿನಂತಿಯೇನೂ ಇಲ್ಲ, ಮತ್ತೆ! 'ಅವಳಿಗೆ ತ್ರಾಸು ಗೀಸು ಕೊಟ್ಟೀರಿ' ಎಂಬುದನ್ನೂ ಸೇರಿಸುತ್ತಾಳೆ. ಇತ್ತ ಮಗಳಿಗೆ 'ನೋಡಮ್ಮಾ, ಗಂಡನ ಮನೆಯೇ ನಿನಗೆ ಸರ್ವಸ್ವ. ಅವರು ಏನು ತೊಂದರೆ ಕೊಟ್ಟರೂ ಹೊಂದಿಕೊಂಡು ಬಾಳುವೆ ನಡೆಸು. ತವರಿಗೆ ಮಾತ್ರ ಧಾವಿಸಬೇಡ ಆಂ. . .' ಎಂದೂ ಉಪದೇಶಿಸುತ್ತಾಳೆ. (ಕಿತೀಹಿ ಛಳತೀ ತುಲಾ, ಡಾಗಲೆ ಕಿಂವಾ ದಿಲಾ ಮಾರ, ಪರತು ನಕೋ ತೂ ಮಾಹೇರಿ). ಆಮೇಲೆ ತುಸುವೆ ಯೋಚಿಸುತ್ತಾಳೆ. 'ಅತ್ತೆಯೊ ಮಾವನೊ ಗಂಡನೊ, ನಾದಿನಿಯರೋ ಅವಳಿಗೆ ಸಹಿಸಲಾಗದ ತೊಂದರೆ ಕೊಟ್ಟರೆ?' ಛೇ! ಹಾಗೇನಾದರೂ ಆದರೆ, ಮಗಳೇ, ಬಂದು ಬಿಡು ತವರು ಮನೆಗೆ!'

ಅಂಥ ಸ್ಥಿತಿಯಲ್ಲಿ ಈ 'ಗಂಡ ಬಿಟ್ಟವಳು' ಎಂದು ಹಂಗಿಸುವುದಿಲ್ಲ. ಅವಳಿಗೆ ಗಂಡನ ಮನೆಯಲ್ಲಿ ಅನ್ಯಾಯವಾಗಿರಬೇಕು ಎಂದೊ, ಅದೇನೊ ಹೆಚ್ಚು ಕಡಿಮೆಯಾಗಿರಬೇಕು ಎಂದೊ, 'ಆಜೂ ಬಾಜೂದವರು' ತಿಳಿಯುವುದೇ ಹೆಚ್ಚು.

ಮದುವೆ ಆಗದವರ ಬಗ್ಗೆಯೂ ಇಂಥದೇ ಉದಾರ ದೃಷ್ಟಿ. ಅವರು ಜೀವನದಲ್ಲಿ ಏನಾದರೂ ಸಾಧಿಸುವ 'ಧಡಪಡ'ದಲ್ಲಿದ್ದವರೆಂಬುದೇ ಅದರ ಕಾರಣ. ಇಂಥವರಲ್ಲಿ ಎದ್ದು ಕಾಣುವ ಸ್ತ್ರೀ ಎಂದರೆ ಸರೋಜಿನಿ ಬಾಬರ ಅವರು. ೭೦ನ್ನು ದಾಟಿದ ಈ ಮಹಿಳೆ ಮರಾಠೀ ಸಾಹಿತ್ಯಾಕಾಶದಲ್ಲಿ ಓರ್ವ ಮಿನುಗುವ ತಾರೆ. ಸಾಮಾಜಿಕ ಕಾರ್ಯಕರ್ತೆಯೂ ಅಹುದು. ಆಕೆ ಆಜನ್ಮ ಬ್ರಹ್ಮಚಾರಿಣಿಯಾಗುಳಿದದ್ದರ ಬಗ್ಗೆ ಒಂದು ಸಂದರ್ಶನದಲ್ಲಿ ಹೀಗೆ ಹೇಳಿದ್ದಾರೆ :

"೧೯೩೭ರಲ್ಲಿ ನಮ್ಮ ಕಾಲೇಜಿಗೆ ಸುಭಾಸಚಂದ್ರ ಬೋಸರು ಬಂದಿದ್ದರು. ಸರ್ಕಾರೀ ನೌಕರಿ ಮಾಡಬಾರದೆಂದೂ ಮದುವೆಯಾಗದೇ ಉಳಿದು, ದೇಶೋದ್ಧಾರದ ಕಾರ್ಯ ಮಾಡಬೇಕು ಎಂದೂ ಹೇಳಿದ್ದರು. ಆಗೇ ಸ್ಫೂರ್ತಿಗೊಂಡು ಅವರ ಆದೇಶವನ್ನು ಪಾಲಿಸಬೇಕೆಂದು ನಿರ್ಧರಿಸಿದೆ. ನನ್ನ ತಂದೆ 'ಸತ್ಯಶೋಧಕ ಮಂಡಲ'ದ ಕಾರ್ಯಕರ್ತರು; ಸಮಾಜ ಸೇವಾ ನಿರತರು. ಅವರು ನನ್ನ ನಿರ್ಧಾರಕ್ಕೆ ಅಡ್ಡಿ ತರಲಿಲ್ಲ;ನನ್ನ ತಾಯಿಯೂ ನನ್ನ ಮದುವೆಗೆ ಒತ್ತಾಯಿಸಲಿಲ್ಲ. ಮದುವೆಯ Proposals ಬಂದಿದ್ದುವಾದರೂ , ನನ್ನ

ನಿರ್ಧಾರ ಅಚಲವಾಗಿ ನಿಂತಿತು. ನಮ್ಮ ಮನೆಯಲ್ಲಿ ರಾಜಕೀಯ, ಸಾಮಾಜಿಕ ಮುಂದಾಳುಗಳೂ ಸಾಹಿತಿಗಳೂ ಬಂದು ಹೋಗುತ್ತಿದ್ದದರಿಂದ, ಸಣ್ಣ ಪುಟ್ಟ ಸಾಂಸಾರಿಕ ವಿಚಾರ ಮಾಡುವುದಕ್ಕೆ ವೇಳೆಯಿರಲಿಲ್ಲ. ನನಗೆ ತುಂಬಾ ಕಾರ್ಯ ಸ್ವಾತಂತ್ರ್ಯವಿತ್ತು. ಬೇಕೆಂದಲ್ಲಿ ಓಡಾಡುವ ಮುಕ್ತತೆಯೂ ಇತ್ತು.

ಸರಿಯೆ. ಹೊಟ್ಟೆಯ ಪಾಡಿಗೆ ಏನು? ನನಗಾ ಸಮಸ್ಯೆ ಇಲ್ಲ. ಲೇಖನ - ಪುಸ್ತಕಗಳಿಂದ ಹಣ ಬರುತ್ತದೆ. ಎಂ. ಎಲ್. ಎ. ಮತ್ತು ಎಂ. ಪಿ. ಆಗಿದ್ದೆನಾದ್ದರಿಂದ ಪೆನ್ಷನ್ ಬರುತ್ತಿದೆ. ಏಕಾಕಿತನ? ಅದರ ಸುಳಿವೇ ಇಲ್ಲ. ತುಂಬಾ ಜನ ಆತ್ಮೀಯರು. ಪರಿಚಯದವರು ಇದ್ದಾರೆ. ಮೇಲಾಗಿ ಮೈತುಂಬ ಕೆಲಸ; ಮನ ತುಂಬ ಕೆಲಸ ;ಕೆಲಸ.'

ನನ್ನ ಈ ಅನ್ವೇಷಣೆಯಲ್ಲಿ ಹೆಚ್ಚು ಜನ ಅವಿವಾಹಿತ ವನಿತೆಯರೊಡನೆ ಮಾತುಕತೆಗೆ ಅವಕಾಶ ಒದಗಿ ಬಂದಿಲ್ಲ. ಆದರೂ ನೂತನ ಲೋಲಪ -ಎಂಬವರ ವಿಷಯವನ್ನು ನಾನು ಬಲ್ಲೆ. ಆಕೆ ರೂಪವಂತೆ. ದೇಶದ ವಿಷಯವಾಗಿ ಆಸಕ್ತಿ. ಒಂದು ಬ್ಯಾಂಕಿನಲ್ಲಿ ನೌಕರಿಗೆ ಸೇರಿ, ಅದರಲ್ಲಿ ಮೇಲೇರುತ್ತ ಹೋದಳು. ಮದುವೆಯಾಗಬೇಕೆಂದು ಯೋಚಿಸಿದ್ದಳೇನೊ ಹೌದು. ತನಗೆ ಅನುರೂಪ ವರ ಸಿಗಬೇಕು ಎಂದು ಹುಡುಕುತ್ತಲೇ ಇದ್ದಾಗ ವಯಸ್ಸಿನ ಮೂವತ್ತರ ಗಡುವು ದಾಟಿ ಬಿಟ್ಟಿತು! ಸುಖೀ ಜೀವನಕ್ಕಾಗಿ ಮದುವೆ ಆಗಲೇಬೇಕೆಂಬ ಒತ್ತಾಸೆ ಹಿಂದುಳಿಯಿತು. "ನಾನು ಅವಿಭಕ್ತ ಕುಟುಂಬದಲ್ಲಿರುವುದರಿಂದ ನನಗೆ ಒಂಟಿತನ ಕಾಡುವುದಿಲ್ಲ. ಸಮವಯಸ್ಕರಾದ ನನ್ನ ಗೆಳತಿಯರು, ಮದುವೆಯಾಗಿ ಸಂಸಾರದಲ್ಲಿರುವವರು - ನನಗಿರುವ ಸ್ವಾತಂತ್ರ್ಯದ ಬಗ್ಗೆ ಹೊಟ್ಟೆಕಿಚ್ಚು ಪಡುತ್ತಾರೆ. ನನ್ನ ಅವಿವಾಹಿತತ್ವದ ಬಗ್ಗೆ ಒಟ್ಟಿನಲ್ಲಿ ಗೌರವಾದರವೇ."

ನೌಕರಿ - ಉದ್ಯೋಗ

ಮಧ್ಯಮ ವರ್ಗೀಯ ಮಹಿಳೆಯರ ವೃತ್ತಿಗಳೆಂದರೆ ಟೀಚರ್, ನರ್ಸ್, ಕಾರಕೂನಿಕೆ, ಟೈಪಿಂಗ್, ಕಂಪ್ಯೂಟರ್ ಆಪರೇಟರ್ ಇತ್ಯಾದಿ. ಯಾವುದೇ ಇರಲಿ, ಮನೆಯ ಹೊರಗೆ ಈ ರೀತಿ-ತೊಡಗಿಕೊಳ್ಳುವುದರ ಉದ್ದೇಶ ಏನಿರುತ್ತದೆ?

'ಕಾಲೇಜು ಕಲಿಯುವಿಕೆ ಮುಗಿದಿದೆ. ಮದುವೆ ಇನ್ನೂ ಆಗಲಿಕ್ಕಿದೆ. ಮನೆಯಲ್ಲಿ ಕುಳಿತೇನು ಮಾಡುವುದು? ಆದ್ದರಿಂದ ...'

'ಗಂಡನ ಗಳಿಕೆ ಇದ್ದೇ ಇದೆ. ಆದರೂ ಹೆಚ್ಚಿನ ದುಡ್ಡು ಬೇಕು; ಬರಲಿ'.

- ನಮ್ಮ ಬಹ್ವಂಶದ ಮಹಿಳೆಯರಲ್ಲಿ ಇದಕ್ಕೂ ಹೆಚ್ಚಿನ ಗುರಿ ಇರುವುದು ಅಪರೂಪ.

ಇದರಲ್ಲಿಯ ವ್ಯಂಗ್ಯವೆಂದರೆ, ಅನೇಕ ಕನ್ಯೆಯರು ವಿದ್ಯಾರ್ಥಿ ದೆಸೆಯಲ್ಲಿ ರ್‍ಯಾಂಕ್ ಪಡೆದಿರುತ್ತಾರೆ. ಮಹಾರಾಷ್ಟ್ರದ ಈಚಿನ ಎಸ್.ಎಸ್. ಸಿ. ಪರೀಕ್ಷೆಯಲ್ಲಿ, ಅಲ್ಲಿಯ ಏಳು

ಪ್ರಾದೇಶಿಕ ವಿಭಾಗಗಳಲ್ಲಿ, ಆರು ಕಡೆಗೆ ವಿದ್ಯಾರ್ಥಿನಿಯರೇ ಪ್ರಥಮ ಸ್ಥಾನ ಗಿಟ್ಟಿಸಿದರು. ಲಕ್ಷಾವಧಿ ವಿದ್ಯಾರ್ಥಿಗಳನ್ನು ಹಿಂದೆ ಹಾಕಿದ ಅಪೂರ್ವ ಯಶಸ್ಸಿನ ಇಂಥ ತಾಖತ್ತು ಮುಂದೆ, ಒಬ್ಬ ಗಂಡ; ಎರಡು ಮಕ್ಕಳನ್ನು ಪಡೆದಾದ ಮೇಲೆ ಅದ್ಹೇಗೆ ಲುಪ್ತವಾಗ್ತದೆ? ಆ ಹರಿತ ಬುದ್ಧಿ ಮಕ್ಕಳನ್ನು ಓದಿಸುವುದರಲ್ಲಿ ತುಸು ಹರಿಯಬಹುದು. ಆಮೇಲೆ ಅದು ಮೊಂಡಗತ್ತಿ! ವಸ್ತು ಸ್ಥಿತಿ - ಹೀಗಿದ್ದರೂ , ಮಹಾರಾಷ್ಟ್ರದಲ್ಲಿ ತನ್ನದೊಂದು ಕರಿಯರ್ ರೂಪಿಸಿಕೊಳ್ಳಬೇಕು - ಎನ್ನುವ ಅನೇಕ ಮಹಿಳೆಯರು ನನ್ನ ಗಮನದಲ್ಲಿದ್ದಾರೆ.

ಇದಕ್ಕೆ ಪ್ರೇರಣೆ, ಇಲ್ಲವೆ ಒತ್ತಾಸೆಯನ್ನು ತಂದುಕೊಡುವ ತನ್ನಂಥ ಗೃಹಿಣಿಯ ಮನಸ್ಥಿತಿಯನ್ನು ಸುಪ್ರಸಿದ್ಧ ಲೇಖಕಿ ಛಾಯಾ ದಾತಾರರು ಸೊಗಸಾಗಿ ವ್ಯಕ್ತ ಮಾಡಿದ್ದಾರೆ:

"ನಮ್ಮ ತವರು ಮನೆಯ ವಾತಾವರಣವು ಆಧುನಿಕ ಕಾಲಕ್ಕೆ ತಕ್ಕಂತೆಯೇ ಇದ್ದಿತು. ಆದಾಗ್ಯೂ ನಾನೋರ್ವ 'ಸ್ತ್ರೀಲಿಂಗ ಸಾಪೇಕ್ಷ ವ್ಯಕ್ತಿ' ಎಂಬ ಪ್ರಜ್ಞೆ ನನ್ನದಾಗಿತ್ತು. ಕಥೆ ಕಾದಂಬರಿಗಳ ವಾಚನದ ಮೂಲಕ ಮೋಹಕ ಭಾವನೆಗಳು ಅಂಕುರಿಸಿದ್ದುವು. ಒಳ್ಳೆಯ ಪ್ರಿಯಕರ ಗಂಡ ದೊರೆತಲ್ಲಿ ನನ್ನ ಜೀವನ ಸಾರ್ಥಕವಾಗುವುದೆಂಬ ಭಾವನೆ ಬೆಳೆಯಿತು. ಸಾಲಂಕೃತಳಾಗಿ ಪತಿಯೊಡನೆ ಸತ್ಯನಾರಾಯಣ ಪೂಜೆ ಮಾಡುವುದೆಂದರೆ ಸುಖ ಸಂಸಾರದ ಪರಮಾವಧಿ ಎಂದು ಭಾವಿಸಿದ್ದೆ.

"ವಿವಾಹವಾದ ಎರಡು ವರ್ಷಗಳಲ್ಲಿ ಎರಡು ಮಕ್ಕಳಾದವು. ಕುಟುಂಬದ ಚೌಕೋನವು ಪೂರ್ತಿಗೊಂಡಿತು. ಆಗ 'ನಾನು ಯಾವ ಧ್ಯೇಯವನ್ನೂ ಇಟ್ಟುಕೊಂಡಿರಲಿಲ್ಲ. ಆದರೆ ಸಾರ್ಥಕವೆನಿಸುವ ಯಾವ ಕೆಲಸವನ್ನೂ ಮಾಡುತ್ತಿಲ್ಲ -' ಎಂದು ಅನಿಸತೊಡಗಿತು. ಇತ್ತ ನನ್ನ ಗಂಡ ತನ್ನ ವೃತ್ತಿಯಲ್ಲಿ ಮೇಲೇರುತ್ತ ನಡೆದಿದ್ದ; ಅದೇ ಅವನ ಜೀವಿತದ ಸರ್ವಸ್ವವಾಗಿಬಿಟ್ಟಿತು. ನನಗೋ, 'ಆತನು ಅದನ್ನು ಉದರ ನಿರ್ವಹಣೆಯ ಮಾರ್ಗ ಎಂದಷ್ಟೇ ತಿಳಿದು ತನ್ನೆಲ್ಲ ಗಮನವನ್ನು ಹೆಂಡತಿ, ಮಕ್ಕಳತ್ತ ಕೊಡಬೇಕು' ಎಂದೆನಿಸುತ್ತಿತ್ತು... ದಿನದಿನಕ್ಕೆ ನನ್ನ ಕೊರಗು ಹೆಚ್ಚುತ್ತ ನಡೆಯಿತು. ದ್ರವ್ಯಾರ್ಜನೆಯಂತೂ ಇಲ್ಲ; ಮನ್ನಣೆಯೂ ಇಲ್ಲ. ಇಂಥವನೊಬ್ಬನ ಪತ್ನಿ -ಎಂದಷ್ಟೇ ನನ್ನ ಸ್ಥಾನ. ಸುಖೀ ಜೀವನಕ್ಕೆ ಬೇಕಾದ ಎಲ್ಲ ಅನುಕೂಲತೆ ಇದ್ದರೂ ನಾನು ಹುಟ್ಟಿ ಬಂದದ್ದರ ಸಾರ್ಥಕತೆಯು ನಾನೊಬ್ಬ ಸ್ತ್ರೀ ಎಂದು ಜೀವಿಸುವುದರಲ್ಲಿ ಮಾತ್ರವೆ ಇದ್ದಿತು. ಗೃಹಿಣಿಯಾಗಿ ಮಾಡುತ್ತಿದ್ದ ಕೈಂಕರ್ಯ ಏಕತಾನದ್ದಾಗಿ ತೋರಿ ನನ್ನಲ್ಲಿಯ ಇತರ ಗುಣಗಳು ಪ್ರಕಾಶನಗೊಳ್ಳಲು ಅವಕಾಶವಿರದೇ ನನ್ನ ಜೀವನ ವ್ಯರ್ಥ -ಎಂಬ ಹತಾಶಭಾವ ಅನುದಿನವೂ ಕೊರೆಯ ತೊಡಗಿತು."

ಇನ್ನೀಗ ಇಂಥ ಪರಿಸ್ಥಿತಿಯಿಂದ ಹೊರಬಂದು, ಜೀವನ ಸಾರ್ಥಕ್ಯವನ್ನು ಪಡೆದೆವೆಂದು ತಿಳಿದಿದ್ದ ಕೆಲ ಮಹಿಳೆಯರನ್ನು ಗುರುತಿಸೋಣ. ತನ್ನದೊಂದು ಕರಿಯರ್

ರೂಪಿಸಿಕೊಳ್ಳಬೇಕು - ಎನ್ನುವ ಹತ್ತಿಪ್ಪತ್ತು ಮಹಿಳೆಯರು ನನ್ನ ಗಮನಕ್ಕೆ ಬಂದಿರುತ್ತಾರೆ.

ಓರ್ವ ಗೃಹಿಣಿಗೆ ತನ್ನ ಹದಿಹರೆಯದ ಮಗಳು ಪ್ರೇಮ ವ್ಯವಹಾರದಲ್ಲಿ ತೊಡಗಿದ ಸಂಶಯ ಮೂಡಿತು. ತನ್ನ ಚಿಂತೆಯನ್ನು ನೆರೆಯ ಶ್ರೀಮತಿ ಪಂಡಿತ ಎಂಬವಳೆದುರು ತೋಡಿಕೊಂಡಳು. ಆಕೆ ಅದನ್ನು ವಿಚಕ್ಷಣೆಯಿಂದ ಕಂಡು ಹಿಡಿದಳು. ಶ್ರೀಮತಿ ಪಂಡಿತಗೆ ತನ್ನಲ್ಲಿ ಡಿಟೆಕ್ಟಿವ್ ಚಾಣಾಕ್ಷತೆ ಇದೆಯೆಂದೆನಿಸಿತು. ಅದನ್ನು ಬೆಳಿಸಿಕೊಂಡರು. ಪರಿಣಾಮ? ಈಗ ಅವರು ಮುಂಬಯಿಯಲ್ಲಿ ಒಂದು ಖಾಸಗಿ ಡಿಟೆಕ್ಟಿವ್ ಎಜೆನ್ಸಿಯನ್ನು ಕಳೆದ ಇಪ್ಪತ್ತು ವರ್ಷಗಳಿಂದ ಯಶಸ್ವಿಯಾಗಿ ನಡೆಸುತ್ತಿದ್ದಾರೆ.

ಬೆಂಗಳೂರಿನಲ್ಲಿ ಕೆಲ ವರ್ಷಗಳ ಹಿಂದೆ ಓರ್ವ ಮಹಿಳೆ ಆಟೋರಿಕ್ಷಾ ಚಾಲಕಿಯಾದ್ದರ ಸುದ್ದಿ ಪ್ರಕಟವಾಯಿತಷ್ಟೇ. ಪುಣೆಯಲ್ಲಿಯೂ ಒಬ್ಬ ಚಾಲಕಿ ಸುದ್ದಿ ಮಾಡಿದಳು. ಆಕೆ ಕಲಿತವಳೇನಲ್ಲ. ಮನೆಯಲ್ಲಿಯ ಆರ್ಥಿಕ ಅಡಚಣೆ ನೀಗುವುದೇ ಅವಳ ಉದ್ದೇಶವಾಗಿದ್ದಿತು. ಗಂಡ, ಮಾವ, ವಿರೋಧಿಸಿದರು. ಸಾಲ ಕೊಡುವ ಬ್ಯಾಂಕಿನವರು, ಆರ್.ಟಿ.ಓ. ದವರು ಕೊಟ್ಟ ಕಿರುಕುಳ ಅಷ್ಟಿಷ್ಟಲ್ಲ. ಆದರೂ ಹಟ ತೊಟ್ಟು ಕೊನೆಗೊಮ್ಮೆ ವಾಹನವನ್ನು ಪಡೆದು ನಡೆಸತೊಡಗಿದಳು. ಮುಂದೆ ಕೇಳಿರಿ -ತಾನು ಪಟ್ಟಂಥ ಕಷ್ಟ - ನಷ್ಟದ ಅನುಭವ ಈ ವೃತ್ತಿಯಲ್ಲಿ ಪ್ರವೇಶಿಸಬಯಸುವ ಇತರರಿಗೂ ಆಗಬಹುದೆಂದೆನಿಸಿ, Consultancy ಪ್ರಾರಂಭಿಸಿದಳು! ಅಪಘಾತಗಳಿಗೆ ಸಂಬಂಧಿಸಿದ ಕಾನೂನನ್ನು ಕೇಳಿ ತಿಳಿದುಕೊಂಡಳು. ಅವಳ ಸಲಹೆಗಾಗಿ, ಸಹೋದ್ಯೋಗಿಗಳು ಇಂದಿಗೂ ಬರುತ್ತಾರಂತೆ.

'ನೌಕರಿ vs ಸಂಸಾರ' ಇವೆರಡನ್ನೂ ತೂಗಿಸಿಕೊಂಡು ಹೋಗಬೇಕು. ಹೇಗೆ? ಹೇಗೆ? ಇದು ದೇಶದ ಅನೇಕಾನೇಕ ಮಹಿಳೆಯರ ಮುಂದಿರುವ ತೊಡಕಿನ, ತೊಳಲಾಟದ ಸಮಸ್ಯೆ. ಈ ವಿಷಯವನ್ನು ನಾನು ಇಲ್ಲಿಯ ಹಲವಾರು ಮಹಿಳೆಯರೊಡನೆ(ಗಂಡಂದಿರು ಸೇರಿದಂತೆ) ಚರ್ಚಿಸಿದ್ದೇನೆ. ಅವುಗಳಲ್ಲಿ ಒಂದು ಅಭಿಪ್ರಾಯ ಮಾತ್ರ ಹೆಚ್ಚು ಸಮಂಜಸವಾಗಿ ಕಂಡಿತು: ನೌಕರಿ ಇಲ್ಲವೆ ಬೇರೊಂದು ಉದ್ಯೋಗದಿಂದ ಹೊರಜಗತ್ತಿನ ಪರಿಚಯವಾಗುತ್ತದೆ. ಜೀವನಾನುಭವದ ಜೊತೆಗೆ, ವ್ಯಕ್ತಿತ್ವದ ವಿಕಾಸವೂ ಅದರಿಂದ ಸಾಧ್ಯ. ಹಾಗೇನೇ ಮನೆಯಲ್ಲಿ ಕುಳಿತು ಬೆಳೆದ ಜೊಂಡು ಮೈ ಕರಗಿ, ಆರೋಗ್ಯ ಚೆನ್ನಾಗಿರುತ್ತದೆ! ತಾಯಿಯ ಹೊರ ಜಗತ್ತಿನ ಸಂಪರ್ಕ ಮಕ್ಕಳ ಮೇಲೂ ಪರಿಣಾಮಕಾರಿಯಾಗಬಲ್ಲುದು. ಮಕ್ಕಳ ಗೃಹಪಾಠವನ್ನು ನೌಕರಿಯಲ್ಲಿದ್ದಾಕೆ ಚೆನ್ನಾಗಿ ಮಾಡಬಲ್ಲಳು.

ಈ ವಿಷಯದ ಕುರಿತು ಕೆಲ ವರ್ಷಗಳ ಹಿಂದೆ ಒಂದು ಮಹಿಳಾ ಸಂಸ್ಥೆ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಅದರಲ್ಲಿ ಓರ್ವ ಆಫೀಸ್ ಅಧಿಕಾರಿಣಿ ಈ ರೀತಿ ತನ್ನ ಅಭಿಪ್ರಾಯ ವ್ಯಕ್ತಪಡಿಸಿದಳೆಂದು ಪತ್ರಿಕೆಗಳಲ್ಲಿ ವರದಿಯಾಗಿತ್ತು!

"ಆಫೀಸಿನಲ್ಲಿ ನಾನು ಒಮ್ಮೊಮ್ಮೆ ಏಳು ಗಂಟೆಯವರೆಗೂ ಕೆಲಸ ಮಾಡ್ತೇನಿ - ನಾನಾಗಿ 'ಕೆಲಸದಲ್ಲಿ ನನಗೆ ತೃಪ್ತಿಯ ಭಾವನೆ ಇದೆ. ಮನೆಗೆ ಬಂದೊಡನೆ ಅಡುಗೆಯ ಮನೆಗೆ ಹೋಗುವೆ. ಅದೊಂದು ಹೊರೆಯೆನಿಸುವುದಿಲ್ಲ. 'ನಾನು ಗಳಿಸುತ್ತೇನೆ. ನನ್ನ ದುಡಿಮೆ ಹೆಚ್ಚಿನದು'ಎಂದು ತಿಳಿದಾಗ ಮಾತ್ರ ಮನೆಗೆಲಸ ಕೀಳೆನಿಸುವುದು; ದಣಿವು ಹಾಗೂ ಬೇಸರ ಮೂಡುವುದು. ಅದಕ್ಕೆ ಬದಲಾಗಿ 'ಈ ಮನೆ ನನ್ನದು. ಇಲ್ಲಿರುವವರ (ಗಂಡ, ಮಕ್ಕಳು) ಯೋಗಕ್ಷೇಮದ ಪ್ರೀತಿಪೂರ್ವಕವಾದ ಜವಾಬ್ದಾರಿ ನನ್ನದು ಎಂದು ಮುಂತಾಗಿ ಬಗೆದರೆ ಈ Change of work ಖುಷಿ ಕೊಡಬಲ್ಲದು. It all depends on how you view! "

ಸಬಲೆ!

There is no woman who has not indulged mentally in extra - marital affair - ಹೀಗೆ ಹೇಳಿದವರು, ಇಂಥ 'ಹೇಳಿಕೆ'ಗಳಲ್ಲಿ ಕುಪ್ರಸಿದ್ಧರಾದ ಖುಶವಂತ ಸಿಂಗರು. ಈ ವಿವಾಹೇತರ ವಿಚಾರದ ಒಂದು ಕಾರಣ - ಗಂಡ ಹೆಂಡತಿಯರ ಲೈಂಗಿಕ ಸಂಬಂಧ ಯಾಂತ್ರಿಕವಾಗಿದ್ದುದು. ಅದರಿಂದ ಹೆಣ್ಣಿಗೇನೆ ಹೆಚ್ಚು ಅಸಹನೀಯವೆನಿಸಬಹುದು. ಟಿ. ವಿ. ಸಿನೆಮಗಳಲ್ಲಿ ಲೈಂಗಿಕತೆಯನ್ನು ಎದ್ದು ಹೊಡೆಯುವಂತೆ ತೋರಿಸುವಾಗ, ತಮ್ಮ ಯೌನದ ಸಂಬಂಧವನ್ನು ಇನ್ನೊಬ್ಬ ಪುರುಷನೊಡನೆ ಹೋಲಿಸಿ ನೋಡುತ್ತಾರೆನ್ನುವುದೂ ಖುಶವಂತಸಿಂಗರ ವಿಚಾರವಾಗಿರಬಹುದು. ಏನಿದ್ದರೂ ಇವೆಲ್ಲ ತೀರಾ ವೈಯಕ್ತಿಕವಾದ ಅಂಶಗಳು; ಅವರವರ ಸ್ವಭಾವಕ್ಕೂ ಪರಿಸ್ಥಿತಿಗೂ ಅನುಸರಿಸಿ ನಡೆಯುವಂತಹವು.

ಮರಾಠೀ ಮಹಿಳೆಯರ ವಿಚಾರವಾಗಿ, ನಾನು ಬೇರೆಯೇ ಒಂದು ಅನಿಸಿಕೆಯನ್ನು ವ್ಯಕ್ತಪಡಿಸಬೇಕಾಗಿದೆ. ಅದೆಂದರೆ ಯೌನ ವಿಚಾರದಲ್ಲಿ ಅವರು ಗಂಡಸಿಗಿಂತ ಸಬಲೆಯರು. ಹೆಚ್ಚು ಜಾಗೃತ ಮನದವರು. ಇದು ನನ್ನ ಅನಿಸಿಕೆ ಮಾತ್ರ! ಆದಾಗ್ಯೂ ಎರಡು ಮೂರು ದೃಷ್ಟಾಂತಗಳನ್ನು ಕೊಡುವೆ.

ನನಗಿಂತ ಕಿರಿಯನಾದ ಆದರೆ ಆತ್ಮೀಯನಾದ ಓರ್ವ ಕಾಲೇಜು ಪ್ರಾಧ್ಯಾಪಕನ ಮನೆಗೆ ರಾತ್ರಿಯೂಟಕ್ಕೆ ಹೋಗಿದ್ದೆ. ಅನುರೂಪ ದಾಂಪತ್ಯ; ನಗೆಯ ವಾತಾವರಣ. ಅವರಿಗೆ ಇಬ್ಬರು ಮುದ್ದಾದ ಹೆಣ್ಣು ಮಕ್ಕಳು ೭,೪ ವಯಸ್ಸಿನವರು ಆ ಗೃಹಿಣಿಗೆ ನಗೆಬೆರಸಿ ಊಟ ಮುಗಿಸಿ ಸೋಫಾದ ಮೇಲೆ ಕುಳಿತು ಹರಟುತ್ತಿದ್ದಾಗ ಹೇಳಿದೆ 'ಎರಡು ಹೆಣ್ಣು ಮಕ್ಕಳು ಸರಿ. ಒಂದು ಗಂಡು ಮಗು ಮನೆಯಲ್ಲಿ ಓಡಾಡಬೇಕಲ್ಲ?" ಅವಳಿಂದ ತಕ್ಷಣ ಬಂದ ಪ್ರತಿಕ್ರಿಯೆ ಇದು:

"ನನಗೆ ಹೇಳಿ ಏನು ಪ್ರಯೋಜನ? ಅವರಿಗೆ ಹೇಳ್ರಿ" ಎಂದು ಗಂಡನೆಡೆಗೆ ಬೊಟ್ಟು ಮಾಡಿದಳು!

ಈ ಕೆಳಗಿನ ಘಟನೆ ಒಂದು ಮರಾಠೀ ಸಣ್ಣ ಕತೆಯಲ್ಲಿ ಬಂದದ್ದು:

ಆಕೆ ಒಬ್ಬ ಶಿಕ್ಷಕಿ. ಗಂಡನದು ಇನ್ನೆಲ್ಲೋ ನೌಕರಿ. ಹೀಗಾಗಿ ಮನೆಯಲ್ಲೊಬ್ಬ ಅಡುಗೆಯವಳು. ಒಂದು ದಿನ ಅವಳು "ಯಜಮಾನ್ರು ನನ್ನನ್ನ ಹಿಡಿದುಕೊಳ್ಳಬಂದರು" ಎಂದು ದೂರಿತ್ತಳು. ಆಗ ಶಿಕ್ಷಕಿ ಹೇಳಿದಳಂತೆ "ಹೆದರಬೇಡ. ಅದಕ್ಕೂ ಮುಂದೆ ಹೋಗೋ ಧೈರ್ಯ ಇಲ್ಲ. ತುಸು ಗದರಿಸಿದರೆ ಸಾಕು."

ಇದು ಮಾತ್ರ ನಡೆದದ್ದೇ ಘಟನೆ. ಬೇರೊಬ್ಬರಿಂದ ತಿಳಿದು ಬಂದದ್ದು. ಆತ ಒಬ್ಬ ಸೇಲ್ಸ್ ಪ್ರತಿನಿಧಿ. ತಿಂಗಳಲ್ಲಿ 15 - 20 ದಿನ ಪ್ರವಾಸದಲ್ಲಿರುವವ ಅವನ ಹೆಂಡತಿ, ಮಕ್ಕಳು ಮನೆಯಲ್ಲಿ ಇರುವವರು. ಒಂದು ದಿನ ಅವಳ ಸೋದರಮಾವ ಬಂದಿದ್ದ "ಏನೇ ನಿನ್ನ ಗಂಡ ಬರೀ ಮನೆ ಬಿಟ್ಟು ಹೊರಗೇ ಇರ್ತಾನೆ. ಯಾವದಾದರೂ ಹೆಣ್ಣಿನೊಂದಿಗೆ ಚಲ್ಲಾಟವಾಡಿದರೆ ನಿನಗೆ ಹೇಗೆ ಗೊತ್ತಾದೀತು." ತನ್ನ ಸೋದರಮಾವ ಕುಚೇಷ್ಟೆಯವ ಎಂಬುದು ಅವಳಿಗೆ ಗೊತ್ತು . "ಅವರು ಅಂಥವರಲ್ಲ" ಎಂದಳಾಕೆ. ತನ್ನ ಪ್ರವಾಸ ಮುಗಿಸಿ ಪತಿರಾಯ ಮರಳಿ ಬಂದಾಗ, ಸೋದರಮಾವ ಬಂದದ್ದು, ಆಡಿದ್ದು, ಉತ್ತರಿಸಿದ್ದನ್ನು ವರದಿ ಮಾಡಿದಳು. ಆಮೇಲೆ ಅವನತ್ತ ತಿರುಗಿ ಹೇಳಿದಳು: "ಹಾಗೆ ನಿಮ್ಮನ್ನು ಹೊಗಳಿದೇಂತ ಹೆಮ್ಮೆ ಪಡೋದು ಬೇಡ. ಅದಕ್ಕೂ ತಾಖತ್ತು ಬೇಕಾಗ್ತsದ"

ವಿರಸ ದಾಂಪತ್ಯ

"ಪಾಲಿಗೆ ಬಂದದ್ದು ಪಂಚಾಮೃತ","ಪತಿಯೇ ಪರದೈವ" ಎಂಬಂತಹ ದಾಂಪತ್ಯವಿದ್ದರೆ ವಿರಸದ ಮಾತೇ ಇಲ್ಲವಲ್ಲ! ಹಾಗಲ್ಲದಿದ್ದರೆ, ಗಂಡನನ್ನು ಎದುರಿಸುವ ಸಾಮರ್ಥ್ಯವಿಲ್ಲದೆ, ಅಸಹಾಯದ ಸಿಟ್ಟಿನಿಂದ ದಿನ ನೂಕುವ ಪರಿಸ್ಥಿತಿ ಅವಳಿಗಿರಬಹುದು. ಆದರೆ ಸ್ವಂತದ ವ್ಯಕ್ತಿತ್ವವನ್ನು ಬೆಳೆಯಿಸಿಕೊಂಡ ಗೃಹಿಣಿಗೆ ತನಗೊಗ್ಗದ ಪ್ರಸಂಗ ಒದಗಿದರೆ ಅನುದಿನದ ಘರ್ಷಣೆ ಅನಿವಾರ್ಯವಾದೀತು. ಜೊತೆಗೆ ದಾಂಪತ್ಯದಲ್ಲಿ ಒಬ್ಬರು ಇನ್ನೊಬ್ಬರನ್ನು ಕಾಣುವ ದೃಷ್ಟಿಕೋಣದ ವೈರುಧ್ಯದಿಂದಲೂ ಹಾಗಾಗಬಹುದು. ಹೆಂಡತಿ ಎಂಬೊಂದು ಪ್ರಾಣಿ ಮನೆಯಲ್ಲಿದೆ - ಎಂಬ ಅಸಡ್ಡೆಯಿಂದ ಗಂಡನು ವರ್ತಿಸಿದರೆ ಯಾವ ಮರಾಠೀ ಮಹಿಳೆಯೂ ಸುಮ್ಮನಿರಲಾರಳು. ಒಂದು ವೇಳೆ ಅವನು ತನ್ನ ಸಮಕ್ಷಮವೆ ಬೇರೊಬ್ಬ ಹೆಣ್ಣಿನೊಂದಿಗೆ ವಿಶೇಷ ಆಸ್ಥೆಯನ್ನು ತೋರ ತೊಡಗಿದರೆ ಆಗಂತೂ 'ಮಲಾ ಆಕೆ ಸುಮ್ಮನುಳಿಯುವುದಿಲ್ಲ. ಇತರತ್ರವೂ ಅಲ್ಲಿ ಇಲ್ಲಿ ಇಂಥ ಪರಿಸ್ಥಿತಿ - ಇರಬಹುದೆಂದು ಒಪ್ಪುವೆ. ಆಗ ನಮ್ಮಲ್ಲಿ ವಿಚ್ಛೇದನ ತನಕವೂ ವಿರಸ ಪ್ರಕರಣ ಮುಂದೆ ಹೋಗಬಹುದು. ಆದರೆ ಆ ಹಂತದಲ್ಲಿ ಹಿಂತೆಗೆಯುವ ಹೆಂಗಸರೇ ಹೆಚ್ಚು. ಗಂಡ ಬಿಟ್ಟವಳು ಎಂಬ ಹೀನಾಯದ ನುಡಿ, ಜೀವನೋಪಾಯಕ್ಕೆ ಮುಂದೇನು - ಎಂಬ ಯೋಚನೆ, ಮಗು ಇದ್ದರೆ ಅದರ ಭಾವೀ ಜೀವನದ ಬಗ್ಗೆ ಚಿಂತೆ - ಇವುಗಳಿಂದಾಗಿ, ಶೂನ್ಯ ಭವಿಷ್ಯದ ಗಾಬರಿಯಿಂದಾಗಿ ಆಕೆ

ಹಿಂದೆಗೆಯುವಳು.

ಮರಾಠೀ ಮಹಿಳೆಗೂ ಈ ಸಮಸ್ಯೆಗಳಿದ್ದವುಗಳೇ. ಆದರೆ ಗಂಡನಿಂದ ತನ್ನ ಸ್ವಾಭಿಮಾನ ಹಾಗೂ ಅಸ್ಮಿತೆಗೆ ಧಕ್ಕೆಯುಂಟಾದಾಗ, ಮುಂದಿನ ಭವಿಷ್ಯದಕ್ಕಿಂತ, ಪ್ರತಿಭಟನೆಯೇ ಅವಳಲ್ಲಿ ಪ್ರಧಾನವಾಗಿರುತ್ತದೆ. ತನಗಾದ ಅನ್ಯಾಯಕ್ಕೆ ತಕ್ಕ ಪ್ರತೀಕಾರ ತೋರಿದೆನೆಂಬ ಸಮಾಧಾನವನ್ನು ನಾನು ಇಂಥ ಹಲವಾರು ಮಹಿಳೆಯರಲ್ಲಿ ಕಂಡಿದ್ದೇನೆ. ತನಗೆ ಮುಂದೆ ಓರ್ವ ವಿದುರನಾಗಲೀ, ಹೆಂಡತಿಯನ್ನು ಬಿಟ್ಟವನಾಗಲೀ ದೊರಕಿಯಾನು - ಎಂಬ ದೂರದ ಆಸೆಯೂ ಇಲ್ಲದಿಲ್ಲ. ಮತ್ತೆ ಮಹಾರಾಷ್ಟ್ರದಲ್ಲಿ ಅಂಥವರು ಸಿಕ್ಕುತ್ತಾರೆ. ಈ ಮುನ್ನ ಹೆಸರಿಸಿದ 'ರೋಹಿಣಿ' ಪತ್ರಿಕೆಯಲ್ಲಿ ವಿಚ್ಛೇದಗೊಂಡ ಇಲ್ಲವೆ 'ಎರಡನೆಯ ಸಂಬಂಧ'ದ ಪ್ರಕಟನೆಗಳೂ ಸಾಕಷ್ಟು ಬರುತ್ತಲಿವೆ. ಇನ್ನೊಂದು ಮಾತು, ಮಹಾರಾಷ್ಟ್ರದ ಕೋರ್ಟುಗಳಲ್ಲಿ ವಿಚ್ಛೇದನಕ್ಕಾಗಿ ಅರ್ಜಿಗಳು ಹೆಂಗಸರಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಬಂದಿವೆ, ಎಂದು ಈಚಿನ ವರದಿ ತಿಳಿಸಿದೆ.

ಸಾಹಿತ್ಯಿಕ ಪ್ರತಿಭಟನೆ

ಆತ್ಮಚರಿತ್ರೆಯನ್ನು ಬರೆಯುವುದರ ಮೂಲಕ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುವುದು ಮಾತ್ರ ಮರಾಠೀ ಮಹಿಳೆಯರದೇ ವೈಶಿಷ್ಟ್ಯವೆನ್ನಬೇಕು.

ನಾಮದೇವ ಢಸಾಳ ಎಂಬವನು ಮರಾಠೀ ದಲಿತ ಸಾಹಿತ್ಯದ ರೂವಾರಿಗಳಲ್ಲಿ ಒಬ್ಬ. ಆತ ಓರ್ವ ಮುಸ್ಲಿಂ ಕನ್ಯೆಯನ್ನು ಮದುವೆಯಾದ. (ಅವಳ ತಂದೆ ಹಾಗೂ ಢಸಾಳರು ವಾಮಪಂಥೀಯರು). ಢಸಾಳರು ಕುಡಿದು ಮನೆಗೆ ಬಂದು ನಿಷ್ಪಾಪದ ಹೆಂಡತಿಗೆ ನಾನಾ ವಿಧದ ದೈಹಿಕ ಹಿಂಸೆ ಕೊಡುತ್ತಿದ್ದ. (ಉರಿಯುವ ಸಿಗರೇಟಿನಿಂದ ಮೈ ಸುಡುವುದು ಇತ್ಯಾದಿ.) ಒಮ್ಮೆಯಂತೂ ಬಸುರಿಯಾಗಿದ್ದಾಗ ಅವಳನ್ನು ಒದ್ದದ್ದರ ಪರಿಣಾಮವಾಗಿ ಗರ್ಭಪಾತವಾಯಿತು! ಅದೇ ನೋವಿನಲ್ಲಿ ತಂದೆಯ ಮನೆಗೆ ಹಿಂತಿರುಗಿದಳು. ಅವಳೇನೂ ಬರಹಗಾರ್ತಿಯಲ್ಲ. ಆದರೆ 'ಮಲಾ ಉಧ್ವಸ್ತ ವ್ಹಾಯಚೇ ಆಹೇ' (ನನಗೆ ಮುಚ್ಚಿಡದೆ ಎಲ್ಲವನ್ನು ಹೇಳಬೇಕಾಗಿದೆ) ಎಂಬ ಆತ್ಮಚರಿತ್ರೆಯನ್ನು ಬರೆದಳು. ಇಡೀ ಮಹಾರಾಷ್ಟ್ರದ ಸಾಹಿತ್ಯಲೋಕದಲ್ಲಿ ಅದು ಬಿರುಗಾಳಿಯನ್ನೆಬ್ಬಿಸಿತು. ಢಸಾಳನನ್ನು ಖಂಡಿಸುವ ಸಭೆಗಳು ಜರುಗಿದವು. ಈ ಆತ್ಮಕಥನದ ಪುಸ್ತಕವು ಬಲು ಬೇಗ ಹಲವಾರು ಆವೃತ್ತಿಗಳನ್ನು ಕಂಡಿತೆಂದು ಬೇರೆ ಹೇಳಬೇಕಾದ್ದಿಲ್ಲ.

ಇಂಥ ಪತಿ ವಿರೋಧೀ ಚರಿತ್ರೆಗಳು ಇನ್ನೂ ಹಲವಾರು ಇವೆ. ಬೆಳಗಾಂವಿಯ ರಣಜಿತ್ ದೇಸಾಯಿಯವರಿಂದ ಘಟಸ್ಫೋಟ ಹೊಂದಿದ ಮಾಧವಿ ದೇಸಾಯಿ ಅವರ 'ನಾಚಗ ಘುಮಾ ನಾಚ್' (ಇದರ ಕನ್ನಡಾನುವಾದ ಈಚೆಗೆ ಹೊರಬಂದಿದೆ.) ಗ.ವಾ. ಬೆಹರೆ ಎಂಬ ಪತ್ರಿಕಾ ಸಂಪಾದಕನ ಹೆಂಡತಿ ಬರೆದ 'ಅಜುನೀಚಾಲತೇ ತೀ

ವಾಟ'(ಇಂದಿಗೂ ಸಾಗಿದೆ ಆ ದಾರಿ) - ಇವು ಕೆಲವು ಉದಾಹರಣೆಗಳು. ಆತ್ಮಚರಿತ್ರೆ ಅಲ್ಲದಿದ್ದರೂ ಪತ್ರಿಕೆಗಳಲ್ಲಿ ಹೇಳಿಕೆ ಕೊಡುವುದರ ಮೂಲಕವೂ ಹಲವು ಹೆಂಗಳೆಯರು ತಮ್ಮ ಕುದಿತವನ್ನು ಹೊರಹಾಕಿದ್ದಾರೆ. ಡಾ. ವಿಲಾಸ ಸಾರಂಗರು ಮುಂಬಯಿ ವಿಶ್ವವಿದ್ಯಾಲಯದ ಇಂಗ್ಲೀಶ್ ವಿಭಾಗದ ಮುಖ್ಯಸ್ಥರು. ಉತ್ತಮ ಕತೆಗಾರರು. ಅವರು ತಮ್ಮ ಹೆಂಡತಿಯನ್ನು ನಡೆಸಿಕೊಂಡ ರೀತಿಯ ಬಗ್ಗೆ ಏನೆಲ್ಲ ಪತ್ರೋತ್ತರ ಪತ್ರಿಕೆಗಳಲ್ಲಿ ಬಂತು.

ಕನ್ನಡದಲ್ಲಿ ಆತ್ಮಚರಿತೆಯ ಗ್ರಂಥ ಬರೆದ ಮಹಿಳೆಯರು ಅದೆಷ್ಟು ಜನ? ನಂಜನಗೂಡು ತಿರುಮಲಾಂಬಾ, ತಿರುಮಲೆ ರಾಜಮ್ಮ, ವಾಸಂತಿ- ಪಡುಕೋಣೆ, ಅನುಪಮಾ ನಿರಂಜನ, ಶಾರದಾಬಾಯಿ ಗೋಕಾಕ, ಇನ್ನೊಬ್ಬ ಶಾರದಾ ಬಾಯಿ(ಶ್ರೀರಂಗ); ಬಹಳವಾದರೆ ಮತ್ತೊಂದೆರಡು ಇದ್ದಾವು. ಮರಾಠಿಯಲ್ಲಿ ಅವುಗಳ ಅವಿರ್ಭಾವ ಎಷ್ಟೆಂದರೆ ಅವುಗಳ ಕುರಿತೇ ಒಬ್ಬರು ಪುಣೆ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪ್ರಬಂಧ ಸಲ್ಲಿಸಿದ್ದಾರೆ. ಲಕ್ಷ್ಮೀಬಾಯಿ ಟಿಳಕರಿಂದ ಸುಮಾರು 60 ವರ್ಷಗಳ ಹಿಂದೆ ಪ್ರಾರಂಭವಾಗಿ ೧೯೯೪ರಂದು ಪ್ರಕಟವಾದ ಸುನೀತಾ ದೇಶಪಾಂಡೆಯವರ ಕಥನದ ವರೆಗೂ ಈ ಪರಂಪರೆ ಹರಿದು ಬಂದಿದೆ. ಇವರಾರೂ ಸಿದ್ಧಹಸ್ತ ಲೇಖಕರೆಂದು ಆ ಮೊದಲು ಹೆಸರು ಮಾಡಿದವರಲ್ಲ. ತಮ್ಮ ಜೀವನದ ತುಡಿತಗಳನ್ನು, ಅನಿಸಿಕೆಗಳನ್ನು ಅಭಿವ್ಯಕ್ತಗೊಳಿಸಲೆಂದೇ ಲೇಖನಿಯನ್ನು ಹಿಡಿದವರು. ಅದರಲ್ಲಿ 'ಗಂಡ'ನಿಗೆ ಪ್ರಾಧಾನ್ಯ ಇದ್ದದ್ದು ಸಹಜವೇ. ಮತ್ತೆ ಇವೆಲ್ಲವೂ ಪತಿ ವಿರೋಧೀ ವೃತ್ತಾಂತಗಳಲ್ಲ. ಇನ್ನು ಹಲವು ಪತಿಯಲ್ಲಿ ಆದರವಿಟ್ಟುಕೊಂಡು ಅಲ್ಲಲ್ಲಿ ಭಿನ್ನಾಭಿಪ್ರಾಯಗಳನ್ನು ಸೂಚಿಸುವತ್ತ ವಾಲಿದವುಗಳು. ಅಂತೂ ಆಧುನಿಕ ಮರಾಠೀ ಸಾಹಿತ್ಯ ಚರಿತ್ರಕಾರರು ಹೆಮ್ಮೆ ಪಡುವ ಸಾಹಿತ್ಯ ರೂಪವಿದು. ಒಂದೆರಡನ್ನು ತುಸು ಪರಿಶೀಲಿಸೋಣ.

ಲಕ್ಷ್ಮೀಬಾಯಿ ಟಿಳಕರು ಹಿಂದೂ ಸನಾತನೀ ಹೆಣ್ಣು ಮಗಳು. ಗಂಡನೋ ಒಬ್ಬ 'ರೆವರೆಂಡ್! ಪರಸ್ಪರರ ವಿಚಾರಗಳ ತಿಕ್ಕಾಟ ಮತ್ತು ಹೊಂದಾಣಿಕೆಗಳನ್ನು ಲಕ್ಷ್ಮೀಬಾಯಿ ಸೊಗಸಾಗಿ ಚಿತ್ರಿಸಿದ್ದಾರೆ. (ಕನ್ನಡದಲ್ಲಿ ಅನುವಾದಗೊಂಡಿದೆ.)'ಸಂಸಾರ ಸಾಮರಸ್ಯದ , ಅದಕ್ಕಿಂತ ಹೆಚ್ಚಾಗಿ ಅದರ ಕಟ್ಟುನಿಟ್ಟಿನಲ್ಲಿ ಇದ್ದೂ ಅಸ್ಮಿತೆಯನ್ನು ಉಳಿಸಿಕೊಳ್ಳಬಯಸಿದ ಮಹಿಳೆಯ ವ್ಯಕ್ತಿತ್ವ ತುಂಬಾ ಚೆನ್ನಾಗಿ ಮೂಡಿ ಬಂದಿದೆ!

ಗೋದಾವರಿ ಪರುಳೇಕರರು ನಾಮವಂತ ಸಮಾಜಸೇವಕಿ. ಅವರದೂ ಅಂತರ್ಜಾತೀಯ ವಿವಾಹ. 'ಮಾಣೂಸ ಕೆಂವ್ಹಾ ಜಾಗ ಹೋತೋ' ಎಂಬ ಅರ್ಥಪೂರ್ಣ ಶೀರ್ಷಿಕೆಯನ್ನು (ಕನ್ನಡದಲ್ಲಿ ಬಂದ ಕೃತಿಯ ಶೀರ್ಷಿಕೆ 'ಮಾನವ ಎಚ್ಚೆತ್ತಾಗ')ತಮ್ಮ ಆತ್ಮಚರಿತ್ರೆಗೆ ಕೊಟ್ಟಿದ್ದಾರೆ. 'ಅರ್ಥಪೂರ್ಣ' ಏಕೆಂದರೆ ಅವರ ವ್ಯಕ್ತಿತ್ವವು ರೂಪುಗೊಂಡಿದ್ದರ ಚಿತ್ರಣ ಅಲ್ಲಿದೆ. ಇಂಥದೇ ಇನ್ನೊಂದು ಸೂಜ್ಞವಾದ ಶೀರ್ಷಿಕೆ 'ಮಲಾ ಸಾಂಗಿತಲೇ ಪಾಹಿಜೇ'

(' ನಾನಿದನ್ನು ಹೇಳಲೇಬೇಕು). ಇದೊಂದು ಏಕಪಾತ್ರದ ನಾಟಕ.

ಈಚೆಗೆ ಬೆಳಕು ಕಂಡ 'ಆಹೆ ಮನೋಹರ ತರೀ'ದಲ್ಲಿ ಸುನೀತಾ ದೇಶಪಾಂಡೆ ತಮ್ಮ ಒಳಗುದಿಯನ್ನು ಹೊರಹಾಕಲೆಂದೇ ತಮ್ಮ ಆತ್ಮಚರಿತ್ರೆಯನ್ನು ಬರೆದದ್ದಾಗಿ ಪ್ರಸ್ತಾವನೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಅದು ಎಲ್ಲಾ ಆತ್ಮಚರಿತ್ರಕಾರ್ತಿಯವರ ಉದ್ದೇಶವೇ ತಾನೇ. ಅಲ್ಲಿ ಬರುವ ಮನೋಹರ - ಇನ್ನಾರೂ ಅಲ್ಲ. ಮರಾಠಿಯ ಅತ್ಯಂತ ಜನಪ್ರಿಯ ಲೇಖಕ ಮತ್ತು ಹಾಸ್ಯ ಸಾಹಿತ್ಯ ಚಕ್ರವರ್ತಿ ಎನಿಸಿದ ಪು.ಲ. ದೇಶಪಾಂಡೆ. ಅವರ ಹೆಸರು ತಗೊಂಡರೆ ಸಾಕು ಮರಾಠಿಗರ ಮೈನವಿರೇಳುವುದು. ಸಂಗೀತ, ನಾಟಕ ರಂಗದಲ್ಲಿಯೂ ಅವರು ಅ-ದ್ವಿತೀಯರು. ಜನರ ದೃಷ್ಟಿಯಲ್ಲಿ ಅವರೊಬ್ಬ ಅಲೌಕಿಕ ಪುರುಷ.'ಆಹೇ ಮನೋಹರ'. ಆ ಮುಂದಿನ ಆದರೆ (ತರೀ) ಎನ್ನುವುದರಲ್ಲಿಯೇ ಈ ನಿರೂಪಣೆಯ ತಿರುಳಿದೆ.

"ದೀಪದ ಕೆಳಗೆ ಮಬ್ಬುಗತ್ತಲೆ ಇರುವಂತೆ ಅವರಲ್ಲಿಯೂ ಲೋಪದೋಷಗಳಿದ್ದರೆ ಅದು ಸಹಜ. ಆದ್ದರಿಂದ ನಮ್ಮ ನಿಮ್ಮ ಹಾಗೆ ಅವರೂ ಒಬ್ಬ ಮನುಷ್ಯ ಎಂದು ತಿಳಿಯಬೇಕು. ಇದು ಸುನೀತಾ ಅವರ ಆತ್ಮಕಥನದ ಒಂದು ಬದಿ. ಇನ್ನೊಂದು, ಅವರ ಸ್ವಂತದ ವಿಚಾರಧಾರೆ. ವಿಶೇಷತಃ ತನ್ನದೇ 'ಅಹಂ'ದಲ್ಲಿರುವ ಗಂಡನೊಂದಿಗೆ ಬಾಳುವೆ ಮಾಡುವಾಗಿನ ಧರ್ಮಸಂಕಟ ಇದರಲ್ಲಿ ಬಂದಿದೆ. ಇಂಥವನು ಹೆಂಡತಿಗೆ ಸ್ವಾತಂತ್ರ್ಯ ಕೊಟ್ಟಿರಬಹುದು. ಆದರೆ ಅವನ ಸುಪ್ತ ಮನದಲ್ಲಿ ಹೆಂಡತಿ ತನಗಾಗಿ ಇದ್ದಾಳೆ; ಆಕೆ ತನಗೆ ಅಧೀನವಾಗಿ ಇರಬೇಕು - ಎಂಬುದು ಹುದುಗಿರುತ್ತದೆ. ಇದೊಂದು ಉದಾಹರಣೆ: ಪು.ಲ. ಅವರು ಹೆಂಡತಿಯ ಜನ್ಮದಿನವನ್ನು ಬಹು ಪ್ರಯಾಸದಿಂದ ನೆನಪಿಟ್ಟು 'ವಿಶ್' ಮಾಡುತ್ತಿದ್ದರು. ಒಮ್ಮೊಮ್ಮೆ ಮರೆಯುವುದೂ ಉಂಟು! ಆಗ ಸುನೀತಾ "ಇನ್ನು ಮೇಲೆ ನನ್ನ ಹುಟ್ಟಿದ ದಿನದಂದು ನೀವು ಶುಭ ಕೋರುವುದೇನೂ ಬೇಡ" ಎಂದರಂತೆ.

ಸಾಹಿತ್ಯ ಪ್ರೇಮಿಗಳು

ಆತ್ಮಚರಿತ್ರೆ ಬರೆದ ವನಿತೆಯರಲ್ಲಿ ಹೆಚ್ಚಿನವರು ನಿಯಮಿತವಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿದವರೇನಲ್ಲ ಎಂಬುದನ್ನು ಹೇಳಿದ್ದೇನೆ. ಆದರೆ ಅವರುಗಳು, ಹಾಗೂ ಬೇರೆಯ ಅನೇಕಾನೇಕ ಮಹಿಳೆಯರು ಅಪ್ಪಟ ಸಾಹಿತ್ಯ ಪ್ರೇಮಿಗಳು. ಎಲ್ಲ ಬಗೆಯ ಸಾಹಿತ್ಯ ಕೃತಿಗಳನ್ನು ಓದುವತ್ತ ಒಲವುಳ್ಳವರು. ಮಹಿಳಾ ಪತ್ರಿಕೆಗಳಾದ 'ಗೃಹಶೋಭಾ' ಮುಂ. ಮಾತ್ರವಲ್ಲ. ಮಹಾರಾಷ್ಟ್ರದಲ್ಲಿ ನೂರೈವತ್ತಕ್ಕೂ ಮಿಕ್ಕಿ ದೀಪಾವಳಿ ವಿಶೇಷಾಂಕಗಳು ಹೊರಡುತ್ತವೆ. ಮಹಿಳೆಯರು ಓದುತ್ತಾರೆ. ವಿಶೇಷವೆಂದರೆ ಮನೆಯಲ್ಲಿ ಹಿರಿಯರಾದವರು ಸಾಹಿತಿ ಇಲ್ಲವೆ ವಿದ್ಯಾ ಪಾರಂಗತರಿದ್ದರೆ ಆ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕೆನ್ನುವ ನಿಷ್ಠೆಯುಳ್ಳವರು ಅನೇಕರು ಕಂಡು ಬರುತ್ತಾರೆ!

'ತಂದೆ ಒಬ್ಬ ಇಂಜಿನಿಯರ್. ಅಖಂಡ ಪುಸ್ತಕ ಪ್ರೇಮಿ. ನಾನಾ ಬಗೆಯ ಗ್ರಂಥಗಳನ್ನು ಕೊಂಡು ಇರಿಸಿದ್ದರು. ಪುಸ್ತಕಗಳಿಂದ ತುಂಬಿದ ಮೂರು ಕಪಾಟುಗಳು. ಆಗಾಗ ಕಿರುವಯದ ಮಗಳಿಗೆ ತಾವು ಓದಿದ್ದ ರಂಜನೀಯ ಅಂಶಗಳನ್ನು ವರ್ಣಿಸುತ್ತಿದ್ದರು. ಕಾಲೇಜ ಕಟ್ಟೆಯನ್ನು ಹತ್ತಿದ ಮೇಲೆ ಅವಳೂ ಆ ಪುಸ್ತಕಗಳನ್ನು ಆಗಾಗ ಓದುತ್ತಿದ್ದಳು. ಮದುವೆಯಾಯಿತು. ಗಂಡನ ಮನೆಗೆ ಬರುವಾಗ ಒಂದು ಪುಸ್ತಕದ ಕಪಾಟನ್ನೇ ತರುವುದೇ? ಅವನು ಸ್ವಾಗತಿಸಿದನಾದರೂ, ಬೇಹೊಂದು ಸಂಶಯ ಅವನಲ್ಲಿ ಮೂಡಿತು.

"ಅಲ್ಲೇ, ನಿನ್ನ ಇಬ್ಬರು ಅಣ್ಣಂದಿರು ತಕರಾರು ಮಾಡಲಿಲ್ಲವೆ?"

"ಬೇಕಿದ್ದರೆ ಇನ್ನೆರಡು ಕಪಾಟುಗಳನ್ನೂ ಒಯ್ದುಬಿಡು ಎಂದಿದ್ದಾರೆ. ಅವರು ಪುಸ್ತಕ ಶತ್ರುಗಳು" ಎಂದಳಾಕೆ.

ಮಹಿಳಾ ಪತ್ರಿಕೋದ್ಯಮವನ್ನೂ ಇಲ್ಲಿ ತುಸು ಪ್ರಸ್ತಾಪಿಸಬೇಕು. ಕತೆ, ಕಾದಂಬರಿ, ಬಿಡಿ ಲೇಖನ ಇತ್ಯಾದಿ ಬರೆಯುವವರು ನಮ್ಮಲ್ಲಿಯಂತೆ ಅಲ್ಲಿಯೂ ಅನೇಕರಿದ್ದಾರೆ. ೧೮೭೦ರಷ್ಟು ಹಿಂದೆಯೇ ಪ್ರಥಮ ಮಹಿಳಾ ಕತೆಗಾರ್ತಿ ಒಗೆತಂದಳು. ಕಿರ್ಲೋಸ್ಕರ ಕಂಪನಿಯವರ ಸುಪ್ರಸಿದ್ಧ 'ಸ್ತ್ರೀ' ಮಾಸಪತ್ರಿಕೆ ೧೯೩೦ರಲ್ಲಿ ಆರಂಭವಾಯಿತು. ಆದರೆ ಮಹಿಳೆಯರೇ ಮಹಿಳಾ ಪತ್ರಿಕೆ ಹೊರಡಿಸುತ್ತಿರುವ ಪರಂಪರೆ ಈಚಿನದು. 'ದಿಶಾ', 'ಅಮೀ ಸ್ತ್ರಿಯಾ' (ನಾವು ಸ್ತ್ರೀಯರು), 'ಮಹಿಳಾ ಆಂದೋಲನ' , 'ಮುಕ್ತಾಯಿ', 'ಬಾಯಿ ಜಾ' ಇತ್ಯಾದಿ. 'ಮಿಳೂನ ಸರ್ವಾಜಣಿ' ಪತ್ರಿಕೆಯ ಸಂಪಾದಕಿ ವಿದ್ಯಾ ಬಾಳ ಅವರು ಒಮ್ಮೆ ಸ್ತ್ರೀ ಪುರುಷ ಸಮಾನತೆಯ ಬಗ್ಗೆ ಅಭಿಪ್ರಾಯಿಸಲು ಐದು ಜನ ಪುರುಷರಿಗೆ ಆಮಂತ್ರಣವಿತ್ತದ್ದು ನೆನಪಿಗೆ ಬರುತ್ತದೆ. ಪ್ರಜ್ಞಾಶೀಲ ಮಹಿಳೆಯರು ಅದೊಂದು ಸಾರ್ವಜನಿಕ ವೇದಿಕೆಯೆಂದೇ ಬಗೆಯುತ್ತಾರೆ.

ಸಮಾಜ ಸೇವೆ

ಮಹಾರಾಷ್ಟ್ರದಲ್ಲಿ ಸಮಾಜ ಸೇವಾ ಪ್ರಜ್ಞೆ ಜಾಗರೂಕವಾಗಿದ್ದಷ್ಟು ಬೇರಾವ ರಾಜ್ಯದಲ್ಲಿ ಇದ್ದಿರಲಾರದು. ಮಹಾತ್ಮಾ ಫುಲೆ, ಮಹರ್ಷಿ ಕರ್ವೆ, ಹಿಂಗಣೆ ಮುಂತಾದವರಿಂದ ಬಂದ ಬಳುವಳಿ ಅದು. ಇವರುಗಳಿಗೆ ಮಹಿಳೆಯರನ್ನು ಮೇಲೆತ್ತುವುದೇ ಪ್ರಮುಖವಾಗಿದ್ದಿತು. ಈಚೆಗೆ ಅದೇ ಮಹಿಳೋನ್ನತಿಯ ದೃಷ್ಟಿಯಿಂದ ಮಹಿಳೆಯರೇ ನಡೆಸುವ ಹಲವಾರು ಸಂಸ್ಥೆಗಳು ಕಂಡು ಬರುತ್ತವೆ. ಇವುಗಳಲ್ಲಿ 'ಆಲೋಚನಾ' ಸಂಸ್ಥೆಯ ಕಾರ್ಯ ವಿಶಿಷ್ಟವಾದದ್ದು. ಅಲ್ಲಿ ವಿವಿಧ ಸ್ತ್ರೀ ಸಮಸ್ಯೆಗಳಿಗೆ ಸಂಬಂಧಿಸಿದ ಎಲ್ಲ ಬಗೆಯ ಮಾಹಿತಿಯನ್ನು ಕಲೆ ಹಾಕಿ ಇಟ್ಟಿರುತ್ತಾರೆ. ಸ್ತ್ರೀಯರಿಗೆ ಅನ್ವಯಿಸುವಂಥ ಕಾನೂನುಗಳು, ವರದಕ್ಷಿಣೆಯ ಪಿಡುಗು, ಗ್ರಾಮೀಣ ಮಹಿಳೆಯರ ವಿದ್ಯಾಭ್ಯಾಸ, ವಿಧವೆಯರ ಆರ್ಥಿಕ ಸ್ವಾವಲಂಬನೆ , ವಿಚ್ಛೇದಿತ ಮಹಿಳೆಯರು ಇವೇ ಮುಂತಾದ ವಿಷಯಗಳ ಮೇಲಿನ ಅಂಕಿ -

ಸಂಖ್ಯೆಗಳು . ಪತ್ರಿಕೆಗಳಲ್ಲಿ ಬಂದದ್ದರ ಸುದ್ದಿ - ಲೇಖನಗಳ ಕ್ಲಿಪಿಂಗ್ಸ್ ಇವನ್ನು ವರ್ಗೀಕರಿಸಿ ಇಟ್ಟಿದ್ದಾರೆ.

ಭಾರತೀಯ ಮಹಿಳೆಯರು ಭಾವುಕತನ, ಅಂಧ ಶ್ರದ್ಧೆ ಮೂಢನಂಬಿಕೆಗಳ ವಿಚಾರವಾಗಿ ಸಾಕಷ್ಟು ಹೆಸರು ಗಳಿಸಿದ್ದಾರೆ! 'ಸ್ತ್ರೀವಾಣಿ' ಎಂಬ ಸಂಸ್ಥೆ ಇದರ ಬಗ್ಗೆ ಸಂಶೋಧನೆ ನಡೆಸುತ್ತಲಿದೆ. ಸ್ತ್ರೀ ವಿಷಯಕವಾದ ಪವಾಡಗಳ ಪುನರ್ವಿಶ್ಲೇಷಣೆಯೂ ಇದರ ಕಾರ್ಯಗಳಲ್ಲೊಂದು. ಈ ಸಂಸ್ಥೆಯ ಸುಮಿತ್ರಾ ಬರ್ವೆ ಸತ್ಯವಾನ ಸಾವಿತ್ರಿಯ ಪೌರಾಣಿಕ ಕತೆಯನ್ನು ಹೀಗೆ ಅರ್ಥೈಸುತ್ತಾರೆ :

"ಸಾವಿತ್ರಿಯು ಪುರಾಣದಲ್ಲಿಯೇ ಬಂದದ್ದರ ಪ್ರಕಾರ ವಿದ್ಯಾವಂತೆ. ತನ್ನ ಪತಿಯನ್ನು ತಾನೇ ಆಯ್ಕೆ ಮಾಡಿಕೊಳ್ಳುವಷ್ಟು ದೃಢ ಮನಸ್ಸಿನವಳು. ಅಂತೆಯೇ ಅವನ ಮೇಲೆ ಅಪಾರ ಪ್ರೇಮ ಇದ್ದಿರಬೇಕು. ಅದಾವುದೋ ದೀರ್ಘಕಾಲೀನ ರೋಗದಿಂದ ಅವನು ಬಳಲುತ್ತಿದ್ದಿರಬೇಕು. ಉತ್ಕಂಠೆಯಿಂದ, ಅತ್ಯಂತ ಶ್ರದ್ಧೆಯಿಂದ ಅವನ ಶುಶ್ರೂಷೆ ಮಾಡುತ್ತಾಳೆ. ಸಾವು ಸಮೀಪಿಸಿದೆ, ಎನ್ನುವಾಗ ಧೈರ್ಯ ತುಂಬುತ್ತಾಳೆ. ಇನ್ನಷ್ಟು ತಲ್ಲೀನತೆಯಿಂದ ಆರೈಕೆ ಮಾಡುತ್ತಾಳೆ. ಈ ರೀತಿಯಲ್ಲಿ ಅವನ ಸಾವನ್ನು ಹಿಮ್ಮೆಟ್ಟಿಸಿದಾಗ ಕಣ್ಣಾರೆ ಕಂಡ ಆಗಿನ ಜನ ಅದೊಂದು ಪವಾಡ ಎಂದು ಬಗೆದರು. ದಿನಗಳೆದಂತೆ ಸಾವಿನ ಪ್ರತಿರೂಪವಾಗಿ ಯಮ, ಅವನ ಪಾಶ' ಆ ಕೋಣ ಬಂದು ನಿಂತವು."

-ಹೀಗೇಕೆ ಅರ್ಥ ಮಾಡಬಾರದು? ಎಂದು ಕೇಳುತ್ತಾರೆ, ಸುಮಿತ್ರಾ ಅವರು. ನೆನಪಿಡಿ ಅವರು ವಟಸಾವಿತ್ರಿಯ ಪೂಜೆಯನ್ನೇನು ವಿರೋಧಿಸಲಿಲ್ಲ.

ಯಾವುದೇ ಸಾಮಾಜಿಕ ಸೇವೆ ಇರಲಿ, ಹೆಣ್ಣು ಮಕ್ಕಳಿಗೆ ತುಸು ಹೆಚ್ಚೇ ಪ್ರಸಿದ್ಧಿ ಮತ್ತು ಪ್ರಚಾರ ಬೇಕು! ಬ್ರಹ್ಮದತ್ತ ಬರ್ವೆ ಎಂಬವರು ಚಿತ್ತವಿಕಲರಿಗಾಗಿ ಒಂದು ಶಾಲೆಯನ್ನು ತೆರೆಯುವ ಸನ್ನಾಹದಲ್ಲಿದ್ದರು. ಆದರೆ ಅವರಿಗೆ ಬಂತು ಅಕಾಲ ಮರಣ. ಆ ಶಯ್ಯೆಯಲ್ಲಿದ್ದಾಗ ಪತ್ನಿ ಸುಧಾ ಆ ಸೇವಾಕಾರ್ಯವನ್ನು ಮುಂದುವರೆಸುವುದಾಗಿ ವಚನವಿತ್ತಳು. ಇದು ಇಪ್ಪತ್ತು ವರ್ಷಗಳ ಹಿಂದಿನ ಮಾತು. ಇತ್ತ ಸುಧಾ ಅದರ ವಿಷಯದಲ್ಲಿ ಏನು ಎಂದರೆ ಏನೇನೂ ತಿಳಿಯದು. ಓರ್ವ ಮಗುವನ್ನು ಮನೆಯಲ್ಲೇ ಇರಿಸಿಕೊಂಡು ಸುರುವು ಮಾಡಿದಳು. ವರ್ಷ ಗತಿಸಿದಂತೆ ಮನೋವಿಕಲ ಮಕ್ಕಳು ಬರತೊಡಗಿದರು. ಅದರ ಅಸ್ತಿತ್ವದ ಕಲ್ಪನೆ ಜನಕ್ಕೆ ಮೊನ್ನೆ ಮೊನ್ನೆಯವರೆಗೂ ಇದ್ದಿರಲೇ ಇಲ್ಲ. ಕಾರಣವೆಂದರೆ ಸುಧಾ ಬರ್ವೆಯವರಿಗೆ ಕಿಂಚಿತ್ತೂ ಪ್ರಚಾರ ಬೇಡವಾದದ್ದು.

'ಸಾಮಾಜಿಕ ಸೇವೆಯೂ ಆಯ್ತು, ಒಂದು ಉಪಯುಕ್ತ ವೃತ್ತಿಯೂ ಆಯಿತು' ಎಂಬ ರೀತಿಯಲ್ಲಿ 'ವೇದಿತಾ ಮಂಡಳಿ' ಎಂಬ ಧಾರ್ಮಿಕ ಸಂಸ್ಥೆ ಸಮರ್ಥ ರೀತಿಯಲ್ಲಿ

ಕೆಲಸ ಮಾಡುತ್ತಿದೆ. ನಮಗೆ ' ವೇದ'ಗೊತ್ತು. ಅದು ಸ್ತ್ರೀವಾಚೀ 'ವೇದಿತಾ' ಆದದ್ದು ಹೇಗೆ? ಆ ಪರಿಯು ಮುಂದುವರಿದು ಋಷಿ - ಋಷಿಕಾ, ಪೂಜಾರ -ಪೂಜಾರಿಣಿ, ಪುರೋಹಿತ - ಪುರೋಹಿತೆ ಎಂಬ ಪರಿಕಲ್ಪನೆಗಳಿಗೂ ಎಡೆಗೊಟ್ಟಿದೆ. ಅರ್ಥಾತ್ ಮಹಿಳೆಯರು ತಂತಮ್ಮ ಧರ್ಮ ಕಾರ್ಯಗಳನ್ನು ತಾವೇ ಮಾಡಿಕೊಳ್ಳಬಹುದು ಎಂಬುದೇ ಇದರ ಇಂಗಿತ! ಈಗ ಮೂವತ್ತು ವರ್ಷಗಳ ಹಿಂದೆ ಶಂಕರರಾವ ಧೋತ್ರೆ (ಓರ್ವ ಪುರುಷ! ಸ್ತ್ರೀಯರಿಗೆ ಧಾರ್ಮಿಕ ತರಬೇತಿ ಕೊಡಲು ಉದ್ಯುಕ್ತರಾದರು. ಅವರಿಂದ ತರಬೇತಿ ಹೊಂದಿದ್ದ ಶುಭಾಂಗಿ ಭಾಲೇರಾವ ಅದಕ್ಕೆ ಸಾಂಸ್ಥಿಕ ಸ್ವರೂಪವನ್ನು ತಂದುಕೊಟ್ಟು ನಡೆಸುತ್ತಿದ್ದಾರೆ. ಈ ವೇದಿತಾ ಮಂಡಳವು ನಾಲ್ಕು ವರ್ಷ ಕಾಲ ಮಂತ್ರಪಠಣ ಇತ್ಯಾದಿ ಟ್ರೇನಿಂಗ್ ಕೊಡುತ್ತದೆ. ವಿವಿಧ ದೇವತಾ ಸ್ತೋತ್ರಗಳು, ವ್ರತಗಳು, ಸತ್ಯನಾರಾಯಣ ಮುಂತಾದ ಕಾಮ್ಯಕ ಪೂಜೆಗಳು. ಮದುವೆ, ಮುಂಜಿವೆ ಮೊದಲಾದ ಸಂಸ್ಕಾರ ವಿಧಿಗಳು ಎಲ್ಲವನ್ನೂ ಕಲಿಸಲಾಗುತ್ತದೆ. ವೇದಾಧ್ಯಯನಕ್ಕೂ ಅವಕಾಶವಿದೆ. ಕಲಿಯುವವರೆಲ್ಲ ಗೃಹಿಣಿಯರೇ ಆದರೂ, ವಿಧವೆಯರನ್ನು ನಿರಾಕರಿಸುತ್ತಿಲ್ಲ ಎಂದು ಹೇಳಿದ್ದೇನೆ.

ಈ ಸಂಸ್ಥೆಯ ಖ್ಯಾತಿಯು ವಿದೇಶಗಳಲ್ಲಿಯೂ ಹಬ್ಬಿದೆ ಎಂದರೆ ನಂಬಿರಿ. ಇವರ ಒಂದು ತಂಡವು ಕೆಲವು ವರ್ಷಗಳ ಹಿಂದೆ ಸ್ವಿಜರ್ಲಂಡ್ ಇಂಗ್ಲೆಂಡ್‌ಗಳಿಗೂ ಹೋಗಿದ್ದಿತು. ಈಚೆಗೆ ಕ್ರೈಸ್ತರ ಪರಮೋಚ್ಚ ಗುರು, "ಮಹಿಳೆಯರು ಧರ್ಮಗುರು (Cardinal) ಆಗಲಾರರು' ಎಂದು ಹೇಳಿದ್ದರ ಮುಂದೆ, ನಮ್ಮ ಈ ಪುರೋಹಿತೆಯರ ಪಡೆಯು ಸಾಮಾಜಿಕವಾಗಿ ಸ್ವೀಕೃತವಾಗಿದ್ದುದು ಅಭಿಮಾನಪಡುವ ವಿಷಯವಾಗಿದೆ.

ಬಿಚ್ಚು ಮಾತು ; ದಿಟ್ಟ ನಡೆ

ಕೆಲವು ವರ್ಷಗಳ ಹಿಂದೆ ಪುಣೆಯಲ್ಲಿ ನಾನು ವಾಸವಾಗಿದ್ದೆನಷ್ಟೇ. ನಾನಿದ್ದ ಹ್ಯಾಪಿ ಕಾಲನಿಯ ಸರ್ಕಲಿನಲ್ಲಿ ೧೦.೩೦ರ ಬೆಳಗಿನ ಸಮಯದಲ್ಲಿ ಆಟೋರಿಕ್ಷಾ ಸಿಗುವುದಿಲ್ಲ. ದಿನವೂ ೧೫ - ೨೦ ಮಿನಿಟಾದರೂ ಕಾಯಬೇಕು. ಒಂದು ದಿನ ಕಾಯುತ್ತ ನಿಂತಾಗ ಒಬ್ಬ ಯುವತಿ ತಾನು ಗೊತ್ತು ಮಾಡಿಕೊಂಡು ಹೊರಟಿದ್ದ ಆಟೊ ನಿಲ್ಲಿಸಿ ನನ್ನನ್ನೂ ಕರೆದಳು. ಕುಳಿತೆ. ನನ್ನ ಅಚ್ಚರಿಯನ್ನು ಗಮನಿಸಿ ಕೇಳಿದಳು. "ನೀವು ಭಾಂಡಾರ್ಕರ್ ಇನ್‌ಸ್ಟಿಟ್ಯೂಟ್‌ಗೆ ಹೋಗ್ತೀರಲ್ಲವೆ. ನನ್ನದು ಅದೇ ದಾರಿಯಲ್ಲಿದೆ."

"ಹೌದು . ಆದರೆ ನಾನು ಅಲ್ಲಿಗೆ ಹೋಗ್ತೇನೆಂದು ನಿಮಗೆ ಹೇಗೆ ಗೊತ್ತಾಯಿತು?"

"ದಿನವೂ ನನ್ನ ಹಾಗೇ ನೀವೂ ಆಟೋಕ್ಕೆ ಕಾಯ್ತೀರಿ. ಒಮ್ಮೆ ಎರಡೂ ಆಟೋರಿಕ್ಷಾಗಳು ಕೂಡಿ ಅತ್ತ ಕಡೆ ಹೋದಾಗ ನೋಡಿದ್ದೆ"

ಈ ಬಿಚ್ಚು ನುಡಿಯನ್ನು ಕೇಳಿ ಸಂತೋಷವಾಯಿತು. ನನ್ನ ಕುಚೋದ್ಯದ ಸ್ವಭಾವವನ್ನು ಆಗ ತುಸು ಹೊರತೆಗೆದು,

"ನೀವಾಗಿ ನನಗೆ Offer ಮಾಡಿದಿರಿ. ಈ ಗುಣವನ್ನು ಮೆಚ್ಚಿಕೊಂಡೆ. ಆದರೆ ಒಂದು ಮಾತು ಕೇಳಲೆ? ನನ್ನ ನರೆಗೂದಲನ್ನು ಕಂಡು ಇವರೊಬ್ಬ ಸುರಕ್ಷಿತ ಪ್ರಾಣಿ -ಎಂದೆನಿಸಿ ನೀವು ಕರೆದಿರಬಹುದು. ಅದೇ ಒಬ್ಬ ತರುಣನಿಗೆ, ನಿಮ್ಮ ವಯಸ್ಸಿನವನಿಗೆ ಹೀಗೇ ನೀವಾಗಿ ಕರೆಯುತ್ತಿದ್ದಿರಾ?"

ಆಕೆ ಕಿಲಕಿಲನೆ ನಕ್ಕಳು. "ಓಹೋ, ಅವಶ್ಯವಾಗಿ ಕರೀತಿದ್ದೆ. ಯುವತಿಯೊಬ್ಬಳು ಹೀಗೆ ತಾನಾಗಿ ಕರೆದರೆ ಅವರಿಗೆ ಏನೂ ತೋಚದೆ , ಸಂಕೋಚದಿಂದ ವರ್ತಿಸುವರು. ಹಾಗೆ ನೋಡಿದರೆ ವಯಸ್ಸಾದವರೆ ಒಮ್ಮೊಮ್ಮೆ ... Sorry ಅಂ. ಮೋಜಿಗೆ ಹೇಳಿದೆ" ಎಂದಳು.

ಮುಂದೊಮ್ಮೆ ನಾನು ಅವಳಿಗೆ ಆಟೊದಲ್ಲಿ ಲಿಫ್ಟ್ ಕೊಟ್ಟಾಗ, ಇನ್ನಷ್ಟು ಮನಬಿಚ್ಚಿ ಮಾತನಾಡಿದೆವು - ವಿಶೇಷತಃ ಗಂಡಸಿನ ಆ ಬಗೆಯ 'ಮುಂದುವರಿತದ'ದ ಬಗ್ಗೆ. ಆಕೆ ಹೇಳಿದಳು : ಎಲ್ಲವೂ ನಮ್ಮ ಮೇಲೆ ಅವಲಂಬಿಸಿದೆ. ನಾವು ಮನಸ್ಸಿನಿಂದ ಗಟ್ಟಿ ಇದ್ದುದಾದರೆ, ಯಾರು ಏನು ಮಾಡ್ತಾರೋ, ಅದನ್ನು ಎದುರಿಸುವ ಸಾಮರ್ಥ್ಯ ನನ್ನಲ್ಲಿದೆ' ಎಂಬ ಆತ್ಮವಿಶ್ವಾಸ ಇದ್ದರೆ ಯಾವುದೇ ಪುರುಷನೊಂದಿಗೆ ಸಮಾನ ರೀತಿಯಲ್ಲಿ ನಡೆದುಕೊಳ್ಳಬಹುದು. ಈಗಣ ಟಿ.ವಿ., ಸಿನೆಮಗಳಿಂದ ನನಗಂತೂ ಒಂದು ಪ್ರಯೋಜನವಾಗಿದೆ! ಗಂಡಸಿನ ದೌರ್ಜನ್ಯದ ಮನಸ್ಸನ್ನು ಬಲು ಬೇಗ ಅರ್ಥ ಮಾಡಿಕೊಳ್ಳಬಲ್ಲೆ."

ಅದು ನಿಜವೆನಿಸಿತು. ಹಿಂದಿನ ಒಂದು ಲೈಬ್ರರಿ ಘಟನೆ ನೆನಪಾಯಿತು. ಅವಳ ಹೆಸರೂ ನನಗೆ ಚೆನ್ನಾಗಿ ನೆನಪಿದೆ. ಮೀನಾ ಲೇಲೆ ಮುಂಬಯಿಯ ಒಂದು ಕಾಲೇಜ್ ಲೈಬ್ರರಿಯಲ್ಲಿ ಅಸಿಸ್ಟೆಂಟ್ ಆಗಿ ಇದ್ದಾಳೆ. ಸಾಮಾನ್ಯವಾಗಿ ರವಿವಾರದ ರಜಾ ದಿನದಲ್ಲಿ ಇಬ್ಬರೇ-ಒಬ್ಬ ಅಸಿಸ್ಟೆಂಟ್ ಹಾಗೂ ಒಬ್ಬ ಸಿಪಾಯಿ ಕೆಲಸದ ಮೇಲಿರುತ್ತಾರೆ. ಹಿಂದೊಮ್ಮೆ ಒಂದು ರವಿವಾರ, ವಿದ್ಯಾರ್ಥಿಯೊಬ್ಬ 'ತನಗೆ ಬೇಕಾದ ಪುಸ್ತಕ ಸಿಗುತ್ತಿಲ್ಲ' ಎಂದು ಹೇಳಿ, ಅಸಿಸ್ಟೆಂಟ್‌ಳನ್ನು ಕರೆದು ಶೆಲ್ಫುಗಳ ಮಧ್ಯೆ ಅವಳನ್ನು ಹಿಡಿಯಹೋದನಂತೆ. ಆಗ ಇತರ ಇಬ್ಬರು ಮಹಿಳಾ ಅಸಿಸ್ಟೆಂಟರು ತಾವು ಇನ್ನ ಮೇಲೆ ರವಿವಾರದ ಡ್ಯೂಟಿಗೆ ಬರುವುದಿಲ್ಲ ಎಂದು ಹೇಳಿದರಂತೆ. ಗ್ರಂಥಪಾಲನಿಗೆ ಯೋಚನೆಗಿಟ್ಟುಕೊಂಡಿತು. ಆಗ ಈ ಅಸಿಸ್ಟೆಂಟ್ ಮೀನಾ ಲೇಲೆ ಬಂದು ಹೇಳಿದಳು.

"ಸಾರ್, ನಾನು ರವಿವಾರದ ಡ್ಯೂಟಿಗೆ ಸಿದ್ಧ. ಬೇಕಿದ್ದರೆ ಪ್ರತಿ ರವಿವಾರವೂ ಬಂದೇನು."

ನನ್ನ ಮಿತ್ರ ಲೈಬ್ರರಿಯನ್‌ಗೆ ದಿಗಿಲಾಯಿತು. ಅವಳು ಮುಂದುವರಿಸಿದಳು. "ಸಾರ್, ಅಂಥವರು ಜಾತ್ಯತಃ ಪುಕ್ಕರಿರುತ್ತಾರೆ. ನನ್ನನ್ನು ಹಿಡಿಯ ಬಂದವನಿಗೆ

ಚೆನ್ನಾಗಿ ಒದೆ ಕೊಟ್ಟು, ದರ ದರ ಎಳೆದು ಹೊರಗೆ ಎಲ್ಲರೆದುರು ತಂದು ನಿಲ್ಲಿಸುವೆ."

"ನೀನೇನಾದರೂ ಕರಾಟೆ ಕಲಿತಿದ್ದೀಯಾ?"

"ಅಗತ್ಯವಿಲ್ಲ. ನಾವು ಮನಸ್ಸಿನಿಂದೇನೂ ಅಬಲೆಯರಲ್ಲ ಎಂದವರಿಗೆ ಮನವರಿಕೆಯಾದರೆ ಸಾಕು."

"ಆದರೂ ಆದರೂ.... ಆತ ಬೇರೆಲ್ಲಿಯಾದರೂ ಬಲಾತ್ಕರಿಸಿ . . ಆಂ. I mean ಹೆಚ್ಚು ಕಡಿಮೆ ಆಯಿತೆಂದು ತಿಳಿ" ಎಂದ ಗ್ರಂಥಪಾಲ.

"ಅಪಘಾತ ಆಗೋಲ್ವೆ?ಹಾಗೇ ಇದು ಎಂದು ತಿಳಿದರಾಯಿತು."

"ಅದರಿಂದ ಮದುವೆಯ chances ಗೆ.. "

"ಅಪಘಾತವಾಗಿ ಮುಖವೆಲ್ಲ ವಿಕಾರವಾದರೆ? ಹಾಗೇ ಇದು ಅಂತ ತಿಳಿಯೋದು!"

ನಿಜಕ್ಕೂ ಧೈರ್ಯಶಾಲಿನಿ ಈಕೆ.

ಇವಳನ್ನು ಮೀರಿಸುವವಳಾಗಿ ನಮ್ಮ ಮಂಜುಳ ಇದ್ದಾಳೆ. ಅವಳ ಚಿಕ್ಕವಯಸ್ಸಿನಿಂದಲೂ ನಾನು ಬಲ್ಲೆ. ಕಾರಣವೆಂದರೆ ಮೇಲೆ ಕಾಣಿಸಿದ ನನ್ನ ಗ್ರಂಥಪಾಲ ಮಿತ್ರನ ಮಗಳಾಗಿದ್ದಳು. ತುಂಬಾ ವರ್ಷಗಳಿಂದ ಆ ಕುಟುಂಬದ ಪರಿಚಯ ನನಗಿದೆ.

ಎಲ್ಲರಂತೆ ಮಂಜುಳೆಯ ತಾಯಿಯೂ ಮಗಳ ಮದುವೆಯನ್ನು ಕುರಿತು ಚಿಂತೆ ಮಾಡುತ್ತಿದ್ದಳು. ಆಗ ಕೇವಲ ೧೭ ವರ್ಷದ ಮಂಜುಳ, ಬಿ.ಎ. ದ್ವಿತೀಯ ವರ್ಷದಲ್ಲಿ ಕಲಿಯುತ್ತಿದ್ದಳು. ಆಗ ನಡೆದ ಒಂದು ಮೋಜಿನ ಪ್ರಸಂಗವಿದು. ಆ ದಿನ ನಾನೂ ಅವರ ಮನೆಗೆ ಹೋಗಿದ್ದೆ. ಮಂಜುಳೆಯ ತಾಯಿ ಹೇಳತೊಡಗಿದರು.

"ಮೊನ್ನೆ...ಇವರ ಮನೆಗೆ ಹೋಗಿದ್ದೆ. ಅವರ ಮಗನಿಗೆ ಡೊನೇಶನ್ ಇಲ್ಲದೆ ಎಂ.ಬಿ.ಬಿ.ಎಸ್.ಗೆ ಪ್ರವೇಶ ಸಿಕ್ಕಿತಂತೆ. ಹುಶಾರ್ ಹುಡುಗ!. ಕೊನೆಯ ವರ್ಷ ಅಂತೆ. ನೋಡಲಿಕ್ಕಂತೂ ಬಹಾಳ ಛಂದ ಇದ್ದಾನ. ಏನು ಆ ಮುಖದ ಮೇಲಿನ ವಿದ್ವತ್ತಾದ ಕಳೆ! ವಿನಯ ತುಂಬಿ ತುಳುಕ್ತಿದ ಮಾತಿನ್ಯಾಗ. ನನಗಂತೂ ಬಹಳ ಸೇರಿತು."

ಆಕೆ ಈ ವಿಷಯವನ್ನು ಮುಂದೆ ಎಲ್ಲಿಗೆ ಒಯ್ದು ಮುಟ್ಟಿಸುವಳೆಂದು ನಾವು ಮೂವರಿಗೂ ಗೊತ್ತು. ಮಂಜೂ ಥಟ್ಟನೆ ಹೇಳಿದಳು.

"ಆಯೀ, ಆ ಹುಡುಗ ನಿನಗ ಬಹಳ ಸೇರಿತೇನು? ಗುಡ್. ಒಂದು ಕೆಲಸ ಮಾಡು. ನೀನೇ ಅವನನ್ನ ಮದುವಿ ಆಗಿಬಿಡು ! ಅಪ್ಪನ ಕಾಳಜಿ ಬೇಡ, ನಾ ಎಲ್ಲಾ ಅವಗ ಹೇಳತೇನಿ!"

ಆ ತಾಯಿ ಅಲ್ಲಿಯೆ ಇದ್ದ ಛತ್ರಿಯನ್ನು ಎತ್ತಿಕೊಂಡು ಮಂಜುಳೆಯ ಬೆನ್ನಿಗೆ ಒಮ್ಮೆ ಬಾರಿಸದೆ ಬಿಡಲಿಲ್ಲ. ಮತ್ತೆ ಹೇಳಿದಳು, ನನ್ನನ್ನುದ್ದೇಶಿಸಿ :

"ನೋಡಿದಿರಲ್ಲ, ನೀವೇ. ಎಷ್ಟೊಂದು ಉದ್ಧಟ ಇದ್ದಾಳೆ. ಈಕೆಗೆ ಅದೆಂಥ ಗಂಡ ಸಿಗ್ತಾನೋ ಅಂತ ನನಗೆ ಖರೇನ ಕಾಳಜಿ ಆಗೇದ" ಹೇಳಿದಳು.

ಇದೇ ಮಂಜೂ ತನ್ನ ಮುಗ್ಧ, ಆದರೆ ಬುದ್ಧಿವಂತಿಕೆಯಿಂದ ಆಗಾಗ ನನಗೆ ಸ್ತ್ರೀ ಪುರುಷ ಸಂಬಂಧದ ಬಗ್ಗೆ ಪ್ರಶ್ನೆ ಕೇಳುತ್ತಿದ್ದಳು. - ತನ್ನ ಅಭಿಪ್ರಾಯವನ್ನು ಸೇರಿಸುತ್ತ :

"ಅಂಕಲ್, ನೀವು 'ಹರತಾಲಿಕಾ ವ್ರತ' ಅಂತ ಕೇಳೀರೇನು. ಹೆಣ್ಣು ತನ್ನ ದಾಂಪತ್ಯ ಸುಖಮಯವಾಗಲೆಂದು ಈ ವ್ರತವನ್ನ ಆಚರಿಸಬೇಕಂತೆ. ಇಂಥದೇ ವ್ರತ ಗಂಡಸರಿಗೆ ಯಾಕಿಲ್ಲ?"

"ಅಂಕಲ್, ಮಹಿಳಾ ವರ್ಷ ಅಂತ ಜಾಗತಿಕ ಮಟ್ಟದಲ್ಲಿ ಆಚರಿಸ್ತಾರಲ್ಲ. 'ಪುರುಷ ವರ್ಷ' ಅಂತ ಯಾಕಿಲ್ಲ?"

'ನಮಗ ಅದರ ಅಗತ್ಯ ಇಲ್ಲ' ಎಂದೆ ನಾನು.

"ಹಾಂಗಿದ್ರ ನಮಗೂ ಬೇಡ'

'ಇಲ್ಲ. ನಿಮಗ ಬೇಕು. ಯಾಕಂದ್ರ ನಮ್ಮ ಸಮಾಜದೊಳಗ ನಿಮ್ಮದು ದುಯ್ಯಮ ಸ್ಥಾನ (ದ್ವಿತೀಯ, ಆದ್ದರಿಂದ ಕೆಳಗಿನದು)."

"ಕಾಕಾ, ಇಂಥ ಸ್ಥಿತಿಗೆ , ನಾವು ಅಂದ್ರ ಸ್ತ್ರೀಯರೇ ಕಾರಣ ಅಂತ ಅನಸ್ತದ. ನಮ್ಮ ಮನೆಯದೇ ಉದಾಹರಣೆ ಕೊಡ್ತೇನಿ. ನಮ್ಮ ಆಯಿಗೆ ಓದುವ ಹುಚ್ಚು ಬಹಳ. ಮಧ್ಯಾಹ್ನ ಒಂದು ಪಬ್ಲಿಕ್ ಲೈಬ್ರರಿಗೆ ಹೋಗ್ತಾಳೆ. ಆದ್ರ ಎಂಥದೇ ಓದು ಇರಲಿ, ೫.೩೦ಕ್ಕೆ ಮನೆಯ ಕಡೆಗೆ ಹೊರಟು ಬಿಡ್ತಾಳೆ. ಯಾಕ ಗೊತ್ತೆ? ಅಪ್ಪ ೬ ಗಂಟೆಕ್ಕ ಮನೀಗೆ ಬರ್ತಾನ. ಅವನ ಚಹಾ, ತಿನಿಸು ಮುಂತಾದ್ದು ಮಾಡಿಕೊಡಬೇಕು, ಅಂತ ಧಡಪಡಸ್ತಾಳ. ಒಮ್ಮೊಮ್ಮೆ ಇಬ್ಬರಿಗೂ ಹೊರಗ ಹೋಗುವ ಬೇರೆ ಬೇರೆ ಪ್ರಸಂಗ ಬರತದ. ಆದರ ಒಬ್ಬರು ಮನೆಯಲ್ಲಿ ಇರುವುದು ಅವಶ್ಯ ಇದ್ದರ, ಆಯಿನೇ ಯಾಕೆ ಬಿಟ್ಟು ಕೊಡಬೇಕು?

ಹೀಗೆ ಯೋಚಿಸುವ ಮರಾಠಿ ಕನ್ಯೆಯರು ಎಷ್ಟೋ ಜನ ಇದ್ದಾರೆ.

ತನ್ನದೇ ಆದ ಅಸ್ತಿತ್ವವನ್ನು ಗಂಡನ ಮನೆಯಲ್ಲಿಯೆ ಇದ್ದುಕೊಂಡು ಕಾಯ್ದುಕೊಳ್ಳುವುದನ್ನು ಬೇರೊಂದು ಉದಾಹರಣೆಯಿಂದ ಸ್ಪಷ್ಟಪಡಿಸಬೇಕು.

'ಗಂಡನಿಗೆ ದೊಡ್ಡ ನೌಕರಿ ಇರಬೇಕು. ದೊಡ್ಡ ಸಂಬಳ ತರಬೇಕು. ಸಮಾಜದಲ್ಲಿ ಪ್ರತಿಷ್ಠೆ ಇರಬೇಕು. ಹಾಗೆ ಇದ್ದರೆ ತನಗೆ ಹೆಚ್ಚೆಚ್ಚು ಸುಖ ಸಾಧನಗಳಿರುತ್ತವೆ. ಸರಿಕರಲ್ಲಿ ತನ್ನ ಅಂತಸ್ತು ಏರುತ್ತದೆ" ಎಂದು ತಿಳಿಯುವ ಗೃಹಿಣಿಯರು ಎಲ್ಲ ಕಡೆಗೂ ಕಾಣಸಿಗುತ್ತಾರೆ. ಆದರೆ ಅದರಿಂದ ಅವಳು ತನ್ನ ಸ್ವಂತದ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾಳೆ.

ಸಾಮಾಜಿಕ, ಸಾಂಸ್ಕೃತಿಕ ಜವಾಬ್ದಾರಿಗಳು ಹೆಚ್ಚುತ್ತ ಹೋಗುತ್ತವೆ. ಗಂಡನಿಗೆ ಅನುವರ್ತಿಯಾದ ತನಗೆ ಬೇಡವಾದ ಹಲವಾರು ಕೆಲಸಗಳ ನಿರ್ಬಂಧದಲ್ಲಿ ಆಕೆ ಬಾಳಬೇಕಾಗುತ್ತದೆ. ಅವನ್ನೆಲ್ಲ ಮಾಡಕೂಡದು ಎಂದಲ್ಲ. ಗಂಡನೂ ಹಾಗೆ ಯೋಚಿಸುತ್ತಾನೆಯೆ? ಇಲ್ಲ, ಅವಳಿಂದ ಈ ರೀತಿಯ ಸೇವೆ ಪಡೆಯುವುದು ತನ್ನ ಹಕ್ಕು, ಎಂದೇ ತಿಳಿಯುತ್ತಾನೆ.

ಈ ಹಿನ್ನೆಲೆಯಲ್ಲಿ ಬೇರೆ ಯಾರೋ ನನಗೆ ಹೇಳಿದ್ದ ಒಂದು ಪ್ರಸಂಗವನ್ನು ದಾಖಲಿಸಬೇಕೆನಿಸುವುದು. ಮದುವೆಗೆ ಮುಂಚೆ ಇಂಜಿನಿಯರಿಂಗ್ ಡ್ರಾಯಿಂಗ್ ಕೆಲಸವನ್ನು ಖಾಸಗಿಯಾಗಿ ಮಾಡಿಕೊಡುತ್ತಿದ್ದ ಅವಳು ತನ್ನ ಹೊಸ ಮನೆಗೆ ಬರುವಾಗ ಹಲವಾರು ತನ್ನವೆನ್ನುವ ವಸ್ತುಗಳನ್ನು ತಂದಳು. ತನ್ನ ಬಜಾಜ್ ಎಂ - 80 ವಾಹನವನ್ನೂ ತಂದಿದ್ದಳು. ಪತಿರಾಯನೋ ಅದೇ ಬಜಾಜ್ ಕಂಪನಿಯಲ್ಲಿ ಅಕೌಂಟ್ಸ್ ವಿಭಾಗದಲ್ಲಿ (ಡೈರೆಕ್ಟರ್ ಹುದ್ದೆಗೆ ಸಮಾನ ಅಂತ ಕಾಣ್ತದೆ) ಹಿರಿಯ ಅಧಿಕಾರಿ. ಪೂರ್ಣಾವಧಿಯ ಕಾರಿನ ಸೇವೆ ಮುಂತಾದ ಹಲವಾರು ಸೌಲಭ್ಯಗಳು ಅವನಿಗಿದ್ದುವು.

ಇವಳ ಸ್ಕೂಟರ್ ತನ್ನ ಮನೆಗೆ ಬಂದಾಗ ಆತ ಸಿಡುಕಿದ. "ಇದರಪ್ಪರನಂತಹ ಕಾರೇ ನಿನಗೆ, ನೀ ಫೋನಿಸಿದರೆ ಸಾಕು. ಮನೆಗೆ ಬರುತ್ತದೆ. ಈ ಹಳೆಯ ಗಾಡಿಯನ್ನೇಕೆ ತಂದಿ?"

"ನೀವೂ ನಾನೂ ಕೂಡಿ ಹೋಗಬೇಕಾದ ಯಾವ ಪ್ರಸಂಗವೇ ಇರಲಿ ಕಾರಿನಲ್ಲಿ ಅವಶ್ಯ ಬರ್ತೇನೆ. ಆದರೆ ನನ್ನ ಸ್ವಂತದ ಕೆಲಸವಿರುವಾಗ ನನ್ನದನ್ನೇ ಉಪಯೋಗಿಸತಕ್ಕದ್ದು!"

ಇದು ಕೂಡ ಆಗಿಹೋದ ಒಂದು ಘಟನೆ. ಬರಿಯೆ ಎಸ್.ಎಸ್.ಸಿ. ಪಾಸಾದ ಅವಳು ಒಂದು ವಿದೇಶೀ ಔಷಧ ತಯಾರಿಕೆಯ ಉದ್ಯಮ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿದಳು. ನಿಷ್ಠೆಯಿಂದ ಕೆಲಸ ಮಾಡಿ ಮೇಲ್ದರ್ಜೆಯ ಸ್ಥಾನವನ್ನು ಹೊಂದಿದ್ದಳು. ಮನೆಯಲ್ಲಿ ಹಿತವಾದ ವಾತಾವರಣ. ಗಂಡ, ಇಬ್ಬರು ಮಕ್ಕಳು ಹಾಗೂ ವಯಸ್ಸಾದ ಅತ್ತೆ. ಮನೆಯಲ್ಲಿ ಸಾದಾ ಟಿ. ವಿ. ಇದೆ. ನಿತ್ರಾಣದ ಅತ್ತೆಗೆ ಅದನ್ನು ನೋಡುತ್ತಿರುವುದೇ ಒಂದು ಕೆಲಸ. ಗಂಡ ತನ್ನ ತಾಯಿಗಾಗಿ ಒಂದು ಕಲರ್ ಟೀವಿ ತರಬೇಕು ಎಂದು ಯೋಚಿಸಿದ. ಆದರೆ ಅದನ್ನು ಮುಂದೆ ಹಾಕಿದ್ದ. ಯಾಕೆಂದರೆ ತಿಂಗಳೊಪ್ಪೊತ್ತಿನಲ್ಲಿ ತನ್ನ ಹೆಂಡತಿಗೆ ದೊಡ್ಡ ಮೊತ್ತದ ಬೋನಸ್ ಹಣ ಬರುವುದಿತ್ತೆಂದು. ಅವನ ಈ ವಿಚಾರ ಸರಣಿಯಲ್ಲಿ ಏನೂ ತಪ್ಪು ಕಾಣಿಸದು - ನನಗೂ ನಿಮಗೂ.

ಆದರೆ ಆಕೆ ಅದನ್ನು ವಿರೋಧಿಸಿದಳು. "ನನ್ನ ಸಂಬಳವನ್ನು ನಿಮ್ಮದರ ಹಾಗೇ ಸಂಸಾರ ನಿರ್ವಹಣೆಯಲ್ಲಿ ಹಾಕುತ್ತಿದ್ದೇನೆ. ನಿಮಗೂ ಬೋನಸ್ ಬಂದಿತ್ತಲ್ಲ ೨ - ೪ ತಿಂಗಳ

ಹಿಂದೆ? ಆಗೇಕೆ ನೀವು ಕಲರ್ ಟಿ.ವಿ. ತರಲಿಲ್ಲ? ನನ್ನ ಗಳಿಕೆ ಒಂದು ಹೆಚ್ಚಿನ, ಪ್ರತ್ಯೇಕವಾದ ಗಳಿಕೆ ಎಂದು ನೀವು ಭಾವಿಸಿದ್ದೀರಿ. ಅದು ತಪ್ಪು.'ಇದು ನನ್ನ ಹಣ. ನಾನು ಬೇಕಾದ ಹಾಗೆ ಖರ್ಚು ಮಾಡುವೆ' ಎಂದೇನೂ ನಾನು ಹೇಳುತ್ತಿಲ್ಲ'

ಗಂಡಸು ಹೆಣ್ಣನ್ನು ಪ್ರತ್ಯೇಕವಾಗಿ ಕೆಳದರ್ಜೆಯಲ್ಲಿ ಇರಿಸುವುದು ಒಂದು ಬಗೆಯಾದರೆ ಹೆಂಗಸೇ ಹಾಗೆ ಸಿಡಿದು ನಿಂತು, ಇದು ತನ್ನ ಹಕ್ಕು, ತಾನು ಸ್ವತಂತ್ರ ಎಂದು ಹೇಳುವುದು ಸ್ತ್ರೀಮುಕ್ತಿ ಚಳುವಳಿಯ ಒಂದು ನಿಲುವು. ಆದರೆ ಯಾವುದೂ ಅತಿಯಾಗಬಾರದು ಅಲ್ಲವೆ?

ಈ ಹಿಂದೆ ಪ್ರಸ್ತಾಪಿಸಿದ ಛಾಯಾ ದಾತಾರರು ಸ್ತ್ರೀ ಮುಕ್ತಿ ಚಳವಳಿಯಲ್ಲಿ ಅಗ್ರ ಸ್ಥಾನದಲ್ಲಿದ್ದವರು. ಅವರ ಒಂದು ಪುಸ್ತಕದಲ್ಲಿ ಬಂದ 'ಅರ್ಪಣೆ'ಯ ಒಕ್ಕಣಿಕೆ ಹೀಗಿದೆ.

'ನನಗೆ ಸದೈವ ನೆರವಾಗುತ್ತಿರುವ ನನ್ನ ಮಿತ್ರ ಹಾಗೂ ಸಹಚರ ಅಶೋಕನಿಗೆ'

ಈ ಅಶೋಕ ಯಾರೆಂದು ನಾವು ಅರ್ಥಮಾಡಬೇಕು? ಗಂಡನೇಯೆ? ಸುಭದ್ರಾ ಕತ್ರೆ ಎಂಬವರೊಂದಿಗೆ (ಈಕೆ ಮಹಿಳಾ ಕಾಲೇಜ್ ಒಂದರಲ್ಲಿ ಉಪನ್ಯಾಸಕಿ) ಈ ಕುರಿತು ಪ್ರಸ್ತಾಪಿಸಿದೆ :

"ನೋಡಿ ಹಾವನೂರಜೀ, ಒಂದು ವ್ಯವಸ್ಥೆಗೆ ಒಳಪಟ್ಟ ಮೇಲೆ ಅದನ್ನು ಮನ್ನಿಸಬೇಕು. ಮದುವೆ ಆಗಿ 'ಗಂಡ' ಎಂಬ ವ್ಯಕ್ತಿಯೊಡನೆ ಸಹಜೀವನ ನಡೆಸುವಾಗ 'ಮಿತ್ರ', 'ಸಹಚರ' ಎಂಬಂತಹ ಸಂಬೋಧನೆ ಏಕೆ ಇರಬೇಕು? ಇದು 'ಪತಿ' ಎನ್ನುವ ಪರಿಕಲ್ಪನೆಯನ್ನು ಅಮಾನ್ಯ ಮಾಡಿದಂತೆ". ಮುಂದುವರಿದು ಆಕೆ ಹೇಳಿದ್ದು :

'ಗಂಡ -ಹೆಂಡತಿ ಈ ಸಂಬಂಧದಲ್ಲಿ ಹೆಣ್ಣು ಹಕ್ಕನ್ನು ಸ್ಥಾಪಿಸುವ ಹಟ ಹಿಡಿಯಬಾರದು. Division of labour ಎಂಬ ಬೇಡಿಕೆಯೂ ಸಲ್ಲದು.'

'ಹಾಗಿದ್ದರೆ ನಿಮ್ಮ ಅಭಿಪ್ರಾಯದಲ್ಲಿ ಸಮಾನತೆ ಯಾವುದು ?'

'ನೋಡಿ ಸರ್. ಎತ್ತಿನ ಬಂಡಿಗೆ ಎರಡು ಗಾಲಿಗಳು. ಅವು ಸಮಾಂತರವಾಗಿ ಎಳೆಯುತ್ತ ಹೋಗುತ್ತವೆ. ಒಂದು ಇನ್ನೊಂದಕ್ಕಿಂತ ಮುಂದೆ ಹೋಗಲು ಧಡಪಡಿಸುವುದಿಲ್ಲ. ಎಲ್ಲಾದರೂ ಕಲ್ಲು, ತಗ್ಗು ಇದ್ದರೆ ಒಂದು ಗಾಲಿಯು ತುಸು ಮುಗ್ಗರಿಸಬಹುದು. ಆಗ ಇನ್ನೊಂದು ಗಾಲಿಯು ಸುಧಾರಿಸಿಕೊಂಡು ಹೋಗುವುದಕ್ಕೆ ಆ ಬದಿಯ ಎತ್ತು ನೆರವಾಗುತ್ತದೆ. ಒಂದು ಹೆಚ್ಚು ಇನ್ನೊಂದು ಕಡಿಮೆ ಎನ್ನುವುದು ಅವುಗಳ ಮುಂದುವರಿಕೆಯಲ್ಲಿ ಇಲ್ಲವೆ ಇಲ್ಲ. ನೆನಪಿಡಿರಿ. ಎರಡೂ ಪ್ರತ್ಯೇಕ. ಆದರೂ ಎರಡೂ ಜೊತೆಯಾಗಿ, ಸಮಾಂತರವಾಗಿ ಸಾಗುತ್ತವೆ. 'ಸಂಸಾರ ರಥ' ಎನ್ನುವ ಪದ ಇವತ್ತು ಕ್ಲೀಷೆಯಾಗಿದ್ದರೂ ನಾನು ಅದಕ್ಕೆ ಹೀಗೆ ಅರ್ಥ ಹಚ್ಚಿಯೇನು"

- ಸಮಾಂತರವಾಗಿ ! ಸಮಾನತೆ ಎನ್ನುವ ಪದಕ್ಕೂ ಇದಕ್ಕೂ ಇರುವ ಅಂತರವನ್ನು

ಗಮನಿಸಬೇಕು. ಸ್ತ್ರೀ-ಪುರುಷ ವಿಚಾರವಾಗಿ ಎರಡರಲ್ಲೂ ಪ್ರತ್ಯೇಕತೆ ಇದೆ. ಹೆಣ್ಣಿಗೆ ಸ್ವತಂತ್ರ ಅಸ್ತಿತ್ವವಿದೆ. ಸಮಾನತೆಯಲ್ಲಿ ಹಕ್ಕಿನ ಕೇಳಿಕೆ ಇರುತ್ತದೆ. 'ಸಮಾಂತರ' ಎನ್ನುವಲ್ಲಿ ಸಾಮರಸ್ಯದ ಮರ್ಮ ಅಡಗಿದೆ ಎನಿಸಿತು. ಸುಭದ್ರಾ ಅವರ ಮಾತಿನಲ್ಲಿ 'ಮಹಿಳೆ ತನ್ನತನವನ್ನು, ಅಸ್ಮಿತೆಯನ್ನು ಉಳಿಸಿಕೊಳ್ಳಬೇಕು. ಅದನ್ನು ಸಹೃದಯತೆಯಿಂದ ಸಾಧಿಸಬೇಕು. ಬಾಳ-ಸಂಗಾತಿಯೊಡನೆ ಸಮಾಂತರವಾಗಿ ಬಾಳಬೇಕು' ಎಂಬ ವಿಚಾರಸರಣಿಯನ್ನು ಮನಗಂಡೆ. ಆದರೆ ಇದನ್ನು ಸಾಧಿಸುವುದಕ್ಕೆ ಸಾರಾಸಾರ ವಿಚಾರ - ಸಾಮರ್ಥ್ಯ ಸ್ತ್ರೀಯರಲ್ಲಿ ಅಗತ್ಯವಾಗಿ ಇರಬೇಕು; ಅಲ್ಲವೆ?

***

೧೬. ಸನ್ಯಾಸ ಮತ್ತು ಸಂಸಾರ

ಸಂಸಾರ -ಎಂದರೆ ಐಹಿಕ ಸುಖದ ಭೋಗ. ಸನ್ಯಾಸ ಎಂದರೆ ಐಹಿಕ ಸುಖದ ತ್ಯಾಗ. ಸಂಸಾರಿಗ ಸಮಾಜ ಜೀವಿ. ಸನ್ಯಾಸಿ ಸಾಮಾಜಿಕವಾಗಿ ಏಕಾಂಗಿ. ಅಥವಾ ವಿರಾಗಿ. ಹೀಗೆ ಸನ್ಯಾಸ ಮತ್ತು ಸಂಸಾರ ಇವೆರಡೂ ಪರಸ್ಪರ ವಿರೋಧ ಭಾವಗಳು.

ಸನ್ಯಾಸವು ವಿವಿಧ ಘಟ್ಟಗಳಲ್ಲಿ ಕಂಡುಬರಬಹುದು. ಒಂದು, ಹುಟ್ಟಿನಿಂದಲೇ ಪ್ರಪಂಚದ ಬಗ್ಗೆ ವಿರಕ್ತ ಭಾವನೆ ಬಂದು, ಸನ್ಯಾಸ ಹೊಂದಬಹುದು. ಇನ್ನೊಂದು ಸಂಸಾರ ಜೀವನವನ್ನು ಮನದಣಿಯುವಂತೆ ನಡೆಸಿ ಸನ್ಯಾಸದತ್ತ ವಾಲಬಹುದು. ಇವು ಸಹಜ ಸನ್ಯಾಸಗಳು. ಇತ್ತ ಬಾಲ್ಯದಲ್ಲೇ ಹಿರಿಯರ ಪ್ರಚೋದನೆಯಿಂದಾಗಿ ಸನ್ಯಾಸದ ದೀಕ್ಷೆಯನ್ನು ಹೊಂದಿ ಸ್ವಾಮಿಗಳಾಗುವುದೂ. ಸಂಸಾರಕ್ಕೆ ತರುಣ ಅಥವಾ ನಡುವಯಸ್ಸಿನಲ್ಲಿ ಬೇಸತ್ತು ಸನ್ಯಾಸಿಯಂತೆ ಬಾಳುವುದೂ ಉಂಟು. ಇದನ್ನು ಅಕಾಲ ಸನ್ಯಾಸವೆಂದು ಕರೆಯಬಹುದು.ಸಹಜವಾಗಿ ಘಟಿಸಿದ್ದಲ್ಲ.

ಒಮ್ಮೊಮ್ಮೆ ಸಂಸಾರದಲ್ಲಿದ್ದಾಗಲೇ ವಿರಕ್ತ ಭಾವ ಮೂಡಬಹುದು. ಸುರತ ಗ್ಲಾನಿಯಾದಾಗ, ಅಥವಾ ಪ್ರಸವ ವೇದನೆಯ ಕಾಲಕ್ಕೆ ಬರುವ ತ್ಯಾಜ್ಯದ ಮನೋಭಾವವನ್ನು ಗಮನಿಸಿರಿ. ಅದೇಕೆ,'ಸಾಕಪ್ಪಾ, ಈ ಸಂಸಾರದ ಕಷ್ಟ' ಎಂದು ಎಷ್ಟೋ ಬಾರಿ ಅಂದುಕೊಳ್ಳುತ್ತೇವೆ. ಆದರೆ ಅದೆಲ್ಲಾ ಕ್ಷಣಿಕ. ಸೂಜಿಗಲ್ಲಿನಂತೆ ಸಂಸಾರ ವ್ಯಾಮೋಹ ಮತ್ತೆ ನಮ್ಮನ್ನು ಸೆಳೆದುಕೊಳ್ಳುತ್ತದೆ.

ಆದರೆ ಸನ್ಯಾಸದಲ್ಲಿದ್ದಾಗ ಸಂಸಾರದ ವ್ಯಾಮೋಹ ಸೆಳೆದದ್ದಾದರೆ? ಅಂಥ ಸನ್ಯಾಸಿಯು ತನ್ನ ವ್ಯಾಮೋಹವನ್ನು ಮನಸ್ಸಿನಲ್ಲೇ ಇಟ್ಟುಕೊಂಡು ಕೊರಗಬಹುದು. ಇಲ್ಲವೆ ಕದ್ದು ಮುಚ್ಚಿ ಆ ಭೋಗದಲ್ಲಿ ತೊಡಗಬಹುದು. ಕೊನೆಗೊಮ್ಮೆ ಸನ್ಯಾಸವನ್ನು ಆತ ಬಹಿರಂಗವಾಗಿ ತ್ಯಜಿಸಿ ಸಂಸಾರಿಯಾಗಲೂಬಹುದು.

ಇಂಥ ವ್ಯಾಮೋಹವನ್ನು ನಿಗ್ರಹಿಸಲು ಸಾಧ್ಯವಿಲ್ಲ, ಎಂದಲ್ಲ. ಆದರೆ ಯಾವುದೊಂದು ಉದ್ದೀಪನದಿಂದ ಥಕ್ಕನೆ ಆ ನಿಗ್ರಹ ಸಡಲಿ ಹೋಗಬಹುದು. ಅಖಂಡ

ತಪಶ್ಚರ್ಯ ಮಾಡಿದ ಮುನಿಗಳು ಒಬ್ಬ ರಂಭೆಯನ್ನೋ ಮೇನಕೆಯನ್ನೋ ಕಂಡಾಗ ಹೇಗೆ ವರ್ತಿಸಿದ್ದರೆಂಬುದಕ್ಕೆ ಪುರಾಣಗಳಲ್ಲಿ ಬೇಕಾದಷ್ಟು ನಿದರ್ಶನಗಳು ಸಿಕ್ಕುತ್ತವೆ. ಈ ಶತಮಾನದಲ್ಲಿಯೆ, ಬಾಲ ಸನ್ಯಾಸವನ್ನು ತ್ಯಜಿಸಿದ ಹಲವು ಉಡುಪಿ ಮಠಗಳ ಸ್ವಾಮಿಗಳ ನಿದರ್ಶನಗಳೂ ಇವೆಯಲ್ಲ? ಇದೆಲ್ಲದರ ತಳಹದಿ ಎಂದರೆ ಅಕಾಲ ಸನ್ಯಾಸ.

ನಮ್ಮ ಜೀವನ ಕ್ರಮದಲ್ಲಿ ಸನ್ಯಾಸ -ಎನ್ನುವುದು ಬೇಕು. ಆದರೆ ಯಾವಾಗ? ಈ ಕುರಿತು ಮನು ಮಹರ್ಷಿ 'ಸಂಸಾರ ಜೀವನವನ್ನು, ಎಂದರೆ ಗೃಹಸ್ಥಾಶ್ರಮವನ್ನು ಪೂರ್ಣತಃ ಅನುಭವಿಸಿದ ಮೇಲೆಯೇ ಸನ್ಯಾಸದತ್ತ ತಿರುಗಬೇಕು' ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಇಷ್ಟೇ ಅಲ್ಲ ಮಕ್ಕಳನ್ನು ಪಡೆಯದೇ ಸನ್ಯಾಸವನ್ನು ಅಪೇಕ್ಷಿಸುವವರು ನರಕಭಾಜನರಾಗುತ್ತಾರೆ, ಎಂದಿದ್ದಾನೆ. (...ಅನುತ್ಪಾದ್ಯ ತಥಾಸುತಾನ್... ಮೋಕ್ಷಮಿಚ್ಛನ್ ವ್ರಜತಿ -ಅಧಃ) ಇದರ ಹಿಂದಿನ ಮೂಲೋದ್ದೇಶವನ್ನು ತಿಳಿದಿರಬೇಕು. ಅದುವೆ ಸೃಷ್ಟಿಕ್ರಮದ ಮುಂದುವರಿಕೆ. ಅದಕ್ಕೆ ಪ್ರಜೋತ್ಪತ್ತಿ ಅವಶ್ಯ ತಾನೇ.

ಈ ವರ್ಣಾಶ್ರಮಗಳನ್ನು ರೂಪಿಸಿದ ನಮ್ಮ ಪ್ರಾಚೀನರು ವ್ಯವಹಾರ - ಜಾಣ್ಮೆಯುಳ್ಳವರು. ಗೃಹಸ್ಥಾಶ್ರಮ ಮುಗಿದ ತಕ್ಷಣ ಸನ್ಯಾಸಕ್ಕೆ ಸಹಜವಾದ ರೀತಿಯಲ್ಲಿ ಯಾರೂ ತಿರುಗಲಾರರಷ್ಟೆ. ಇದನ್ನು ಗಮನಿಸಿ ಅವುಗಳ ಮಧ್ಯೆ ವಾನಪ್ರಸ್ಥವೆಂಬ ಆಶ್ರಮವನ್ನು ಸೇರಿಸಿದರು. ವಾನಪ್ರಸ್ಥ -ಎಂದರೆ ಅರಣ್ಯವಾಸಿಗಳಾಗುವುದು.

"ಗೃಹಸ್ಥನು ತನ್ನ ಮೈಚರ್ಮ ಸುಕ್ಕುಗಟ್ಟಿದ ಮೇಲೆ, ಮಕ್ಕಳಿಂದ ಮಕ್ಕಳನ್ನೂ, ಅಂದರೆ ಮೊಮ್ಮಕ್ಕಳನ್ನು ಪಡೆದ ಮೇಲೆ, (ಅಪತ್ಯಸ್ಯೈವ ಚ ಅಪತ್ಯಂ ತತ್) ಅರಣ್ಯವನ್ನು ಆಶ್ರಯಿಸಬೇಕು."

ಈ ಶತಮಾನದಲ್ಲಿಯ ಮಧ್ಯಮ ವರ್ಗದ ನಾವಾದರೂ ಹಾಗೇ ಮಾಡುತ್ತೇವಲ್ಲ! ನೌಕರಿಯಿಂದ ನಿವೃತ್ತರಾಗುವ ಕಾಲಕ್ಕೆ ಚರ್ಮ ಸಡಿಲಾಗಿರುತ್ತದೆ. ಮಕ್ಕಳ ಮದುವೆಯಾಗಿ ಮೊಮ್ಮಕ್ಕಳೂ ಹುಟ್ಟಿರುತ್ತವೆ. ಆಗ ನಮಗೆ ಸಂಸಾರದ ಜವಾಬ್ದಾರಿ ಇರುವುದಿಲ್ಲ. ಆದಾಗ್ಯೂ ಉಪವೃತ್ತಿಯಲ್ಲಿ ತೊಡಗಿರುತ್ತೇವೆ. 'ಅದು, ಇದು ಕೆಲಸ' ಎನ್ನುತ್ತ ಓಡಾಡಿಕೊಂಡು ಇರುತ್ತೇವೆ. ಟಿ.ವಿ. ನೋಡುವ ಆಸಕ್ತಿ ಉಳಿಸಿಕೊಂಡಿರುತ್ತೇವೆ. ಒಂದಿಲ್ಲೊಂದು ಬೇರೆ ಆಸಕ್ತಿ ಉಳಿಸಿಕೊಂಡಿರುತ್ತೇವೆ. ಸಾಂಸಾರಿಕ ಚಟುವಟಿಕೆಯಲ್ಲಿ ಇದ್ದೇ ಇರುತ್ತೇವೆ.

ಈ ಘಟ್ಟ ಮುಗಿದ ಮೇಲೆ, ಗುಣವಾಗದ ಮುದಿ-ವಯಸ್ಸಿನ ರೋಗವೊಂದು ತಗುಲಿದಾಗ ಇಲ್ಲವೆ, 'ನಾನಿನ್ನು ಬಹಳ ದಿನ ಬದುಕುವುದಿಲ್ಲ' ಎಂಬ ಭಾವನೆ ಮೂಡಿತೆಂದರೆ, ಯಾವುದೇ ಐಹಿಕ ಭೋಗವು ಬೇಡ; ಇಲ್ಲಿಗೆ ಸಾಕು ಎನಿಸುತ್ತದೆ. ಇದೂ ಒಂದು ರೀತಿಯಲ್ಲಿ ಸನ್ಯಾಸವೇ.

ಇಂಥ ಸಹಜ ಕ್ರಮವನ್ನು ಬಿಟ್ಟು ಅಕಾಲದಲ್ಲಿ ಸನ್ಯಾಸ ತೆಗೆದುಕೊಂಡರೆ, ಅದು ಸಮಾಜದ ಅವನತಿಗೆ ಕಾರಣವಾಗುತ್ತದೆ. ಈ ಹೇಳಿಕೆ ನನ್ನದಲ್ಲ. ಖ್ಯಾತ ವಿದ್ವಾಂಸರೆನಿಸಿದ್ದ ಪಂಡಿತ ಮ. ಪ್ರ. ಪೂಜಾರರು ೧೯೧೪ಳರಷ್ಟು ಹಿಂದೆ ತಮ್ಮೊಂದು ಲೇಖದಲ್ಲಿ ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ.

ಸನ್ಯಾಸ - ಇದು ವ್ಯಕ್ತಿಗತವಿದ್ದು, ಅದರಿಂದ ಸಮಾಜಕ್ಕೆ ಆಗುವ ಹಾನಿಯಾದರೂ ಏನು ಎಂದು ನಮಗೆ ಅನಿಸಬಹುದು. ಎಲ್ಲೋ ಕೆಲವರು ಆ ರೀತಿ ಬಾಳಿದರೆ ಹಾನಿ ಇಲ್ಲ, ನಿಜ. ಆದರೆ ಸಾವಿರಗಟ್ಟಲೆ ಸನ್ಯಾಸಿಗಳಿದ್ದರೆ? ಸಮಾಜದ ಅಡಿಗಲ್ಲನ್ನೆ ಅಂಥ ಸ್ಥಿತಿ - ಅಲ್ಲಾಡಿಸಬಹುದು. ಸಂಸಾರಕ್ಕಿಂತ ಸನ್ಯಾಸವೇ ಶ್ರೇಷ್ಠ ಎಂದು ಬೌದ್ಧ ಧರ್ಮ ಸಾರಿದ್ದೇ ತಡ, ಅನೇಕರು ನಾ ನೀ ಎಂದು ಮುಗಿಬಿದ್ದು ಸನ್ಯಾಸವನ್ನು ಸ್ವೀಕರಿಸತೊಡಗಿದರು. ಅಶೋಕ ಸಮ್ರಾಟನ ಕಾಲದಲ್ಲಿ ೬೦ ಸಾವಿರ ಬೌದ್ಧ ಭಿಕ್ಷುಗಳಿದ್ದರೆಂದು ಇತಿಹಾಸದ ದಾಖಲೆಯೇ ಇದೆ. ಅವರಲ್ಲಿ ಭಿಕ್ಷುಣಿಯರೂ ಇದ್ದರು! ಸಾಲದ್ದಕ್ಕೆ ಇವರೆಲ್ಲ ಭಾರತದ ಎಲ್ಲೆಡೆ (ನೆರೆಯ ಸಿಂಹಳ, ಚೀನ ಮುಂತಾದ ದೇಶಗಳಲ್ಲಿಯೂ) ಧರ್ಮಪ್ರಸಾರ ಕೈಕೊಂಡರು; ಜೊತೆಗೆ ಸನ್ಯಾಸವನ್ನೂ. ಮುಂದಿನ ಕೆಲವು ಶತಮಾನಗಳಲ್ಲಿಯೂ ಇಂಥ ಭಿಕ್ಷು-ಭಿಕ್ಷುಣಿಯರ ಬಾಹುಳ್ಯ ಕಂಡುಬರುತ್ತದೆ.

ತಿಳಿಯಬೇಕಾದ ಮಾತೆಂದರೆ, ಸನ್ಯಾಸ ಸ್ವೀಕರಿಸಬೇಕೆನ್ನುವವರು ಮೂಲತಃ ಬುದ್ಧಿವಂತರೂ ಪ್ರತಿಭಾಶಾಲಿಗಳಿರುತ್ತಾರೆ. ಎಂತಲೇ ಸನ್ಯಾಸಿಗಳಾಗುವ ಮನೋದಾರ್ಢ್ಯವನ್ನು ಹೊಂದಿರುತ್ತಾರೆ. ಇಂಥವರು ಸನ್ಯಾಸಿಗಳಾದರೆಂದರೆ ಅವರ ವಂಶವೃದ್ಧಿ ನಿಂತು ಬಿಟ್ಟು ಅವರಿಂದ ಹುಟ್ಟಿ ಬರಬಹುದಾದ ಧೀಮಂತ ಸಂತಾನ ತಪ್ಪಿ ಹೋಗುತ್ತದೆ. ಇದಕ್ಕೆ ಪ್ರತಿಯಾಗಿ, ಗೃಹಸ್ಥಾಶ್ರಮಿಗಳಾದ ಸಾಮಾನ್ಯ ಜನರ ಸಂಖ್ಯೆ ಬೆಳೆಯುತ್ತ ಹೋಗುವುದು!

ಜನಸಂಖ್ಯೆಯ ಸ್ಫೋಟ ವಿಚಾರದಲ್ಲಿ ಮಾಲ್ಥೂಸನ ಸಿದ್ಧಾಂತ ನಮಗೆ ಗೊತ್ತು. ೨X೨=೪X೪=೧೬X೧೬ - ಇತ್ಯಾದಿ. ಒಂದು ಕಾಲಕ್ಕೆ ೧೦ ಜನ ಧೀಮಂತರಿದ್ದರೆಂದು ತಿಳಿಯುವಾ. ಅವರಿಗೆ ಮಕ್ಕಳು ಹುಟ್ಟುತ್ತ ಇದ್ದು, ೩೦೦ ವರ್ಷಗಳಾದ ಮೇಲೆ, ಸಂಭವನೀಯ ಧೀಮಂತ-ಪ್ರತಿಭಾವಂತರ ಸಂಖ್ಯೆ ೪೧ ಸಾವಿರ ಮಿಕ್ಕುತ್ತಿತ್ತು. (ಎಲ್ಲರೂ ಪ್ರತಿಭಾನ್ವಿತರಾಗುವುದಿಲ್ಲ ಎನ್ನುವುದನ್ನು ಒಪ್ಪೋಣ, ಆದರೂ ...) ಬದಲಾಗಿ ಆ ೧೦ ಜನ ಸನ್ಯಾಸಿಗಳಾಗಿದ್ದರೆ ಸಮಾಜವು ಎಷ್ಟೊಂದು ಹಾನಿಗೀಡಾಗುವುದೆಂಬುದನ್ನು ಊಹಿಸಿಕೊಳ್ಳಿರಿ - ಎನ್ನುತ್ತಾರೆ ಪೂಜಾರರು. ಜೊತೆಗೆ ಮಹಾಮೇಧಾವಿ ವಿದ್ಯಾರಣ್ಯರ ಸನ್ಯಾಸವನ್ನು ಬೇಸರದಿಂದ ಉಲ್ಲೇಖಿಸಿದ್ದಾರೆ.

ಪ್ರಕೃತದ ಉದಾಹರಣೆಯನ್ನು- ಶ್ರೀಯುತ ವಿದ್ಯಾಭೂಷಣರದ್ದು

ತೆಗೆದುಕೊಳ್ಳುವಾ. ಎಷ್ಟೋ ಜನ ಸಂಗೀತಗಾರರ ಮಕ್ಕಳು 'ಬಾಪಕಾ ಬೇಟಾ ಸವಾಯಿ' ಎನ್ನುವಂತೆ ಹೆಸರು ಮಾಡಿರುವರಷ್ಟೆ. ಭಕ್ತಿ ಸಂಗೀತ ವಿಚಾರದಲ್ಲಿ, ಪೂರ್ವಾಶ್ರಮ ಸ್ವಾಮಿಗಳಾಗಿದ್ದ ವಿದ್ಯಾಭೂಷಣರ ಖ್ಯಾತಿ - ಅಸದೃಶವಾದದ್ದು. ಅವರು ಸ್ವಾಮಿಯಾಗೇ ಮುಂದುವರಿದಿದ್ದರೆ? ಆ ಸಂಗೀತದ ಉಜ್ವಲ ಪರಂಪರೆ ನಿಂತು ಹೋಗುತ್ತಿತ್ತು. ಈಗ ಅವರು, ಅಕಾಲದಲ್ಲಿ ಹೊಂದಿದ್ದ ಸನ್ಯಾಸವನ್ನು ತೊರೆದು ಸಹಜ ರೂಪದ ಸಂಸಾರಿಗಳಾಗಿದ್ದಾರೆ. ತನ್ನನ್ನು ಮೀರಿಸಬಲ್ಲ ಸಂಗೀತಗಾರನನ್ನೋ, ಸಂಗೀತಗಾರ್ತಿಯನ್ನೋ ಸಮಾಜಕ್ಕೆ ನೀಡುವ, ಆ ಮಟ್ಟಿಗೆ, ಸಮಾಜದ ಋಣ ತೀರಿಸುವ ಅವಕಾಶ ಅವರಿಗೆ ದೊರೆತಿದೆ - ಎನ್ನೋಣವೆ?

***

೧೮. ದೊಡ್ಡ ದೊಡ್ಡೋರ ಜಗಳ

ಕ್ರಿ.ಶ. ೧೯೭೦ನೆಯ ವರುಷದ ಒಂದು ದಿನ. ಹಿರಿಯ ಸಂಶೋಧಕ ಶಂ.ಬಾ. ಜೋಶಿಯವರ 'ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ' ಈ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ದೊರಕಿದ್ದಾಗ, ಅದರ ಪ್ರಕಾಶಕರು ಅವರ ಸನ್ಮಾನ ಸಮಾರಂಭವನ್ನು ಏರ್ಪಡಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಆಗಿನ ಕುಲಪತಿಗಳಾದ ಡಿ.ಸಿ. ಪಾವಟೆಯವರು ಅಧ್ಯಕ್ಷರು. ಸನ್ಮಾನಪರ ಭಾಷಣಗಳು ಮುಗಿದ ಮೇಲೆ ಶಂ. ಬಾ. ಎದ್ದು ನಿಂತರು. ಪ್ರಾಸಂಗಿಕವಾಗಿ ಹಳೆಯ ನೆನಪುಗಳನ್ನು ಕೆದಕಿದರು. ಧಾರವಾಡದ ೧೯೨೦ ನೆಯ ದಶಕದ ಗೆಳೆಯರ ಗುಂಪಿನವರು 'ಜಯ ಕರ್ನಾಟಕ' ಪತ್ರಿಕೆಯನ್ನು ನಡೆಸಬೇಕೆಂದು ನಿರ್ಧರಿಸಿದ್ದು; ಆ ಪ್ರಸಂಗದಲ್ಲಿ ತಮ್ಮ ಹಾಗೂ ಬೇಂದ್ರೆಯವರ ನಡುವಿನ ವಿರಸವಾದದ್ದು; ಅದರಿಂದ ತಮಗಾದ ಅನ್ಯಾಯವನ್ನು ಶಂ.ಬಾ. ಪ್ರಸ್ತಾಪಿಸತೊಡಗಿದರು. ಆವಾಗ ಬೇಂದ್ರೆಯವರ ಹೆಸರನ್ನು ಎತ್ತಿರಲಿಲ್ಲ. ಆದರೆ ಅವರ ಭಾಷಣದಲ್ಲಿ ಕೊಂಕು ಮಾತುಗಳು ಸಾಕಷ್ಟಿದ್ದವು.

ಆ ದಿನದ ಸಭೆಗೆ ಬೇಂದ್ರೆಯವರು ಸದ್ದಿಲ್ಲದೆ ಬಂದು ಒಂದೆಡೆ ಕುಳಿತಿದ್ದರು. ಶಂ. ಬಾ. ಭಾಷಣ ನಡೆದಾಗ ವೇದಿಕೆಯತ್ತ ಧಾವಿಸಿ ಬಂದರು.

"ಹಂಗ್ಯಾಕ ದುಂಡು ಸುತ್ತಿ ಮಾತಾಡ್ತೀರಿ? ನೀವು ಟೀಕಿಸುತ್ತಿದ್ದ ವ್ಯಕ್ತಿ ನಾನು ತಾನೇ. ಅಧ್ಯಕ್ಷರೇ, ನನಗೆ ಉತ್ತರ ಕೊಡಲಿಕ್ಕೆ ಅವಕಾಶ ಕೊಡಿರಿ."

ಸಭೆ ನೆರೆದದ್ದು ಸನ್ಮಾನ-ಸಂತೋಷ ಕಾರ್ಯಕ್ರಮಕ್ಕಾಗಿ . ಯಾವುದೇ ವಾದ - ವಿವಾದಕ್ಕಾಗಿ ಅಲ್ಲ. ಆದ್ದರಿಂದ ಪಾವಟೆಯವರು "ದಯಮಾಡಿ ಈ ವಿಷಯದ ಚರ್ಚೆ ಇಲ್ಲಿ ಬೇಡ " ಎಂದು ವಿನಂತಿಸಿದರು.

"ಇಲ್ಲ! ನಾನು ಇದಕ್ಕೆ ಉತ್ತರ ಕೊಡಲೇ ಬೇಕು" ಎಂದು ಗರ್ಜಿಸುತ್ತ ಬೇಂದ್ರೆ ವೇದಿಕೆಯನ್ನು ಏರತೊಡಗಿದರು. ಆಗಿನ ಅವರ ರೌದ್ರ ರಭಸವನ್ನು ತಡೆಯುವುದೇ ಸಾಧ್ಯವಿರಲಿಲ್ಲ. ಆ ವೇಳೆಗೆ ಓರ್ವ ದಢೂತಿ ವ್ಯಕ್ತಿ -ಡಾ. ಕಾಂತರಾವ ಕಮಲಾಪೂರ - ಬೇಂದ್ರೆಯವರ ರಟ್ಟೆಯನ್ನು ಹಿಡಿದು ಎಳೆಯುತ್ತ -

" ಇಲ್ಲ, ಇಲ್ಲ, ಮಾಸ್ತರs, ನೀವು ಇವತ್ತು ಈ ಕೆಲಸಾ ಖಂಡಿತಾ ಮಾಡಕೂಡದು!"

ಎಂದು ಜುಲುಮೆಯಿಂದ ಕರತಂದು ತಮ್ಮ ಹತ್ತಿರ ಕೂರಿಸಿಕೊಂಡರು. ಅವತ್ತು ಡಾ. ಕಮಲಾಪುರರು ಹಾಗೆ ಮಾಡದೇ ಹೋಗಿದ್ದರೆ, 'ವಾಕ್ ಪ್ರಹಾರದ ರಕ್ತಪಾತವೇ 'ಆಗುತ್ತಿತ್ತು. ಆದರೆ ಧಾರವಾಡದ ಜನಕ್ಕೆ ಶಂಬಾ-ಬೇಂದ್ರೆ ಜಗಳ ತಿಳಿದು ಬಂದು ಜಿಗುಪ್ಸೆ ಹುಟ್ಟಿಸಿತ್ತು.

ಕ್ರಿ.ಶ. ೧೯೯೮ರ, ಎಂದರೆ ಈಚಿನ ಒಂದು ದಿನ. ಆ ದಿನದ ವರ್ತಮಾನ-ಪತ್ರಿಕೆಯನ್ನು ಓದುತ್ತ ಕಟಾಂಜನದಲ್ಲಿ ನಿಂತಿದ್ದೆ. ಅದೇ ಕ್ರಮ ನಮ್ಮ ನೆರೆಮನೆಯ ಬಾಲಸುಬ್ರಹ್ಮಣ್ಯಂ ಅವರದು. ಒಮ್ಮೆಲೇ ಗಟ್ಟಿ ದನಿಯಲ್ಲಿ ಹೇಳಿದರು : "ಇದೇ ಏನ್ರೀ, ನೀವು ಸಾಹಿತಿಗಳು ಮಾಡೋ ಕೆಲಸ? ಇಷ್ಟೊಂದು ವೈಯಕ್ತಿಕ ದ್ವೇಷ ಇರೋದೇ? ಸಾಹಿತಿಗಳು ಅಂದ್ರೆ ನಮಗೊಂದು ಗೌರವ ಭಾವನೆ, ಅದೆಲ್ಲಾ ಹೊರಟು ಹೋಗುವ ಹಾಗೆ ನಿಮ್ಮ ವರ್ತನೆ. ಬರೆಯೋದು ದೊಡ್ಡ ದೊಡ್ಡ ಮಾತು. ನಡಕೊಳ್ಳೋದು? ಕ್ಷುದ್ರತನದ ಪರಮಾವಧಿ. ನಿಮಗಿಂತ ನಾವು ಸಾಮಾನ್ಯ ಜನರೇ ವಾಸಿ."

ಸಂದರ್ಭ: ಲಂಕೇಶರ ಒಂದು ಪುಸ್ತಕದ ಬಿಡುಗಡೆಯ ಕಾಲಕ್ಕೆ ಅನಂತಮೂರ್ತಿಯವರು ಹೈಕೋರ್ಟಿನ ಸ್ಟೇ ಆರ್ಡರ್ ತಂದ ಸುದ್ದಿ ಆ ದಿನದ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆ ಸುದ್ದಿಯನ್ನೆತ್ತಿಕೊಂಡು ಸಾಹಿತಿಗಳ ವರ್ಗವನ್ನೇ ಹೀಗಳೆಯುವ ರೀತಿಯಲ್ಲಿ ಅವರು ಮುಂದುವರಿದು ಹೇಳಿದರು:

"ನಮ್ಮ ವೃತ್ತಿಯಲ್ಲಿಯೂ (ಅವರು ಬ್ಯಾಂಕ್ ಮೆನೇಜರರು) ವೈಮನಸ್ಸು, ಹೊಟ್ಟೆಕಿಚ್ಚು ಇದ್ದೇ ಇದೆ. ಆದರೆ ಸಾರ್ವಜನಿಕವಾಗಿ ನಿಮ್ಮ ಹಾಗೆ ಬಹಿರಂಗಗೊಳ್ಳುವುದಿಲ್ಲ. ನಿಮಗೋ ಪತ್ರಿಕೆಗಳಲ್ಲಿ ಪ್ರಕಟಿಸುವುದಕ್ಕೆ, ಭಾಷಣಗಳಲ್ಲಿ ಪ್ರಸ್ತಾಪಿಸುವುದಕ್ಕೆ , ಧಾರಾಳವಾದ ಅವಕಾಶಗಳಿರುತ್ತವೆ. ಭಂಡ ಜಗಳದ ಬಾಬತ್ತಿನಲ್ಲಿ ನೀವೂ ರಾಜಕಾರಣಿಗಳೂ ಒಂದೇ!" ಎಂದೆಲ್ಲ ನುಡಿದರು.

ಜಗಳ ಇಲ್ಲದ ಯಾವ ಮನುಷ್ಯ ಸಂಬಂಧವಿದೆ, ಹೇಳಿರಿ, ಗಂಡ - ಹೆಂಡತಿ ; ಅಣ್ಣ-ತಮ್ಮ; ತಂದೆ-ಮಗ; ಅತ್ತೆ-ಸೊಸೆ; ಮಿತ್ರ-ಮಿತ್ರರು; ಒಡೆಯ- ಸೇವಕ; ವೃತ್ತಿಬಾಂಧವರು; ಕಲಾವಿದರು - ಹೀಗೆ ಯಾವುದೇ ಕ್ಷೇತ್ರದಲ್ಲಿ ಜಗಳ ಇದ್ದೇ ಇರ್ತದೆ. ಕೆಲ ಕಾಲ ಗತಿಸಿದ ಮೇಲೆಯೋ, ತಪ್ಪು ತಿಳಿವಳಿಕೆ ದೂರವಾದ ಮೇಲೆಯೋ ; ಬೇರೊಂದು ಕಾರ್ಯನಿಮಿತ್ತದಿಂದಲೋ ಅವರಲ್ಲಿ ಮರಳಿ ಹೊಂದಿಕೆಯಾಗಬಲ್ಲದು. ಇಲ್ಲವೆ 'ಹಾಳಾಗಲಿ'ಎಂದು ಅಲ್ಲಿಗೆ ಬಿಟ್ಟು ದೂರ ಉಳಿಯಬಹುದು.

ನಾವಿರುವ ರಸ್ತೆಯಲ್ಲಿ ಎರಡು ಫಾರ್ಮಸಿಗಳಿವೆ. 'ಗಿರಾಕಿಗಳು ಆ ಇನ್ನೊಂದು ಅಂಗಡಿಗೆ ಹೋಗಬಾರದು ; ತಮ್ಮಲ್ಲಿಗೇ ಬರಬೇಕು' - ಎಂದು ಸಾಕಷ್ಟು ಕುಟಿಲತನದ

ವ್ಯವಹಾರಗಳು ನಡೀತಿವೆ. ಸ್ಪರ್ಧೆ ಹಾಗೂ ಈರ್ಷೆ ಕೆಲಸ ಮಾಡುತ್ತಿವೆ - ಕಳೆದ ಇಪ್ಪತ್ತು ವರ್ಷಗಳಿಂದ . ಆದರೆ ಬಹಿರಂಗವಾಗಿ ಜಗಳವಿಲ್ಲ. ಗಿರಾಕಿಗಳಿಗೆ ಅದರಿಂದ ಹಾನಿಯೂ ಇಲ್ಲ. ಕಲಾವಿದರಲ್ಲಿಯೂ ವಿಶೇಷತಃ ಸಂಗೀತಗಾರರಲ್ಲಿ ಈರ್ಷಾ ಮನೋಭಾವ, ತಮಗೆ ಸಿಕ್ಕಬೇಕಾದ ಪ್ರೋಗ್ರಾಮ್ ಆ ಇನ್ನೊಬ್ಬರಿಗೆ ಹೋಯಿತು ಎಂಬ ಸಂತಾಪ ಆಗೀಗ ಇರ್ತದೆ. ಆದರೆ ಬಹಿರಂಗವಾಗಿ ಅದು ಹೊರಗಿನವರಿಗೆ ಗೊತ್ತೂ ಆಗುವುದಿಲ್ಲ.

ರಾಜಕಾರಣಿಗಳಂತೂ ಪರಸ್ಪರ ದೋಷಾರೋಪಣೆಯನ್ನು ತಮ್ಮ ಭಾಷಣಗಳಲ್ಲಿ ಅಖಂಡವಾಗಿ ಮಾಡ್ತಾರೆ. ಅದರ ಪೊಳ್ಳುತನದ ಅರಿವು ಇದ್ದರೂ ಪತ್ರಿಕೆಗಳವರು ಖುಶಿಯಿಂದ ಪ್ರಕಟ ಮಾಡ್ತಾನೇ ಇರ್ತಾರೆ. ಆದರೆ ಅವರು ಪ್ರಸಂಗ ಬಂದರೆ, ಅಧಿಕಾರ ಲಾಲಸೆಯಿಂದಲೋ, ಬೇರೆ ಸ್ವಾರ್ಥ ಸಾಧನೆಗಾಗಿಯೋ ಎಂಥ ಬದ್ಧ ವೈರಿಗಳೂ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ.

ಆದರೆ ಲೇಖಕರು? ಅವರುಗಳು ಮಾಡುವ ಆರೋಪ - ಪ್ರತ್ಯಾರೋಪಗಳೂ ಧಾರಾಳವಾಗಿ ಪ್ರಕಟವಾಗುತ್ತವೆ. ಅವರ ಜಗಳವು ಬಹಿರಂಗದ ಪರಮಾವಧಿಯನ್ನು ತಲುಪುತ್ತದೆ. ಕಾರಣವೆಂದರೆ ಆ ಬರವಣಿಗೆ ಇಲ್ಲವೆ ಭಾಷಣದ ಅಭಿವ್ಯಕ್ತಿಯಲ್ಲಿ ಕಂಡುಬರುವ ಚಾಣಾಕ್ಷತನ ಹಾಗೂ ಮಾರ್ಮಿಕತೆ. ರಾಜಕಾರಣಿಗಳೂ ಹಾಗೆ ಮಾಡ್ತಾರೆ. ಆದರೆ ಅವರು ಭಂಡರು ಎಂಬುದು ನಮಗೆ ಮನವರಿಕೆಯಾದದ್ದೇ. ಅದೇ ಸಾಹಿತಿಗಳ ಬಗ್ಗೆ ಸಾಮಾನ್ಯ ಜನಕ್ಕೆ ಗೌರವ ಭಾವನೆ ಇರ್ತದೆ. ಅವರು ಕವಿಗಳಾಗಿರಲಿ, ಕಾದಂಬರಿಕಾರರಿರಲಿ, ಅಥವಾ ವಿದ್ವಾಂಸ ಬರಹಗಾರರಾಗಿರಲಿ - ಅವರು ಪ್ರತಿಪಾದಿಸುವ ಅಂಶಗಳು ಉದಾತ್ತ ಹಾಗೂ ಉನ್ನತವಾಗಿರುವುದೇ ಅದರ ಕಾರಣ. ಆದರೆ ತಮ್ಮ ಅಸಮಾಧಾನ, ಮತ್ಸರ, ದ್ವೇಷಗಳನ್ನು ಆ ರೀತಿ ವ್ಯಕ್ತಪಡಿಸಿದಾಗ ಸರಳ ಸಾಮಾನ್ಯ ಜನರಲ್ಲಿ ಸಾಹಿತಿಗಳ ಬಗ್ಗೆ ಅಸಡ್ಡೆಯ ಭಾವನೆ ಮೂಡುತ್ತದೆ. ಗಮನಿಸಬೇಕಾದ ಇನ್ನೊಂದು ಮಾತೆಂದರೆ ಸಾಹಿತಿಗಳೊಳಗಿನ ಈ ವೈರತ್ವ ಕೊನೆಯ ವರೆಗೂ ಉಳಿದು ಬಿಡುತ್ತದೆ. ಹೊಂದಾಣಿಕೆಯೆಂಬುದೇ ಇಲ್ಲ.

ಸಾಹಿತ್ಯಿಕರಲ್ಲಿ ಎಷ್ಟೋ ಜಗಳಗಳು ತಾತ್ಪೂರ್ತಿಕವಾಗಿ ಇರುವುದೂ ಉಂಟು. ಮತ್ತೆ ಕೆಲವು ತುಸುವೆ ಮೇಲ್ಗಡೆ ಕಾಣಿಸಿಕೊಂಡು ಒಳಗೊಳಗೆ ಕುದಿಯುತ್ತಿರುತ್ತವೆ- ದೀರ್ಘಕಾಲದ ವರೆಗೆ. ಇನ್ನು ಕೆಲವು ಬಹಿರಂಗಗೊಂಡು ಗಂಭೀರ ಸ್ವರೂಪವನ್ನು ತಾಳುತ್ತವೆ.

ಅನಂತಮೂರ್ತಿ - ಲಂಕೇಶರ ಪ್ರಸ್ತಾಪ ಬಂದಿತ್ತಷ್ಟೆ. ಈ ರೀತಿ ಸಾರ್ವಜನಿಕವಾಗಿ ಜಗಳದ ಕಣದಲ್ಲಿ ಇಳಿದವರು ಎಷ್ಟು ಜನ? ಅಂಥವರ ಪಟ್ಟಿ ಮಾಡತೊಡಗಿದಾಗ ೨೨ ಜನ ಹೊರಟರು. - ನನ್ನ ಗಮನಕ್ಕೆ ಬಂದ ಪ್ರಕಾರ. ಇವರು ನಮ್ಮೊಟ್ಟಿಗೇನೆ -ಬದುಕಿ

ಇದ್ದವರು. ಬೀಚಿ ಮತ್ತು ರಾಜರತ್ನಂ ನಡುವೆಯೂ ಬಹಿರಂಗವಾದ ಜಗಳ ನಡೆಯಿತು. ಅವರೀಗ ದಿವಂಗತರು. ಹೀಗೆ ಜಗಳಾಡಿದ ದಿವಂಗತರ ಹೆಸರುಗಳನ್ನು ನೆನಪಿಸಿಕೊಂಡಾಗ ಏಳೇಳು ಜನ ಮಾತ್ರ ಕಂಡುಬಂದರು. ತಾತ್ಪರ್ಯವೆಂದರೆ, ಈ ರೀತಿಯ ಜಗಳದ ಪ್ರಕರಣಗಳು ಹೆಚ್ಚೆಚ್ಚಾಗುತ್ತ ನಡೆದಿವೆ. ಈ ತಿಂಗಳೊಪ್ಪೊತ್ತಿನಲ್ಲಿ ಹೊಸವು ಹುಟ್ಟಿಕೊಂಡರೆ ಆಶ್ಚರ್ಯ ಪಡಬೇಕಾದದ್ದಿಲ್ಲ!

ದೊಡ್ಡ ದೊಡ್ಡ ಸಾಹಿತಿಗಳಲ್ಲಿ ಘರ್ಷಣೆ ಏಕೆ ಉಂಟಾಗುತ್ತದೆ? ಹೇಗೆ ಬೆಳೆಯುತ್ತಾ ಹೋಗುತ್ತದೆ? ಮುರಿದ ಸಂಬಂಧ ಮತ್ತೆ ಅದೇಕೆ ಕೂಡ್ರುವುದಿಲ್ಲ? ಮುಖ್ಯತಃ ಅದರ ಪರಿಣಾಮ ಇತರರ ಮೇಲೆ, ಸಾಹಿತ್ಯದ ಒಟ್ಟಿನ ಬೆಳವಣಿಗೆಯ ಮೇಲೆ ಯಾವ ರೀತಿ ಆಗುತ್ತದೆ? ಇವೇ ಮೊದಲಾದ ಅಂಶಗಳನ್ನು ಪಕ್ಷಪಾತವಿಡದೇ ಇಲ್ಲಿ ವಿವೇಚಿಸ ಬಯಸಿದೆ. ಈ ಬಗೆಯ 'ದೊಡ್ಡೋರ ಜಗಳಾಟದಲ್ಲಿ ಶಂಬಾ - ಬೇಂದ್ರೆಯವರದು ಒಂದು ಬಗೆಯ Classic example ಸ್ವರೂಪದ್ದು ; ಅರ್ಧ ಶತಮಾನದ ವರೆಗೆ ಮುಂದುವರಿದದ್ದು; ಜಗಳದ ಎಲ್ಲ ಮಗ್ಗಲುಗಳನ್ನು ಒಳಗೊಂಡದ್ದು ಹಾಗೂ ಅವರ ಪರಿಸರದ ಇತರ ಸಾಹಿತಿಗಳ ಮೇಲೆ ಸಾಕಷ್ಟು ಕೆಟ್ಟ ಪರಿಣಾಮವನ್ನು ಬೀರಿದ್ದಂತಹದು. ಆದ್ದರಿಂದ, ಅದೊಂದು ಮುಗಿದು ಹೋದ ಪ್ರಕರಣವಿದ್ದರೂ, ಅವರಿಬ್ಬರಲ್ಲಿ ನಾನು ಗುರುಭಕ್ತಿಯಿಂದ ನಡೆದುಕೊಂಡಿದ್ದರೂ ಇಲ್ಲಿ ಎತ್ತಿಕೊಂಡಿದ್ದೇನೆ.

ಬೇಂದ್ರೆಯವರು! ಅವರ ಹೆಸರು ಮನೆಮನೆಗಳಲ್ಲಿ ಇಂದಿಗೂ ಕೇಳಬರುವಂತಹದು. ಧಾರವಾಡದ ಸೀಮೆಯಲ್ಲಿ ನವೋದಯ ಸಾಹಿತ್ಯದ ನಿರ್ಮಾಣಕ್ಕೆ ಕಾರಣರಾದವರು. ತಮ್ಮ ಕವಿತ್ವದಿಂದ ಆ ಮುಂದೆ ಇಡೀ ಕನ್ನಡ ನಾಡನ್ನೇ ಮರುಳುಗೊಳಿಸಿದವರು. ಜೊತೆಗೆ ಮಹಾ ಮೇಧಾವಿ ; ವಾಗ್ಮಿಗಳಲ್ಲಿ ಪರಮ ವಾಗ್ಮಿ. ಮಹಾರಾಷ್ಟ್ರದಲ್ಲಿಯೂ ಖ್ಯಾತಿ ಹೊಂದಿದವರು. ಜ್ಞಾನಪೀಠ ಪುರಸ್ಕರ್ತರು. ಅಲ್ಲದೆ ಅನೇಕ ಪ್ರಶಸ್ತಿಗಳನ್ನು ಪಡೆದವರು.

ಇತ್ತ ಶಂ. ಬಾ. ಅವರ ಹೆಸರು ಕೇವಲ ವಿದ್ವತ್‌ಪ್ರಪಂಚದಲ್ಲಿ ಕೇಳಿ ಬರುವಂಥದ್ದು. ಬೇಂದ್ರೆ, ಶಂಬಾ ಇಬ್ಬರೂ ಒಂದೇ ವರ್ಷದ ಅದೇ ತಿಂಗಳಲ್ಲಿ ಜನಿಸಿದ (ಜನವರಿ ೧೮೯೬) ಸಮವಯಸ್ಕರು. ಇಬ್ಬರೂ ಕೊಂಕಣಸ್ಥ ಬ್ರಾಹ್ಮಣರಾದ ಕಾರಣ ಮನೆ ಮಾತು ಮರಾಠಿ. ಬೇಂದ್ರೆ ತಡವಾಗಿಯಾದರೂ ಎಂ.ಎ. ತನಕ ಶಿಕ್ಷಣ ಮುಗಿಸಿದರು. ಶಂ.ಬಾ. ಅವರ ಶಿಕ್ಷಣ ಮೆಟ್ರಿಕ್‌ಗೆ ಸೀಮಿತವಾಗಿದ್ದರೂ ಸ್ವಂತದ ವ್ಯಾಸಂಗ ಔನ್ನತ್ಯವನ್ನು ಮುಟ್ಟಿತ್ತು. ಅವರು ಘನ ವಿದ್ವಾಂಸರೆಂಬುದನ್ನು ಬೇಂದ್ರೆಯವರೇ ಖಾಸಗಿಯಾಗಿ ಹೇಳುತ್ತಿದ್ದರು. ಇಬ್ಬರೂ ಅರವಿಂದ, ಟಾಗೋರ, ಗಾಂಧೀಜಿಯವರ ವಿಚಾರಧಾರೆಯಿಂದ ದೇಶಸೇವೆಯ ಪ್ರೇರಣೆಯನ್ನು ಹೊಂದಿದ್ದರು. ಆ ಕಾರಣದಿಂದ ಧಾರವಾಡದ ರಾಷ್ಟ್ರೀಯ ಶಿಕ್ಷಣದ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು. (ಬೇಂದ್ರೆಯವರ ಹೆಸರಿಗೆ 'ಮಾಸ್ತರರು' ಎಂಬ

ಉಪಾಧಿ ಸೇರಿದ್ದುದು ಈ ಕಾರಣದಿಂದ). ಇಬ್ಬರೂ ಧಾರವಾಡದ 'ಸಾಧನಕೇರಿ'ಯಲ್ಲಿಯೇ ಮನೆ ಮಾಡಿಕೊಂಡು ಇರುವ ಯೋಗಾಯೋಗವು ಬಂದೊದಗಿತು.

ಇಷ್ಟರ ವರೆಗೆ ಹೋಲಿಕೆ ಸರಿ ಆದರೆ ಅವರಲ್ಲಿ ಕೆಲವು ಮೂಲಭೂತವಾದ ಭಿನ್ನತೆಗಳಿದ್ದವು. ಬೇಂದ್ರೆಯವರು ಸೃಜನಶೀಲರೂ ಭಾವನಾವಶರೂ ಆಗಿದ್ದರೆ ಶಂ.ಬಾ . ತರ್ಕಬದ್ಧವಾಗಿ ಯೋಚಿಸುವವರು ಹಾಗೂ ಕಾರ್ಯನಿಷ್ಠರು. ಎತ್ತಿಕೊಂಡ ಕೆಲಸವನ್ನು ವ್ಯವಸ್ಥಿತವಾಗಿ ಮುಗಿಸುವ ಶಿಸ್ತು ಉಳ್ಳವರು. ಬೇಂದ್ರೆಯವರು ಸಮಯಸ್ಫೂರ್ತಿಯಿಂದ ಮಾತನ್ನಾಡಿ ಕೇಳುವವರನ್ನು ಸೆರೆಹಿಡಿಯಬಲ್ಲವರಾಗಿದ್ದರು. ಶಂ.ಬಾ. ಗೆ ಆ ವಶೀಕರಣ ಇರಲಿಲ್ಲ. ಇನ್ನೊಂದು ಎದ್ದು ಕಾಣುವ ಭೇದವೆಂದರೆ ಒಬ್ಬರದು ಆಸ್ತಿಕ ಮನೋಭಾವ ; ದೈವೀ ಪ್ರೇರಣೆಯಲ್ಲಿ ಅಚಲ ನಂಬಿಕೆ. ಇನ್ನೊಬ್ಬರು ದಿನಗಳೆದಂತೆ ನಾಸ್ತಿಕತೆಯತ್ತ ವಾಲಿದವರು.

ಅವರಿಬ್ಬರ ಸಾಹಿತ್ಯ ಕೃಷಿಯೂ ಬೇರೆ ಬೇರೆ ದಿಸೆಗಳನ್ನು ಕಂಡುಕೊಂಡಿದ್ದಿತು. ಬೇಂದ್ರೆಯವರ ಕೃತಿ -ರಚನೆ, ಕವಿತೆ, ಸಾಹಿತ್ಯ ವಿಮರ್ಶೆ, ನಾಟಕ, ಲಲಿತ ಪ್ರಬಂಧ, ಆಧ್ಯಾತ್ಮ -ಹೀಗೆ ಸರ್ವತೋಮುಖವಾದದ್ದು. ಶಂ.ಬಾ ಅವರದು ಕನ್ನಡಿಗರ ಪೂರ್ವೇತಿಹಾಸ, ಭಾಷೆ, ಜನಾಂಗಕ್ಕೆ ಸಂಬಂಧಿಸಿದ ಕೃತಿರಚನೆ. ಅಲ್ಲದೆ; ಅವರದು ಮೂಲಭೂತ ಸಂಶೋಧನೆ. ಅವರ ಉತ್ತರಾರ್ಧ ಕಾಲದ ಬರವಣಿಗೆ ವೇದ- ಪುರಾಣಗಳಲ್ಲಿ ಹುದುಗಿರುವ ಪ್ರತಿಮಾ ವಿಧಾನದತ್ತ ವಾಲಿತು. ಅವುಗಳ ಹಿನ್ನೆಲೆಯಲ್ಲಿ ಲೈಂಗಿಕತೆ ಇದೆ ಎನ್ನುವುದು ಅವರ ಸಂಶೋಧನದ ತಳಹದಿಯಾಗಿದ್ದಿತು. ಇಬ್ಬರೂ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಬೇಂದ್ರೆ ಅಧ್ಯಕ್ಷರಾಗಿ ೩೫ ವರ್ಷಗಳು ದಾಟಿದ ಮೇಲೆ ಶಂ. ಬಾ. ಅವರ ಪಾಳಿ ಬಂದಿತು.

ಈ ಹಿನ್ನೆಲೆಯಲ್ಲಿ ಬೇಂದ್ರೆಯವರಿಗೆ ಅನೇಕ ಶಿಷ್ಯರಿದ್ದುದನ್ನು, ಗಮನಿಸಬೇಕು. (ಅದರಲ್ಲಿ ಗೋಕಾಕ, ಮುಗಳಿಯವರಂತಹ ಸ್ವತಂತ್ರ ಪ್ರತಿಭೆಯವರೂ ಇದ್ದರು) ಪ್ರಹ್ಲಾದ ನರೇಗಲ್ಲ, ಹಲಸಂಗಿ ಚೆನ್ನಮಲ್ಲಪ್ಪ, ದ.ಬಾ. ಕುಲಕರ್ಣಿ, ನೃತ್ಯಕಾರ ಶ್ರೀನಿವಾಸ ಕುಲಕರ್ಣಿ, ನಾರಾಯಣ ಸಂಗಮ, ಕೃಷ್ಣಕುಮಾರ ಕಲ್ಲೂರ - ಇನ್ನೂ ಅನೇಕರು ಅವರ ಪ್ರಭಾವಲಯದಲ್ಲಿಯೇ ಬೆಳಕು ಕಂಡವರು. ಶ್ರೀಧರ ಖಾನೋಳಕರರೆಂಬ ಇನ್ನೊಬ್ಬ ಪ್ರತಿಭಾನ್ವಿತರು ಬೇಂದ್ರೆಯವರ ಅತಿ ಹತ್ತಿರದ ಬಂಧುವಿನಂತೆ ಇದ್ದರು. ಗೆಳೆಯರಾಗಿ ಯಾರಾದರೂ ಇದ್ದರೆ? ಇಲ್ಲ. ಆದರೆ ಬೇಂದ್ರೆ ಹತ್ತಿರ ಬಂದವರು ಶಿಷ್ಯರೇ ಆಗಿರುವಂಥ ಪರಿಸ್ಥಿತಿ ಎದ್ದು ಕಾಣುತ್ತಿತ್ತು.

ಆದರೆ ಒಬ್ಬರು ಮಾತ್ರ ಸಮಾನರಾಗಿರಬಹುದಾದ ಯೋಗ್ಯತೆಯುಳ್ಳವರಾಗಿದ್ದರು. ಅವರೇ ಶಂ.ಬಾ. ಜೋಶಿಯವರು. ಮೇಲ್ಕಂಡ ಸ್ವಭಾವ ಭೇದದಿಂದಾಗಿ ಆ ರೀತಿ -

ನಂಟು ಬೆಳೆಯಲಿಲ್ಲ. ಅದಕ್ಕೆ 'ಜಯ ಕರ್ನಾಟಕ ' ಪತ್ರಿಕೆಯ ಹಸ್ತಾಂತರ ಕಾರಣವಾಯಿತು. ಈ ಬಗ್ಗೆ ಕೆಲವು ವಿವರಗಳು ಈಗಾಗಲೇ ಪ್ರಕಟವಾಗಿವೆ. ಆದ್ದರಿಂದ ಸಂಕ್ಷಿಪ್ತವಾಗಿ ಅದನ್ನಿಲ್ಲಿ ಪ್ರಸ್ತಾಪಿಸುವೆ.

ಈ ಪತ್ರಿಕೆಯನ್ನು ಆರಂಭಿಸಿದವರು ಆಲೂರ ವೆಂಕಟರಾಯರು . ಅದನ್ನು ಪಡೆದುಕೊಂಡು ಗೆಳೆಯರ ಗುಂಪಿನವರು ನಡೆಸಬೇಕೆಂದು ನಿರ್ಣಯವಾಯಿತು. ಅದರ ಸಂಪಾದಕರಾಗಿ ಬೇಂದ್ರೆಯವರು ನಿಯುಕ್ತರಾದದ್ದು ಕ್ರಮಪ್ರಾಪ್ತವಾಗಿದ್ದಿತು. ಶಂ.ಬಾ. ಅದನ್ನು ಮನಸಾ ಒಪ್ಪಿಕೊಂಡು, ತಾವು ವ್ಯವಸ್ಥಾಪಕರಾಗಿ ನಿಂತರು. ಶೇ. ಗೋ. ಕುಲಕರ್ಣಿ (ಗೀತಾ ಕುಲಕರ್ಣಿಯವರ ಪತಿ.) ಕೃಷ್ಣಕುಮಾರ, ಗೋ.ವೆಂ. ಚುಳಕಿ ಸಹಾಯಕರಾಗಿ ಕೆಲಸ ಮಾಡತೊಡಗಿದರು. ಗೆಳೆಯರ ಗುಂಪು - ಎನ್ನುವುದು ಒಂದು ಶಿಥಿಲವಾದ ಅನೌಪಚಾರಿಕ ಕೂಟ ತಾನೆ. ಅದಕ್ಕೆ ಬೇಂದ್ರೆಯವರೇ ಪ್ರಾಣ ಸ್ವರೂಪರು. ಪತ್ರಿಕೆಯೊಂದನ್ನು ನಡೆಸುವ ವ್ಯಾವಹಾರಿಕ ವೃತ್ತಿಗೆ ಅದು ಅನುಗುಣವಾದದ್ದಿರಲಿಲ್ಲ. ಬೇಂದ್ರೆಯವರಲ್ಲಿ ಅದಕ್ಕೆ ಬೇಕಾದ ವ್ಯವಹಾರ ಕುಶಲತೆ ಇರಲಿಲ್ಲ. ಜೊತೆಗೆ ತಮ್ಮ ಮಾತು ನಡೆಯಬೇಕೆನ್ನುವ ನಾಯಕತ್ವದ ಸಹಜ ಪ್ರವೃತ್ತಿ. ಹಾಗೆ ನಡೆಸುವ ಶಿಷ್ಯರು -ಇದ್ದೇ ಇದ್ದರಲ್ಲ! ಇತ್ತ ಪತ್ರಿಕೆಯ ಮುದ್ರಣ, ಲೆಕ್ಕಪತ್ರ , ಪತ್ರವ್ಯವಹಾರ ಮುಂತಾದ್ದನ್ನು ಅತ್ಯಂತ ವ್ಯವಸ್ಥಿತವಾಗಿ ನೋಡಿಕೊಳ್ಳತೊಡಗಿದ ಶಂ.ಬಾ. ಪತ್ರಿಕೆಯ ಬಗ್ಗೆ ಬೇಂದ್ರೆಯವರೊಂದಿಗೆ ಚರ್ಚಿಸುವ ಪ್ರಸಂಗಗಳು ಬಂದಾಗ ಸ್ವಾಭಾವಿಕವಾಗಿಯೆ ಭಿನ್ನಾಭಿಪ್ರಾಯಗಳು ಬರತೊಡಗಿದವು. ಬೇಂದ್ರೆ ತಮ್ಮ ಮಾತೇ ನಡೆಯಬೇಕು ಎಂದು ಅಪೇಕ್ಷಿಸಿದಾಗ, ಶಂಬಾ ಪ್ರತಿವಾದಿಸುತ್ತಿದ್ದರು. ಹಾಗಲ್ಲ ಹೀಗಾಗತಕ್ಕದ್ದು ಎಂದು ಕಾರಣಕೊಟ್ಟು ವಿವರಿಸಿದಾಗ ಬೇಂದ್ರೆ ಅದನ್ನು ಅಲಕ್ಷ್ಯ ಮಾಡುತ್ತಿದ್ದರು.

ಆಗೆಲ್ಲ ಶಂ.ಬಾ. ಅವರು ಬೇಂದ್ರೆಯವರನ್ನು ಸರಿದಾರಿಗೆ (ಅವರ ದೃಷ್ಟಿಯಲ್ಲಿ) ಎಳೆಯಲು ಯತ್ನಿಸುತ್ತಿದ್ದಿರಬೇಕು. ಈ ಎಲ್ಲ ಸಣ್ಣ ಅಂಶಗಳನ್ನು ಹೇಳಬಲ್ಲವರು ಈಗಾರೂ ಬದುಕಿ ಉಳಿದಿಲ್ಲ. ತಿಂಗಳೊಪ್ಪತ್ತು ಹೀಗೆ ನಡೆದ ಮೇಲೆ ಒಂದು ಬಾರಿ ಅವರಿಬ್ಬರಲ್ಲಿ ಗಂಭೀರ ಸ್ವರೂಪದ ಮಾತಿನ ಜಗಳವಾಗಿರಬೇಕು. ಶಂ.ಬಾ. ಪತ್ರಿಕೆಯ ಕೆಲಸದಿಂದ ಹೊರಬಂದರು. ಆ ಪತ್ರಿಕೆಯ ಮೂಲಕ ನಾಡಿನ ಹಾಗೂ ದೇಶದ ಸೇವೆಯನ್ನು ನಿಷ್ಠೆಯಿಂದ ಕೈಕೊಂಡಿದ್ದ ಶಂ.ಬಾ.ಗೆ ಅದರಿಂದ ಹೀಗೆ ದೂರ ಸರಿಯಬೇಕಾದ ಪ್ರಸಂಗ ಒದಗಿದ್ದು ತುಂಬಾ ಬೇಸರ ತಂದಿದ್ದಿತು.

ಪ್ರತ್ಯುತ್ಪನ್ನಮತಿತ್ವ

ಇದಕ್ಕೂ ತುಸು ಮುಂಚೆ, ಕ್ರಿ.ಶ. ೧೯೨೯ರಲ್ಲಿ ಬೆಳಗಾವಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ಮಾಸ್ತಿಯವರು ಅಧ್ಯಕ್ಷರು. ಅದೇ ತಾನೇ ಬೇಂದ್ರೆಯವರ ಪ್ರತಿಭೆಗೆ

ಮಾರು ಹೋಗಿದ್ದವರು. ಸಮ್ಮೇಳನದ ಕಾಲಕ್ಕೆ ಬೇಂದ್ರೆ ತಮ್ಮ ಸುಪ್ರಸಿದ್ಧ 'ಹಕ್ಕಿ ಹಾರುತಿದೆ ನೋಡಿದಿರಾ?' ಹಾಡಿ ಜನಮನವನ್ನು ಸೂರೆಗೊಂಡಿದ್ದುದು ಮಾತ್ರವಲ್ಲದೆ, ತಮ್ಮ ಪ್ರತ್ಯುತ್ಪನ್ನಮತಿತ್ವದ ಮಾತಿನಿಂದಲೂ ಮನ್ನಣೆ ಗಳಿಸಿದರು. ಅದನ್ನು ಪ್ರಸ್ತಾಪಿಸಿ ಶಂ.ಬಾ. "ನಮ್ಮ ಬೇಂದ್ರೆ ಅವರವರ ಮಾತನ್ನು ಅವರ ಕೊರಳಿಗೆ ಕಟ್ಟಿ ಬಾಯಿ ಮುಚ್ಚಿಸಿದರು." ಎಂಬುದಾಗಿ ಹೊಗಳಿದರು. ಬೇಂದ್ರೆಯವರಲ್ಲಿದ್ದ ಕಾವ್ಯಸಿದ್ಧಿ ಹಾಗೂ ವಾದವೈಖರಿ ತನ್ನಲ್ಲಿ ಇಲ್ಲವೆಂಬುದು ಅವರಿಗೆ ತಿಳಿದ ಮಾತೇ ಆಗಿದ್ದಿತು.

ಧಾರವಾಡಕ್ಕೆ ಸೀಮಿತವಾಗಿದ್ದ ಬೇಂದ್ರೆಯವರ ಕೀರ್ತಿ, ಸಮ್ಮೇಳನ ಮುಗಿದ ಮೇಲೆ ನಾಡಿನ ವಿವಿಧ ಕಡೆಗಳಲ್ಲಿ ಪಸರಿಸಿತು. ಅದಕ್ಕೆ ಪ್ರಚೋದಕರಾದವರು ಮಾಸ್ತಿಯವರು. ಅವರನ್ನು ಮಾಸ್ತಿಯವರು ತಾವು ಹೋದ ಹೋದಲ್ಲಿಗೆ ಕರೆದುಕೊಂಡು ಸುತ್ತಾಡಿಸಿದುದೂ ಇದೆ.

ಇಲ್ಲಿಯೇ ಹೆಚ್ಚು ಕಡಿಮೆಯಾದದ್ದು. ಪತ್ರಿಕೆಗಾಗಿ ಅಹರ್ನಿಶಿ ದುಡಿಯುತ್ತಿದ್ದ ಗೆಳೆಯರ ಗುಂಪಿನ ಕೆಲವು ಕಾರ್ಯಕರ್ತರಿಗೆ ಬೇಂದ್ರೆ ತಮ್ಮನ್ನು ಕಡೆಗಣಿಸುತ್ತಿದ್ದಾರೆ - ಎಂದು ಅನಿಸಿತು.

ಬೇಂದ್ರೆಯವರಿಗೆ ಪ್ರಸಿದ್ಧಿ ದೊರೆಯುತ್ತಿದ್ದುದರ ಬಗ್ಗೆ ಅವರಿಗೆ ಬೇಸರವೇನೂ ಇರಲಿಲ್ಲ. ಆದರೆ ಅವರು ಮಾಸ್ತಿಯವರಿಗೆ ತಮ್ಮ ಪರಿಚಯವನ್ನಾದರೂ ಮಾಡಿಕೊಡಬಹುದಿತ್ತಲ್ಲ?

ದಿನದಿನಕ್ಕೆ ಬೇಂದ್ರೆಯವರ ಜನಪ್ರಿಯತೆ ಮೇಲೇರುತ್ತಾ ಕೆಲವೇ ವರ್ಷಗಳಲ್ಲಿ ಅವರ ಹೆಸರು ಕರ್ನಾಟಕದ ತುಂಬೆಲ್ಲ ಕೇಳಿಬರುವಂತಾಯ್ತು. ಎಲ್ಲೆಲ್ಲಿಂದಲೋ ಜನ ಅವರನ್ನು ಕಾಣಲೆಂದು ಧಾರವಾಡಕ್ಕೆ - ಸಾಧನಕೇರಿಗೆ ಬರುತ್ತಿದ್ದರು. ಅವರನ್ನು ಕಾಣುವುದು, ಅವರ ಮಾತನ್ನು ಕೇಳುವುದು ಒಂದು ಭಾಗ್ಯ ಎಂದು ಅವರುಗಳು ತಿಳಿಯುವ ಪರಿಸ್ಥಿತಿ ನಿರ್ಮಾಣವಾಯಿತು.

ಆ ರೀತಿ ಶಂ.ಬಾ. ಕಡೆಗೆ ಬರುತ್ತಿದ್ದವರು? ಊಹುಂ. ಅಪರೂಪಕ್ಕೆಂಬಂತೆ ಒಬ್ಬಿಬ್ಬರು ಮಾತ್ರ. ಇದರ ಜೊತೆಗೇ ಗೆಳೆಯರ ಗುಂಪಿನವರಲ್ಲಿ, ಪದವೀಧರರು, ಪದವೀಧರರಲ್ಲದವರು -ಎಂಬ ಪ್ರಭೇದವೂ ಹೌದೋ ಅಲ್ಲವೊ ಎನ್ನುವ ರೀತಿಯಲ್ಲಿ ಕಾಣಿಸಿಕೊಂಡದ್ದಿದೆ. ಬೇಂದ್ರೆಯವರು ಎಂದೂ ತಾವೊಬ್ಬ ಪದವೀಧರರೆಂದು ಲೆಕ್ಕಕ್ಕೆ ತಂದವರೇ ಅಲ್ಲ. ಅದರಂತೆ ಅವರ ಪ್ರೊಫೆಸರ್ ಶಿಷ್ಯರಾದ ಮುಗಳಿ, ಗೋಕಾಕರೂ ಹಾಗೆ ಭಾವಿಸಿದವರಲ್ಲ. ಆದರೆ ಪದವೀಧರರಲ್ಲದ ಶಂ.ಬಾ.ರವರಲ್ಲಿ ಮಾತ್ಸರ್ಯ ಪ್ರೇರಿತವಾದ ಕೀಳರಿಮೆ ಮೆಲ್ಲನೆ ತಲೆದೋರಿತು.

ಈ ಮಧ್ಯೆ ಶಂ.ಬಾ. ಅವರ ಪ್ರಥಮ ಸಂಶೋಧನ ಗ್ರಂಥ 'ಮಹಾರಾಷ್ಟ್ರದ ಮೂಲ'ವು ಪ್ರಕಟವಾಯಿತು. ಪರಿಷತ್ಪತ್ರಿಕೆಯ ಆಗಿನ ಸಂಪಾದಕರ ಕೋರಿಕೆಯ ಮೇರೆಗೆ ಬೇಂದ್ರೆ ಅದರ ವಿಮರ್ಶೆ ಬರೆದರು. ಮಹಾರಾಷ್ಟ್ರದ ಮೂಲದ ಬಗ್ಗೆ ಅವರೂ ಅಷ್ಟೇ ಬಲ್ಲಿದರು. ಆದರೆ ಈ ಪುಸ್ತಕದಲ್ಲಿ ಮಂಡಿತವಾದ ವಿಚಾರಗಳಿಗೆ ಅವರು ತತ್ವತಃ ಒಪ್ಪಿರಲಿಲ್ಲ. ವಿಮರ್ಶೆಯನ್ನು ಆ ರೀತಿ ಬರೆದರು. ಅದಿನ್ನೂ ಪ್ರಕಟವಾಗಿರಲಿಲ್ಲ. ಅನಿತರಲ್ಲಿಯೇ ಅವರಿಬ್ಬರಲ್ಲಿ ಬೇರೆ ಕಾರಣದಿಂದ ಬಿರುಸಿನ ಮಾತುಕತೆಯಾಗಿದ್ದಿತು. ಅಂಥ ಸಂದರ್ಭದಲ್ಲಿ ಪರಸ್ಪರರು ಆಕಸ್ಮಾತ್ ಸಂಧಿಸಿದಾಗ ಬೇಂದ್ರೆಯವರು ಹೇಳಿದರು. : "ನಿಮ್ಮ ಪುಸ್ತಕದ ವಿಮರ್ಶೆ ಮಾಡೇನಿ. ತಪ್ಪು ತಿಳಿಬೇಡಿರಿ. ನಾನು ಓದಿದ್ದ ಪುಸ್ತಕ ನೀವು ಓದಿದ್ದರೆ ಹೀಗೆಲ್ಲ ಬರೀತಿರಲಿಲ್ಲ" ಎಂದರು. 'ಅದು ಯಾವ ಪುಸ್ತಕ? ಹೀಗೆ ಮೋಘಂ ಆಗಿ ಮಾತನಾಡಿದರಲ್ಲ' - ಎಂಬ ದಿಗಿಲು ಶಂ.ಬಾ. ಅವರಿಗೆ. ಸಾಹಿತಿಗಳ ವಿರಸ ವಿನಾಕಾರಣ ಯಾವಲ್ಲಿ ತಿರುಗುತ್ತದೆ ಎಂಬುದಕ್ಕೆ ಇದೊಂದು ನಿದರ್ಶನ.

ಆ ಮುಂದೆ ಶಂ.ಬಾ. ಅವರ ಗ್ರಂಥಗಳು ಪ್ರಕಟವಾಗಿ ಯಾರಾದರೂ ವಿಮರ್ಶೆ ಮಾಡಿದರೆ, ಅದರಲ್ಲಿ ತಮ್ಮ ಅಭಿಪ್ರಾಯಗಳನ್ನು ಆ ವಿಮರ್ಶಕ ಒಪ್ಪದಿದ್ದರೆ , 'ಹಾಂ! ಈತ ಬೇಂದ್ರೆ ಗುಂಪಿನವ, ಬೇಂದ್ರೆ ಶಿಷ್ಯ, ಇಲ್ಲವೆ ಶಿಷ್ಯನ ಶಿಷ್ಯ ಇರಬೇಕು.' ತಮ್ಮನ್ನು ಅವಮಾನಗೊಳಿಸಲೆಂದೇ ವ್ಯವಸ್ಥಿತವಾಗಿ ಪ್ರಯತ್ನಿಸುತ್ತಿದ್ದಾನೆಂಬುದು ಅವರಲ್ಲಿ ಗಟ್ಟಿಮುಟ್ಟಾಗಿ ನೆಲೆಗೊಂಡಿತು.

ಈ ದೊಡ್ಡೋರ ಜಗಳದಲ್ಲಿ ಗೆಳೆಯರ ಗುಂಪಿನ ಇತರ ಸದಸ್ಯರು ಕಟ್ಟುನಿಟ್ಟಿನ ಗುಂಪುಗಳಾಗಿ ಇಬ್ಭಾಗವಾದರೆ? ಯಾಕೆಂದರೆ 'ಬೇಂದ್ರೆ ಗುಂಪು' ಎಂಬುದನ್ನು ಶಂ.ಬಾ. ಅವರೇ ಸೃಷ್ಟಿಸಿದ್ದು. 'ಈಯೊಬ್ಬ ಬೇಂದ್ರೆ ಗುಂಪಿನವ' ಎಂದೊಮ್ಮೆ ಅವರು ಗ್ರಹಿಸಿಬಿಟ್ಟರೆಂದರೆ, ಆ ವ್ಯಕ್ತಿಯನ್ನು ಬೇರೆಯವರೆಂದು ಹಳಿಯುವ, ಹಂಗಿಸುವ ಇಲ್ಲವೆ ಕೊಂಕು ಮಾತನ್ನಾಡುವುದರಲ್ಲಿ ಖುಶಿಪಡುತ್ತಿದ್ದರು. ಅಂತೂ 'ತಮಗೆ ಅನ್ಯಾಯವಾಗಿದೆ. ಆಗುತ್ತಿದೆ' ಎಂಬುದನ್ನು ಒಂದು ಕ್ಷಣವೂ ಮರೆಯದಷ್ಟು ಅದನ್ನು ಬೆಳೆಸಿಕೊಂಡು ಹೋದರು. ಇತ್ತ ಬೇಂದ್ರೆಯವರ ಒಂದು ವಿಶೇಷವೆಂದರೆ , ಯಾರನ್ನಾದರೂ ಹೇಳಬೇಕು, ನಿಂದಿಸಬೇಕು - ಎಂದರೆ ಯಾವ ಯಾವದೇ ಮುಲಾಜಿಲ್ಲದೆ ವಾಚಾಮಗೋಚರವಾಗಿ ಅದನ್ನು ಪೂರೈಸುತ್ತಿದ್ದರು. ತಿಳಿಯಬೇಕಾದ ಮಾತೆಂದರೆ ಆ ಮೇಲೆ ಆ ವ್ಯಕ್ತಿಯ ಯಾವ ಹಿನ್ನೆಲೆಯೂ ಅವರ ಮನಸ್ಸಿನಲ್ಲಿ ಉಳಿಯುತ್ತಿರಲಿಲ್ಲ. ಇವರಿಬ್ಬರ ತಿಕ್ಕಾಟ ಉಲ್ಬಣಗೊಳ್ಳುವುದಕ್ಕೆ ಈ ಸ್ವಭಾವ ಭೇದವೂ ಕಾರಣವಾಯಿತು.

ಈ ಜಗಳದಿಂದಾಗಿಯೇ ಶಂ.ಬಾ. ಅವರು ಸಂಶೋಧನೆಯಲ್ಲಿ ನಿರತರಾದರು. - ಎಂಬೊಂದು ಗ್ರಹಿಕೆ ಇದೆ. ಇದು ಎಷ್ಟರ ಮಟ್ಟಿಗೆ ಸತ್ಯ ಎಂದು ಹೇಳುವುದು ಕಠಿಣ.

ಮೂಲತಃ ವ್ಯಾಸಂಗಪ್ರಿಯರಾದ್ದರಿಂದ ಅವರ ಪ್ರವೃತ್ತಿ ಸಂಶೋಧನೆಯತ್ತಲೇ ವಾಲಿದುದಾಗಿತ್ತು ಎಂಬುದು ಮಾತ್ರ ಸ್ಪಷ್ಟ. ಸಂಶೋಧನೆ ಶಾಶ್ವತ ಸ್ವರೂಪದ ಮೌಲ್ಯವನ್ನು ಹೊಂದಿದೆಯಷ್ಟೇ? ಆದರೆ ತಮ್ಮ ಉತ್ತರಾಯಣ ಕಾಲದಲ್ಲಿ ಅವರು ವೇದ, ಪುರಾಣಾದಿಗಳಲ್ಲಿ ನಾಗ, ಮೌನ ಮುಂತಾದ ಪ್ರತಿಮಾ ವಿಧಾನದತ್ತ ಯಾವಾಗ ತೊಡಗಿದರೊ, ಅವರ ಸಂಶೋಧನೆ ಅನೇಕ ಬಾರಿ ಅಡ್ಡದಾರಿ ಹಿಡಿಯಿತೆಂದೇ ನಾಡಿನ ವಿಚಾರವೇತ್ತರ ಒಟ್ಟಿನ ಅಭಿಪ್ರಾಯವಾಗಿದೆ. ಈ 'ತ್ರಿಸಪ್ಟ'(Eccentric) ಮನೋಭೂಮಿಕೆಗೆ ಬೇಂದ್ರೆಯವರೊಡನೆಯ ವಿರಸ ಹಾಗೂ ಅದನ್ನೆದುರಿಸಲಾಗದ ತಮ್ಮ ಅಸಹಾಯ ಸ್ಥಿತಿ ಪರೋಕ್ಷವಾಗಿ ಎಷ್ಟರ ಮಟ್ಟಿಗೆ ಕಾರಣವಾಗಿರಬಹುದು? ತಿಳಿಯದು.

ಈ ಮುಂದಿನ ಘಟನೆ ಅವರ ಮನೋಭೂಮಿಕೆಗೆ ಒಂದು ನಿದರ್ಶನವಾಗಬಲ್ಲುದು.

ಈಚೆಗೆ ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ರಾಜಾಜಿನಗರದಲ್ಲಿ ಅವರ ಭಾಷಣವನ್ನು ಏರ್ಪಡಿಸಲಾಗಿದ್ದಿತು. 'ವೇದಗಳಲ್ಲಿ ಬಂದ ವಿಷಯವೆಲ್ಲ ಸುಳ್ಳು. ಕೃಷ್ಣನು ದೇವರಲ್ಲ. ಒಬ್ಬ ಲುಚ್ಚಾ" ಎಂಬ ಧರತಿಯಲ್ಲಿ ಭಾಷಣ ಮಾಡಿದರು. ನೆರೆದವರಿಗಾರಿಗೂ ಅವರ ಮಾತುಗಳು ರುಚಿಸಲಿಲ್ಲವಂತೆ. ಪ್ರೊ. ಎಸ್.ಆರ್. ಮಳಗಿಯವರು ಆಭಾರಮನ್ನಣೆಗೆಂದು ಮೈಕ್ ಮುಂದೆ ನಿಂತವರು, "ತಮಗೆ ಶಂ.ಬಾ. ಅವರ ಅಭಿಪ್ರಾಯ ಮಾನ್ಯವಿಲ್ಲ" ಎಂದು ನುಡಿದರು. ಸಭೆ ಮುಗಿದ ಮೇಲೆ ಶಂ.ಬಾ. ಮಳಗಿಯವರನ್ನು ಕುರಿತು, "ಹೂಂ. ಅರವಿಂದರು ಒಳ್ಳೇ ಬ್ರೇನ್‌ವಾಶ್ ಮಾಡಿದರಲ್ಲ" ಎಂದು ವ್ಯಂಗ್ಯವಾಡಿದರಂತೆ. ಇಲ್ಲಿ ಅರವಿಂದರ ಪ್ರಸ್ತಾಪ ಬಂದದ್ದೇಕೆ? (ಅರವಿಂದರ ಬಗ್ಗೆ ಮೊದಲ ಪುಸ್ತಕವನ್ನು ಬರೆದವರು ಶಂ.ಬಾ. ಅವರೇ ಆದರೇನು) ಮಳಗಿಯವರು ಅವರ ಗುರುಗಳಾದ ಮುಗಳಿ, ಅವರ ಗುರುಗಳಾದ ಬೇಂದ್ರೆ-ಎಲ್ಲರೂ ಅರವಿಂದರ ಭಕ್ತರೆಂದು.

"ಬೇಂದ್ರೆ ಗುಂಪು" ಎಂಬುದು ಶಂ.ಬಾ. ಅವರ ಸೃಷ್ಟಿಯೆಂದೆನಷ್ಟೆ. ಅದಕ್ಕೆ ತುಸು ವಿವರಣೆ ಬೇಕು. ಶಂ.ಬಾ. ಅವರ ಕೃತಿಗಳನ್ನು ಪರಿಚಯಿಸುವ ದೃಷ್ಟಿಯಿಂದ ಮುಂಬಯಿಯಲ್ಲಿ ಒಂದು ವಿಚಾರಗೋಷ್ಠಿ ನಡೆಯಿತು. ಅದಕ್ಕೆ ಡಾ. ಮುಗಳಿಯವರು ಅಧ್ಯಕ್ಷರಾಗಿದ್ದರು. ಭಾಷಣಕಾರರಲ್ಲಿ ಕೆಲವರು ಮುಗಳಿಯವರ ಶಿಷ್ಯರಿದ್ದರು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಅವರು 'ಶಂ.ಬಾ. ನೋಡಿದ ಆಕರ-ಆಧಾರಗಳನ್ನು ನಾನು ನೋಡಿಲ್ಲ. ಆದ್ದರಿಂದ ಅವರ ನಿರ್ಣಯಗಳು ಸರಿಯಾದುವೆಂದು ನಾನು ಖಚಿತವಾಗಿ ಹೇಳಲಾರೆ." ಎಂದು ಹೇಳಿದ್ದರು. ಆ ರೀತಿ - ಪತ್ರಿಕೆಗಳಲ್ಲಿ ವರದಿಯಾದಾಗ, ಶಂ.ಬಾ. ಸಿಡಿದೆದ್ದರು. ನಂತರ ಆ ವಿಚಾರಗೋಷ್ಠಿಯ ಕಾರ್ಯಕರ್ತರಿಗೆ "ನೀವು ನನ್ನನ್ನು ಅವಮಾನಿಸಲೆಂದೇ ಈ ಗೋಷ್ಠಿಯನ್ನು ಹಮ್ಮಿಕೊಂಡಿರಲ್ಲದೆ, ಅದನ್ನು ಸಾಧಿಸಲೆಂದೇ

ನೀವು ಮುಗಳಿಯವರನ್ನು ಅಧ್ಯಕ್ಷರನ್ನಾಗಿ ಮಾಡಿದಿರಿ" ಎಂದು ಆರೋಪಿಸಿದರು. ನಿಜಕ್ಕೂ ಮುಂಬಯಿಯ ಕಾರ್ಯಕರ್ತರಿಗೆ ಅಂಥ ವಿಚಾರವಾಗಲೀ, ಬೇಂದ್ರೆ -ಶಂ.ಬಾ. ವೈರತ್ವದ ಕಲ್ಪನೆಯಾಗಲೀ ಇರಲಿಲ್ಲ.

ಶಂ. ಬಾ. ಬರೆದ ಪತ್ರದ (೬..೩.೧೯೬೩) ಕೆಲವು ವಾಕ್ಯಗಳು ಇಲ್ಲಿ ಪ್ರಸ್ತುತವಾಗುತ್ತವೆ :

"ರಂ. ಶ್ರೀ. ಅವರು ಪ್ರಿನ್ಸಿಪಾಲ್ ಹುದ್ದೆಯಲ್ಲಿದ್ದಾಗ ಅವರಿಂದ ವಿದ್ಯಾದಾನ ಪಡೆದ, ಅದರ ಸೌಜನ್ಯ ಉಪಕಾರಗಳ ಲಾಭ ಪಡೆದವರು ನೂರಾರು ಜನ. ಅವರಿಗೆಲ್ಲ ಮುಗಳಿ ಅಧ್ಯಕ್ಷ ಭಾಷಣದಲ್ಲಿ ಹೇಳಿದ ಮಾತು ವೇದವಾಕ್ಯವಾಗುತ್ತದೆ. ನನ್ನ ಸಂಶೋಧನೆ ಉಪೇಕ್ಷಿಸಲ್ಪಡುತ್ತಿರುವುದು ಈ ರೀತಿಯಾಗಿ."

ಮುಂದುವರಿದು "ನನ್ನ ಮರ್ಹಾಟೀ ಸಂಸ್ಕೃತಿ - ಕಾಂಹೀ ಸಮಸ್ಯಾ' ಪುಸ್ತಕ ಮಹಾರಾಷ್ಟ್ರದಲ್ಲಿ ಮನ್ನಣೆ ಪಡೆದಾಗ ಇದೇ ಬೇಂದ್ರೆ ಆಚಾರ್ಯ ಭಾಗವತರೆದುರು 'ಅದೊಂದು ಶುದ್ಧ ಊಹನಾ ರಾಜ್ಯ' ಎಂದರಂತೆ. ಹೀಗೆ ಒಂದು ವಿಶಿಷ್ಟ ಗುಂಪು ಬುದ್ಧಿಪೂರ್ವಕವಾಗಿ ಸಭ್ಯತೆಯ ಸೋಗಿನಲ್ಲಿ ನನ್ನ ಕೃತಿಗಳು ಉಪೇಕ್ಷಿಸಲ್ಪಡುವಂತೆ ಪ್ರಚಾರ ನಡೆಸಿದ್ದಾರೆ."

ನಾನು ಚೆನ್ನಾಗಿ ಬಲ್ಲಷ್ಟರ ಮಟ್ಟಿಗೆ ಬೇಂದ್ರೆ ಅಭಿಮಾನಿಗಳಾದಾಕ್ಷಣ (ಮುಗಳಿಯವರೂ ಗೋಕಾಕರೂ ಸೇರಿದಂತೆ) "ಬುದ್ಧಿಪೂರ್ವಕವಾಗಿ" ಯಾರೂ ಶಂ.ಬಾ. ಅವರ ಅವಹೇಳನೆ ಮಾಡಹೊರಟಿದ್ದೇ ಇಲ್ಲ. ಅವರ ಸಂಶೋಧನೆಯನ್ನು ಒಪ್ಪಿರಲಿಕ್ಕಿಲ್ಲ. ಅಷ್ಟೇ. ಹಾಗೆ ನೋಡಿದರೆ ಡಿ. ಎಲ್. ನರಸಿಂಹಾಚಾರ್ಯರೂ ಕೆಲವು ಶಂ.ಬಾ. ವಿಧಾನಗಳನ್ನು ಒಪ್ಪಿರಲಿಲ್ಲ.

ಇತ್ತ ಬೇಂದ್ರೆಯವರ ಶಿಷ್ಯರೂ ಅಭಿಮಾನಿಗಳೂ ಅನೇಕ ಜನರು; ಸ್ನೇಹಿತರಲ್ಲ- ಎಂದೆನಷ್ಟೇ. ಶಂ.ಬಾ. ಅವರಿಗೆ , ಶಿವರಾಮ ಕಾರಂತ, ಬೆಟಗೇರಿ ಕೃಷ್ಣಶರ್ಮರಂತಹ ಆಪ್ತ ಸ್ನೇಹಿತರಿದ್ದರು. ಆದರೆ ಅವರು ಕೆಲವೇ ಜನ. ಅವರಿಗೆ ಸಹಾನುಭೂತಿಪರರಾದವರು. ಧಾರವಾಡದಲ್ಲಿ ಹಲವಾರು ಜನ ಇದ್ದರು. ಆದರೆ ಅವರಾರೂ ಬೇಂದ್ರೆಯವರನ್ನು ಎದುರು ಹಾಕಿಕೊಂಡು ಶಂ. ಬಾ. ಪಕ್ಷಪಾತಿ ಎಂದು ತೋರಿಸಿಕೊಳ್ಳುತ್ತಿರಲಿಲ್ಲ. ಇವರಿಬ್ಬರಲ್ಲಿ ಒಬ್ಬರ ಕಡೆಗೆ ಹೋದರೆಂದರೆ, ಆ ಇನ್ನೊಬ್ಬರ ಪ್ರಸ್ತಾಪವನ್ನು ಮಾಡುತ್ತಿರಲಿಲ್ಲ. ಇನ್ನು ಹಿರಿಯರೇ ಮಾಡಿದರೆ, ಅದನ್ನು ಕೇಳಿಸಿಕೊಂಡವರದ್ದು ತಾಟಸ್ಥ್ಯದ ಮೌನ! ಇನ್ನು ಹಲವರು, 'ಇಲ್ಲಿ ಸಲ್ಲುವವರು ಅಲ್ಲಿಯೂ' ಎಂಬಂತೆ ನಡೆದುಕೊಳ್ಳುತ್ತಿದ್ದರು. ಈ ವರ್ಗದಲ್ಲಿ ಜಿ.ಬಿ. ಜೋಶಿ ಮತ್ತು ಭಾಲಚಂದ್ರ ಘಾಣೇಕರರು ಅದರಂತೆ ಗೋ. ವೆ. ಚುಳಕಿ, ವರದರಾಜ ಹುಯಿಲಗೋಳ ಇವರು ಬರುತ್ತಾರೆ. ಈ ಅಂಶ ಶಂ.ಬಾ., ಬೇಂದ್ರೆ ಅವರಿಗೆ ತಿಳಿದದ್ದೇ.

ಸಮಸ್ಯೆ ಎಲ್ಲಿ ಬರುತ್ತಿತ್ತು ಎಂದರೆ -ಯಾರೊಬ್ಬರು ಬೇಂದ್ರೆಯವರನ್ನು ಹೊಗಳಿ ಬರೆದರೆ ಶಂ. ಬಾ. ಅವರಿಗೆ ಅದನ್ನು ಸಹಿಸುವುದು ಕಷ್ಟವಾಗುತ್ತಿತ್ತು. ಅದರಂತೆ

vice versa! ಇದಕ್ಕೊಂದು ಉದಾಹರಣೆ ಕೊಡುವೆ. ಪಾ.ವೆಂ. ಆಚಾರ್ಯರು ತಾವು ಸಂಪಾದಿಸುತ್ತಿದ್ದ 'ಕಸ್ತೂರಿ' ಯಲ್ಲಿ ಶಂ.ಬಾ. ಅವರ ಸಂಶೋಧನೆಯನ್ನು ಎತ್ತಿ ಹಿಡಿದು 'ಸಂಶೋಧನ ಕ್ಷೇತ್ರದ ಒಂಟಿ ಸಲಗ' ಎಂಬ ಲೇಖನ ಬರೆದರು. ಅದಕ್ಕೂ ಮುಂಚೆ ಪಾ.ವೆಂ. ಬೇಂದ್ರೆಯವರ ಮನೆಗೆ ಹೋಗಿ ವೈಚಾರಿಕವಾಗಿ ಚರ್ಚಿಸಿದ್ದುದು ಅದೆಷ್ಟು ಬಾರಿಯೋ. ಆ ಲೇಖನ ಪ್ರಕಟವಾಗಿ ಹಲವು ತಿಂಗಳಾದ ಮೇಲೆ ಪಾ. ವೆಂ. ಉಡುಪಿಯಿಂದ ಬಂದಿದ್ದ ಓರ್ವ ಗಣ್ಯರನ್ನು ಕರೆದುಕೊಂಡು ಬೇಂದ್ರೆ ಮನೆಗೆ ಹೋದರು. ಆಗ ಬೇಂದ್ರೆ ಆ ಗಣ್ಯರಿಗೆ ಹೇಳಿದ್ದು ಹೀಗೆ:

"ಇಂವಾ (ಪಾ. ವೆಂ.) ಶಾಣ್ಯಾ ಇದ್ದಾನ ಖರೇ. ಆದರ ತಾನು ಬಹಳ ಶಾಣ್ಯಾ ಅಂತ ತಿಳಕೊಂಡಾನ"

ಇಂಥದೇ ಶಂ. ಬಾ. ಪ್ರತಿಕ್ರಿಯೆಗೆ ಬೇರೊಂದು ಸಂದರ್ಭವನ್ನು ಕಾಣಿಸುವೆ. ಬೇಂದ್ರೆ ಅಭಿಮಾನಿಗಳೂ, ಅವರ ಬಗ್ಗೆ ಲೇಖನ ಭಾಷಣಾದಿಗಳನ್ನು ಮಾಡಿದ ಮುಂಬಯಿಗರೊಬ್ಬರು ಶಂ.ಬಾ. ಅವರಲ್ಲಿಗೆ ಹೋದಾಗ -

"ನೀವು 'ಅಲ್ಲಿಗೆ' ಹೋಗಿ ಬಂದಿರಿ. ಹೌದಲ್ಲೊ?" ಎಂದು ಕೇಳಿದರಂತೆ.

"ನಿಮಗೆ ಹೇಗೆ ಗೊತ್ತಾಯಿತು?"

"ನಿಮ್ಮ ಮೈವಾಸನೆಯೇ ಹೇಳುತ್ತದೆ!"

ಇದಕ್ಕಿಂತ ಶಂ.ಬಾ. ಅವರ ಮಾಮೂಲಿಯ ವಾಕ್ಯವೆಂದರೆ "ಬೇಂದ್ರೇನ ಬುವಾ ಬಾಜಂತ್ರಿ ಆಯ್ತು ಹೌದಲ್ಲೊ?" ಅಂತೂ ಯಾರಾದರೂ ಹೊರಗಿನವರು ಸಾಧನಕೇರಿಗೆ ಹೋದರೆಂದರೆ ಇಂಥ ಕೊಂಕುನುಡಿಗಳನ್ನು ಕೇಳುವುದು ಅನಿವಾರ್ಯವಾಗಿದ್ದಿತು.

ಇಲ್ಲೊಂದು ಅಭೂತಪೂರ್ವ ಸಂದರ್ಭವನ್ನು ಹೇಳಬೇಕು. ಬೇಂದ್ರೆ, ಶಂ.ಬಾ., ಅವರ ಪತ್ನಿಯರು, ತಮ್ಮ ಗಂಡಂದಿರು ಇಷ್ಟೊಂದು ವೈರತ್ವವನ್ನು ಸಾಧಿಸ್ತಾ ಇದ್ದರೂ ಅದರ ಪರಿವೆಯೇ ಇಲ್ಲದಂತೆ, ಆತ್ಮೀಯವಾಗಿ ಪರಸ್ಪರ ಹಿತದಿಂದ ಬಾಳಿದರು.

ಇನ್ನೀಗ ಇಂಥ ಜಗಳಗಳು ಬೇರೆ ಸಾಹಿತ್ಯಿಕರಲ್ಲಿ (ದಿವಂಗತರು) ಹೇಗೆ ಕಂಡುಬಂದಿವೆ ಎಂಬುದನ್ನು ತುಸು ನೋಡೋಣ. ಡಿ.ಎಲ್.ಎನ್. ಮತ್ತು ತೀ.ನಂ. ಶ್ರೀ. ಅದರಂತೆ ಮುಗಳಿ ಮತ್ತು ಗೋಕಾಕರು.

ಅರೆ! ಈ ಮಹನೀಯರು ಜಗಳಾಡಿದ್ದರೆ? ಎಂದು ಅಚ್ಚರಿಯೆನಿಸಬಹುದು. ಆದರೆ ಆ ಜಗಳದ ಸ್ವರೂಪ ಹಾಗೂ ಮುಗಿತಾಯ ಬೇರೇನೇ ಇದೆ.

ತೀನಂಶ್ರೀ ಹಾಗೂ ಡಿ. ಎಲ್. ಎನ್. ಹಿರಿಯ ವಿದ್ವಾಂಸರಲ್ಲಿ ಹಿರಿಯರು.

ಇಂದಿನ ಹತ್ತಾರು ಶ್ರೇಷ್ಠ ಮಟ್ಟದ ಸಾಹಿತಿಗಳು , ಪ್ರೊಫೆಸರ್ ಜನರು ಇವರುಗಳಿಂದಲೇ ಕನ್ನಡದಲ್ಲಿ ಪ್ರಾವೀಣ್ಯ ಗಳಿಸಿದವರು. ಅದಕ್ಕಿಂತ ಅವರ ಒಡನಾಟ ಅತ್ಯಂತ ಆತ್ಮೀಯವಾದದ್ದು. ಅಲ್ಲಿ ಶಂಕೆಗೆ ಆಸ್ಪದವೇ ಇರಲಿಲ್ಲ. ಆದರೆ ಒಂದೊಮ್ಮೆ ವಿರಸವುಂಟಾಯಿತು. ಡಿ.ಎಲ್.ಎನ್. ಅವರೇ ತೀ.ನಂ.ಶ್ರೀಯವರೊಡನೆ ಮಾತನಾಡುವುದನ್ನು ಬಿಟ್ಟರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕ ಹುದ್ದೆಗೆ ತೀ. ನಂ. ಶ್ರೀ. ಶಿಫಾರಸು ಮಾಡಲಿಲ್ಲ - ಎನ್ನುವುದೇ ಕಾರಣ. ಆದರೆ ಅದು ಜಗಳವಲ್ಲ: ವಿರಸ. ಈ ವಿಷಯ ಅವರಿಬ್ಬರ ಖಾಸಾ ಶಿಷ್ಯರಿಗೆ ಮಾತ್ರ ತಿಳಿದಿತ್ತು. ಈ ಶಿಷ್ಯರಲ್ಲಿ ಒಬ್ಬಿಬ್ಬರು ಚಾಡಿಯ ಮಾತನ್ನು ಹೇಳಿ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದಂತೆ ಆಗುತ್ತದೆ. ಆದರೆ ಕೆಲವೇ ತಿಂಗಳಲ್ಲಿ ಅವರಿಬ್ಬರಲ್ಲಿಯೇ ತಾವು ಮಾಡುತ್ತಿದ್ದುದು ತಪ್ಪು ಎನ್ನಿಸಿತು. 'ಅವರ ಮನೆಗೆ ನಾನೇ ಹೋಗಿ ಬಿಡುವೆ' ಎಂದು ಪರಸ್ಪರ ಅಂದುಕೊಳ್ಳುತ್ತಿದ್ದಂತೆ ಮತ್ತೆ ಮೊದಲಿನ ಆತ್ಮೀಯ ಸಂಬಂಧ ಕುದುರಿತು - ಸದ್ದಿಲ್ಲದೆ.

ಮುಗಳಿ - ಗೋಕಾಕರ ಬಿರುಕು

ಮುಗಳಿ -ಗೋಕಾಕರ ಸಂಬಂಧದಲ್ಲಿ ಬಿರುಕು ಬಿಟ್ಟಿದೆಯೆಂದು ಮೊದಲ ಬಾರಿ ತಿಳಿದು ಬಂದಾಗ ನಾನು ನಂಬಿರಲೇ ಇಲ್ಲ. ಅಷ್ಟೊಂದು ಅವರಲ್ಲಿ ಅನೇಕ ವರ್ಷಗಳಿಂದ - ಎಂದರೆ ಅವರ ಕಾಲೇಜ - ವಿದ್ಯಾರ್ಥಿ ದೆಸೆಯ ಕಾಲದಿಂದ (೧೯೨೪ -೨೫) ಒಡನಾಟ ಇದ್ದಿತು. 'ರಂಗಾ' ಮತ್ತು 'ದಾದಾ' ಎಂಬ ಏಕವಚನದ ಸಂಬೋಧನೆಗಳನ್ನು ನಮ್ಮಂಥ ಶಿಷ್ಯರೆದುರು ಧಾರಾಳವಾಗಿ ಬಳಸುತ್ತಿದ್ದರು.

ಯಾವುದೋ ಒಂದು ಸಣ್ಣ ನಿಮಿತ್ತದಿಂದ , ಅದೂ ತಮ್ಮ ಇಳಿ ವಯಸ್ಸಿನಲ್ಲಿ ಮಾತು ಬಿಟ್ಟರು. ಈ ಕುರಿತ, ಪರಸ್ಪರರ ಬೇಸರವನ್ನು ತಂತಮ್ಮ ನಿಕಟ ಪರಿಚಯದವರೆದುರು ಹೇಳುತ್ತಿದ್ದರು. ಆದರೆ ಕುತ್ಸಿತ ಮಾತನ್ನು ಆಡಿದುದಿಲ್ಲ. ಇಬ್ಬರೂ ಬೆಂಗಳೂರಲ್ಲೇ ಇದ್ದ ಕಾಲದಲ್ಲಿ ಗೋಕಾಕರು ಇಳಿವಯಸ್ಸಿನಲ್ಲಿ ತಮ್ಮ ಮಗನ ಬಳಿ ಇರಲೆಂದು ಮುಂಬಯಿಗೆ ಹೊರಟು ನಿಂತರು. ಆಗ ಮುಗಳಿಯವರಿಗೆ ಅನಿಸಿತು : " ಹಳೆಯದನ್ನು ಮರೆತುಬಿಡಬೇಕು" ಎಂದು. ತಮ್ಮಿಬ್ಬರನ್ನೂ ಚೆನ್ನಾಗಿ ಬಲ್ಲ ಪ್ರೊ. ಎಸ್.ಆರ್. ಮಳಗಿಯವರನ್ನು ಮುಂದಿಟ್ಟುಕೊಂಡು ಗೋಕಾಕರ ಮನೆಗೆ ಹೊರಟು ನಿಂತರು. ಹಾಗೆಂದು ಮಳಗಿಯವರು ಮುಂಚೆಯೇ ಗೋಕಾಕರಿಗೆ ತಿಳಿಸಿದರು. ಭೆಟ್ಟಿಯಾದರು.

"How are you, ಹೇಗಿದ್ದೀ? " ಎಂಬಂತಹ ಔಪಚಾರಿಕ ಮಾತುಗಳು ನಡೆದವು. ಹಿಂದಿನ ವಿರಸದ ಯಾವ ಪ್ರಸ್ತಾಪವೂ ಬರಲಿಲ್ಲ. 'ನನ್ನ ಭಾರತ ಸಿಂಧು ರಶ್ಮಿ' ಓದಿದ್ದೀಯಾ" ಎಂದು ಗೋಕಾಕರು ಕೇಳಿದರು.

"ಓದಿಲ್ಲ . ನೀನೇನು ಕೊಟ್ಟಿಲ್ಲವಲ್ಲ!" ಎಂಬುದಾಗಿ ಮುಗಳಿಯವರ ಮಂದಸ್ಮಿತದ

ಪ್ರತಿಕ್ರಿಯೆ. ಆಗ ಗೋಕಾಕರು ಅದರ ಒಂದು ಪ್ರತಿಯನ್ನು ತೆಗೆದುಕೊಂಡು ಬಂದು ಸಹಿ ಮಾಡಿಕೊಟ್ಟರು. ಇತ್ತ ಮುಗಳಿಯವರು ತಾವು ಕನ್ನಡಕ್ಕೆ ಅನುವಾದಿಸುತ್ತಿದ್ದ ಅರವಿಂದರ 'ಸಾವಿತ್ರಿ'ಯ ಬಗ್ಗೆ ಒಂದಿಷ್ಟು ಚರ್ಚೆ ಮಾಡಿದರು. 'ಈಗ ಸಮಾಧಾನವಾಯಿತು' ಎಂಬ ಭಾವದಿಂದ ಪರಸ್ಪರ ಬೀಳ್ಕೊಟ್ಟರು.

ಶಂ.ಬಾ. ಬೇಂದ್ರೆ ಇವರ 'ಮಿಲನ'ವೂ ಆಯಿತು - ಇದೇ ರೀತಿಯಲ್ಲಿ !

ಕ್ರಿ.ಶ. ೧೯೮೧ನೆಯ ಇಸವಿ. ಬೇಂದ್ರೆಯವರಿಗೆ ಸಖತ್ ಕಾಹಿಲೆ. ಧಾರವಾಡದ ದವಾಖಾನೆಯೊಂದರಲ್ಲಿ ಅವರಿಗೆ ಹಲವು ವಾರಗಳ ವರೆಗೆ ಚಿಕಿತ್ಸೆ ನಡೆಯಿತು. ಶಂ. ಬಾ. ಅವರಲ್ಲಿಯ ಒಂದು ಸ್ವಭಾವ ವೈಶಿಷ್ಟ್ಯವೆಂದರೆ, ಯಾರಿಗೇ ಆಗಲಿ, ಜಡ್ಡಾದರೆ ಅವರ ಜೀವ ಚಡಪಡಿಸುತ್ತಿತ್ತು. ಅವರ ಮನೆಗೆ ಹೋಗಲು ಧಡಪಡಿಸುತ್ತಿದ್ದರು. ಸಾಧ್ಯವಿದ್ದಷ್ಟು ನೆರವು ನೀಡುತ್ತಿದ್ದರು. ಈಗ? ತಮ್ಮ ಬದ್ಧ ವೈರಿಗೆ ಗಂಭೀರ ಸ್ವರೂಪದ ಜಡ್ಡು. ಒಮ್ಮೆ ಆಸ್ಪತ್ರೆಗೆ ಹೋಗಿ ನೋಡಿಕೊಂಡು ಬಂದುಬಿಡಬೇಕು' ಎಂದು ಗಟ್ಟಿ ನಿರ್ಧಾರ ಮಾಡಿದರು. ಆದರೆ ಅಷ್ಟರಲ್ಲಿ ಬೇಂದ್ರೆಯವರನ್ನು ಮನೆಗೇ ಕರೆತರಲಾಯಿತು. ಹೆಚ್ಚಿನ ಚಿಕಿತ್ಸೆಗಾಗಿ ಮುಂಬಯಿಗೆ ಕರೆದೊಯ್ಯಬೇಕೆಂಬ ವಿಚಾರದಿಂದ.

ಬೇಂದ್ರೆ, ಶಂ.ಬಾ. ಇವರುಗಳ ಸಾಧನಕೇರಿಯ ಮನೆಗಳ ಸರೀ ಮಧ್ಯದಲ್ಲಿ ವರದರಾಜ ಹುಯಿಲಗೋಳರ ಮನೆ. ಇವರು ಆ ಇಬ್ಬರಿಗೂ ಬೇಕಾದವರೆಂದು ಹೇಳಿದ್ದೇನೆ. 'ತಮ್ಮ ಭಾವನೆಗಳನ್ನು ಇವನೆದುರು ವ್ಯಕ್ತಪಡಿಸಲಡ್ಡಿಯಿಲ್ಲ' - ಎಂಬಷ್ಟರ ಮಟ್ಟಿಗೆ ಇಬ್ಬರ ಸಹಾನುಭೂತಿಯನ್ನು ಗಳಿಸಿಕೊಂಡಿದ್ದರು. ಒಂದೊಮ್ಮೆ ಬೇಂದ್ರೆಯವರು "ಶಂಬಾ ಒಬ್ಬ ವಿದ್ವಾಂಸರೆಂದು ಒಪ್ಪಿಕೊಳ್ಳುತ್ತೇನೆ. ಆದರೆ ಅವರ ವಿಚಾರ ಸರಣಿ ಮಾತ್ರ ವಕ್ರ" ಎಂಬುದಾಗಿ ಹೇಳುತ್ತ ಧೇನಿಸುತ್ತಿದ್ದರಂತೆ. ಮತ್ತೆ ಹೇಳಿದರು : "ಮಾತೇ ಇಲ್ಲ ಅಂದರೇನು? ನಾನೇ ಶಂಕರರಾಯರ ಮನೆಗೆ ಹೋಗ್ತೇನೆ. ಬಾಗಿಲೆದುರು ನಿಲ್ತೇನೆ. 'ಬರಲೇ?' ಎಂದು ಕೇಳುತ್ತೇನೆ. 'ಬರಬೇಕು' ಅಂದರೆ ಹೋದಾ. ಇಲ್ಲಾ ಅಂದರೆ ತಿರುಗಿ ಬರ್ತೇನೆ. ಏನಂತೆ ಅದರಲ್ಲಿ ?" ಇವೆಲ್ಲ ಆಗೀಗಿನ ಕನವರಿಕೆಗಳು. "ಶಂ.ಬಾ. ನನ್ನನ್ನು ಭೂತದಂತೆ ಹಿಡಿದು ಬಿಟ್ಟಿದ್ದಾರೆ." ಎಂಬ ಬಹುಕಾಲದ obsessionನ ದಿನಗಳವು. ಆದ್ದರಿಂದ ಅದು ಕೃತಿಯಲ್ಲಿ ಹೊರಬಂದಿರಲಿಲ್ಲ.

ಇಂಥ ಮನಸ್ಥಿತಿಯಲ್ಲಿದ್ದಾಗ ಶಂ. ಬಾ ಹುಯಿಲಗೋಳರ ಮನಗೆ ಬಂದು, ಬೇಂದ್ರೆಯವರನ್ನು ಭೆಟ್ಟಿಯಾಗುವ ಅಪೇಕ್ಷೆಯನ್ನು ತೋರಿದರು."ಆಯ್ತು ಕೇಳಿ ನೋಡ್ತೇನೆ" ಎಂದರು ಹುಯಿಲಗೋಳರು. ಬೇಂದ್ರೆಯವರ ಮಗ ಡಾ. ವಾಮನರಿಗೆ ಹೇಳಿದರು. ಆದರೆ ಇಷ್ಟು ವರ್ಷ ಮಾತು ಬಿಟ್ಟವರನ್ನು , ಒಮ್ಮೆಲೆ ಮಾತಾಡಗೊಡಿಸಿದಾಗ, ಹಳೆಯ ಜಗಳ ಮರುಕಳಿಸಿಬಿಟ್ಟರೆ?" ಎಂಬ ಅಳುಕು ಇಬ್ಬರಿಗೂ.

ಕೆಲವು ದಿನಗಳಾದ ಮೇಲೆ ವಾಮನರು ಹುಯಿಲಗೋಳರ ಮನೆಗೆ ಬಂದು "ಅಣ್ಣಾನ ಕನಸಿನಲ್ಲಿ ಶಂ.ಬಾ. ಬಂದಿದ್ದರಂತೆ" ಎಂದು ಹೇಳಿದರು. "ಆದದ್ದಾಗಲಿ ಭೆಟ್ಟಿ ಮಾಡಿಸಿ ಬಿಡೋಣ" ಎಂದು ಇಬ್ಬರೂ ಗೊತ್ತು ಮಾಡಿಕೊಂಡರು. ಬೇಂದ್ರೆಯವರಿಗೆ ವಾಮನ ಈ ವಿಷಯ ತಿಳಿಸಿದಾಗ "ಆಯ್ತು ಬರಲಿ. ಅದರಂತೆ ಹುಯಿಲಗೋಳ ದಂಪತಿಗಳೂ" ಎಂದರಂತೆ. ಇನ್ನೀಗ ಶಂ.ಬಾ ಅವರಿಗೆ ಹುಯಿಲಗೋಳರು ಆ ನಿರೂಪ ಮುಟ್ಟಿಸಬೇಕು.

"ನಾನೂ ಆ ಪ್ರಸ್ತಾಪ ಬೇಡವೆಂದೇ ಅನ್ನುತ್ತೇನೆ. ಅವರೇ ಹಳೆಯ ರಗಳೆ ಎತ್ತಿದರೆ ನಾನು ಸುಮ್ಮನಿರುವುದಿಲ್ಲ." ಎಂದರು ಶಂ.ಬಾ.

ಅಂದು ಸಂಜೆ ಭೆಟ್ಟಿಯ ಕಾರ್ಯಕ್ರಮ ಇದ್ದಿತು. "ಇಲ್ಲ . ಈಗೇ ಹೋಗಿ ಬಿಡೋಣ."ಎಂಬುದಾಗಿ ಶಂ.ಬಾ. ಬೆಳಗಿನಲ್ಲೇ ಸಿದ್ಧರಾದರು. "ಮದುವೆಯ ಸಮಾರಂಭಕ್ಕೆ ಹೊರಟಂತಿತ್ತು." ಎಂದಿದ್ದಾರೆ ಹುಯಿಲಗೋಳರು.

ಬೇಂದ್ರೆಯವರ ಮನೆಯಲ್ಲಿ ಕಾಲಿಟ್ಟಾಗ ವಾಮನರು ನಾಲ್ವರನ್ನೂ ಸ್ವಾಗತಿಸಿದರು. ಬೇಂದ್ರೆಯವರು ಮಲಗಿದ್ದ ಕೋಣೆಗೆ ಕರೆದೊಯ್ದರು. ಆ ನಿಶ್ಶಕ್ತಿಯಲ್ಲಿಯೂ ಅವರ ಮುಖದಲ್ಲಿ ಸಂತೋಷದ ಗೆರೆ ಕಾಣಿಸಿಕೊಂಡಿತು. ಶಂ.ಬಾ ದಂಪತಿಗಳು ಬೇಂದ್ರೆಯವರ ಯೋಗಕ್ಷೇಮವನ್ನು ಮನಃಪೂರ್ವಕವಾಗಿ ವಿಚಾರಿಸಿದರು. ತಾವು ತಂದಿದ್ದ ಹಣ್ಣು ಹಂಪಲನ್ನು ಕೊಟ್ಟರು. ಹತ್ತು ನಿಮಿಷಗಳಾದ ಮೇಲೆ ಆ ಸಂಭ್ರಮದ ಭೆಟ್ಟಿಯ ಕಾರ್ಯಕ್ರಮ ಮುಗಿದಿತ್ತು. ಅರ್ಧ ಶತಮಾನದ ವೈರತ್ವಕ್ಕೆ ತೆರೆ ಬಿದ್ದಿತ್ತು. ಧಾರವಾಡದ ಸಾಹಿತ್ಯಿಕ ವಾತಾವರಣದಲ್ಲಿ ದೀರ್ಘಕಾಲ ಹರಡಿದ್ದ ಕರಾಳವಾದ ಕಪ್ಪು ಛಾಯೆ ಸರಿದು ಹೋಯಿತು.

ಅದಾಗಿ ಕೆಲ ವಾರಗಳಲ್ಲಿಯೇ ಬೇಂದ್ರೆ ಮರಣದ ಸುದ್ದಿ ಸಾಧನಕೇರಿಯನ್ನು ತಲುಪಿತು. (೨೬ ಅಕ್ಟೋಬರ್) . ಮರುದಿನ ಸ್ಥಳಿಕವಾಗಿ ಏರ್ಪಡಿಸಿದ ಸಂತಾಪ ಸೂಚಕ ಸಭೆಗೆ ಶಂ.ಬಾ. ಅವರೇ ಅಧ್ಯಕ್ಷರು. ಭಾಷಣ ಮಾಡಲೆಂದು ಎದ್ದು ನಿಂತರು. ಮಾತು ತಡವರಿಸುತ್ತ ಸಾಗಿತ್ತು. ಆದರೆ ಕಣ್ಣಲ್ಲಿ, ಕಂಠದಲ್ಲಿ ತುಂಬಿದ ದುಃಖಾಶ್ರು ಅವರನ್ನು ಮಾತಾಡಗೊಡಲಿಲ್ಲ. ಶಂಬಾ-ಬೇಂದ್ರೆ ಜಗಳದ ಕೊನೆಯ ದೃಶ್ಯವಿದು.

ಈ ಇಪ್ಪತ್ತನೆಯ ಶತಮಾನದ ಧಾರವಾಡದಲ್ಲಿ ನಾಲ್ವರು ಧೀಮಂತ ಸಾಹಿತಿಗಳು ಆಗಿಹೋದರು. ಶಂ.ಬಾ, ಬೇಂದ್ರೆ, ಅವರು. ಅವರಿಗಿಂತ ಒಂದು ದಶಕದಷ್ಟು ಮುಂದೆ ಜನಿಸಿದ್ದ ಶ್ರೀರಂಗ ಮತ್ತು ಬೆಟಗೇರಿ ಕೃಷ್ಣಶರ್ಮ ಇವರನ್ನೂ ಉನ್ನತ ಮಟ್ಟದ ಲೇಖಕರೆಂದೇ ಪರಿಗಣಿಸಬೇಕು. ಬೆಟಗೇರಿ ಕೃಷ್ಣಶರ್ಮರು ನವೋದಯ ಕಾಲದ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ತಮ್ಮ ಲೇಖನಿಯನ್ನು ದುಡಿಸಿಕೊಂಡವರು. ಮುಂದೆ 'ಜಯಂತಿ' ಮಾಸಪತ್ರಿಕೆಗೆ ತಮ್ಮ ಕಾರ್ಯ ಕ್ಷೇತ್ರವನ್ನು ಸೀಮಿತಗೊಳಿಸಿದ್ದರಿಂದ ಅಷ್ಟಾಗಿ ಎದ್ದು

ಕಾಣಲಿಲ್ಲ. ಪುರಂದರ ದಾಸರ, ಕನಕದಾಸರ ಕೀರ್ತನೆಗಳನ್ನು ಅವರು ಸಂಪಾದಿಸಿದ್ದು ಇಂದಿಗೂ ಅವರ ಆವೃತ್ತಿ ಪ್ರಾಮಾಣ್ಯವೆಂದು ತಿಳಿಯಲಾಗುತ್ತದೆ. ಅವರ ಇಳಿವಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಅವರಿಗೆ ಗೌರವ ಡಾಕ್ಟರೇಟ್ ಕೊಟ್ಟದ್ದನ್ನು ಬಿಟ್ಟರೆ ಮತ್ತಾವ ಪ್ರಶಸ್ತಿಯೂ ಅವರಿಗೆ ಸಂದುದಿಲ್ಲ.

ಆದರೆ ಈ ನಾಲ್ವರಲ್ಲಿಯೇ ಹೊಂದಾಣಿಕೆ ಇರಲಿಲ್ಲ. ಶಂ.ಬಾ. ಮತ್ತು ಬೆಟಗೇರಿಯವರು ಆತ್ಮೀಯ ಸ್ನೇಹಿತರಾದ್ದರಿಂದ ಬೇಂದ್ರೆ ವಿರೋಧವನ್ನು ಬೆಟಗೇರಿಯವರು ಕೊನೆಯ ವರೆಗೆ ಕಟ್ಟಿಕೊಳ್ಳಬೇಕಾಯಿತು. ಜಯಂತಿ ಪತ್ರಿಕೆಗೆ ನಿಯಮಿತವಾಗಿ ಶ್ರೀರಂಗರು ಲೇಕನ ಬರೆಯುತ್ತಿದ್ದರು. ಆ ಮೂಲಕ ಪತ್ರಿಕೆಯ ಮೌಲ್ಯವನ್ನು ಹೆಚ್ಚಿಸಿದಾಗ ಹಠಾತ್ತನೆ ನಿಲ್ಲಿಸಿದ್ದರಿಂದ ಅವರ ಒಡನಾಟವೂ ಒಡೆದು ಹೋಯಿತು.

ಈ ನಾಲ್ವರಲ್ಲಿ ಮೈತ್ರೀಭಾವ ಇದ್ದಿದ್ದರೆ? ಅವರ ಅನಂತರದ ಪೀಳಿಗೆಯ ಲೇಖಕರಿಗೆ ಎಷ್ಟೊಂದು ಪ್ರಯೋಜನಕಾರಿಯಾಗುತಿತ್ತು! ಅದೇ ರೀತಿ ಮೈಸೂರು ಕಡೆಯಲ್ಲಿದ್ದ ಎ.ಆರ್. ಕೃಷ್ಣಶಾಸ್ತ್ರಿ ಮತ್ತು ಟಿ. ಎಸ್. ವೆಂಕಣ್ಣಯ್ಯ, ಡಿ. ಎಲ್. ಎನ್. ಹಾಗೂ ತೀ. ನಂ. ಶ್ರೀ. ಈ ನಾಲ್ವರು ನೆನಪಿಗೆ ಬರುತ್ತಾರೆ. ಅವರಿಂದ ವಿದ್ಯೆ ಕಲಿತು ಮುಂದೆ ಬಂದ ಇಂದು ಹಿರಿಯ ಲೇಖಕರೆನಿಸಿದ ಸಂದರ್ಭವನ್ನೂ ನೆನೆದು ಹೋಲಿಸಿ ನೋಡಬೇಕು. ಆ ನಾಲ್ವರು ಮತ್ತು ಅವರ ಶಿಷ್ಯ ಪರಂಪರೆಯಿಂದಾಗಿ ಮೈಸೂರು ದಕ್ಷಿಣ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎನಿಸಿತು. ಉತ್ತರ ಕರ್ನಾಟಕಕ್ಕೆ ಅನ್ವಯಿಸಿ ಈ ಶತಮಾನದ ಮಧ್ಯದಲ್ಲಿ ಆ ಸ್ಥಾನ ಪಡೆಯಬಹುದಾಗಿದ್ದ ಧಾರವಾಡಕ್ಕೆ ತಪ್ಪಿಹೋಯಿತು.

ಲೇಖಕ-ಲೇಖಕರಲ್ಲಿ ವೈಮನಸ್ಸು, ವೈರತ್ವಗಳು ಏಕೆ ಉಂಟಾಗುತ್ತವೆ? ಈ ಸ್ಥಿತಿಗೆ ಸ್ಫೋಟ ಸಾಧ್ಯತೆಯ(vulnerable)ಎರಡು ಸ್ಥಾನಗಳಿವೆ. ಅವೆಂದರೆ ಪತ್ರಿಕಾರಂಗ ಹಾಗೂ ಪ್ರೊಫೆಸರಿಕೆ. ಪತ್ರಿಕಾ ಸಂಪಾದಕ ಇನ್ನೊಬ್ಬ ಸಾಹಿತಿಯನ್ನು ಇಲ್ಲವೆ ಅವನ ಅಭಿಪ್ರಾಯವನ್ನು ತುಸುವೇ ಆಗಲಿ ಅಲ್ಲಗಳೆದರೆ ಆ ಸಾಹಿತಿ - ಸುಮ್ಮನುಳಿಯಲಾರ. ಇನ್ನು ಅವನ ಬಗ್ಗೆ ಸಂಪಾದಕನು ವ್ಯಂಗ್ಯವಾಗಿ ಬರೆದರಂತೂ ಮುಗಿದೇ ಹೋಯಿತು.

ಇದೇ ಪತ್ರಿಕಾರಂಗದಲ್ಲಿ ವಾಗ್ವಾದಕ್ಕೆ ಕಾರಣವಾಗುವ ಅಂಶಗಳಿವೆ. ಅವುಗಳಲ್ಲಿ ಪುಸ್ತಕ ವಿಮರ್ಶೆ ಮಹತ್ವದ್ದು. ಆ ವಿಮರ್ಶೆಯಲ್ಲಿ ಒಂದು ಸಣ್ಣ ದೋಷವನ್ನು ಎತ್ತಿ ತೋರಿಸಿದರೂ ಆ ಗ್ರಂಥಕರ್ತೃವು ಅದನ್ನು ಮನಸ್ಸಿನಲ್ಲಿ ಹಿಡಿಯುತ್ತಾನೆ. ಅದರ ಉತ್ಕಟತೆಯನ್ನು ಅವಲಂಬಿಸಿ ಅದು ಇನ್ನೆಲ್ಲಾದರೂ ವ್ಯಕ್ತವಾಗಬಹುದು. ಬೇರೆ ಯಾವುದಾದರೂ ಸಾಹಿತಿಗೆ, ಸಮೀಕ್ಷೆ ಇಲ್ಲವೆ ಚಿಂತನೆಯಲ್ಲಿ ವಿರೋಧಾಭಿಪ್ರಾಯ ಬಂದಾಗಲಂತೂ ಸಂಬಂಧಪಟ್ಟ ಲೇಖಕ. ಅದಕ್ಕೆ ಒಂದಿಲ್ಲೊಂದು ರೀತಿಯಲ್ಲಿ

ಪ್ರತಿಕ್ರಿಯಿಸುವವನೇ. 'ವಾಚಕವಾಣಿ'ಗಳಲ್ಲಿ ಬಂದ ಸರಳ ಹಾಗೂ ನಿಷ್ಪಾಪದ ಅಭಿಪ್ರಾಯವೂ ಒಮ್ಮೊಮ್ಮೆ ಕಿಡಿ ಕೆದರಬಹುದು.

ಒಮ್ಮೊಮ್ಮೆ ನಮಗೆ ವಿಶೇಷ ಮೆಚ್ಚಿಕೆಯಾದ ಒಬ್ಬ ಲೇಖಕ ಇಲ್ಲವೆ ಅವನ ಕೃತಿ ರಚನೆಯ ಬಗ್ಗೆ ಯಾರಾದರೂ ಹೊಗಳಿದ್ದೇ ಆದರೆ, ಆ ಲೇಖಕನಿಗೆ ಬೇಡವಾದ ಇನ್ನೊಬ್ಬ ಸಾಹಿತಿಗೆ ಆ ಮೆಚ್ಚಿಗೆ ಸಹನವಾಗುವುದಿಲ್ಲ. ಸರಿ ಮೆಚ್ಚಿಗೆಯ ಲೇಖನವನ್ನು ಬರೆವಾತನ ಮೇಲೆ ಈ ಇನ್ನೊಬ್ಬ ಸಾಹಿತಿ ತನ್ನ ಅಸಮಧಾನವನ್ನು ವ್ಯಕ್ತಪಡಿಸಬಹುದು.

ಹೀಗೇ ಒಂದು ವಿಚಾರಗೋಷ್ಠಿಯ ಕಾರ್ಯಕ್ರಮ; ವೇದಿಕೆಯ ಮೇಲೆ ನಾಲ್ಕು ಜನ 'ದೊಡ್ಡ' ಸಾಹಿತಿಗಳು, ಪ್ರೊಫೆಸರ್ ಜನರು ವಿರಾಜಮಾನರಾಗಿದ್ದಾರೆ. ಕಾರ್ಯಕರ್ತರಲ್ಲೊಬ್ಬ ಅವರಲ್ಲಿ ಒಬ್ಬೊಬ್ಬರನ್ನು ಪರಿಚಯಿಸುತ್ತಿದ್ದಾರೆ. "ಓ! ಈತ ನನ್ನ ಬಗ್ಗೆ ಹೇಳಬೇಕಾದ್ದನ್ನೆಲ್ಲ ಹೇಳಲಿಲ್ಲ. ಅದೇ - ಇವರನ್ನು ಎಷ್ಟೊಂದು ಹೊಗಳುತ್ತಿದ್ದಾನೆ" ಎಂದು ಒಬ್ಬ ಪ್ರೊಫೆಸರ ಸಾಹೇಬರಿಗೆ ಅನಿಸುತ್ತದೆ; ಮನಸ್ಸಿನ ಮೂಲೆಯಲ್ಲಿ ಒಂದೆಡೆ ಬಹುಕಾಲ ಉಳಿದಿರುತ್ತದೆ.

ಇದು ಇನ್ನೊಂದು ಬಗೆಯದು. ಒಬ್ಬ ಲೇಖಕ ತನ್ನೊಬ್ಬ ಮಿತ್ರ ಸಾಹಿತಿಯ ಬಗ್ಗೆ ಅವನು ಮಿತ್ರನೇ ಆದ್ದರಿಂದ ತುಸು ಲಘುವಾಗಿ ಬೇರೊಬ್ಬರೆದುರು ಆಡುತ್ತಾನೆ. ಆ ಬೇರೊಬ್ಬ ವ್ಯಕ್ತಿ ಅದರ ಇಂಗಿತವನ್ನು ಸರಿಯಾಗಿ ಗ್ರಹಿಸದೇ ತುಸು ಹೆಚ್ಚು ಕಡಿಮೆ ಮಾಡಿ "ನೋಡಿ, ನಿಮ್ಮ ಗೆಳೆಯ ಹೀಗೆಂದ" ಎಂದು ಹೇಳುತ್ತಾನೆ. ಅಷ್ಟು ಸಾಕು, ವಿರಸಭಾವನೆ ಮೂಡಿ ಬೆಳೆಯುವುದಕ್ಕೆ.

ಇಂಥವು ಇನ್ನೂ ಹತ್ತಾರು ಕ್ಷುಲ್ಲಕ ವಿಷಯಗಳು ಮನಸ್ತಾಪದ ಕಿಡಿಗಳನ್ನು ಏಳಿಸಬಹುದು. ತಿಳಿಯಬೇಕಾದ ಮಾತೆಂದರೆ ಇವುಗಳ ಮೂಲ ಕಾರಣ ಒಂದೇ ಅದುವೆ; ಸ್ವಪ್ರತಿಷ್ಠೆ. ಅಹಂಮನ್ಯತೆ. ತಾನು ಬರೆದದ್ದು ಶ್ರೇಷ್ಠ, ಆದ್ದರಿಂದ ತಾನೂ ಶ್ರೇಷ್ಠ - ಎಂಬ ಸ್ವಯಂಮನ್ನಣೆ.

ದುರ್ದೈವದ ಸಂಗತಿ ಎಂದರೆ ತನ್ನನ್ನು ವಿರೋಧಿಸಿದ ಸಾಹಿತಿಯನ್ನು ನೇರವಾಗಿ ಎದುರಿಸಲಾಗದಿದ್ದರೆ ಆ ಸಾಹಿತಿಯ ಅನ್ಯ ದುರ್ಬಲ ಬರಹವನ್ನಾಗಲೀ ಖಾಸಗೀ ಜೀವನದ ಘಟನೆಯನ್ನಾಗಲೀ (ಹೆಣ್ಣು - ಗಂಡು, ಕುಡಿತ, ಭಾಷಣದಲ್ಲಿ ಹಿಂದೊಮ್ಮೆ ಆಡಿದ ತಪ್ಪು ಅಭಿಪ್ರಾಯ - ಸುಳ್ಳು ಮುಂತಾದವು) ಎತ್ತಿಕೊಂಡು ಟೀಕಿಸಬೇಕೆನ್ನುವ ಮನೋವೃತ್ತಿ. ಅಂತೂ ವೈಚಾರಿಕ ಭಿನ್ನಾಭಿಪ್ರಾಯದಿಂದ ಆರಂಭವಾಗಿ, ವಾಗ್ಯುದ್ಧ, ಲೇಖನಯುದ್ಧಗಳ ಮೂಲಕ ವಿಸ್ತಾರಗೊಂಡು, ಖಾಸಗಿ ರೀತಿಯಲ್ಲಿ ಕೆಸರೆರಚುವುದು ನಡೆದು, ಕೊನೆಯಲ್ಲಿ ಆಜೀವ ವೈರತ್ವದಲ್ಲಿ ಪರ್ಯವಸಾನವಾಗುವುದೇ ಹೆಚ್ಚು ಅಲವೆ? ಅರ್ಥವಾಯಿತೆ ಬಾಲಸುಬ್ರಹ್ಮಣ್ಯಂ.

ಕನ್ನಡ ಪ್ರೊಫೆಸರ್ ಜನರ ಬಗ್ಗೆ ಹೆಚ್ಚು ಹೇಳ ಹೋಗುವುದಿಲ್ಲ ಯಾಕೆಂದರೆ ನಾನೂ ಆ ವರ್ಗಕ್ಕೆ ಸೇರಿದವನೇ ! ಇವರಲ್ಲಿ ಕಾಲೇಜಿನ ಪ್ರೊಫೆಸರರು, ಹಾಗೂ ಯುನಿವರ್ಸಿಟಿ ಪ್ರೊಫೆಸರರು ಎಂದು ಎರಡು ವಿಧ. ಕಾಲೇಜಿನವರ ಜಗಳ ಬಹಳಷ್ಟು ಬಹಿರಂಗಗೊಳ್ಳುವುದಿಲ್ಲ, ಈ ಬಾಬತ್ತಿನಲ್ಲಿ ತುಸು ಕೈಲಾಗದವರು. ಅದೇ ಯುನಿವರ್ಸಿಟಿ ಪ್ರೊಫೆಸರುಗಳು ಅವರಿಗಿಂತ ಹೆಚ್ಚು ಬುದ್ಧಿವಂತರು. ಕನ್ನಡ ಸಾಹಿತ್ಯವನ್ನು ಕರತಲಾಮಲಕವಾಗಿ ಮಾಡಿಕೊಂಡವರು. ಕಾಲೇಜ್ ಅಧ್ಯಾಪಕರಿಗಿಂತ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿ ಹೆಸರು ಮಾಡಿಕೊಂಡವರು. ಅಂತೆಯೇ ತಮ್ಮಲ್ಲಿ ವೈಮನಸ್ಸು ಇದೆ ಎಂಬುದನ್ನು ಹೊರಗೆ ತೋರಿಸಿಕೊಳ್ಳದೇ, ಈರ್ಷೆ, ದ್ವೇಷ, ಕೋಪಾದಿ ಗುಣಗಳನ್ನು ಚಾಣಾಕ್ಷತನದಿಂದ ವ್ಯಕ್ತಪಡಿಸಬಲ್ಲರು. ಪ್ರಸಂಗ ಬಂದರೆ ಅದನ್ನು ಲೇಖನ, ಭಾಷಣಗಳ ಮೂಲಕ ಸ್ಫೋಟಗೊಳಿಸುವ ಸಾಮರ್ಥ್ಯವುಳ್ಳವರು. ಈ ವಿಷಯದಲ್ಲಿ ಅವರಿಂದ ರಾಜಕಾರಣಿಗಳೂ ಸಾಕಷ್ಟು ಕಲಿಯಬಹುದಾಗಿದೆ.

ಸಾಹಿತಿಗಳಲ್ಲಿ ವೈಚಾರಿಕ 'ಭಿನ್ನಾಭಿಪ್ರಾಯ ಬರುವುದು ಸಹಜವಾದದ್ದೇ . ಈ ಭಿನ್ನಾಭಿಪ್ರಾಯವನ್ನು ವೈಯಕ್ತಿಕ ನೆಲೆಯಲ್ಲಿ ಎಷ್ಟರಮಟ್ಟಿಗೆ ತರಬೇಕು?

ಕಳೆದ ಶತಮಾನದಲ್ಲಿ ನಡೆದ ರೈಸ್-ಫ್ಲೀಟ್‌ರ ನಡುವಿನ ವಾದವಿವಾದ ಪರಿಚಿತವಾದದ್ದು. ಇಬ್ಬರೂ ಶಾಸನ ಸಂಶೋಧನೆಯಲ್ಲಿ ಘಟಾನುಘಟಿಗಳು. ಯಾವುದೇ ಶಾಸನವನ್ನು ಅರ್ಥವಿಸಲು ರೈಸ್ ತಪ್ಪಿದ್ದಾರೆ ಎಂದು ಅನಿಸಿದಾಗ ಫ್ಲೀಟ್ ವಿರೋಧಿಸಬೇಕು; ಅದನ್ನು ರೈಸ್ ಒಪ್ಪದೇ ಹೋದರೆ, ಫ್ಲೀಟರು ಹೆಚ್ಚಿನ ಆಧಾರ ಕೊಟ್ಟು ಸಮರ್ಥಿಸಿಕೊಳ್ಳುತ್ತಿದ್ದರು. ಹೀಗೇ ನಡೆದಾಗ, "ಓ, ಇವರು ಶಾಸನ ವಿಚಾರದಲ್ಲಿ ತಾನು ಹೆಚ್ಚು ಬುದ್ಧಿವಂತ. ತಾನು ಹೆಚ್ಚು ಎಂದು ಅಹಂಭಾವವನ್ನು ತೋರ್ಪಡಿಸುತ್ತಿದ್ದಾರೆ!" ಎಂದು ಹೊರಗಿನವರಿಗೆ ಅನಿಸುತ್ತಿತ್ತು. ಆದರೆ ಬೇರೊಂದು ಶಾಸನ ವಿಚಾರದಲ್ಲಿ ಸಂಶಯ ಬಂದಾಗ ಫ್ಲೀಟರು ಯಾವ ಬಿಗುಮಾನ ಇಟ್ಟುಕೊಳ್ಳದೆ ರೈಸರಿಗೆ ಪತ್ರ ಬರೆಯುತ್ತಿದ್ದರು! ಸಣ್ಣ ಮಕ್ಕಳು ಜಗಳಾಡಿದರೆ, ಮರುಕ್ಷಣವಲ್ಲಿ ಮರೆತು ಮತ್ತೆ ಕೂಡಿ ಆಡುತ್ತಾರಲ್ಲವೆ ಹಾಗೆಯೇ ಇದು.

ಇದೇ ಶತಮಾನದ ಪೂರ್ವಾರ್ಧದಲ್ಲಿ ನಡೆದ ಇನ್ನಿಬ್ಬರು ವಿದ್ವಾಂಸರ ಜಗಳ ನೆನಪಿಗೆ ಬರುತ್ತದೆ. ಕವಿಚರಿತಕಾರರಾದ ಆರ್. ನರಸಿಂಹಾಚಾರ್ಯ ಹಾಗೂ ಎ. ವೆಂಕಟಸುಬ್ಬಯ್ಯ ಇವರು ಇಬ್ಬರೂ ಪಾಂಡಿತ್ಯದಲ್ಲಿ ಸಮಾನರು. ಆದರೂ ಆರ್. ಎನ್. ಹೆಸರು ಎದ್ದು ಕಾಣುವಂತಹದು. ಜೊತೆಗೆ ಅವರು ಹಿರಿಯ ಅಧಿಕಾರಿ ಆಗಿದ್ದರಲ್ಲವೆ? ಕವಿಚರಿತೆಯಲ್ಲಿ ಅನೇಕ ಕಡೆಗೆ ಕಾಲನಿರ್ಣಯ ತಪ್ಪಿದ್ದನ್ನು ಎ.ವೆಂ. ಎತ್ತಿತೋರಿಸಿದಾಗ ಆರ್.ಎನ್. ಕೆಲವನ್ನು ಒಪ್ಪಿಕೊಂಡಿದ್ದಾರೆ, ಪ್ರಾಂಜಲವಾಗಿ. ಒಪ್ಪದಿದ್ದಾಗ? ಪುನಃ ವೆಂಕಟಸುಬ್ಬಯ್ಯನವರು ಉತ್ತರಿಸುತ್ತಿದ್ದರು.

ಆದರೆ ವೈಯಕ್ತಿಕ ನೆಲೆಯಲ್ಲಿ ಆ ಭೇದಾಭಿಪ್ರಾಯ ಎಳ್ಳಷ್ಟೂ ವ್ಯಕ್ತವಾಗಲಿಲ್ಲ.

ಈ ಶತಮಾನದ ಮಧ್ಯದ ಇನ್ನೊಂದು ಇಂಥದೇ ಘಟನೆಯನ್ನು ಉಲ್ಲೇಖಿಸಿ ಮುಗಿಸುವೆ. ಇದು ಗೋವಿಂದ ಪೈ ಮತ್ತು ಆ.ನೇ. ಉಪಾಧ್ಯೆ ಅವರಿಗೆ ಸಂಬಂಧಿಸಿದ್ದು. ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಕ್ರಿಸ್ತ ಶಕರಾಂಭಕ್ಕೆ ಒಯ್ದದ್ದು ತಿಳಿದ ವಿಷಯ. ಅದನ್ನು ಖಂಡಿಸಿ ಉಪಾಧ್ಯೆ ಅವರು ಲೇಖ ಬರೆದರು. ಓರ್ವ ಹಿರಿಯ ವಿದ್ವಾಂಸರ ಅಭಿಪ್ರಾಯವನ್ನು ಅಲ್ಲಗಳೆದಿರುವನೆಂಬ ಹಮ್ಮು ಆ ಲೇಖನದಲ್ಲಿ ಸೂಕ್ಷ್ಮವಾಗಿ ತೋರಿದ್ದರೆ ತಪ್ಪೇನಲ್ಲ. ಅದಾಗಿ ಕೆಲವು ತಿಂಗಳು ಕಳೆದ ಮೇಲೆ ಪೈಯವರು ಪುಣೆಯಲ್ಲಿಯ ಭಂಡಾರಕರ ಸಂಶೋಧನ ಸಂಸ್ಥೆಗೆ ಹೋಗಿದ್ದಾಗ ಅಲ್ಲಿಯ ಮಿತ್ರ ವಿದ್ವಾಂಸ ಡಾ. ಪಿ. ಕೆ. ಗೋಡೆಯವರನ್ನು ಕಂಡರು. ಗೋಡೆ ಹೇಳಿದರು : "ಕರ್ನಾಟಕದಿಂದ ಇಲ್ಲಿ ಇನ್ನೊಬ್ಬ ತರುಣ ವಿದ್ವಾಂಸರು ಬಂದಿದ್ದಾರೆ. ಗುರುತು ಮಾಡಿಕೊಡುವೆ" ಎಂದು. ಅವರೇ ಆ. ನೇ. ಉಪಾಧ್ಯೆ. ಇಬ್ಬರೂ ಈ ಹಿಂದೆ ಭೇಟಿಯಾದುದಿಲ್ಲ. ಪರಸ್ಪರ ಸಂಧಿಸಿದಾಗ ಉಪಾಧ್ಯೆ ಅವರಿಗೆ ಅಳುಕು. ಆದರೆ ಪೈಗಳು ಉಪಾಧ್ಯೆ ಅವರ ಗುರುತಾದೊಡನೆಯೇ, ಬಲವಾಗಿ ಅಪ್ಪಿಕೊಂಡರಂತೆ "ಎಷ್ಟು ಚೆನ್ನಾಗಿ ವಿಷಯ ಮಂಡಿಸಿದ್ದೀರಿ! ಒಪ್ಪಿದೆ" ಎಂದು ಅಭಿನಂದಿಸಿದರಂತೆ. ಈ ಬಗೆಯ ತಪ್ಪು ಒಪ್ಪಿಗೆಯ ಪ್ರಸಂಗಗಳು ಈಗಿನ ದಿನಗಳಲ್ಲಿ ಎಷ್ಟರ ಮಟ್ಟಿಗೆ ನಡೆಯಿತ್ತಿವೆ?

ಒಬ್ಬ ಮಿತ್ರ ಸಾಹಿತಿಯಿಂದ ತನಗೆ ವೈಯಕ್ತಿಕ ರೀತಿಯ ಅನ್ಯಾಯವಾಗಿದೆ ಎಂದು ಭಾವಿಸಿದಾಗ ವೈಚಾರಿಕ ಅಭಿಪ್ರಾಯದಲ್ಲಿ ಆ ವಿರಸ ತಲೆದೋರುತ್ತದೆ. ಅದರಂತೆ ವೈಚಾರಿಕ ಭಿನ್ನಾಭಿಪ್ರಾಯವಿದ್ದಲ್ಲಿ ವ್ಯಕ್ತಿಗತ ಸಂಬಂಧದಲ್ಲಿ ದುಷ್ಪರಿಣಾಮ ಮಾಡುತ್ತದೆ. ಈಗಿನ ದಿನಗಳಲ್ಲಿ ಎರಡೂ ಪ್ರಸಂಗಗಳ ತಳಹದಿ ಒಂದೇ. ಅದುವೆ ಅಹಂಮನ್ಯತೆ. ಅರ್ಥಾತ್ Ego.

'ದೊಡ್ಡವರದೆಲ್ಲವೂ ದೊಡ್ಡದೆನ್ನುವ ಮಾತು ಸುಳ್ಳಲ್ಲ' ಎಂಬುದು ಆರು ದಶಕಗಳ ಹಿಂದೆ ಮೊಳಗಿದ ಕವಿವಾಣಿ. ಈಗ? ಅದು 'ಸುಳ್ಳು' ಎಂದು ಹೇಳುವ ಪರಿಸ್ಥಿತಿಯೊದಗಿದೆ. ಸಾಮಾನ್ಯ ಬುದ್ಧಿಜೀವಿಗಳ ದೃಷ್ಟಿಯಲ್ಲಿ ನಾವು ಅಲ್ಪ ವ್ಯಕ್ತಿಗಳಾಗಿ ತೋರಿಸಿಕೊಂಡಿದ್ದೇವೆ.

ವಿಶೇಷ ಸೂಚನೆ: ಈ ಲೇಖನದಲ್ಲಿ ಹಲವಾರು ಪ್ರಸಂಗಗಳು, ಆಡಿದ ಮಾತುಗಳು ಬರುತ್ತವೆ. ಅವನ್ನು ಈಗಾಗಲೇ ಪ್ರಕಟವಾದ ಪುಸ್ತಕಗಳಿಂದ ಹಾಗೂ ಬಿಡಿ ಲೇಖನಗಳಿಂದ ಎತ್ತಿಕೊಂಡಿದೆ. ಅದರಂತೆ, ಬೇರೆ ಪ್ರಸಂಗಗಳನ್ನು ಅಧಿಕೃತವಾಗಿ ಅರಿತಂಥ ಕೆಲವು ವ್ಯಕ್ತಿಗಳಿದಂಲೂ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇಲ್ಲಿ ಬರುವ ಘಟನೆ ಅಥವಾ ಆಡಿದ ಮಾತು ಯಾವುದನ್ನೂ ಕಲ್ಪಿಸಿ ಹೇಳಿಲ್ಲ ಎಂಬುದನ್ನು ದಯವಿಟ್ಟು ಗಮನಿಸುವುದು . ಇದು ಚಿಂತನಪರ ವಿವೇಚನೆಯಾದ್ದರಿಂದ ಆಧಾರಗಳನ್ನು ಕೊಡಹೋಗಿಲ್ಲ.- ಎಂಬುದನ್ನೂ ಗಮನಿಸಬೇಕು.

***

೧೯. ಹೀಗಿದ್ದಾರೆ ಈ ಭೈರಪ್ಪನವರು

ಭೈರಪ್ಪ ಇಂದಿನ ನಮ್ಮ ಅತ್ಯಂತ ಜನಪ್ರಿಯ ಕಾದಂಬರಿಕಾರರು. ಕನಕಪುರದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು. ಸರಿಯೇ. ಅವರು ನೋಡಲು ಹೇಗಿದ್ದಾರೆ? ಅವರ ಊಟ ಉಡಿಗೆ , ಮಾತು -ನಡತೆ, ಅವರ ಸ್ನೇಹಿತ ವರ್ಗ, ಅವರು ಕಾದಂಬರಿ ಬರೆಯೋ ವಿಧಾನ - ಈ ತರಹದ ಸಾಮಾನ್ಯ ಕುತೂಹಲ ಅನೇಕಾನೇಕರಿಗೆ, ಅವರ ಕಾದಂಬರಿಗಳನ್ನು ಓದದವರಿಗೂ ಇರುವುದು ಸಹಜ.

ಅವರ ಯಾವ ಕಾದಂಬರಿ -ಪುಸ್ತಕಗಳಲ್ಲಿಯೂ ಅವರ ಫೋಟೋ ಇರುವುದಿಲ್ಲ. ಸಭೆ -ಸಮಾರಂಭಗಳಲ್ಲಿ ಭಾಗವಹಿಸದ ಕಾರಣದಿಂದ ಪೇಪರುಗಳಲ್ಲಿ ಫೋಟೋ ಪ್ರಕಟವಾದ ಸಂದರ್ಭಗಳೂ ಕಡಿಮೆಯೇ. ಸಮ್ಮೇಳನಾಧ್ಯಕ್ಷರಾಗಿದ್ದುದಾಗಿನಿಂದ ಮಾತ್ರ ಅವರ ಸಾದಾಸೀದದರ್ಶನ ಆಗ್ತಾ ಇದೆ. ಅದರಂತೆ ಅವರ ಉಡುಗೆ-ತೊಡುಗೆ ದಿನಚರಿ ನಮ್ಮ ನಿಮ್ಮ ಹಾಗೇ ಇದೆ. ಮತ್ತೆ ಅವರೀಗ ವಾನಪ್ರಸ್ಥಾಶ್ರಮಿಗಳು. ಆದ್ದರಿಂದ ಬೆಳಗಿನ ವಾಕಿಂಗ್, ಒಂದಿಷ್ಟು ವ್ಯಾಯಾಮ ತಪ್ಪದೇ ಮಾಡುತ್ತಾರೆ.

ಜಂಟಲ್‌ಮನ್ ಅಥವಾ ಸದ್ಗೃಹಸ್ಥರಿಗೆ ಕೆಲವು ಸಚ್ಚಟಗಳು ಇರುತ್ತವೆ. ಅವೆಂದರೆ ಚಹಾ - ಕಾಫಿ ಕುಡಿಯೋದು, ಆಗೀಗ ಎಲೆ -ಅಡಿಕೆ, ಸಿಗರೇಟು ಸೇದೋದು, ನಡುಬೀದಿಯಲ್ಲಿ ಹೊರಟಾಗ ಆಕಸ್ಮಾತ್ ದೇವಸ್ಥಾನ ಕಂಡರೆ ಕಾಲನ್ನು ಚಪ್ಪಲಿಯಿಂದ ಅರ್ಧಕ್ಕೆ ಹೊರತೆಗೆದು ನಮಸ್ಕಾರ ಮಾಡೋದು. ಯಾರಾದರೂ ಭೆಟ್ಟಿಯಾದರೆ 'ಏನು? ಭೆಟ್ಟೀನೇ ಇಲ್ಲ. ಹೇಗಿದ್ದೀರಿ? ಮನೀಕಡೆ ಬರ್‍ರೆಲ್ಲ" ಎಂಬ ಉಪಚಾರದ ಮಾತಾಡೋದು ಇತ್ಯಾದಿ - ಇವೆಲ್ಲಾ ಸದ್ಗೃಹಸ್ಥರ ಲಕ್ಷಣ. ಆದರೆ ಭೈರಪ್ಪ ಇವಾವುದನ್ನೂ ಮಾಡೋದಿಲ್ಲ. ಆ ಅರ್ಥದಲ್ಲಿ ಅವರು ಸದ್ಗೃಹಸ್ಥರಲ್ಲ!

ತಾವು ಚಹಾ -ಕಾಫಿ ತಗೊಳ್ಳದಿದ್ರೂ, 'ಮನೀ ಕಡೆ ಬರ್‍ರೆಲ್ಲಾ' ಅಂತ ಕರೆಯದಿದ್ದರೂ ಅವರ ಮನಿಗೆ ನೀವು ಹೋಗೋ ಪ್ರಸಂಗ ಬಂದರೆ ಚೆನ್ನಾಗಿ ಆತಿಥ್ಯ ಮಾಡ್ತಾರೆ. ನೀವು ಬರುವುದನ್ನು ತಮ್ಮ ಶ್ರೀಮತಿಗೆ ತಿಳಿಸಿ ನಿಮಗೆ ರುಚಿಸಬಹುದಾದ ಪದಾರ್ಥಗಳನ್ನು ತಯಾರಿಸ ಹೇಳ್ತಾರೆ.

ಬೆಳಗಿನ ಸಮಯ; ಅವರ ಮನೆಯಲ್ಲಿ ನೀವು ಉಪ್ಪಿಟ್ಟನ್ನೋ , ಅವಲಕ್ಕಿಯನ್ನೋ ತಿನ್ನುತ್ತಾ ಇದ್ದೀರಿ. ಆಗ ಅವರು "ಉಪ್ಪಿನಕಾಯಿ, ಚಟ್ನಿಪುಡಿ ಒಂದಿಷ್ಟು ಬೇಕೆ? ಇದರಲ್ಲಿ ಮೆಣಸಿನಕಾಯಿ ಹಾಕಿಲ್ಲ. ಯಾಕಂದ್ರೆ ನಾನು ತಿನ್ನೋಲ್ಲ'" ಎನ್ನುತ್ತಾರೆ ."ಏನು ಕಾರಣ?" ಎಂದು ನಿಮ್ಮ ಪ್ರಶ್ನೆ. ಅದಕ್ಕೆ ಉತ್ತರವಾಗಿ "ಮೆಣಸಿನಕಾಯಿಯಲ್ಲಿ ಯಾವುದೇ ವಿಟಮಿನ್ ಸತ್ವ ಇರೂದಿಲ್ಲ. ನಾನು ತಿಳ್ಕಂಡಿದೀನಿ" ಎನ್ನುತ್ತಾರೆ. ನಮಗೆ ಯಾವದಾದರೊಂದು ಖಾದ್ಯ ಪದಾರ್ಥ ಬೇಡವಾಗಿದ್ದರೆ , ಸೇರದಿದ್ದರೆ ಅಲ್ಲಿಗೆ ಬಿಟ್ಟು ಬಿಡುತ್ತೇವೆ. ಭೈರಪ್ಪ ಅದರ ಪೂರ್ವಾಪರಾನೆಲ್ಲಾ ಶೋಧಿಸ ಹೋಗ್ತಾರೆ. ಬೇರಾವುದೇ ವಿಷಯವಿದ್ದರೂ ಹಾಗೇನೇ.

ಇನ್ನು ಅವರೇ ನಿಮ್ಮ ಮನೆಗೆ ಅತಿಥಿಯಾಗಿ ಬಂದರೆಂದು ತಿಳಿಯಿರಿ. ನಿಮಗೊಂದು ಗುಟ್ಟು ಹೇಳ್ತೀನಿ. ಒಳ್ಳೊಳ್ಳೇ ಸಿಹಿ ಭಕ್ಷ್ಯ ಮಾಡಿಸಿರಿ. ಹೋಳಿಗೆ, ಲಾಡು, ಪಾಯಸ ಯಾವುದೂ ಆದೀತು. ಸಿಹಿ ಎಂದರೆ ಅವರಿಗೆ ಪಂಚಪ್ರಾಣ.

ಆದರೆ ಅವರು ಅಷ್ಟು ಸಲೀಸಾಗಿ ಇನ್ನೊಬ್ಬರ ಮನೆಗೆ ಹೋಗುವವರಲ್ಲ. ಆ host ವ್ಯಕ್ತಿ ತಮಗೆ ಆತ್ಮೀಯರಾಗಿರಬೇಕು. ಜಾತ್ಯತಃ ಸುಸ್ವಭಾವದವರಿದ್ದ ಬಗ್ಗೆ ಖಾತ್ರಿಯಾಗಿರಬೇಕು. ಆಗ ಆತಿಥ್ಯದಲ್ಲಿ ಏನು ಹೆಚ್ಚು ಕಡಿಮೆಯಾದರೂ ಭೈರಪ್ಪನವರ ಗಮನಕ್ಕೆ ಬರೋದೇ ಇಲ್ಲ. ಅವರಾಗಿ 'ನಿಮ್ಮಲ್ಲಿಗೆ ಬರ್ತೇನೆ' ಅಂತ ಹೇಳೋ ಪ್ರಸಂಗಗಳು, ಬೇರೆ ಊರಿಗೆ ಹೋದಾಗ ಇರುತ್ತವೆ. ಅವೆಂದರೆ ಸಂಗೀತ ಕಾರ್ಯಕ್ರಮ ಹಾಗೂ ತಿರುಗಾಟ. 'ಅತೀ' ಎನಿಸುವಷ್ಟು ಅವರೆಡನ್ನು ರೂಢಿಸಿಕೊಂಡಿದ್ದಾರೆ.

ಸಂಗೀತ ಎಂದರೆ ಹಿಂದೂಸ್ತಾನೀ ಸಂಗೀತವೇ. ಮೈಸೂರು ಸೀಮೆಯಲ್ಲಿ ಹುಟ್ಟಿ ಬೆಳೆದವರಾದರೂ, ಆಗೀಗ ಕೇಳಿಸಿಕೊಳ್ಳುತ್ತಿದ್ದರೂ ಅವರು ಒಲಿದದ್ದು ಈಯೊಂದು ಸಂಗೀತಕ್ಕೇನೇ. ಅದೂ ಒಂದೇ ಒಂದು ಕಾರ್ಯಕ್ರಮವನ್ನು ಕೇಳಿದ ಮಾತ್ರಕ್ಕೆ. ಆ ಘಟನೆ ಹೀಗಿದೆ.

೧೯೫೬ನೇ ಇಸವಿ. ಇವರಿನ್ನೂ ಕಾಲೇಜು ವಿದ್ಯಾರ್ಥಿ. ಒಂದು ಸಂಜೆ ದಾರಿಯಲ್ಲಿ ಹೊರಟಾಗ ಉಚ್ಚ ಸ್ವರದ ಹಾಡುಗಾರಿಕೆ ಕೇಳಿಸಿತು. ಆಗೆಲ್ಲ - ಸಂಗೀತ ಕಚೇರಿಗಳಿಗೆ ಪ್ರವೇಶ ಶುಲ್ಕ ನಾಲ್ಕಾಣೆಯೋ, ಒಂದು ರೂಪಾಯಿಯೋ ಇದ್ದಿತ್ತು. ಇವರ ಬಳಿಗೆ ನಾಲ್ಕಾಣೆಯೂ ಇರದೇ ಇದ್ದ ದಿನಗಳವು. ಈ ಕಾರ್ಯಕ್ರಮ ಉಚಿತವಾದ್ದರಿಂದ ಒಳಗೆ ಹೋದರು. ಹಿಂದುಸ್ತಾನೀ ಸಂಗೀತ ಸ್ವರವಿಸ್ತಾರ, ಮುಕ್ತ ರೀತಿಯ ಆಲಾಪಕ್ಕೆ ಕೆಲವೇ ಮಿನಿಟುಗಳಲ್ಲಿ ಮಾರು ಹೋದರು. ತಮ್ಮ ಸುತ್ತ ಇತರ ಶ್ರೋತೃಗಳು ಇದ್ದಾರೆ - ಎನ್ನುವುದು ಲಕ್ಷ್ಯಕ್ಕೇ ಬರದಷ್ಟು ತಲ್ಲೀನರಾದರು. ಇಷ್ಟೇ ಅಲ್ಲ ಆ ಹಾಡುಗಾರ್ತಿ ಇನ್ನಾರೂ ಅಲ್ಲ; ಗಂಗೂಬಾಯಿ ಹಾನಗಲ್ಲ. ಅಂದಿನಿಂದ ಇಂದಿನವರೆಗೆ ಆ ಹುಚ್ಚನ್ನು ಬೆಳೆಸಿಕೊಂಡಿದ್ದಾರೆ. ಪರಿಣಾಮವಾಗಿ ಅವರಿಗೆ ಸಾಮಾನ್ಯ ಮಟ್ಟದ ಹಿಂದೂಸ್ತಾನೀ ಸಂಗೀತ ಹಿಡಿಸೋದೇ

ಇಲ್ಲ. ಉಚ್ಚ ಮಟ್ಟದ್ದೇ ಇರಬೇಕು. ಎಷ್ಟರ ಮಟ್ಟಿಗೆ ಎಂದರೆ ಕಳೆದ ವರ್ಷ ಇವರು ಅಮೇರಿಕೆಯಲ್ಲಿಯ ಒಂದು ಕನ್ನಡ ಕೂಟದಲ್ಲಿ ಮಾತಾಡುತ್ತ "ಸುಗಮ ಸಂಗೀತ ಸಂಗೀತವೇ ಅಲ್ಲ. ಶಾಸ್ತ್ರೀಯ ಸಂಗೀತವೇ ನಿಜವಾದ ಸಂಗೀತ" ಅಂದರಂತೆ. ಮುಂದೆ ಆ ಬಗ್ಗೆ ದೊಡ್ಡ ತಾತ್ವಿಕ ವಿವಾದವೇ ನಡೆಯಿತು.

ಅವರ ಇನ್ನೊಂದು ಹುಚ್ಚು ತಿರುಗಾಟದ್ದು. ಅದು ನದಿ - ಗುಡ್ಡ, ಅರಣ್ಯಗಳ ಸುಂದರ ತಾಣವೇ ಇರಲಿ, ಗ್ರಾಮಾಂತರ ಪ್ರದೇಶದ ಉತ್ಸವವೇ ಇರಲಿ. ಹೋಗಲು ತವಕಿಸುತ್ತಾರೆ. ಇಷ್ಟೇ, ಆಗ ಕಾದಂಬರೀ ಲೇಖನ ಕೆಲಸ ಇರಬಾರದು. ಈ ಬಗೆಯ ತಿರುಗಾಟ ಅಪೇಕ್ಷಣೀಯವೇ. ಆದರೆ ಈ ತಿರುಗಾಟದ ಹುಚ್ಚು ವಿದೇಶಗಳಿಗೂ ಅವರನ್ನು ಕೊಂಡೊಯ್ದಿದೆ. ಈಗೇನು ಬಿಡಿರಿ. ವಿದೇಶಕ್ಕೆ, ವಿಶೇಷತಃ ಅಮೇರಿಕೆಗೆ ಹೋಗಿ ಬರೋದು ಮಾಮೂಲಿಯ ಮಾತಾಗಿದೆ. ಅಲ್ಲಿ ವಾಸವಾಗಿರುವ ಮಗನೋ, ಮಗಳ ಗಂಡನೋ ಟಿಕೆಟ್ ತೆಗೆದು ಕಳಿಸ್ತಾನೆ.ಹಾಗೆ ಒಂದೆರಡು ಬಾರಿ ಹೋಗಿ enjoy ಮಾಡಿ ಬರೋದು ಸಾಮಾನ್ಯ. ಒಂದಿಷ್ಟು ಲೇಖನಿಯ ಚಟವಿದ್ದರೆ ಒಂದು ಪುಸ್ತಕವನ್ನೂ ಬರೆಯುವವರಿದ್ದಾರೆ. ಭೈರಪ್ಪ ಒಂದೆರಡು ಬಾರಿ ಅಲ್ಲ. ಹತ್ತಾರು ಬಾರಿ ವಿದೇಶಗಳಲ್ಲಿ ಸುತ್ತಾಡಿದ್ದಾರೆ. ವಿದೇಶಗಳಿಗೆ ಅವರು ಹೋಗೋದು ಮೋಜಿಗಾಗಿ ಅಲ್ಲ. ಹೆಚ್ಚಿನ ಜೀವನಾನುಭವವನ್ನು ಪಡೆಯೋದಕ್ಕೆ. Travel is Education ಅನ್ನೋ ಕಾರಣಕ್ಕೆ. ಹಾಂ. ಕಾದಂಬರೀ ಲೇಖನದಿಂದ ಅವರಿಗೆ ಸಾಕಷ್ಟು ಸಂಭಾವನೆ ಬರ್‍ತದಲ್ಲವೆ, ಅದರ ಅರ್ಧಕ್ಕಿಂತ ಹೆಚ್ಚು ಗಳಿಕೆಯನ್ನು ಈ ವಿದೇಶ ಪ್ರವಾಸಗಳಿಗೆ ಬಳಸಿರಲು ಸಾಕು. ಪರಿಣಾಮ ಏನು ಗೊತ್ತೆ? ಅವರ ಕಾದಂಬರಿಗಳನ್ನು ಹೆಚ್ಚಾಗಿ ಓದುವವರು ಒಳನಾಡಿನ ಕನ್ನಡಿಗರೇನೊ ಹೌದು. ಆದರೆ ವಿದೇಶಗಳಲ್ಲಿರುವ ಕನ್ನಡಿಗರಿಗೆ ಅವರ ಕೃತಿಗಳ ಬಗ್ಗೆ ಆದರಾಭಿಮಾನ ನಮಗಿಂತ ಹೆಚ್ಚು.

ಭೈರಪ್ಪನವರು ತುಸು ಅಂಜುಬುರುಕರು. ಎರಡು ವಿಷಯಗಳಿಗೆ ಅಂಜುತ್ತಾರೆ. ಒಂದನೆಯದಾಗಿ ಸೊಳ್ಳೆ. ಅ-ಪರಿಚಿತ ಸ್ಥಳದಲ್ಲಿ ವಸತಿ ಹೂಡುವ ಪ್ರಸಂಗ ಬಂದರೆ, ಸೊಳ್ಳೆ ಪರದೆಯನ್ನು ತಪ್ಪದೇ ಒಯ್ಯುತ್ತಾರೆ. ಅದನ್ನು ಸಿಕ್ಕಿಸಲು ಮೊಳೆ ಸಿಗದೆ ಹೋದರೆ ಇರಲೆಂದು, ಪರದೆಯ ನಾಲ್ಕೂ ಮೂಲೆಗಳಿಗೆ ಉದ್ದನೆಯ ದಾರ ಕಟ್ಟಿರುತ್ತಾರೆ. ಅವು ಎಷ್ಟು ಉದ್ದ ಎಂದರೆ ಆ ದಾರಗಳಿಗೇ ಒಂದಿಷ್ಟು ಅಂಟು ತಾಗಿಸಿಬಿಟ್ಟರೆ ಒಂದು ನೂರಾದರೂ ಸೊಳ್ಳೆಗಳು ಅಲ್ಲೇ ಸಿಕ್ಕಿ ಸಾಯಬಹುದು.

ಅವರ ಇನ್ನೊಂದು ಅಂಜಿಕೆಯ ವಿಷಯವೆಂದರೆ ಹೆಂಗಸರ ಬಾಯಿ ಜೋರಿನ ಮಾತು. ಇದನ್ನು ಅವರು ಒಪ್ಪಲಿಕ್ಕಿಲ್ಲ. ನಾನಂತೂ ಒಂದು ಉದಾಹರಣೆ ಕೊಡುವೆ. ಒಮ್ಮೆ ವಿದೇಶ ಪ್ರವಾಸ ಮುಗಿಸಿ, ಮುಂಬಯಿಯಲ್ಲಿ ಒಂದು ದಿನದ ಮಟ್ಟಿಗೆ ತಂಗಿದ್ದರು.

ಅಲ್ಲಿಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೊಂದಿಗೆ ಒಂದು ಸಮಾಲೋಚನೆಯ ಕಾರ್ಯಕ್ರಮ ಅದಲ್ಲವಾದರೆ ಕಣ್ಣು, ಮೂಗು, ಬಾಯಿಗಳನ್ನು, ಹಿಗ್ಗಿಸಿ ಪ್ರತಿಕ್ರಿಯಿಸುವುದು ಸರ್ವೇಸಾಮಾನ್ಯ. ಆದರೆ ಭೈರಪ್ಪನವರ ಕ್ರಮ ಹೀಗೆ.

"ನಿಮ್ಮ 'ವಂಶವೃಕ್ಷ'ವು ಒಂದು ದೋಷರಹಿತ, ಪರಿಪೂರ್ಣ ಕೃತಿ -ಅಂತ ಮರಾಠೀ ಪ್ರೊಫೆಸರರೊಬ್ಬರು ಹೇಳಿದರು"

ಮೌನ.

"ಗೃಹಭಂಗ"ದಲ್ಲಿ ನೀವು ಚಿತ್ರಿಸಿದ ಘಟನೆಗಳನ್ನು ಓದಿ ನನ್ನ ಗುರುತಿನವರೊಬ್ಬರು ಗಳಗಳನೆ ಅತ್ತುಬಿಟ್ಟರು."

ಭೈರಪ್ಪ ಮೌನ.

"ಪರ್ವ"ದ ಒಂದು ಪಾತ್ರದ ಬಾಯಲ್ಲಿ ... ಈ ಮಾತು ಬಂದಿದೆ. ಮುಂದೆ ಅದೇ ಪಾತ್ರ. ಅದಕ್ಕೆ ವ್ಯತಿರಿಕ್ತವಾಗಿ ಹೇಳಿದ್ದಿದೆಯಲ್ಲ?"

ಇದಕ್ಕಾದರೂ ಉತ್ತರ ಕೊಡಬೇಕಲ್ಲವೆ? ಊಂಹುಂ.

"ಅಮೇರಿಕೆಯಲ್ಲಿ ಒಬ್ಬರು ನಿಮ್ಮ ಎಲ್ಲ ಕಾದಂಬರಿಗಳನ್ನು ಕಳಿಸ ಹೇಳಿದ್ದಾರೆ. ಎರಡೆರಡು ಪ್ರತಿಗಳಂತೆ. ಒಂದು ಸೆಟ್ಟನ್ನು ತಮ್ಮ ಸ್ನೇಹಿತರೊಬ್ಬರಿಗೆ Present ಮಾಡ್ತಾರಂತೆ"

ಹೀಗೆಯೇ ನೂರಾರು, ಸಾವಿರಾರು ಅಭಿಪ್ರಾಯಗಳು ಪತ್ರ, ಪತ್ರಿಕೆ, ಫೋನ್, ಭೆಟ್ಟಿಗಳಲ್ಲಿ ಅವರಿಗೆ ಬಂದಿವೆ; ಬರುತ್ತಿವೆ.

ಒಬ್ಬರು ಹೇಳಿದರು "'ನೆಲೆ' ಕಾದಂಬರಿ ಅದೇಕೋ ಸಪ್ಪೆ ಎನಿಸಿತು."

" 'ಸಾಕ್ಷಿ'ಯಲ್ಲಿ ಅಶ್ಲೀಲತೆಯ ಪರಮಾವಧಿ ಇದೆ. ಥೂ!" ಪತ್ರಿಕೆಯೊಂದರಲ್ಲಿ ಬಂದ ಮಡಿವಂತರೊಬ್ಬರ ಅಭಿಪ್ರಾಯ.

"ಭೈರಪ್ಪನವರೇ, ನಿಮ್ಮ ಬರವಣಿಗೆಯಲ್ಲಿ ಅನೇಕ ಕಡೆ ಕವಿ ಹೃದಯದ ಕಲ್ಪಕತೆ ಇದೆ. ಗಮನಿಸಿದ್ದೀರಾ?" - ಇದು ನನ್ನ ಖಾಸಾ ಅಭಿಪ್ರಾಯ.

ಇದಕ್ಕಾದರೂ ಅವರ ಪ್ರತಿಕ್ರಿಯೆ? ಊಂಹುಂ. ಹರನೂ ಇಲ್ಲ; ಶಿವನೂ ಇಲ್ಲ!

ಪ್ರಾಮಾಣಿಕವಾದ ಯಾರದೇ ಟೀಕೆ ಇದ್ದರೆ ಮೇಲೆ ಹೇಳಿದಂತೆ ಸುಮ್ಮನಿರಬಹುದು. ಬುದ್ಧಿಪೂರ್ವಕವಾಗಿ ಯಾರಾದರೂ ಅವರ ನಿಂದೆ - ಟೀಕೆಗೆ ಇಳಿದರೆ? ಮುಗಿದೇ ಹೋಯಿತು. ಪೂರ್ತಿ ಅವರ ನೀರಿಳಿಸಿಬಿಡುತ್ತಾರೆ. ಪತ್ರಿಕೆಗಳಲ್ಲಿ ಅಂಥ ವಾಗ್ಯುದ್ಧಗಳು ಪ್ರಕಟವಾಗೇ ಇವೆ. ಶೇಕ್ಸಪಿಯರ್ ತನ್ನ ಒಂದು ಪಾತ್ರದಲ್ಲಿ ಹೀಗೆ ಹೇಳಿಸಿದ್ದಾನೆ "Avoid, hitting as far as possible. If must, hit hard!" ಇದು ಭೈರಪ್ಪನವರಿಗೆ ಎಷ್ಟೊಂದು ಅನ್ವಯಿಸುತ್ತದೆ! ಈ hitting hard ಸಾಧಿಸುವುದರ ಏಕಮೇವ ಕಾರಣವೆಂದರೆ ಅವರ ನಿಲುವು ಅಥವಾ ಅಭಿಪ್ರಾಯ ನೇರ ಹಾಗೂ ಪ್ರಾಮಾಣಿಕವಾದದ್ದಾಗಿ ಇರುತ್ತದೆ.

ಅವರು ಕಾದಂಬರೀ ಲೇಖನಕ್ಕೆ ಹೇಗೆ ತೊಡಗುತ್ತಾರೆ, ಎಂಬುದು ಇನ್ನೊಂದು ಕುತೂಹಲದ ಪ್ರಶ್ನೆ. ಹಲವಾರು ವರ್ಷಗಳಿಂದ ಒಂದು ಜೀವನ ಸಮಸ್ಯೆ ಇಲ್ಲವೆ ಕಥಾವಸ್ತುವಿನ ಬಗ್ಗೆ ಚಿಂತನ-ಮಂಥನ ನಡೆದೇ ಇರುತ್ತದೆ. ಪ್ರಸಂಗ ಬಂದರೆ ಸಂಶೋಧಕರ ಹಾಗೆ ಕ್ಷೇತ್ರಕಾರ್ಯವನ್ನೂ ಮಾಡುತ್ತಾರೆ. ಅದಕ್ಕೇ ಅಲ್ಲವೆ 'ಪರ್ವ' ಕಾದಂಬರಿಯನ್ನು ಬರೆಯುವಾಗ ಉತ್ತರ ಹಿಂದುಸ್ತಾನದ ಹಲವಾರು ಕಡೆಗೆ ಹೋಗಿ ಬಂದರು. ಮೂಲ ಮಹಾಭಾರತವನ್ನು ಬರೆದ ವ್ಯಾಸರೇನು ಹೀಗೆ ಸ್ವತಹ ಸ್ಥಳವೀಕ್ಷಣೆ ಮಾಡಿರಲಿಕ್ಕಿಲ್ಲ!

ಹೇಗೂ ಲಭ್ಯವಿದ್ದ ಮೂಲ ಕೃತಿಯನ್ನು ಓದಿ, ಅದಕ್ಕಿಷ್ಟು ಕಲ್ಪನೆ ಸೇರಿಸಿ ಒಂದು ಕಾದಂಬರಿಯನ್ನು ಬರೆದುಬಿಡಬಹುದಿತ್ತು. ಹಾಗೆ ಮಾಡಿದ ಅನೇಕ ಕಾದಂಬರಿಕಾರರು, ನಾಟಕಕಾರರು ಭಾರತದಲ್ಲಿ ಆಗಿ ಹೋಗಿದ್ದಾರೆ. ಭೈರಪ್ಪ ಹಾಗಲ್ಲ. ಕಥಾವಸ್ತುವಿನ ಬಗ್ಗೆ ಆಳವಾಗಿ ಮತ್ತು ಪೂರ್ಣತಃ ಯೋಚಿಸಿಯೇ ಬರೆಯುವುದಕ್ಕೆ ತೊಡಗುತ್ತಾರೆ. ಹಾಗೆಂದು ಪ್ರತಿಯೊಂದು ಸನ್ನಿವೇಶ ಇಲ್ಲವೆ ಪಾತ್ರದ ಬಗ್ಗೆ ಸ್ಪಷ್ಟ ಕಲ್ಪನೆ ಆ ಗಳಿಗೆಗೆ ಮೂಡಿರುವುದಿಲ್ಲ. ಸ್ಥೂಲ ನಿಲುಮೆ ಮಾತ್ರ ಇರುತ್ತದೆ. ಆ ಪಾತ್ರಗಳೇ ಆ ಆ ಸನ್ನಿವೇಶಗಳೇ ಲೇಖನಿಯನ್ನು ಮುಂದುವರಸಿದ್ದ ಸಂದರ್ಭಗಳೇ ಹೆಚ್ಚು.

'ನಾನೇಕೆ ಬರೆಯುತ್ತೇನೆ' ಎಂಬ ಪ್ರಬಂಧವನ್ನು ಅವರು ಬರೆದಿದ್ದಾರೆ. ಆದರೆ ಹೇಗೆ ಬರೆಯ ತೊಡಗುತ್ತೇನೆ- ಎಂದು ಅವರು ಹೇಳಿಲ್ಲ. ನಾ ಹೇಳ್ತೇನಿ. ಅನೇಕ ಲೇಖಕರಂತೆ ಅವರೂ ಟೆಲಿಫೋನಿನ, Guestಗಳ ಸದ್ದಿಲ್ಲದ ಜಾಗವನ್ನು ಆಯ್ದುಕೊಳ್ಳುತ್ತಾರೆ. ರಾತ್ರಿಯ ನೀರವತೆಯೇ ಆಗಬೇಕೆಂದಿಲ್ಲ. ಹಗಲಾದರೆ ಬೆಳಗಿನ ಟಿಫಿನ್ ಮುಗಿಸಿ, ಹೊರಗಡೆ, ಒಮ್ಮೊಮ್ಮೆ ಕಾಲೇಜಿನ ತಮ್ಮ ರೂಮಿಗೇ ಹೋಗುವ ಕ್ರಮ ಇದ್ದಿತು. ಮತ್ತೆ ನಮ್ಮ ಕಡೆಯ ಹಳ್ಳಿಯ ರೈತರು ಹೊಲಕ್ಕೆ ಹೋಗುವಾಗ ರೊಟ್ಟಿಯ ಗಂಟನ್ನು ಕಟ್ಟಿಕೊಂಡು ಒಯ್ಯುವಂತೆ ಇವರು ಚಪಾತಿಯ ಡಬ್ಬಿ ಒಯ್ಯುತ್ತಾರೆ. ಟೀ, ಕಾಫಿಯನ್ನು ಹಾಕಿದ ಥರ್ಮಾಸ್ ಒಯ್ಯುವ ಪ್ರಸಂಗವೇ ಇಲ್ಲ. ಮಧ್ಯಾಹ್ನ ಹಸಿವಾದಾಗ ತಂದಿದ್ದ ಚಪಾತಿ ಪಲ್ಯ ತಿಂದು ಬಿಟ್ಟರೆ ಮುಗೀತು. ಸಂಜೆಯ ತನಕ ಬರವಣಿಗೆ.

ಭೈರಪ್ಪನವರ ಬರವಣಿಗೆಯ ಯಶಸ್ಸಿಗೆ ಹಲವಾರು ಕಾರಣಗಳನ್ನು ವಿಮರ್ಶಕರು ಕೊಡಬಲ್ಲರು. ಆದರೆ ಅವರ ಕೃತಿಗಳು ದೀರ್ಘ ಕಾಲ ಜನಮನದಲ್ಲಿ ಉಳಿಯುವುದಾದರೆ ಅದರ ಕಾರಣ - ಅವರ ಪ್ರಾಮಾಣಿಕತೆ ಮತ್ತು ಜೀವನ ಮೌಲ್ಯಗಳನ್ನು ಅನುಷ್ಠಾನದಲ್ಲಿ ತರಬೇಕೆನ್ನುವ ಅವರ ಪ್ರಯತ್ನ. ಕೃತಿ -ರಚನೆಯಲ್ಲಿ ಈ ಅಂಶವೇ ಅವರನ್ನು ಮುನ್ನಡೆಸಿದೆ. ಈ ಪ್ರಾಮಾಣಿಕತೆ ಹುಟ್ಟಿನಿಂದಲೇ ಬಂದದ್ದೇನಲ್ಲ.

ಒಂದು ಕಾಲಕ್ಕೆ ಭೈರಪ್ಪನವರು ಸಣ್ಣಪುಟ್ಟ ಕಳವು ಮಾಡುತ್ತಿದ್ದರು. ನಿಜಾನೇ ಹೇಳ್ತಿದ್ದೀನಿ. ಸಣ್ಣವರಿದ್ದಾಗ ಹಳ್ಳಿಯ ತೋಟಗಳಲ್ಲಿ ಬೆಳೆಯುತ್ತಿದ್ದ ಸೀಬೆಕಾಯಿ,

ಮಾವಿನಕಾಯಿಗಳನ್ನೂ, ಹಸಿವೆ ತಾಳದಿದ್ದಾಗ ಅವರಿವರ ಮನೆಯಲ್ಲಿ ಉಂಡೆ, ಕೋಡಬಳೆಗಳನ್ನೂ ಲಪಟಾಯಿಸುತ್ತಿದ್ದರು. ಹದಿವಯದಲ್ಲಿ ಹೋಟೆಲಿನಲ್ಲಿ ಕೆಲಸ ಮಾಡುತ್ತಿದ್ದಾಗ, ಮಾಲೀಕನ ಕಣ್ಣು ತಪ್ಪಿಸಿ ಹಾಲು, ತುಪ್ಪ ಕುಡಿಯುತ್ತಿದ್ದರು.

ಅವರು ಮೈಸೂರಿನ ಕಾಲೇಜಿನಲ್ಲಿ ಕಲೀತಿದ್ದಾಗಿನ ಒಂದು ಪ್ರಸಂಗ ಅವರ ನೈತಿಕತೆಯ ದಿಸೆಯನ್ನೇ ಬದಲಿಸಿತು. ಆ ಪ್ರಸಂಗ ಹೀಗಿದೆ:

ತಿರುಮಲಾಚಾರ್ಯರೆಂಬ ಹಿರಿಯರು ಇವರ ಹಿತಚಿಂತಕರು. ಇವರ ಬುದ್ಧಿವಂತಿಕೆಗೆ ಮೆಚ್ಚಿಕೊಂಡವರು. ಒಮ್ಮೆ ಅವರು ೫೦ರೂ. ಯ ಒಂದು ಚೆಕ್ ಕೊಟ್ಟರು. ಅದನ್ನು ಹಿಡಿದುಕೊಂಡು ಭೈರಪ್ಪ ಬ್ಯಾಂಕಿಗೆ ಹೋದಾಗ ಜನಸಂದಣಿ. ಅರ್ಧ ಗಂಟೆ ಕಾಯಬೇಕಾಯಿತು. ಕಾಲೇಜಿಗೆ ಹೊತ್ತಾಯಿತು ಎಂದು ಚಡಪಡಿಸುತ್ತಿದ್ದರು. ಅಂತೂ ಇವರ ಪಾಳಿ ಬಂದಿತು. ಕ್ಯಾಶಿಯರ್ ಐದು ನೋಟುಗಳನ್ನು ಕೊಟ್ಟ. ಅದನ್ನು ಹಾಗೇ ಹಿಡಿದುಕೊಂಡು ರಸ್ತೆಗೆ ಇಳಿದಾಗ ಗೊತ್ತಾಯಿತು . ಹತ್ತರ ಐದು ನೋಟು ಕೊಡೋದು ಬಿಟ್ಟು ನೂರರ ಐದು ನೋಟು ಕೊಟ್ಟಿದ್ದ. ಅಂದರೆ ಆಗಿನ ಕಾಲದ ೪೫೦ರೂ.ಗಳಷ್ಟು ಲಾಭ. ಕೆಲವೊಂದು ವೆಚ್ಚಗಳನ್ನು ಇಡೀ ವರ್ಷ ತಾನು ನಿಭಾಯಿಸಬಹುದು! ಆಗ ಅವರಿಗೆ ತಮ್ಮ ದೂರದ ಸಂಬಂಧದ ಬೇರೊಬ್ಬ ಕ್ಯಾಶಿಯರನ ನೆನಪಾಯಿತು. ಹೀಗೇ ಹೆಚ್ಚುವರಿ ಹಣ ಕೊಟ್ಟು, ಹೆಂಡತಿಯ ಮೈಮೇಲಿನ ಆಭರಣಗಳನ್ನು ಆ ಕ್ಷಣಕ್ಕೆ ಮಾರಿ, ಸಾವಿರ -ಸಾವಿರ ಲೆಕ್ಕದ ಹಣ ತುಂಬಬೇಕಾದ ಪ್ರಸಂಗ ನೆನಪಾಯಿತು.

ಆದರೆ ಈಗ? ಬ್ಯಾಂಕಿಗೆ ಆದ ೪೫೦ರೂ. ಹಾನಿಯನ್ನು ಈ ಕ್ಯಾಶಿಯರ್ ತುಂಬಬೇಕು. ಅದೇನೂ ದೊಡ್ಡ ರಕಮಲ್ಲ. ಇಷ್ಟಕ್ಕೂ ತಪ್ಪು ಅವನದೇ ತಾನೇ ಎಂದು ಅನಿಸಿದರೂ, ಇದು ಅನ್ಯಾಯವಲ್ಲವೆ? ಎಂದು ಮರುಕ್ಷಣಕ್ಕೆ ಅನಿಸಿತು. ಕ್ಯಾಶಿಯರ್ ಏನೂ ಮಾಡಿಕೊಳ್ಳಲಿ "ನಾನು ಪ್ರಾಮಾಣಿಕನೆ? ಅಲ್ಲವೆ? ನಾನು ನೀಚನಾಗಬೇಕೆ ಎಂಬುದನ್ನು ನಿರ್ಧರಿಸಬೇಕಾದದ್ದು ಮುಖ್ಯ" ಎಂದೆನಿಸಿ ಹಣ ಪರತು ಮಾಡುವ ನಿರ್ಧಾರ ಮಾಡಿದರು.

ಆಗಿನ ಮೋಜು ನೋಡಿರಿ. ಇವರು ನೂರರ ಆ ಐದು ನೋಟುಗಳನ್ನು ಮುಂಚಾಚಿ "ಇಕೊಳ್ಳಿ, ನೀವು ತಪ್ಪಿ ಇವನ್ನು ಕೊಟ್ಟಿದ್ದೀರಿ" ಎಂದು ಹೇಳ ಹೋದರೆ "ಹೋಗಯ್ಯ! ಕೊಟ್ಟಾಗಲೇ ಸರಿಯಾಗಿ ಎಣಿಸಿಕೊಳ್ಳಬೇಕಿತ್ತು" ಎಂದು ಗದರಿಸಿಬಿಟ್ಟರು. ಇಲ್ಲಿ ಪ್ರಾಮಾಣಿಕತೆಯ ಇನ್ನೊಂದು ಮುಖವೂ ಇರುವ ಸಾಧ್ಯತೆಯಿದೆ. "ನಾನಂತೂ ಪ್ರಾಮಾಣಿಕನಾಗಿ ಕೊಡಲು ಹೋದೆ. ಅವರು ಇಸಕೊಳ್ಳಲಿಲ್ಲ ಇಟ್ಟುಕೊಂಡರಾಯಿತು" ಎಂಬುದು. ಇಲ್ಲ. ಭೈರಪ್ಪ ಬ್ಯಾಂಕಿನ ಮೆನೇಜರರ ಬಳಿಗೇನೆ ಹೋಗಿ, ನೂರರ ನೋಟುಗಳನ್ನು ಹಿಂತಿರುಗಿಸಿದರು. ಆತ ತನ್ನಲ್ಲಿದ್ದ ೫೦ರೂ. ಕೊಟ್ಟು ಕಳಿಸಿದ.

ಮರುದಿನ ತಿರುಮಲಾಚಾರ್ಯರಿಂದ ಭೈರಪ್ಪನವರಿಗೆ ಕರೆ ಹೋದರು "ಹತ್ತಿರ ಬಾ. ಎಲ್ಲಿ? ತುಸು ತಲೆ ತಗ್ಗಿಸು" ಎಂದರು. ಆಮೇಲೆ ಅವರ ತಲೆಯನ್ನು ಎರಡೂ ಕೈಗಳಿಂದ ಬಾಚಿ "ಅಪ್ಪಾ ನೀನು ಮುಂದಕ್ಕೆ ದೊಡ್ಡ ಮನುಷ್ಯನಾಗುತ್ತೀ. ಭಾಗ್ಯವಂತನಾಗುತ್ತೀ" ಎಂದು ಮನಃಪೂರ್ವಕ ಹಾರೈಸಿದರು; ಮತ್ತು ಹೇಳಿದರು.

"ನಿನ್ನೆ ನಡೆದ ಸಂಗತಿಯನ್ನು ಮನೇಜರರು ಇಲ್ಲಿಗೆ ಬಂದು ಹೇಳಿದರು. ಮತ್ತು ನಿನಗೆ ಕೊಡಲೆಂದು ೫೦ ರೂ. ಇನಾಮು ಕೊಡಬಂದರು. "ಒಂದು ಪ್ರಾಮಾಣಿಕ ನಡವಳಿಕೆಗೆ ಇನಾಮು ಕೊಟ್ಟರೆ,. ಪ್ರಾಮಾಣಿಕನಾಗಿ ಇರಬೇಕಾದದ್ದು ಒಬ್ಬನ ಕರ್ತವ್ಯವೇನಲ್ಲ, ಅಂತ ಆಗುತ್ತೆ. ಭೈರಪ್ಪಗೆ ಕೊಡೋದು ಬೇಡ' ಎಂದು ಕಳಿಸಿದೆನಪ್ಪ" ಎಂದು ತಿರುಮಲಾಚಾರ್ಯರು ಹೇಳಿದರು. ಈ ಘಟನೆಯಿಂದಾಗಿ "ಪ್ರಾಮಾಣಿಕತೆ ಎನ್ನುವುದು ಒಳಗಿನಿಂದ ಬರಬೇಕು. ಹೊರಗಿನ ಪರಿಸ್ಥಿತಿಗೆ ತಕ್ಕಂತೆ ಅಲ್ಲ, ಎಂಬ ಗಟ್ಟಿ ನಿರ್ಧಾರಕ್ಕೆ ಭೈರಪ್ಪ ಬಂದರು. ಮುಂದೂ ನಡೆಸಿಕೊಂಡು ಹೋದರು.

ಈ ಪ್ರಾಮಾಣಿಕ ಮನೋಭಾವದಿಂದಾಗಿಯೇ ಮಂ. ಗೋವಿಂದರಾಯರ ಸಾಹಿತ್ಯ ಭಂಡಾರವನ್ನು ಬಿಟ್ಟು ಬೇರಾವ ಪ್ರಕಾಶಕರನ್ನೂ ಭೈರಪ್ಪನವರು ಗಮನಿಸಲೇ ಇಲ್ಲ. ಗೋವಿಂದರಾಯರೂ ವ್ಯವಹಾರದಲ್ಲಿ ಅತ್ಯಂತ ಪರಿಶುದ್ಧರು, ಪ್ರಾಮಾಣಿಕರು ಎಂದೊಮ್ಮೆ ಮನವರಿಕೆಯಾದ ಮೇಲೆ ಬೇರೆ ಪ್ರಕಾಶಕರು ಎಷ್ಟೋ ಪಟ್ಟು ಹೆಚ್ಚಿಗೆ ಕೊಡಬಂದರೂ ಭೈರಪ್ಪ ಮನಗೊಡಲಿಲ್ಲ. ಹಾಗೆ ಮಾಡಿದ್ದರೆ ಬಂಗಾರದ ಮನೀನೆ ಕಟ್ಟಿಸತಿದ್ದರೇನೊ.

ಭೈರಪ್ಪ ಇಂದೇನೊ ಪ್ರಸಿದ್ಧಿಯ ತುತ್ತತುದಿಯಲ್ಲಿದ್ದಾರೆ. ಕನ್ನಡ ಮಾತ್ರವಲ್ಲ ಸಮಕಾಲೀನ ಭಾರತದ ಯಾವ ಕಾದಂಬರಿಕಾರನ ಕೃತಿಗಳೂ ಇವರಷ್ಟು ಬಹುಭಾಷಾ ಅನುವಾದಗಳನ್ನು ಕಂಡಿಲ್ಲ. ಇಂದಲ್ಲ ನಾಳೆ ಅವರಿಗೆ ಜ್ಞಾನಪೀಠ ಪ್ರಶಸ್ತಿಯೂ ಬರಬಹುದು. ಆ ಮುಂದೆ? ಹತ್ತೈವತ್ತು ವರ್ಷಗಳ ಅನಂತರ? ನೂರು ವರ್ಷಾನಂತರ? ಅವರ ಕೃತಿಗಳ ವಾಚನೀಯತೆ ಮಸಳಿಸಿದರೆ ಆಶ್ಚರ್ಯಪಡಬೇಕಾದದ್ದಿಲ್ಲ. ಅದರಂತೆ ಲೇಖಕ ವರ್ಗದಲ್ಲಿಯ ಪ್ರಾಮಾಣಿಕತೆಯೂ ನಶಿಸುತ್ತಾ ಹೋಗಬಹುದು. ಆದರೆ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಓರ್ವ ಕಾದಂಬರಿಕಾರ ತನ್ನ ನಿಜ ಜೀವನದಲ್ಲಿಯೂ ಕೃತಿರಚನೆಯಲ್ಲಿಯೂ ಅತ್ಯಂತ ಪ್ರಾಮಾಣಿಕನಾಗಿದ್ದ - ಎಂಬುದು ಮಾತ್ರ ಮುಂದಿನ ಕನ್ನಡ ಸಾಹಿತ್ಯೇತಿಹಾಸದಲ್ಲಿ ಶಾಶ್ವತವಾಗಿ ಉಳಿದೀತು.

***

'ಹೊಸಗನ್ನಡ ಅರುಣೋದಯ' ಎಂಬ ಪಿಹೆಚ್.ಡಿ. ಪ್ರಬಂಧದೊಂದಿಗೆ ಸಾಹಿತ್ಯ ಪ್ರಪಂಚದಲ್ಲಿ ಬೃಹತ್ತಾಗಿ ಕಾಣಿಸಿಕೊಂಡವರು ಡಾ. ಶ್ರೀನಿವಾಸ ಹಾವನೂರರು. ಮುಂಬಯಿಯ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ನಲ್ಲಿ ಗ್ರಂಥಪಾಲರಾದದ್ದು ಅವರ ಸಾಹಿತ್ಯದ ಬದುಕಿನ ಬೆಳವಣಿಗೆಯ ನೂರುದ್ವಾರ ತೆರೆಯಲು ಕಾರಣವಾಯಿತೆನ್ನಬೇಕು. ತನ್ನ ಗಮನಕ್ಕೆ ಬಾರದ, ಆದರೆ ಅಗತ್ಯವಾಗಿ ತಿಳಿಯಬೇಕಾದ ಯಾವೊಂದು ವಿಚಾರವನ್ನು ಅವರು ಬೆಂಬಿಟ್ಟವರಲ್ಲ. ಅದು ಲಂಡನ್‌ನಲ್ಲಿರಬಹುದು, ಜರ್ಮನಿಯಲ್ಲಿರಬಹುದು, ಅಮೇರಿಕಾದಲ್ಲಿರಬಹುದು, ತಾವು ಮುಖ್ಯಸ್ಥರಾಗಿದ್ದ ಮುಂಬಯಿ ವಿಶ್ವವಿದ್ಯಾನಿಲಯ ಅಥವಾ ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗಗಳಲ್ಲಿಲ್ಲದಿರಬಹುದು - ಹಾವನೂರರು ಎಲ್ಲ ಕಡೆ ಜಾಲಾಡಿ ತಮಗೆ ಬೇಕಾದ್ದನ್ನೆಲ್ಲ ಒಂದೆಡೆ ಸೇರಿಸಿದ ಬಳಿಕವೆ ನೆಮ್ಮದಿಯ ನಿಟ್ಟುಸಿರುಬಿಟ್ಟವರು.

ಸದಾ ಸಾಹಿತ್ಯದಲ್ಲಿ ಹೊಸಮಾತು ಬರಬೇಕು ಎಂಬುದನ್ನು ಜಪದಂತೆ ಪಠಿಸಿದ ಹಾವನೂರರು ಕನ್ನಡ ಸಾಹಿತ್ಯಕ್ಕೆ ಕಂಪ್ಯೂಟರಿನ ನಂಟು ಹಚ್ಚಿದವರು. ಕ್ರೈಸ್ತರ ಕನ್ನಡ ಸೇವೆಗೆ ಮುಚ್ಚಿದ್ದ ಪರದೆ ಸರಿಸಿದವರು. ಸಂಶೋಧನೆಯ ಆಳ ಅಗಲಗಳನ್ನು ವಿಸ್ತರಿಸುವ ಕಾಯಕ ಮಾಡಿದವರು. 'ಸತ್ತವರ ಸಂಗದಲಿ ಹೊತ್ತು ಹೋಗುವುದೆನಗೆ' ಎಂಬಂತೆ ಗೋವಿಂದ ಪೈ, ಪಂಜೆ, ಪೇಜಾವರ, ಮಾಸ್ತಿಯಂಥವರ ಬಗ್ಗೆ ಹೊಸ ಮಾತುಗಳನ್ನು ಮೊಗೆದಿಟ್ಟವರು. ಕಾದಂ-ಕಥನ, ವಾಸ ಸಾಹಿತ್ಯ ಮುಂತಾದ ವಿನೂತನ ಸಾಹಿತ್ಯ ಪ್ರಕಾರಗಳನ್ನು ಕೂಸುಗಳಂತೆ ಸಲಹಿದವರು.

ಹಾವನೂರರರೊಂದು ಪದ್ಮಪತ್ರ ಜಲಬಿಂದು. ಅವರಿಗೆ ಸಂಸಾರ ಸಾಗರ. ಒಮ್ಮೆ ಸವಾರಿ ಹೊರಟರೆಂದರೆ ಹತ್ತೂರು ಈಸದೆ ಮರಳುವವರಲ್ಲ. ನಿಯತ್ತಾಗಿ ಪತ್ರವ್ಯವಹಾರ ನಡೆಸುವ ಹಾವನೂರರ ಪ್ರತಿಪತ್ರದ ಕೊನೆಯ ಸಾಲೊಂದು ಅಸಮಾನರುಚಿಯ ಮೇಲೋಗರ. ಆದರೆ ಗಂಭೀರ ವಿಚಾರಗಳತ್ತ ಗಮನ ಹರಿದರೆ ಅವರು ಮಾತನಾಡುವ ರೀತಿಯೇ ಬೇರೆ; ಅವರ ಚರ್ಯೆಯೇ ಬೇರೆ. 'ಒಂದಿಷ್ಟು ಲಘು; ಒಂದಷ್ಟು ಗಂಭೀರ' ಅವರ ಬದುಕಿನ ಅನೇಕ ಹಾಸುಹೊಕ್ಕುಗಳ ಮೊತ್ತ. ಅದು ಅವರು ನಡೆದು ಬಂದ ದಾರಿಗೆ ಹಿಡಿದ ಕನ್ನಡಿಯೂ ಹೌದು.

- ಡಾ. ನಾ. ದಾಮೋದರ ಶೆಟ್ಟಿ